UNIVERSAL
LIBRARY
OU_200775
UNIVERSAL
LIBRARY

OSMANIA UNIVERSITY LIBRARY

Call No. K811 R66A Accession No. 1152

Author K. Gshavanna

Title Adu sette puranal.

This book should be returned on or before the date last marked below.

ಶ್ರೀ ಸೌರಾಷ್ಟ್ರಸೋಮನಾಥಾಯನಮಃ

ಶ್ರೀಮತ್ಪ್ರತಾಪಾಂಕ ಮಹಾಕವಿವಿರಚಿತವಾದ

# ಸೋಮನಾಥಚರಿತ್ರೆ

ರೂಪವಾಗಿರುವ

# ಆದಿಶೆಟ್ಟಿ ಪುರಾಣವು.

---

ಇದು ಬೆಂಗಳೂರು ಚೀಫ್‌ಕೋರ್ಟಿನ ಡೆಪ್ಟಿ ರಿಜಿಸ್ಟ್ರಾರ್ ಕೆಲಸದಲ್ಲಿರುವ

ವೇ|| ಬಿ. ಬಸವಾರಾಧ್ಯರು ಬಿ. ಎ., ಬಿ. ಎಲ್.

ಇವರಿಂದ ಪರಿಶೋಧಿಸಲ್ಪಟ್ಟು

---

ಬೆಳಗಾಂವ ಜಿಲ್ಲಾ ಅಥಣಿ ತಾಲೂಕು ಯಲಿಹಡಲಗಿ ಗ್ರಾಮದ ವತಂದಾರ್ ಪಾಟೀಲ

ಜ್ಯೋತೆಪ್ಪಗೌಡರು, ಶಿದ್ದನಗೌಡರು.

ಇವರಿಂದ ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

ಬೆಂಗಳೂರು,

ಒಕ್ಕಲಿಗರ ಸಂಘದ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

1911

ಶ್ರೀ ಸೌರಾಷ್ಟ್ರಸೋಮನಾಥಾಯನಮಃ

# ವಿಷಯಾನುಕ್ರಮಣಿಕೆ.


| ಸಂಧಿ. | ವಿಷಯ. | ಪುಟ. |
|---|---|---|
| ೧. | ಕೈಲಾಸಪರ್ವತಕ್ಕೆ ನಾರದರ ಆಗಮನ; ಶಿವನಪ್ಪಣೆಯ ಮೇರೆಗೆ ಆದಯ್ಯಗಳ ಜನನ; ವೆವಹಾರರೂಪಿನಿಂದ ತೆಂಕಣನಾಡಿಗೆ ತೆರಳುವಿಕೆ. | ೧—೨೮. |
| ೨. | ಪುಲಿಕರನಗರದ ವಿಸ್ತಾರವು; ಪದ್ಮಾವತಿಯಲಗ್ನವು; ಜಂಗಮರುಗಳಿಗೆ ಮಾಡಿಟ್ಟ ಬೋನವನ್ನು ಜೈನರು ಮುಟ್ಟಿ ಒಯ್ಯುವಿಕೆ; ಆದಿಶೆಟ್ಟಿಗಳು ಶ್ರೀ ಸೋಮೇಶನನ್ನು ತಂದು ಸುರಹೊನ್ನೆ ಎಂಬ ಬಸದಿಯಲ್ಲಿ ನಿಲಿಸುವೆನೆಂದು ಪ್ರತಿಜ್ಞೆಮಾಡುವಿಕೆ. | ೨೯—೬೭ |
| ೩. | ಜೈನರು ಆದಿಶೆಟ್ಟಿಗಳನ್ನು ಹಳಿಯುವಿಕೆ; ಶ್ರೀ ಸೋಮೇಶನನ್ನು ತಂದಿರಿಸದುಣಲಾರೆನೆಂದು ಹೊರಟುಹೋಗುವಿಕೆ. | ೬೮—೮೫. |
| ೪. | ಜಗದೀಶನಾಟ, ಆದಿಶೆಟ್ಟಿಗಳ ಪ್ರಾಣಸಂಕಟ, ಶ್ರೀ ಸೌರಾಷ್ಟ್ರಸೋಮೇಶನು ಆದಿಶೆಟ್ಟಿಗಳಿಗೆ ಪ್ರತ್ಯಕ್ಷನಾಗಿ ಬಿಗಿದಪ್ಪಿಕೊಳ್ಳುವಿಕೆ. | ೮೬—೧೦೫. |
| ೫. | ಆದಿಶೆಟ್ಟಿಗಳ ಇಚ್ಛೆಯನ್ನು ಪೂರೈಸಿ ಸುರಹೊನ್ನೆ ಬಸದಿಯ ಜಿನಬಿಂಬವನ್ನೊಡೆದು ಶ್ರೀ ಸೋಮೇಶನು ಬಂದು ನೆಲೆಗೊಳ್ಳುವಿಕೆ. | ೧೦೬—೧೨೩. |
| ೬. | ದೇವನಿಕೇತನವನ್ನು ಸುತ್ತಿಮುತ್ತಿರ್ದ ಹಗೆಗಳಂ ಕತ್ತರಿಸಿ, ಶರಣುಜನರಕ್ಷಕನೆನಿಸಿ, ಶ್ರೀ ಸೋಮೇಶನಲ್ಲಿ ಆದಿಶೆಟ್ಟಿಗಳು ಐಕ್ಯಹೊಂದುವಿಕೆ. | ೧೨೪—೧೪೪. |



ಓಂ

ಶ್ರೀ ಮೋಟಗಿ ವಿರಕ್ತ ಮಠಾಧ್ಯಕ್ಷರಾದ,
ಶ್ರೀ ಮತ್ಸಚ್ಚಿದಾನಂದಸ್ವರೂಪಿಗಳಾದ,
ಶ್ರೀ ಮುರಿಗೇಂದ್ರ ಮಹಾಸ್ವಾಮಿಗಳವರು
ಕಸಬಾ ಅಥಣಿ ಜಿಲ್ಲಾ ಬೆಳಗಾಂವ,

ಇವರುಗಳ

ಶ್ರೀ ಪಾದಪದ್ಮಂಗಳಿಗೆ, ಈ ಮಹನೀಯರ ಭಕ್ತವೃಂದರ ಮೇಲಿರುವ ಅಸ್ಖಲಿತವಾದ ಪ್ರೀತಿ ಮೊದಲಾದ ವೀರಗುಣಗಳಿಗೆ ಕಾಣಿಕೆಯಾಗಿ ಈ ಗ್ರಂಥವನ್ನು ಭಕ್ತಿಯಿಂದ ಸಮರ್ಪಿಸಿದ್ದೇನೆ.

ಪಾದಸೇವಾನಿರತ,

ಜೋ. ಶಿ. ಪಾಟೀಲ.



# ಶ್ರೀ ಸೋಮನಾಥಾಯನ್ನಮಃ

## ಪೀಠಿಕೆ.

ವೀರಶೈವ ಮಹನೀಯರೇ! ಈ ಮಾನವಜನ್ಮವನ್ನೆತ್ತಿ ಸಂಚವರಿರುವಾಗ ತಾಯಿತಂದೆಗಳ ಹಾಗೂ ಗುರುಹಿರಿಯರ ಆಜ್ಞೆಯಂತೆ ನಡೆಯುವ ನಮ್ಮ ಕರ್ತವ್ಯವಾಗಿರುವಂತೆ ದೊಡ್ಡವರಾದಮೇಲೆ—ನೀರೊಳಗೆ ಒಂದು ಕಲ್ಲು ಬಿಸಾಡಲು ಒಂದರ ಹಿಂದೊಂದು ತರಂಗಪಙ್ಕ್ತಿಗಳು ಹುಟ್ಟಿ ಪಸರಿಸಲನುವಾಗುವಂತೆ—ಸ್ವಾಮಿ-ಸೇವಕ, ಶ್ರೇಷ್ಠ-ಕನಿಷ್ಠ, ರಾಜ-ಪ್ರಜ, ಮೊದಲಾದ ಅನೇಕ ಸಂಬಂಧಗಳುಂಟಾದಮೇರೆಗೆ ಆಯಾಯ ಅವಸ್ಥೆಗನುಸಾರವಾಗಿ ನಮ್ಮ ಕರ್ತವ್ಯಕರ್ಮದ ಮರ್ಯಾದೆಯು ಹೆಚ್ಚುತ್ತಾಹೋಗುತ್ತದೆ. ಬಂಧುಗಳಾದ ಮಾನವ ಕುಟುಂಬದೊಳಗಿನ ಮನುಷ್ಯರ ಸಂಬಂಧವಾದ ನಮ್ಮ ಕರ್ತವ್ಯಗಳಿಗೂ, ದೇವರ ಸಂಬಂಧವಾದ ನಮ್ಮ ಕರ್ತವ್ಯಕರ್ಮಗಳಿಗೂ ನಿಕಟಸಂಬಂಧವಿರುವದರಿಂದ ಈ ನಮ್ಮ ವೀರಶೈವ ಸಮಾಜದ ಸಲುವಾಗಿ ಮಾಡತಕ್ಕ ನಮ್ಮ ಆದ್ಯಕರ್ತವ್ಯವಾಗಿರುತ್ತದೆ. ದೇವರು ಸರ್ವಸಾಕ್ಷಿಯಾಗಿರುತ್ತಾನೆಂದು ಮನದಟ್ಟುಮಾಡಿಕೊಂಡು ಆತನ ಪ್ರೀತಿಯನ್ನು ಸಂಪಾದಿಸಬೇಕಾದರೆ ಸದಾಚಾರಸಂಪನ್ನರಾಗಬೇಕು. ಅಂದರೆ ಸಾಮಾಜಿಕಕರ್ತವ್ಯವನ್ನು ಚಾಚೂತೀರಿದಂತಾಯಿತು. ಅದಾಗಬೇಕಾದರೆ ಗುರುಹಿರಿಯರನ್ನು ಅನುಕರಿಸುವುದಲ್ಲದೆ ಪುರಾತನರು ಬರೆದಿಟ್ಟ ಗ್ರಂಥಗಳನ್ನು ಒಟ್ಟುಗೂಡಿಸಿ ಅವರು ಪ್ರತಿಪಾದಿಸಿದ ರೀತಿ ನಡತೆಗಳನ್ನು ನಮ್ಮ ಮುಂದಣ ಕಾರ್ಯಂಗಳಿಗೆ ಮಾರ್ಗದರ್ಶಕವಾದ ಕಂದೀಲಿನ ಬೆಳಕಿನೋಪಾದಿಯಲ್ಲಿ ಉಪಯೋಗಿಸಬಲ್ಲವರಾಗಬೇಕು. ಇಂಥ ಸತ್ಕಾರ್ಯವನ್ನು ಕೈಕೊಂಡ ಸಾವಿರಾರು ಜ್ಞಾತಿಬಾಂಧವರಾದ ಘನಪಂಡಿತರು ಹಗಲಿರುಳು ಅವಿಶ್ರಾಂತಶ್ರಮಪಡುತ್ತಲಿರುವದನ್ನು ಕಂಡು,—ತಾಯಿತಂದೆಗಳು ಮಾಡುವದನ್ನು ನೋಡಿ ಚಿಕ್ಕಮಗುವು ತಾನೂಕೂಡ ಮಾಡಲನುವಾಗುವಂತೆ—ನಾನಾದರೂ ಒಂದು

ಅಲ್ಪಪ್ರಯತ್ನವನ್ನು ಮಾಡಲುಜ್ಜುಗಿಸಿ ಈ ಹೊತ್ತಿನವರೆಗೆ ಅಚ್ಚುಹಾಕದೆ ಇದ್ದ ಗ್ರಂಥಗಳನ್ನು ಬೈಲಿಗೆ ತರಬೇಕೆಂದೆಣಿಸಿದೆನು.

ಭೌತಿಕಶಾಸ್ತ್ರದ ಕಳಸಕ್ಕೇರಿದವರು ಋಣ, ಧನ, ವಿದ್ಯುತ್ತುಗಳನ್ನು ಅಗಲಿಸಿಟ್ಟು ಅದರಿಂದುಂಟಾಗತಕ್ಕ ಅತ್ಯಗಾಧವಾದ ಚಮತ್ಕೃತಿಗಳನ್ನು ಮಾಡಿನೋಡಿ ಪುನಃ ಅವುಗಳನ್ನು ಕೂಡಿಸಿಡಲು ಆ ಆಟಗಳು ನಡಿಯುವವೋ ? ಇಲ್ಲಾ. ಇಷ್ಟೆಲ್ಲ ಚಮತ್ಕಾರವನ್ನು ಬೀರಿದ ಆ ಋಣ, ಧನ ವಿದ್ಯುತ್ತಗಳೆರಡೂ ಇಲ್ಲದಂತಾದವೋ ? ಇಲ್ಲಾ. ಅವು ಆ ಸ್ಥಾನದಲ್ಲಿ ಐಕ್ಯವನ್ನು ಹೊಂದಿದವು. ಪುನಃ ಅಗಲಿಸಿಡಲು ಮತ್ತೆ ಆಟವು ಪ್ರಾರಂಭವಾಗುವದು. ಇದೇರೀತಿಯಾಗಿ ಜಗದೀಶನು ಈ ಜೀವಶಿವಗಳನ್ನು ಅಗಲಿಸಿಟ್ಟು ಈ ಪ್ರಪಂಚವೆಂಬ ಸೃಷ್ಟಿಚಮತ್ಕಾರವನ್ನು ನೋಡಿ ಪುನಃ ಜೀವಶಿವೈಕ್ಯವೆಂಬ ಪರಂಧಾಮಪದವಿಯನ್ನೀಯುವನು. ಅಂಥ ಪದವನ್ನು ಹೊಂದಬೇಕಾಗಿರುವ ಈ ಅಲ್ಪಾಯುಗಳಾದ ಮಾನವರ ಹೃತ್ಪಟಲದಲ್ಲಿ ಅತಿ ಸುಲಭವಾದ ಮತ್ತು ಊರುಗೋಲಿನಂತಿರುವ ಭಕ್ತಿಯೆಂಬ ಬೀಜವನ್ನು ಬಿತ್ತಿ ವೀರಶೈವಮತಕ್ಕೆ ಬಂದ ಗ್ಲಾನಿಯನ್ನು ದೂರೀಕರಿಸಿಬರುವದಕ್ಕೆ ತನ್ನಂಶವನ್ನೇ ಶ್ರೀ ಆದಯ್ಯಗಳೆಂಬ ಹೆಸರಿನಿಂದ ಈ ಭೂತಲದಲ್ಲಿರಿಸಿ ಅವತಾರಕಾರ್ಯವನ್ನು ನೆರವೇರಿಸಿದ ಮತ್ತು ಸತ್ಯದಲ್ಲಿ ಧೀರನೆನಿಸಿಕೊಂಡ ಹರಿಶ್ಚಂದ್ರನಂತೆ ಭಕ್ತಿಯಲ್ಲಿ ಅತಿಧೀರನೆನಿಸಿಕೊಂಡಂಥ ಶ್ರೀ ಆದಯ್ಯಗಳೆಂಬ ಶಿವಶರಣರ ಭಕ್ತಿಯೋಗವರ್ಣನಾತ್ಮಕವಾದ ಶ್ರೀಮದ್ರಾಘವಾಂಕ ಮಹಾಕವಿವಿರಚಿತ ಶ್ರೀ ಸೋಮನಾಥಚರಿತ್ರೆಯನ್ನು ಅಚ್ಚುಹಾಕಿಸಿ ಪ್ರಚುರಗೊಳಿಸಿರುವೆನು. ಈ ಪ್ರಸ್ತಾವನೆಯನ್ನು ಮುಗಿಸುವ ಮೊದಲು ಈ ಪುರಾಣದ ಮುಖ್ಯ ವಿಷಯಗಳ ಸ್ಪಷ್ಟೀಕರಣಮಾಡುವದು ಅಗತ್ಯವಾಗಿರುವದರಿಂದ ಅತ್ತಕಡೆಗೆ ಹೋಗುವಾ:—

* ಈ ಗ್ರಂಥವನ್ನು ರಚಿಸಿದ ರಾಘವಾಂಕಕವಿಗಳು ಕ್ರಿ. ಶ. ೧೧೬೦ ರ ಸುಮಾರಿನಲ್ಲಿ ಕುಂತಳದೇಶದಲ್ಲಿ ತುಂಗಭದ್ರಾ ತೀರದಲ್ಲಿರುವ ಪಂಪಾಪುರದಲ್ಲಿ ಹುಟ್ಟಿದರು. ಇವರ ತಂದೆ ಮಹಾದೇವಭಟ್ಟನು. ತಾಯಿರುದ್ರಾಣಿ. ಹಂಪೆಯ ಹರೀಶ್ವರದೇವರು ಇವರ ಸೋದರಮಾವನು ಮತ್ತು ಗುರು. ಇವರು ತಮಗೆ ಕವಿತಾಶಕ್ತಿಯುಂಟಾಗಲು ಪಂಪಾಪುರದ ದೇವರಾಜನ ಸಭೆಯಲ್ಲಿ ವಿದ್ವಾಂಸರೆಲ್ಲರು ಮೆಚ್ಚುವಂತೆ ಹರಿಶ್ಚಂದ್ರಕಾವ್ಯವನ್ನು ರಚಿಸಿ ಓದಿದರು. ಹೀಗೆ ನರಸ್ತುತಿ ಮಾಡಿದ ತಪ್ಪಿತಕ್ಕೆ ಹರೀಶ್ವ

---

* Karnatic Kavicharita by S. G. Narasimhacharya and R. Narasimhacharya ; Raghavanka Charita by Chikkananjesha, Channabasava Purana by Virupaxha Pandita.

ರರು ಕೋಪಗೊಂಡು ಇವರ ೫ ಹಲ್ಲುಗಳನ್ನು ಮುರಿಯಲು ಅವರ ಇಷ್ಟಾನುಸಾರವಾಗಿ ೧ ಸೋಮನಾಥಚರಿತೆ, ೨ ಸಿದ್ಧರಾಮಪುರಾಣ, ೩ ವಿರೇಶ್ವರಚರಿತೆ, ೪ ಶರಭಚಾರಿತ್ರ, ೫ ಹರಿಹರ ಮಹತ್ವವೆಂಬ ೫ ವೀರಶೈವ ಕೃತಿಗಳನ್ನು ಮಾಡಿದ್ದರಿಂದ ಮರಳಿ ಹಲ್ಲುಗಳನ್ನು ಕೊಟ್ಟರು. ಇದಲ್ಲದೆ ಇವರು ಹೊಯಿಸಳ ನಗರದ ನರಸಿಂಹಬಲ್ಲಾಳ (೧೧೫೯-೭೯)ನ ಮಂತ್ರಿಯಾದ ಕೆರೆಯ ಪದ್ಮರಸರನ್ನು ಕಂಡು, ಓರುಗಲ್ಲಿನ ರುದ್ರಪ್ರತಾಪರಾಜನ ಸಭೆಯಲ್ಲಿ ಏಕದ್ವಿತ್ರಿ ಸಂಧಾಗ್ರಾಹಿಗಳೆಂಬ ಏಕದಂಡಿ, ದ್ವಿದಂಡಿ, ತ್ರಿದಂಡಿಯೆಂಬ ಕುಕವಿಗಳನ್ನು ಕವಿಮುಖಕವಾಟವೆಂಬ ಪದ್ಯಶಾಸ್ತ್ರವನ್ನು ಮತ್ತು ವಿರೇಶ್ವರಚರಿತ್ರೆಯನ್ನು ರಚಿಸಿ ವೈರಿಗಳನ್ನು ಜಯಿಸಿ, ಸೋಮನಾಥನ ಕಾವ್ಯವನ್ನು ಹೇಳಿ ಕುಮಾರವ್ಯಾಸನನ್ನು ಗೆದ್ದು ಗುರುವಿನಾಜ್ಞಾನುಸಾರವಾಗಿ ಬೇಲೂರಲ್ಲಿ ಬೈಲಾದರು. ಇವರಿಗೆ ಹಿಂದೆ ಷಟ್ಪದಿಯಲ್ಲಿ ಯಾರೂ ಗ್ರಂಥಗಳನ್ನು ಬರಿಯಲಿಲ್ಲಾ. ಇವರೇ ಈ ಹೊಸರೀತಿಯ ಛಂದಸ್ಸನ್ನು ರಚಿಸಿದವರು. ಇವರಿಗೆ ಉಭಯಕವಿಶರಭಭೇರುಂಡ ಮೊದಲಾದ ಬಿರುದಾವಳಿಗಳಿದ್ದು, ಇವರಬಂಧವು ಪ್ರೌಢವಾಗಿದ್ದು ಅರ್ಥಗಾಂಭೀರ್ಯವುಳ್ಳದುದಾಗಿಯೂ, ದೇಶ್ಯಪದಭೂಯಿಷ್ಟವಾಗಿಯೂ ಇರುವದಾಗಿ ಅನೇಕ ವೀರಶೈವಗ್ರಂಥಗಳು ಪ್ರತಿಪಾದಿಸುತ್ತವೆ.

ಕಳಕೊಂಡ ಹಲ್ಲುಗಳನ್ನು ಮರಳಿಪಡೆಯಲು ಶ್ರೀ ಸೋಮನಾಥ ಚರಿತ್ರೆಯನ್ನೇ ಮೊದಲು ಬರೆದರು. ಈ ಗ್ರಂಥವು ಹುಲಿಗೆರೆಯ ಶ್ರೀ ಸೋಮನಾಥನ ಚರಿತ್ರರೂಪವಾಗಿದೆ. ಇದರ ಕಥಾಗರ್ಭವು :—

ನಾರದನ ಮುಖದಿಂದ ಕಲಿಕಾಲದನುವ ಮದ |
ನಾರಿ ಚಿತ್ತೈಸಿ ಗಣನಾಥನಂ ಕಳುಹಿದೊಡೆ |
ಸೌರಾಷ್ಟ್ರದೊಳಗಾತನಾದಯ್ಯವೆಸರಿಂದ ಒನಿಸಿ ಹುಲಿಗೆರಿಗೆಬಂದೂ ||
ವೈರಿಗಳ ಮೂದಲೆಗೆ ಹಿರಿಯಬಸದಿಯೊಳು ಶಶಿ |
ಧಾರಿ ಸೋಮಯ್ಯನಂ ನಿಲಿಸಿ ತನ್ನಂ ಮುತ್ತಿ |
ದಾರುಹತರಂ ಗೆಲ್ದನೆಂಬುದು ಕಥಾಗರ್ಭವಿದ ಬೆಳಸಿ ಕೃತಿಮಾಳ್ಪೆನೂ ||

ಯೆಂಬ ಪದ್ಯದಲ್ಲಿ ಹೇಳಿಕೊಂಡಿರುತ್ತಾರೆ.

ಆದರೆ ಈ ಚರಿತ್ರನಾಯಕರಾದ ಶ್ರೀ ಆದಿಶೆಟ್ಟಿಗಳವರ ಮಹಿಮೆಯು ನಡೆದಂಥ ಕ್ಷೇತ್ರಸ್ಥಾನವಾವದು ? ಕಾಲವ್ಯಾವದೆಂಬುದನ್ನು ಕುರಿತು ಸ್ವಲ್ಪ ವಿಚಾರಿಸುವಾ:—

‡ ಬುದ್ಧನಸಮಯದಲ್ಲಿ ವರ್ಧಮಾನನೆಂಬವನು, ಮಹಾವೀರಪಾರ್ಶ್ವನಾಥನೆಂಬ ಹೆಸರನ್ನು ಧರಿಸಿ ಜಿನಮತವನ್ನು ಸ್ಥಾಪಿಸಿದನು. ಈ ಜಿನನು ಸತ್ತು ೨೦೦ ವರ್ಷಗಳಾದ ಮೇಲೆ ಮಗಧದೇಶದಲ್ಲಿ ಒಂದು ದೊಡ್ಡಬರಬಿತ್ತು. ಆ ಕಾಲದಲ್ಲಿ ಪ್ರಸಿದ್ಧನಾದ ಚಂದ್ರಗುಪ್ತನು ಆ ದೇಶವನ್ನಾಳುತ್ತಿದ್ದನು.

‡ Indian history by E. I. Marsden and sketch history of India by V. C. Hooli.

ಆಗ ಎಷ್ಟೋ ಜೈನರು ಉತ್ತರ ಹಿಂದುಸ್ಥಾನವನ್ನು ಬಿಟ್ಟು ದಕ್ಷಿಣದಲ್ಲಿ ಈಗಿನ ಕರ್ನಾಟಕಕ್ಕೆ ಬಂದರು. ಭದ್ರಬಾಹುಯೆಂಬವನು ಕ್ರಿ. ಶ. ೪ ನೇ ಶತಮಾನದಲ್ಲಿ ಶ್ರವಣಬೆಳಗುಳದಲ್ಲಿ ಜಿನಮತವನ್ನು ಪ್ರಚುರಗೊಳಿಸಿದನು. ಆ ಕಾಲದಲ್ಲಿ (೧) ಬಿಳೇವಸ್ತ್ರವನ್ನು ಧರಿಸುವ ಶ್ವೇತಾಂಬರರು, (೨) ವಸ್ತ್ರಹೀನರಾದ ದಿಗಂಬರರು (ಮೂಲಸಂಘ) ಅಂತಾ ಎರಡು ಪಂಗಡಗಳಿದ್ದವು.

¶ ಕ್ರಿ. ಶ. ೫ ನೇ ೬ ನೇ ಶತಮಾನದಲ್ಲಿ ಆಳುತ್ತಿದ್ದ ಬಾದಾಮಿ ಚಾಲುಕ್ಯರ ಕಾಲಕ್ಕೆ ಜಿನಮತವು ಫಕ್ತ ಕರ್ನಾಟದಲ್ಲಿ ಮಾತ್ರ ಅತಿಘನತೆಗೇರಿದಂತೆ ತೋರುತ್ತಿದ್ದು, ೬ ನೇ ೭ ನೇ ಶತಮಾನದಲ್ಲಿ ವೈದಿಕಧರ್ಮದ ಪುನರುಥ್ಥಾನವಾಗಿ ಜಿನಧರ್ಮದ ಅಳಿಗಾಲಕ್ಕೆ ಮುಳುವಾಯಿತು.

? ಇಂಥೀಸಮಯದಲ್ಲಿ ಬಾದಾಮಿ ಚಾಲುಕ್ಯ ಅರಸನಾದ ೨ ನೇ ಪುಲಿಕೇಶಿಯ (ಕ್ರಿ. ಶ. ೬೦೯-೪೨) ಹಿರೇಮಗನಾದ ಚಂದ್ರಾದಿತ್ಯನು (ಕ್ರಿ. ಶ. ೬೫೫-೫೯) ಪುಲಿಕರನಗರದಲ್ಲಿ ಆಳುತ್ತಿದ್ದನು. ಕಿರಿಯಮಗನಾದ ೧ ನೇ ವಿಕ್ರಮಾದಿತ್ಯನು ಪುಲಿಕೇಶಿಯ ಪ್ರಿಯ ತನಯನೆನಿಸಿಕೊಂಡು ಬಾದಾಮಿ ಸಾರ್ವಭೌಮಾಧಿಪತ್ಯದಲ್ಲಿದ್ದನು. ಆಗ ಆದಿಗಣನಾಥನು ಆದಯ್ಯನೆಂಬ ಹೆಸರಿನಿಂದ ಸೌರಾಷ್ಟ್ರ (ಗುಜರಾಥ)ದಲ್ಲಿ ಘೋರದತ್ತನೆಂಬ ವೀರಶೈವ ಶೆಟ್ಟಿಯ ಮಗನಾಗಿ ಜನಿಸಿ ವಂಶಪರಂಪರೆಯಿಂದ ನಡೆಯುತ್ತಬಂದ ವಾಣಿಜ್ಯರೂಪಿನಿಂದ ಜೈನರ ಮುಖ್ಯಸ್ಥಾನವಾಗಿರುವ ಈ ಪುಲಿಕರನಗರಕ್ಕೆ ಬಂದು ಅವತಾರಕಾರ್ಯವನ್ನು ತೀರಿಸುವಾಗ್ಗೆ "ಚಂದ್ರಾದಿತ್ಯನು" ಜೈನರಿಗೆ ಬೆಂಬಲವಾಗಿ ದಂಡೆತ್ತಿಹೋಗಿ ದೇವಾಲಯವನ್ನು ಮುತ್ತಲು ಅವರನ್ನೆಲ್ಲ ಖಡ್ಗದಿಂದ ಕತ್ತರಿಸಿ ಖಡ್ಗಗಳನ್ನು ದೇವನಿಕೇತನದ ಪಶ್ಚಿಮಕ್ಕಿರುವ ಕೊಳದಲ್ಲಿ ತೊಳೆದರಾದಕಾರಣ ಈಗಲೂ ಖಡ್ಗತೀರ್ಥವಾಗಿ ಪುಲಿಕರನಗರ (ಲಕ್ಷ್ಮೇಶ್ವರ)ದಲ್ಲಿ ಇರುವದು. "ಚಂದ್ರಾದಿತ್ಯ"ನು ಕಂಗೆಟ್ಟು ಕಟ್ಟಡವಿಯನ್ನು ಸೇರಿದನಂತ್ರ ಆತನ ತಮ್ಮನ ಮಗನಾದ ವಿನಯಾದಿತ್ಯನು (ಕ್ರಿ. ಶ. ೬೮೦-೯೬) ಆದಯ್ಯಗಳ ಕಾಲಕ್ಕೆ ರಕ್ತಮಯವಾದ ಪುಲಿಕರನಗರಕ್ಕೆ ತನ್ನ ಜಯಶೀಲವಾದ ಮುಕ್ಕಾಂ "ರಕ್ತಪುರ"ವೆಂದು ಹೆಸರನ್ನಿಟ್ಟನು. ವಿನಯಾದಿತ್ಯನ ಮಗನಾದ ವಿಜಯಾದಿತ್ಯನು (ಕ್ರಿ. ಶ. ೬೯೬-೭೩೩-೪) ಮತ್ತು ಆತನತಂಗಿಯಾದ ಕುಂಕುಮ ಮಹಾದೇವಿಯು ಆನೆಸಜ್ಜೆಯ ಮೊದಲಾದ ಹಾಳಾದಬಸ್ತಿಗಳನ್ನು ಪುನಃ ಕಟ್ಟಿಸಿದರು. ೨ ನೇ ವಿಕ್ರಮಾದಿತ್ಯನು (ಕ್ರಿ. ಶ ೭೩೩-೩೪ ರಿಂದ ೭೪೬-೪೭) ಶಂಖಾಕೃತಿಯಾದ ಕವಚದಲ್ಲಿ ಜಿನಬಿಂಬವುಳ್ಳ, ಈಗಲೂ ಅಸ್ತಿತ್ವದಲ್ಲಿ ಇದ್ದ ಶಂಖಜಿನೇಂದ್ರ ಬಸದಿಯನ್ನು ಪುನಃ ಕಟ್ಟಿಸಿದನು. ಅಲ್ಲಿ ಶಂಖಜಿನೇಂದ್ರನು ಇಲ್ಲಾ. ಎರಡನೇ ದಿಗಂಬರಮೂರ್ತಿಯು ಪ್ರತಿಷ್ಠಿಸಲ್ಪಟ್ಟಿರುತ್ತದೆ. ಈ "ರಕ್ತಪುರ" ವೆಂಬಹೆಸರು ಬಾದಾಮಿ ಮನೆತನದ ಉಳಿದ ಯಾವತ್ತೂ ಅರಸರಕಾಲದಲ್ಲಿಯೂ ಕೂಡ ನಡೆಯುತ್ತ ಬಂತು ಇದು ಲಕ್ಷ್ಮೇಶ್ವರ ಶಾಸನಗಳಿಂದ ಮತ್ತು ಕೋಚ್ರೆ (ರತ್ನಾಗಿರಿ), ನೆರೂರ (ಸಾವಂತವಾಡಿ) ಮೊದಲಾದ ಶಾಸನಗಳಿಂದ ಗೊತ್ತಾಗುತ್ತದೆ. ಶ್ರೀ

---

¶ Early history of the Deccan by R. G. Bhandarker, M.A., Ph. D., C.I.E.

? Genealogy of the Western Chalukyas of Badami one of the Dynasties of the Kanarese Districts by John Faithfull Fleet. Ph. D., C.I.E., Ind. Anti. Vol. VII p.p. 101-106-110—112—161—163—197; Vol. VIII p.p. 26-44 ; Vol. IX p.p. 126-130 ; Vol. XVIII p. 38; Vol. XIX p.p. 16-149; Vol. XX p. 3; and Id. Vol. VII p. 112.

ಸೋಮನಾಥನ ದೇವಾಲಯವು ಈ ಮೇಲ್ಕಂಡ ರಾಜರ ಕಾಲದಲ್ಲಿ ಅಚ್ಛೇಯದೆ ಮೂಲಸ್ಥಿತಿಯಲ್ಲಿ ಬೆಳಗುತ್ತಿರುವದರಿಂದ ಮತ್ತು ೨ ನೇ ಪುಲಿಕೇಶಿಯ ಕಿರಿಯತಮ್ಮನ ಮಗನಾದ ನಾಗವರ್ಧನನು ನಾಸಿಕ ದಲ್ಲಿರುವಂಥ ಶ್ರೀ ಕಪಾಲಿಕೇಶ್ವರನಿಗೆ ಒಂದು ಗ್ರಾಮವನ್ನು ಇನಾಂ ಹಾಕಿಕೊಟ್ಟದ್ದು ನಾಸಿಕದ ಶಾಸ ನದಿಂದ ತಿಳಿಯುತ್ತಿರುವದರಿಂದ ಯಾವತ್ತೂ ಧರ್ಮದವರನ್ನು ಸರಿಯಾಗಿ ಕಾಪಾಡುವ ರಾಜನೀತಿಯನ್ನು ಚನ್ನಾಗಿ ಅರಿತವರಿದ್ದರೆಂದು, ಶ್ರೀ ಸೋಮೇಶನ ಮಹಿಮೆಯು ಅಗಾಧವಾದದ್ದೆಂದು ಸಹಜ ವ್ಯಕ್ತ ವಾಗುತ್ತದೆ.

* ಆ ಮೇಲೆ ಸಾರ್ವಭೌಮಾಧಿಕಾರವು ಮಳಖೇಡದ ರಾಷ್ಟ್ರಕೂಟದರಸರ ಕಡೆಗೆಹೋಗಿ (ಕ್ರಿ.ಶ. ೭೭೪-೯೭೩) ಪುಲಿಕರನಗರವನ್ನು ಆಳಿದರೆಂಬದಾಗಿ ಲಕ್ಷ್ಮೇಶ್ವರ, ನಿಡಗುಂದಿ, ಹತ್ತೀಮತ್ತೂರ, ಕಳಸಾ ಪೂರ, ಹೆಬ್ಬಾಳ, ಅದರಗುಂಚಿ, ಗುಂಡೂರ, ಮೊದಲಾದ ಶಾಸನಗಳಿಂದ ಗೊತ್ತಾಗುತ್ತದೆ. ಶ್ರೀ ಸೋಮ ನಾಥನ ದೇವಾಲಯಗಳು. ಕರ್ನಾಟಕಪ್ರಾಂತದಲ್ಲೆಲ್ಲ ಹರಡಿಕೊಳ್ಳಲು ಕಳಸಾಪೂರ (ಗದಗತಾಲೂಕು) ದೇವಾಲಯಕ್ಕೆ ರಾಷ್ಟ್ರಕೂಟದ ೪ ನೇ ಗೋವಿಂದನು (ಕ್ರಿ. ಶ. ೯೧೮-೩೩) ದೇಣಿಗಿ ಕೊಟ್ಟಿರುವನು.

‡ ಆ ಮೇಲೆ ಕಲ್ಯಾಣಪುರದ ಚಾಲುಕ್ಯರು ಪುನಃ ತಮ್ಮ ಸಾರ್ವಭೌಮಾಧಿಕಾರವನ್ನು ಪಡ ಕೊಂಡು, ಪುಲಿಕರನಗರವನ್ನು (ಕ್ರಿ. ಶ. ೯೭೩-ರಿಂದ ೧೧೮೯) ಆಳಿದರೆಂದು, ಮುಳಗುಂದ, ಗದಗ, ಹೊಟ್ಟೂರು, ನವಲೂರು, ಅಣ್ಣಿಗೇರಿ, ಗಾರವಾಡ, ಹುಲುಗೂರ, ಗಳಗನಾಥ, ಹಾನಗಲ್ಲ, ಹಿರೇವಡವಟ್ಟಿ ಕಲಕೇರಿ, ಅಬ್ಲೂರು, ಬಿಜಾಪುರ ಜಿಲ್ಲಾ ಶಿಂದಿಗಿತಾಲೂಕು ಹಿಪ್ಪರಿಗಿ ಶಾಸನಗಳಿಂದ ಗೊತ್ತಾಗುತ್ತದೆ. ಈ ಆಳಿಕೆಯಲ್ಲಿ ನೆನಪಿನಲ್ಲಿಡತಕ್ಕ ಸಂಗತಿಗಳಾವವೆಂದರೆ :—

ತನ್ನ ಪಟ್ಟದರಸಿಯಾದ ಸುಗ್ಗಲಾದೇವಿಯು ತನ್ನಗುರುವಾದ ದೇವರದಾಸಿಮಯ್ಯನಕಡೆಯಿಂದ ಸಂದುಕದಲ್ಲಿ ಹಾಕಿದ ಒಂದು ಘಟಸರ್ಪವನ್ನು ಚಂದ್ರಕಾಂತಶಿಲೆಯ ಲಿಂಗವನ್ನಾಗಿಮಾಡಿ ತೋರಿಸಲು ವೀರಶೈವದೀಕ್ಷೆಯನ್ನು ಹೊಂದಿದ ೨ನೇ ಜಯಸಿಂಹ—ಜಗದೇಕಮಲ್ಲನು (ಕ್ರಿ. ಶ. ೧೦೧೮-೪೨) ಶ್ರೀ ಸೋಮನಾಥದೇವರಿಗೆ ಒಂದು ಸುವರ್ಣದ ಕಳಶವನ್ನು ೧೦೦ ಮಾರು ಭೂಮಿಯನ್ನು, ತ್ರೈಲೋ ಕ್ಯಮಲ್ಲನು (ಕ್ರಿ. ಶ. ೧೦೪೪—೬೮) ನರೇಗಲ್ಲ ಗ್ರಾಮವನ್ನು ದೇವರ ನಂದಾದೀಪಕ್ಕೆ ೫೦೦ ಗ್ರಾ ಮಗಳಲ್ಲಿಯ " ಹಾಣ " ವೆಂಬ ನಾಣ್ಯದ ಸುಂಕವನ್ನು , ತ್ರಿಭುವನಮಲ್ಲನು (ಕ್ರಿ. ಶ. ೧೦೫೫ ಮ ತ್ತು ೧೦೭೬-೧೧೨೬) ಕ್ರಿ. ಶ. ೧೦೯೯ ರಲ್ಲಿ ನಂದಾದೀಪದ ಹಕ್ಕನ್ನೂ, ೧೧೦೨ ರಲ್ಲಿ ಪನ್ನ್ಯಪಾ ವನದ ಹಕ್ಕನ್ನೂ, ೧೧೧೧ರಲ್ಲಿ ಸೇವಾನಿರತರಾದ ಪಾತರದವರಿಗೆ ಭೂಮಿಯನ್ನೂ, ಭೂಲೋಕಮಲ್ಲ ನು (೧೧೨೬—೧೧೩೮—೩೯) ನಿಟ್ಟೂರಗ್ರಾಮದಲ್ಲಿ ಭಾವಿಗೆ ನಡೀತಕ್ಕ ಸರ್ವಮಾನ್ಯವನ್ನೂ, ೧೪ ಮಾರುಭೂಮಿಯನ್ನೂ ಕೊಟ್ಟಬಗ್ಗೆ ಪುರಾಣೇತಿಹಾಸಗಳಿಂದ, ಹಿಪ್ಪರಿಗಿ ಮತ್ತು ಲಕ್ಷ್ಮೇಶ್ವರ ಮೊದ ಲಾದ ಶಾಸನಗಳಿಂದ ಗೊತ್ತಾಗುತ್ತದೆ.

---

* Ind. Anti. Vol. VII p. 101 , Vol. XI p. 156 , Vol. XII p.p. 170-217, and Note 23;-224-255-270. Epi. Indi. Vol. II p. 167. Bom. Gaz. Vol. I Paat II p. 417.

‡ Ind. Anti. Vol. II p. 297 Note 3 ; Vol. XIX p. 162 Vol. XXI p. 282. Carn. Desa. Ins. Vol. I. p.p. 39-216-287-410-412-732-812 , Vol. II p.p. 1-605. Ibid. p.p. 223-289. Bom. Gaz. Vol. I Part II p.p. 432-433-437-440-501-502.

¶ ಮುಂದೆ ಕಲ್ಯಾಣಪುರದ ಕಲಚೂರ್ಯರ ಕಾಲದಲ್ಲಿ ಕುಂತಲದೇಶದ ಆಲಂದೆಯೆಂಬ ಗ್ರಾಮದಲ್ಲಿ ಪುರುಷೋತ್ತಮನೆಂಬ ಶ್ರೀವತ್ಸಗೋತ್ರೋದ್ಭವನಾದ ಬ್ರಾಹ್ಮಣನಿಗೆ „ ಏಕಾಂತರಾಮಯ್ಯನು " ಶ್ರೀವೀರಭದ್ರನಂಶದಿಂದ ಜನಿಸಿ, ಶಿವಕ್ಷೇತ್ರಗಳಿಗೆ ಯಾತ್ರೆ ಹೊರಟು ಪುಲಿಗೆರೆಗೆಬಂದು, ಶ್ರೀ ಸೋಮನಾಥನನ್ನು ಪೂಜಿಸಿ, ಆ ಈಶನಾಜ್ಞಾನುಸಾರವಾಗಿ ಕೋಡ ತಾಲೂಕಿನ ಜೈನಭೂಯಿಷ್ಟವಾದ ಅಬ್ಲೂರುಗ್ರಾಮಕ್ಕೆ ಹೋಗಿ ಜೈನರೊಡನೆ ವಾದಮಾಡಿ, ಬ್ರಹ್ಮೇಶ್ವರ ದೇವಸ್ಥಾನದಲ್ಲಿ ತನ್ನ ತಲೆಯನ್ನು ಕತ್ತರಿಸಿಟ್ಟು ೭ ದಿವಸದನಂತರ ಮರಳಿ ಪಡಕೊಂಡು, ಓಲೆಪತ್ರ ಬರಕೊಟ್ಟಪ್ರಕಾರ ಜೈನರು ಮಾಡದಿರಲು ಅಲ್ಲಿಯ ಜಿನಬಿಂಬವನ್ನು ಒಡೆದು ಜೈನರ ಸೇನೆಯನ್ನು ಬಡಿದಟ್ಟಿ ಶ್ರೀ ವೀರಸೋಮನಾಥನನ್ನು ನಿಲಿಸಿ, ಜೈನರ ದೂರನ್ನು ಕೇಳಿ ಬಿಜ್ಜಳನು. (ಕ್ರಿ. ಶ. ೧೧೫೬-೬೭) ಏಕಾಂತರಾಮಯ್ಯನನ್ನು ಕರೆಯಿಸಲು ಆನೆಸಜ್ಜೆಯೇ ಮೊದಲಾದ ೭೦೦ ಬಸದಿಗಳನ್ನು ಒಡ್ಡುವದಾದರೆ ತನ್ನ ಕತ್ತರಿಸಿಕೊಟ್ಟ ತಲೆಯನ್ನು ಸುಟ್ಟಬಳಿಕ ಮರಳಿ ಪಡೆವೆನೆನಲು, ಜೈನರು ಹೆದರಿ ಒಲ್ಲೆಂದರು. ಬಿಜ್ಜಳನು ಏಕಾಂತರಾಮಯ್ಯನಿಗೆ ಜಯಪತ್ರವನ್ನು ಕೊಟ್ಟು ದೇವರ ಅಂಗಭೋಗಾದಿಗಳಿಗೆ ಬನವಾಸಿಪ್ರಾಂತದಲ್ಲಿ ಗೋಗಾವೆಯೆಂಬ ಗ್ರಾಮವನ್ನು ಕೊಟ್ಟಂತೆ, ಇದನ್ನು ಕೇಳಿ ಚಾಲುಕ್ಯರಾಜನಾದ ತ್ರಿಭುವನಮಲ್ಲ ಸೋಮೇಶ್ವರನು (೧೧೮೪-೮೯) ಬನವಾಸಿಪ್ರಾಂತದ ನಗರಖಂಡ ಭಾಗದಲ್ಲಿ ಒಂದುಗ್ರಾಮವನ್ನೂ, ಕದಂಬರಾಜನಾದ ಕಾಮರಸನು (ಕ್ರಿ ಶ. ೧೧೮೧-೧೨೦೩) ಮುಂಡಗೋಡದ ಹತ್ತರ ಮಲವಳ್ಳಿಯೆಂಬ ಗ್ರಾಮವನ್ನೂ ಕೊಟ್ಟಂತೆ, ಏಕಾಂತರಾಮಯ್ಯನು ಆರಲ್ಲಿಯೂ ಯಾಚಿಸದೆ ಶ್ರೀ ಸೋಮೇಶನ ಪ್ರಸಾದದಿಂದ ತವನಿಧಿಯನ್ನು ಪಡೆದು ದೇವಾಲಯವನ್ನು ಕಟ್ಟಿಸಿದಂತೆ ಅದೇ ದೇವಾಲಯದಲ್ಲಿದ್ದ ದೇವರಾಜ ಚಮೂಪ ನೆಂಬವನ (೧೧೯೫) E ಶಾಸನದಿಂದ ಗೊತ್ತಾಗುತ್ತದೆ.

§ ದ್ವಾರಸಮುದ್ರ ಬಲ್ಲಾಳರಾಜನಾದ ೨ನೇ ವೀರಬಲ್ಲಾಳನು (ಕ್ರಿ. ಶ. ೧೧೭೩—೧೨೧೩) ಪುಲಿಕರನಗರದ ಪೂರ್ವಕ್ಕೆ ಹಿರೇವಡವಟ್ಟಿಗ್ರಾಮದಲ್ಲಿರುವ ಶ್ರೀಸೋಮೇಶ್ವರದೇವರಿಗೆ ತನ್ನ ಪಟ್ಟದರಸಿಯಾದ ರೆಮ್ಮಿದೇವಿಯನ್ನು ಕೂಡಿಕೊಂಡು ಈಗಿನ ಹೈದ್ರಾಬಾದ ನಿಜಾಮ ಸರಕಾರದ ಹದ್ದಿಯಲ್ಲಿರುವ ಕವಲೂರಗ್ರಾಮದಲ್ಲಿ ಇನಾಂ ಹಾಕಿ ಕೊಟ್ಟನೆಂದು ಅದೇ ದೇವಸ್ಥಾನದಲ್ಲಿರುವ ಶಾಸನದಿಂದ ಗೊತ್ತಾಗುತ್ತದೆ.

* ಯಾದವ ಚಕ್ರವರ್ತಿಯಾದ ರಾಮಚಂದ್ರನು (೧೨೭೧-೧೩೧೦) ಹುಲಿಗೆರಿಯಲ್ಲಿದ್ದ ಮುಮ್ಮುಂಡಶಿಂಗ ಶೇನಾಧಿಪತಿಯ ತಲೆಯನ್ನು ಕತ್ತರಿಸಿ ಧಾರಾತೀರ್ಥ (ಖಡ್ಗತೀರ್ಥ) ದಲ್ಲಿ ಸ್ನಾನಮಾಡಿ, ಹುಲಿಗೆರಿಯಲ್ಲಿ ಮರಣಹೊಂದಿದನು; ಕ್ರಿ. ಶ. ೧೪೩೨ (ಶಕೆ ೧೩೫೪ ವಿರೋಧಿಕೃತ ಸಂವತ್ಸರದ ಮಾಘ ಬ. ೩೦ ಸೋಮವಾರ ದಿವಸ) ರಲ್ಲಿ ದೇವರ ನೈವೇದ್ಯಕ್ಕೆ ಹಕ್ಕು ಶಿಕ್ಕಿತು, ಕ್ರಿ. ಶ. ೧೫೬೮ ರಲ್ಲಿ

---

¶ Epigraphia Indica Vol. V p. 245, Carn. Desa. Ins. Vol. II p. 121, Bom Gaz. Vol. I Part II p. 502 ;

§ Bom. Gaz. Vol. I Part II p.p. 501-502.

* Stone tablets at Laxmeshwar Fort in the Navaranga Hall.

ಶ್ರೀ ಸೋಮೇಶ್ವರ ದೇವರಿಗೆ ಮಾತ್ರ, ಆನೆ, ಕುದುರೆ, ಧ್ವಜ, ಪತಾಕೆಗಳು ಸಲ್ಲತಕ್ಕದ್ದೆಂಬ ಬಗ್ಗೆ ಜೈನರು ಜಯಪತ್ರವನ್ನು ಬರಕೊಟ್ಟರು ಅಂತಾ ಲಕ್ಷ್ಮೇಶ್ವರದ ಶಾಸನಗಳಿಂದ ತಿಳಿಯುತ್ತದೆ.

ದೇವಗಿರಿಯ ಯಾದವರ ನಂತರ ಈ ಹುಲಿಗೆರೆಯುನಾಡು ಮುಸಲ್ಮಾನರ ಆಳಿಕೆಗೆ ಸೇರಿ ಮುಂದೆ ಸವಣೂರ, ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಹೈದರ ಅಲ್ಲಿಯ ಸಂಗಡ ಯುದ್ಧಮಾಡಿ ಜಯವನ್ನು ಹೊಂದಿದ ಮಿರಜಕಿಲ್ಲೇದಾರರಾದ ಗೋವಿಂದಹರಿ ಪಟವರ್ಧನರಿಗೆ ಸವಣೂರ, ಬಂಕಾಪೂರ ಮೊದಲಾದ ೨೫೦೦೦೦೦ ರು. ಸರಂಜಾಮುವನ್ನು ಪುಣೆಯ ಬಾಳಾಜಿ ಬಾಜೀರಾವ ಪೇಶ್ವೆಯು ಹಾಕಿಕೊಟ್ಟನು. ಅವು ಸಕಾರೆಯು ಒಪ್ಪಂದವಮೇರೆಗೆ ಈಗಿನ ಬ್ರಿಟಿಶ್ ಹದ್ದಿಯನ್ನು ಹೊರ್ತುಪಡಿಸಿ ಲಕ್ಷ್ಮೇಶ್ವರ ಮೊದಲಾದ ಸಂಣಪುಟ್ಟಸಂಸ್ಥಾನಗಳು ಈಗಲೂ ಪಟವರ್ಧನ ಮನೆತನಗಳಿಗೆ ನಡಿಯುತ್ತಿದ್ದು ಮಿರಜ ಕಿಲ್ಲೇದಾರರಾದ ಶ್ರೀಮಂತಬಾಳಾಸಾಹೇಬ ಸರಕಾರದಿಂದ ಶ್ರೀಸೋಮನಾಥ ದೇವರಿಗೆ ಇನಾಮುಗಳು ಉಷಾಶನಗಳು ಈಗಲೂ ನಡೆಯುತ್ತವೆ.

ಈ ಪುಣ್ಯಕ್ಷೇತ್ರವನ್ನು ಕಣ್ಣಾರೆ ಕಂಡು ನನ್ನ ಜಿಜ್ಞಾಸೆಯನ್ನು ತೃಪ್ತಿಗೊಳಿಸಬೇಕೆಂಬ ಕಕ್ಕುಲಿತೆಯಿಂದ ಲಕ್ಷ್ಮೇಶ್ವರಕ್ಕೆ ಹೋಗಲು ರಾ. ರಾ. ತಟ್ಟಿ ದೊಡ್ಡಬಸಪ್ಪನವರು ತಮ್ಮ ಶ್ರೀ ಸೋಮೇಶಸೇವಾನಿರತರಾದ ರಾ. ರಾ. ಬಾಳಪ್ಪಾ ಜಿವಪ್ಪಾ ವಕೀಲ ಮೊದಲಾದ ನಾಗರೀಕತೆಯನ್ನು ಹೊಂದಿದ ಮತ್ತು ಸಮಾಜಕಾರ್ಯನಿರತರಾದ ಸದ್ಗೃಹಸ್ಥರನ್ನು ಕೂಡಿಕೊಂಡು ಅಂದವಾದ ದೇವನಿಕೇತನವನ್ನು ತೋರಿಸಿ, ಶಾಸನಗಳ ಒಕ್ಕಣೆಯನ್ನು ಕರ್ಣಾಕರ್ಣಿಕೆಯಿಂದ ಬಂದ ಐತಿಹ್ಯವನ್ನು, ಮತ್ತು ತದನುಸಾರವಾಗಿರುವ ಪ್ರತ್ಯಕ್ಷ ಕುರುಹುಗಳನ್ನು ವಿಶದವಾಗಿ ವಿವರಿಸಲು, ಕೋಟಿಸೂರ್ಯಪ್ರಭಾವದೋಪಾದಿಯಲ್ಲಿರುವ ಈ ದೇವಾಲಯದಲ್ಲಿ ವ್ಯಕ್ತವಾಗುವ ಶಾಂತವಾದ ತೇಜಸ್ಸಿನಿಂದ ಭಕ್ತಿಶ್ರದ್ಧಾನಂದಗಳುದ್ಭವಿಸಿ ಒಂದುವರೆ ನಿಮಿಷ ನನ್ನ ಮನಸ್ಸು ಕೇವಲ ಸಾಮ್ಯಾವಸ್ಥೆಯಲ್ಲಿ ಉಳಿದಂತಾಯಿತು. ವೃಷಭಾರೂಢನಾದ ಶ್ರೀ ಸೋಮೇಶನ ದರುಶನ ತಕ್ಕೊಂಡು ಶ್ರೀ ಆದಯ್ಯಗಳು ಐಕ್ಯವಾದ ಲಿಂಗವು ಗರ್ಭಗುಡಿಯ ಒಳಬಾಗಿಲದ ಬಲಕ್ಕೆ ನಿಲಿಸಿದ್ದು, ಪುರಾಣದಲ್ಲಿ ಉಕ್ತವಾದ ಯಾವತ್ತು ಸಂಗತಿಗಳ ಕುರುಹುಗಳನ್ನು ಗೊತ್ತುಮಾಡಿಕೊಂಡೆನು. ಖಡ್ಗತೀರ್ಥವನ್ನು ಮಾತ್ರ ಸ್ಥಳಸಂಕೋಚದ ಮೂಲಕ ಸರಕಾರದವರು ೨೦-೩೦ ವರ್ಷದ ಕೆಳಗೆ ಹೂಳಿಬಿಟ್ಟಿರುತ್ತಾರೆ. ಚೈತ್ರ ಶು. ೧೪ ದಿವಸ ನಿಲಿಸಲ್ಪಟ್ಟ ಶ್ರೀ ಸೋಮೇಶನ ಪಲ್ಲಕ್ಕಿಯನ್ನು ಮಾರನೇ (ದವನದ ಹುಣ್ಣಿವಿ) ದಿವಸ ದವನ ಮುಡಿಯುವದರ ಸಲುವಾಗಿ ಅತಿಸಂಭ್ರಮದಿಂದ ಯಾವದಾದರೊಂದು ತೀರ್ಥಕ್ಕೆ ಈಗಲೂ ಒಯ್ಯತಕ್ಕ ಸಾಂಪ್ರದಾಯವಿದ್ದು, ವೈಶಾಖ ಶು|| ೧೦ ದಿವಸ ದೊಡ್ಡ ಜಾತ್ರೆಕೂಡಿ ರಥೋತ್ಸವವಾಗುತ್ತದೆ.

ಈ ಪುರದ ವಿಸ್ತಾರವು, ಅಮಾನುಷ ಕೃತ್ಯಗಳಾಗಿ ತೋರುವ ಭವ್ಯವಾದ ಕಟ್ಟಡಗಳು ಸರಿಯಾಗಿಯೇ ಪೂಜ್ಯ ಪೂಜಕಭಾವವನ್ನು ವ್ಯಕ್ತಪಡಿಸದಿರಲಿಲ್ಲ. ‘‘ ಗೂಳಿಬಿದ್ದರೆ ಆಳಿಗೊಂದುಕಲ್ಲು ’’ ಯೆಂಬಂತೆ ದೇಶಕಾಲ ಪರಿಸ್ಥಿತಿಗೆ ಸರಿಯಾಗಿ ಎಷ್ಟೋ ದೇವಾಲಯಗಳು, ಧರ್ಮಛತ್ರಗಳು, ತೀರ್ಥಗಳು, ನೆಲಸಮವಾಗುತ್ತ ನಡೆದಿದ್ದು, ‘‘ ಹೂ ಮಾರುತ್ತಲಿದ್ದಸ್ಥಳಗಳಲ್ಲಿ ಹುಲ್ಲು ಮಾರುತ್ತಲಿದೆಂಬಂತೆ ’’ ದುರುಪಯೋಗವಾಗುತ್ತಿರುವದನ್ನು ಕಂಡು ಮನಸ್ಸು ಖತಿಗೊಂಡಿತು. ಕ್ಷಣಹೊತ್ತಿನ ಮೇಲೆ ಘಡಿಯಾರದೊಳಗೆ ಲೋಲಾಡತಕ್ಕ ಆಂದೋಲಕದಂತೆ ಒಂದು ಮಗ್ಗಲು ಆನಂದವು ಮತ್ತೊಂದು ಮಗ್ಗಲು ದುಃಖವು ನಿಸರ್ಗದತ್ತವಾದವುಗಳಿದ್ದು ಆ ಜಗದೀಶನಲೀಲೆಯನ್ನು ಶಾಂತವಾಗಿ ಸಹಿಸಬೇಕಾಗುತ್ತದೆಂದು ಸಮಾಧಾನಮಾಡಿಕೊಳ್ಳಬೇಕಾಯಿತು.

ಇಂಥೀ ಚರಿತ್ರವನ್ನು ಸಕಲವೀರಶೈವರಿಗೆ, ಅದರಲ್ಲಿ ವಿಶೇಷವಾಗಿ ಶ್ರೀ ಪುಲಿಕರಪುರಾಧೀಶಸೋಮೇಶಪ್ರತಿಷ್ಠಾಪನಾಚಾರ್ಯ ಶ್ರೀ ಆದಯ್ಯಗಳ ಸಾಂಪ್ರದಾಯಕರಾದ ಆದಿವಾಣಿಜ್ಯ (ಆದಿಪಂಚಮ)ರೆಂಬ ವೀರಶೈವ ಉಪಪಂಗಡದವರಿಗೆ ಉತ್ತೇಜನಪರವಾಗಿ ರಾ. ಸಾ. ಶೆಟ್ಟಿ ನೂರಂದಪ್ಪನವರು, ಮಹಾಜನ ರೇವಪ್ಪನವರು, ಬೆಳ್ಳುಳ್ಳಿ ರಾಮಪ್ಪನವರು, ಸುಗಂಧಿ ರೇವಪ್ಪನವರು, ಗೊಟ್ಟಿ ಶಿದ್ಧಲಿಂಗಪ್ಪನವರು, ಅಥಣಿ ತಾಲೂಕ ಬಾಡಗಿ ನ್ಯಾಮಗವಡರಾದ ತಿ. ರಾ. ರಾ. ಶಿದಮಲ್ಲಪ್ಪನವರು ಮೊದಲಾದ ಭಕ್ತವೃಂದರ ಕೈನೆರಿವಿನಿಂದ ಕ. ಅಥಣಿ ಗ್ರಾಮದ ಶ್ರೀ ಮೋಟಗಿ ವೀರಕ್ತಮಠಾಧ್ಯಕ್ಷರಾದ ಶ್ರೀ ಮುರಗೇಂದ್ರಸ್ವಾಮಿಗಳು, ಗುಂತಗಲ್ಲ ಶಿಖಾಮಣಿಮಠದ ವೇ. ವಿರುಪಾಕ್ಷಶಾಸ್ತ್ರಿಗಳ ಮತ್ತು ಶ್ರೀ ಮಜ್ಜಗದ್ಗುರು ತೋಂಟದ ಮಹಾಸ್ವಾಮಿಗಳ ಆಸ್ಥಾನ ಪಂಡಿತರಾದ ವೇ. ಕಲ್ಲಪ್ಪಶಾಸ್ತ್ರಿಗಳ ಮುಖಾಂತರದಿಂದ ಶ್ರೀ ಆವಿಶೆಟ್ಟಿಗಳ ಭಕ್ತಿತತಿಯನ್ನು ಶಕೆ ೧೮೧೫ ನೇ ವಿಜಯನಾಮ ಸಂವತ್ಸರದ ಕಾರ್ತಿಕ ಮಾಸದಲ್ಲಿ ವಿಶದವಾಗಿ ಸ್ತುತಿಪಡಿಸಿ, ಕಲ್ಯಾಣಪುರದ ಶ್ರೀ ಬಸವೇಶನು ವೀರಶೈವ ಮತಸ್ಥಾಪಕನೆಂಬ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ಇವತ್ತಿಗೆ ೧೦೦ ವರ್ಷಕ್ಕೆ ಮಿಕ್ಕಿದ ವಯಸ್ಕರಾದ ಮತ್ತು ಸತ್ಕೀರ್ತಿಸಂಪನ್ನರಾದ ಈ ಶ್ರೀಮನ್ಮಹಾಸ್ವಾಮಿಗಳು ತಮ್ಮ ಇರುವಿಕೆಯಲ್ಲಿ ಒಂದಾವರ್ತಿ ಪ್ರಚುರಗೊಳಿಸಬೇಕೆಂದ ಆಕಾಂಕ್ಷೆಯನ್ನು ತೃಪ್ತಿಗೊಳಿಸಬೇಕೆಂದು ಈ ಕಾರ್ಯವನ್ನು ಕೈಕೊಂಡೆನು. ಕ್ಷಿತಿಜವನ್ನು ಕಂಡು ಹಿಡಿಯಹೋದಹಾಗೆಲ್ಲ ಅದು ಮುಂದಕ್ಕೆ ಸಿಸಿಟಿ ಹೋಗುವಂತೆ ನನಗೆ ಬೇಕಾಗಿರುವ ಸಾಹಿತ್ಯವಿಲ್ಲದ್ದರಿಂದ ನನ್ನ ವಿಚಾರತರಂಗಗಳು ಯಾವ ಧಡಕ್ಕೆ ಅಪ್ಪಳಿಸುವವೋ ಏನೋ ಯೆಂಬಂ

ತಾಯಿತು. ಅಷ್ಟರಲ್ಲಿ-ಹುಡುಕಾಡಿದರೆ ಸಿಗದಂಥ ಬಳ್ಳಿಯು ತಾನಾಗಿಯೇ ಕೈದೊಡಕಿ ತೆಂಬಂತೆ-ಬೆಂಗಳೂರಲ್ಲಿರುವಂಥ ಚೀಫ್‌ಕೋರ್ಟ್ ಡೆಪ್ಟಿ ರಜಿಸ್ಟ್ರಾರ್ ವೇ. ಬಿ. ಬಸ ವಾರಾಧ್ಯರುಗಳ, ನಮ್ಮ ಯೋಗವು ಈಶಸಂಕಲ್ಪದಿಂದ ಕೂಡಿತು. ಅವರುಗಳು ತಾವು ಮೈಸೂರು ಡಿಸ್ಟ್ರಿಕ್ಟ ಮಂಡ್ಯದ ತಾಲೂಕು ಸರ್ವಮಾನ್ಯ ಬೇಲೂರು ಗ್ರಾಮದಲ್ಲಿ ರುವ ವೇ. ಪುಟ್ಟಸ್ವಾಮಿಗಳು ಸಂಗ್ರಹಿಸಿಟ್ಟ (ಬ) ತಾಳವ್ರೋಲೆ ಗ್ರಂಥವನ್ನು, ಮತ್ತು ಶ್ರೀಮನ್ನಿರಂಜನ ಜಗದ್ಗುರು ಮುರಘುರಾಜೇಂದ್ರ ಮಹಾಸ್ವಾಮಿಗಳ ಸಂಸ್ಥಾನದ ಬೃಹನ್ಮಠದಲ್ಲಿದ್ದ ಗ್ರಂಥಭಾಂಡಾರದೊಳಗಿಂದ (ಸ) ತಾಳವ್ರೋಲೆ ಗ್ರಂಥವನ್ನು ಸರಿ ನೋಡಿ ಪ್ರಚುರಗೊಳಿಸಲು ತಯಾರಾದ ಗ್ರಂಥಗಳನ್ನು ರಾ. ರಾ. ಬೆಳ್ಳುಳ್ಳಿ ರಾಮ ಪ್ಪನವರು ಬಹು ದಿವಸದಿಂದ ಸಂಗ್ರಹಿಸಿಟ್ಟ ಕೈಬರಹದ ಮೂಲ ಪುಸ್ತಕದ (ವಾ) ನಕಲನ್ನೂ ಮತ್ತು ಹುಬ್ಬಳ್ಳಿ ತಾಲೂಕ ಮಲ್ಲಿಗಿವಾಡ ಗ್ರಾಮದ ವೇ|| ಮಠಪತಿ ವೀರ ಯ್ಯನವರು ಸಂಗ್ರಹಿಸಿದ ಮೂಲ ಪುಸ್ತಕದ (ರ್ಯ) ನಕಲನ್ನೂ ಮತ್ತೂ ಸಹಾಯವಾ ಗಿಟ್ಟುಕೊಂಡು, ಪರಿಷ್ಕರಿಸಿದರು. ಶ್ರೀಮದ್ರಾಘವೇಶ್ವರನ ಕಾಲಕ್ಕೂ ಈಗಿನ ಕಾಲ ಕ್ಕೂ ಮಹದಂತರವಿದ್ದು, ಈಗಿನ ಸುಧಾರಿಸಿದ ದೇಶಕಾಲ ಸಾಮಾಜಿಕ ಪರಿಸ್ಥಿತಿಗೆ ಸರಿಯಾಗಿ, ಮೂಲಗ್ರಂಥದಲ್ಲಿದ್ದ ೫ ನೇ ಸಂಧಿಯೊಳಗಿನ ೭-೮ ಅನವಶ್ಯಕವಾದ ಶ್ಲೋಕಗಳನ್ನು ಬಿಟ್ಟಿರುತ್ತದೆ. * ಗುರ್ತುಹಾಕಿದ ೬೭ ಶ್ಲೋಕಗಳು (ಸ) ಪ್ರತಿ ಯಲ್ಲಿ † ಗುರ್ತುಹಾಕಿದ ೫ ಶ್ಲೋಕಗಳು (ವಾ) ಪ್ರತಿಯಲ್ಲಿ ಹೆಚ್ಚಿಗಿದ್ದು ಉಳಿದವು ಗಳಲ್ಲಿ ಇಲ್ಲಾ. (ವಾ) ಮತ್ತು (ರ್ಯ) ಪ್ರತಿಗಳಲ್ಲಿ ಮಾತ್ರ " ಇದು ಸಮಸ್ತ ಕಮಳಾ ಧವ × × × × " ಅಂತಾ ಇದ್ದ ವಚನವನ್ನು ಗ್ರಂಥಾರಂಭದಲ್ಲಿ ಕೊಟ್ಟಿರುತ್ತದೆ. ಮತ್ತು ಮೂಲಪ್ರತಿಗಳು ಶಿಕ್ಕರೆ ಕವಿವಾಣಿಯನ್ನೇ ಸೇರಿಸುವದುಕ್ತವಾದ್ದರಿಂದ ೫ ನೇ ಸಂಧಿ ೮ ನೇ ಮತ್ತು ೬ ನೇ ಸಂಧಿ ೬೯ ನೇ ಶ್ಲೋಕಗಳಲ್ಲಿ ಬಹಳೇ ಅಕ್ಷರಗಳು ಹಾರಿಹೋದ ಸ್ಥಳದಲ್ಲಿ **** ಈ ಗುರ್ತುಗಳನ್ನು ಹಾಕಿ ಶ್ಲೋಕ ಭರ್ತಿಮಾಡಿರು ತ್ತದೆ. ಈ ನಾಲ್ಕು ಪ್ರತಿಗಳನ್ನು ಸರಿಯಾಗಿಟ್ಟುಕೊಂಡು ಅರ್ಥಗಾಂಭೀರ್ಯದ ಕಡೆಗೂ ಛಂದಸ್ಸಿನ ಕಡೆಗೂ ಲಕ್ಷಕೊಟ್ಟು ಅಗಮ್ಯವಾದ ಒಂದರ್ಧ ಅಕ್ಷರಗಳನ್ನು ಸತಃ ಹಾಕಿ ತಿದ್ದಿರುತ್ತದೆ. ಈ ಗ್ರಂಥದಲ್ಲಿ ಶ್ರೀ ಆದಿಶೆಟ್ಟಿಗಳವರ ಭಕ್ತಿಮಹಿಮೆಯೇ ಪ್ರಾಧಾನ್ಯ ವಾಗಿದ್ದು, ಶ್ರೀ ರಾಘವೇಶ್ವರ ಕವಿಗಳಿಂದುಕ್ತವಾದ " ಸೋಮನಾಥಚರಿತ್ರ " ಅಂ ತಾ ಕೊಟ್ಟ ಹೆಸರನ್ನು ಕಾಯಮವಾಗಿಟ್ಟು ಈ ಗ್ರಂಥಕ್ಕೆ " ಸೋಮನಾಥಚರಿತ್ರ ರೂ ಪವಾಗಿರುವ ಆದಿಶೆಟ್ಟಿ ಪುರಾಣಂ " ಅಂತಾ ಹೆಸರನ್ನು ಕೊಟ್ಟಿರುತ್ತದೆ.

ವೇ. ಬಿ. ಬಸವಾರಾಧ್ಯರುಗಳು ತಾವು ಮೊದಲೇ ಅಚ್ಚು ಹಾಕಿಸಲು ತಯಾರು ಮಾಡಿದ ಸಾಹಿತ್ಯವನ್ನು ಕೇವಲ ಹೆಸರುವಾಸಿಗಳಾಗಬೇಕೆಂದು ನಿರಪೇಕ್ಷಬುದ್ಧಿಯಿಂದ ನನ್ನ ಮುಂದಿಟ್ಟು, "ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್' ಎಂಬ ಸದ್ಬೋಧಸುಧೆಯನ್ನು, ನಿನ್ನ ಹೃತ್ಪಟಲದ ಮೇಲೆ ಇರಿಸಿಕೊಂಡು ಈ ಜಗತೀವಲಯದಲ್ಲಿ ಸತ್ಕೀರ್ತಿಯನ್ನು ಪಡೆ" ಎಂದು ಹರಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಿದುದಕ್ಕೆ, ಈ ಮಹನೀಯರು ಡೆಪ್ಟಿರಿಜಿಸ್ಟ್ರಾರ್ ಹಾಗೂ, ಆಕ್ಟಿಂಗ್ ಕಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್, ಮೊದಲಾದ ಜವಾಬ್ದಾರಿಯ ಕೆಲಸಗಳಲ್ಲಿ ತೊಡಿಕಿರುವಂಥ ತಮ್ಮ ಅಮೌಲ್ಯವಾದ ವೇಳೆಯನ್ನು ಈ ಸತ್ಕಾರ್ಯಕ್ಕೆ ಖರ್ಚುಮಾಡಿದ್ದಕ್ಕಾಗಿ ಅವರಿಗೆ ಜಗದೀಶನು ಉತ್ತರೋತ್ತರ ಆಯುರಾರೋಗ್ಯಧನಸಂಪದವನ್ನೀಯಲೆಂದು ಬೇಡಿಕೊಂಡು, ಈ ಯಾವತ್ತೂ ಕಾರ್ಯದಲ್ಲಿ ನೆರವಾದ ಸದ್ಗೃಹಸ್ಥರನ್ನೂ ಮತ್ತು ನಾನು ಒಂದೇಪ್ರತಿಯನ್ನು ಇಟ್ಟುಕೊಂಡು ಮುಂದುಗಾಣದಿರುವ ಸಮಯದಲ್ಲಿ ಮಾರ್ಗದರ್ಶಕರಾದ ಮತ್ತು ಕನ್ನಡ ಮೇಘದೂತಕಾವ್ಯವನ್ನು ರಚಿಸಿದವರಾದ ರಾ. ಸಾ. ಮಲ್ಲಿಕಾರ್ಜುನ, ಶಿವಲಿಂಗಪ್ಪ ರೈನಾಪೂರ್, ಬಿ.ಎ. ರೆವ್ಹಿನ್ಯೂ ಡಿಪಾರ್ಟ್‌ಮೆಂಟ್ ಜಿಲ್ಲಾ ಬೆಳಗಾಂವ ಇವರನ್ನು ಪುನಃಪುನಃ ನೆನಿಸಿ, ಸಕಲ ವೀರಶೈವ ಜ್ಞಾತಿಬಾಂಧವರಿಂದ ಪ್ರೋತ್ಸಾಹನೆಯುಂಟಾಗಿ ನನ್ನಿಂದ ಇಂಥ ಸಮಾಜಕಾರ್ಯಂಗಳು ಪುನಃಪುನಃ ಸಂಘಟಿಸಲೆಂದು ಶ್ರೀ ಪುಲಿಕರಪುರಾಧೀಶ ಸೋಮೇಶನನ್ನು ತ್ರಿಕರಣಪೂರ್ವಕವಾಗಿ ಬೇಡಿಕೊಂಡು ಈ ಲೇಖನವನ್ನು ಮುಗಿಸುತ್ತೇನೆ.

ಬೆಂಗಳೂರು,<br>
೨೦ ಆಗಸ್ಟ್ ೧೯೧೧.

ಜೋತೆಪ್ಪಗವುಡರು, ಶಿದ್ದನಗವುಡರು, ವತನದಾರ ಪಾಟೀಲ,<br>
ಸಾ. ಯಲಿಹಡಲಗಿ ತಾಲ್ಲೂಕು ಅಥಣಿ, ಜಿಲ್ಲಾ ಬೆಳಗಾಂವ.

ಶ್ರೀ

ಅಂಬಿಕಾವಿಳಾಸ ಗ್ರಂಥಮಾಲೆ

( ನಂಬರು ೨ )

# ಸೋಮನಾಥ ಚರಿತ್ರಂ.

ಶ್ರೀ ಸೌರಾಷ್ಟ್ರಸೋಮನಾಥಾಯ ನಮಃ.

|| ಸೂಚನೆ || ¶ ದೇವಸಭೆಯೊಳಗಿಂದುಧರನ ಬೆಸನಂಪಡೆದು ।
ಭೂವಳಯಕೆಸೆವ ಸೌರಾಷ್ಟ್ರದೊಳು ಜನಿಸಿ ಬಳೆ ।
ದಾವಗಂ ವ್ಯವಹಾರರೂಪಿಸಿಂ ಹುಲಿಗೆರೆಗೆ ನಡೆತಂದನಾದಯ್ಯನೂ ||

ಶ್ರೀಮದಗಜಾಹರ್ಷರತ್ನಾಕರೇಂದು ಗೌ ।
ರೀಮನೋವನವಸಂತಂ ಭವಾನೀವದನ ।
ತಾಮರಸದಿನಕರ ನುಮಾಕಲ್ಪಲತಿಕಾವೃತಪ್ರಬಲಸುರಭೂರುಹಂ ||
ಭೂಮಿಭೃತ್ತನಯಾಕ್ಷಿಕುಮುದವನುತಚಂದ್ರಿಕಾ ।
ನಾಮನೆಂನಂಸಲಹುಗನುದಿನಂ ಹುಲಿಗೆರೆಯ ।
ಸೋಮನಾಥಂ ಸೋಮಶೇಖರಂ ಸೋಮಂ ದಯಾಳುಮೂರ್ತಿವಿಳಾಸನೂ ||

---

¶ "ವಾ" ಮತ್ತು "ದ್ಯ" ಗುರುತುಳ್ಳ ಪ್ರತಿಗಳಲ್ಲಿ ಮಾತ್ರ ಗ್ರಂಥಾದಿಯುಲ್ಲಿ ಈ ಕೆಳಗೆ ತೋರಿಸಿರುವ ವಚನವು ಇದೆ:—

ಇದು ಸಮಸ್ತಕಮಳಾಧವಕಮಲವಿಷ್ಟರಸಂಕ್ರಂದನಾದಿಸುರನಿಕರಮಣಿಮಕುಟಮಯೂಖಮಾಲಾಮಂಜುರಂಜಿತ ಚರಣಸರಸೀರುಹ ಕಿಂಜಲ್ಕಮಂಜರೀಪಿಂಜರಿತದಿಶಾವಲಯುಂ ಸಕಲದೈವದೀಕ್ಷಾಕರ್ತೃ ನಿಖಿಲದೈವರಕ್ಷಾದಕ್ಷ ದೈನ್ಯದೈವಶರಣಾಗತ ವಜ್ರಪಂಜರ ದರ್ಪಿಷ್ಟದೈವಸರ್ಪಮಯೂರ ಗರ್ವಿತದೈವಸರ್ವಸ್ವಾಪಹರಣ ಸಮಸ್ತ

ಶ್ರೀಮದುಜ್ವಲತರುಣಫಣಿದಾಮಸೋಮಯ್ಯ ।
ಭೀಮತರದುರಿತವಿಘಟನನಾಮಸೋಮಯ್ಯ ।
ಹೈಮವತಿಯಪ್ರೇಮನವಧಾರುಸೋಮಯ್ಯ ಧೃತಸೋಮಸೋಮಯ್ಯನೇ ॥
ವ್ಯೋಮಗಂಗಾವೃತಜಟಾರಾಮಸೋಮಯ್ಯ ।
ರಾಮಣೀಯಕಸದ್ಗುಣಸ್ತೋಮಸೋಮಯ್ಯ ।
ಕೋಮಲಾಲಾಪಮಂ ಕರುಣಿಸೆನ್ನಯಮತಿಗೆ ಜಿತಕಾಮಸೋಮಯ್ಯನೇ ॥ ೨ ॥

ಶ್ರೀಯುಮಾವರನಿಂದುಧರ ನಭಯಕರನುಗ್ರ ।
ಮಾಯಾರಿ ಭಕ್ತಭಯಹಾರಿ ಗಂಗಾವಾರಿ ।
ವಾಯುಭುಗ್ಭೂಷ ಸುತ್ರಾಮವೇಷ ಸಘತಿಮಿರಪೂಷ ನತಿವಿಗತದೋಷ ॥
ಸ್ವಾಯತಾಖಿಳಲೋಕ ನಾನತವ್ರಜಪುಣ್ಯ ।
ದಾಯಕಂ ಹರಿವಿರಿಂಚೇಂದ್ರಪ್ರಮುಖದಿವಿಜ ।
ಗೇಯ ಭಕ್ತಿಜ್ಞಾನವೈರಾಗ್ಯಮಂಕೊಡುಗೆಪಂಪಾಪುರಾಧೀಶ್ವರಂ ॥ ೩ ॥

* ನುತಕಾಯಜಿತಮಾಯ ಪುರಮಥನವರಕಥನ ।
ಧೃತಸೋಮಗತಕಾಮ ಚಿರಲಿಂಗವರಸಂಗ ।
ಶ್ರುತಿದೂರಮತಿಸಾರ ಗಿರಿಜೇಶಸ್ಮರನಾಶ ದುರಿತಹರಕರುಣಾಕರಾ ॥
ಪ್ರತಿರಹಿತನುತಿವಿಹಿತ ಶರಣಜಯಭರಣಜಯ ।
ವಿತತಗಣಚತುರಗುಣ ಸುರರಾಜವರತೇಜ ।
ಸಿತಗಳನೆಯತಿಬಳನೆ ಶರಣಾಗುಗುರುಮೂರ್ತಿಹುಲಿಕರಪುರಾಧೀಶ್ವರಾ ॥೪॥

---

ದೈವಸಾರ್ವಭೌಮನೆನಿಪ್ಪ ಪುಲಿಕರಪುರಾಧೀಶ್ವರ ಶ್ರೀ ಸೋಮನಾಥವರ್ಣನವಾಗಿ ಸರಸ ಕವಿಸಾರ್ವಭೌಮಂ ಚತುರಕವಿಚತುರ್ಮುಖಂ ಭಾವಕಕವಿಭಾಳಲೋಚನಂ ವರ್ಣಕಕವಿಕರ್ಣಾವತಂಸಂ ವಸ್ತುಕಕವಿಮಸ್ತಕನ್ಯಸ್ತಂ ಅಧಟಕವಿಮಾನಮರ್ದನಗರ್ವಿತ ಕವಿಗಿರಿವಜ್ರದಂಡಂ ಉಭಯಕವಿಶರಭಭೇರುಂಡಂ ವರ್ತಮಾನಕವಿವೇಶ್ಯಾಭುಜಂಗಂ ಕರ್ಣಾಟಕಕಾವ್ಯಲಕ್ಷಣದೀಕ್ಷಾಚಾರ್ಯಂ ಶಿವಭಕ್ತಿಸ್ತುತಿಪರಾಯಣಂ ಶಿವಯೋಗಿಚಕ್ರೇಶ್ವರಂ ಲೋಕಾರಾಧ್ಯಂ ಸಾಕಾರಸುರದ್ರುಮಂ ಮರ್ತ್ಯಲೋಕದ ಮಹಾದೇವನೆನಿಪ್ಪ ಹಂಪೆಯ ಹರಿಹರದೇವರ ವರಕುಮಾರ ಹಂಪೆಯ ರಾಘವಾಂಕಂ ಶ್ರೀ ಸೋಮನಾಥ ಚರಿತ್ರೆಯೊಳಾದ್ಯಯುಗಳಜನನಮಂ ಪೇಳ್ವಂ ॥

† ಶ್ರೀಪತಿಗೆಸೊಬಗ ನುಡುಪತಿಗೆಶಾಂತಿಯುಂ ವಾ ।
ಣೀಪತಿಗೆಚಾತುರ್ಯಮಂ ದಿವಸ್ಪತಿಗಂಪ್ರ ।
ತಾಪಮಂ ಸುರಪತಿಗೆಭೋಗಮಂ ರತಿಪತಿಗೆಮೂಲೋಕವಾವರಿಸುವಾ ॥
ರೂಪಂ ಸರಿತ್ಪತಿಗೆ ಗಂಭೀರತೆಯುಂ ಸ್ವಾ ।
ಹಾಪತಿಗೆತೇಜಮಂ ಕೊಟ್ಟಗುರುಮೂರ್ತಿಯು ।
ಮಾಪತಿವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆಸಂತೋಷದಿಂದಾ ॥ ೫ ॥

† ಜಡೆಯೆಡೆಯಕುರೆಡೆಯೆಡೆಯೊಳಡಿಯಿಡುವ ಕಡಲತಡಿ ।
ವಿಡಿದುಡುಗಡಣದೊಡೆಯನೊಡಲೊಡಕು ನಡುನಡುಗಿ ।   ಚ.ಶಾ.
ಪೊಡಕರಿಸಿ ಮಿಡುಮಿಡುಕಲಡಿಗಡಿಗೆಜಡಿಜಡಿದುಪಡುಪಡುವಸಡುಸಯುಸದಾ ॥
ಮುಡುವಿಡುವ ಜಡಧಿಯಂಕಡೆವಕಡೆಯೊಳ್ಮೂಡಿ ।
ಘುಡಿಘುಡಿಸಿಪಡೆಯುಪಡಲಿಡೆಕೆಡಪುವುದತುಡುಕಿ ।
ಪಿಡಿದೊಡನೆಪೊಸೆದುಕೊರಳೊಳ್ತೊಡೆವಹಂಪಯಮೃಡಂಬಿಡದೆಸಲಹು ಗೆಮ್ಮಾ ॥ ೬ ॥

† ವಾಣಿಯುರಿವಿನಬೆಳಗು ಮುಕ್ತಿವನಿತೆಯಮುಡಿಯ ।
ಮಾಣಿಕವು ಸರ್ವಮಂತ್ರಾದಿಪಂಚಾಕ್ಷರೀ ।   ಚ.ತ.
ಪ್ರಾಣ ಮಂಗಳದಮನೆ ದೇವಲೋಕದಜನ್ಮಭೂಮಿ ತಾವರೆಗಣ್ಣನಾ ॥
ರಾಣಿಯುಸಮ್ಮೋಳಭಾಗ್ಯಂ ಸರ್ವಸಿದ್ಧಿಯ ।
ತ್ರಾಣಂ ವಿರೂಪಾಕ್ಷನುನ್ನತೈಶ್ವರ್ಯದ ।
ಕ್ಷೋಣಿ ಪಂಪಾಂಬಿಕೆ ಮದೀಯಮತಿಗೀಗೆ ಪ್ರಸನ್ನತೆಯನುತ್ಸವದಲೀ ॥೭॥

* ಸೋಮ ಸೋಮವಿಭೂಷ ಸುರರಾಜರಾಜರಿಪ್ರ ।   ಮ.ಕ.
ಭೀಮಭೀಮಪ್ರಥುಳಭುಜ ಶಮನಶಮನ ಜಿತ ।
ಕಾಮಕಾಮವಿದೂರಗುಣಗಾತ್ರಗಾತ್ರಪಿಂಗಳಜಟಾರಾಮರಾಮಾ ॥
ನಾಮನಾಮಯುಗರಳಧರಧರಸ್ಥಿರಪ್ರಣ್ಯ ।
ಧಾಮಧಾಮಪ್ರಬಲಬಲವಂತಶ್ರುತಿಸಕಲ ।
ಸಾಮಸಾಮಸ್ತುತ್ಯಪಂಪಾಧಿಪತಿವಿರೂಪಾಕ್ಷರಕ್ಷಿಸುಗೆಮ್ಮನೂ ॥ ೮ ॥

* ನಿರುಪಮ ನಿರಾಲಂಬ ನಿತ್ಯನಿರ್ಭಯ ನಿರಾ |
ವರಣ ನಿರ್ಮಾಯ ನಿರವಯವ ನಿರ್ವಿಕಲ್ಪಕ |
ನಿರಸೂಯ ನಿಶ್ಚಿಂತ ನಿರ್ಲೇಪ ನಿರ್ಗುಣ ನಿರಾಧಾರ ನಿತ್ಯತೃಪ್ತ ||
ನಿರವದ್ಯ ನಿರ್ಭಿನ್ನನಿರ್ದ್ವಂದ್ವ ನಿಷ್ಕಾಮ |
ನಿರಪೇಕ್ಷ ನಿಷ್ಕಳ ನಿರಂಜನ ನಿರಾಕಾರ |
ನಿರಜ ನಿರಹಂಕಾರ ನಿರ್ಮಳನೆನಿಸುವ ಪಂಪಾವಿರೂಪಾಕ್ಷ ಶರಣು || ೯ ||

† ತರುಣಶಶಿ ಮಲ್ಲಿಕಾಮಾಲೆ ಕೆಂಜೆಡೆ ತುರುಬು |
ಉರಿಗಣ್ಣು ಕಸ್ತೂರಿಯಬೊಟ್ಟು ಕಪಿಲಾಕ್ಷಿಸರ |
ಸಿರುಹನಯನಂ ನಾಗಕುಂಡಲಂ ಪೊನ್ನೋಲೆ ಯೆಸೆವಕಟ ರನ್ನದಾಳೀ ||
ಸುರುಚಿರಸ್ಫಟಿಕಹಾರಂ ಹಾರ ಮಲ್ಪಕುಚ |
ವರಪಯೋಧರ ಮಜಿನವಸನಂ ದುಕೂಲಮಾ |
ಕರಶೂಲಮಬ್ಜ ತೊಡರುಂ ನೇವುರಂ ಮೆರೆವದೇವನಮ್ಮಂ ಸಲಹಲೀ || ೧೦ ||

ಶ್ರೀವಿರೂಪಾಕ್ಷದೊಳು ನಿತ್ಯನಭಿನವಮಹಾ |
ದೇವಂ ಜಿತೇಂದ್ರಿಯಂ ನಿಷ್ಕಾಮಿ ದೇಹಗುಣ |
ಮಾವರಿಸದತುಳನಿರ್ಲೇಪ ನಾರೂಢಲೌಕಿಕಮಂಟದಪ್ರತಿಮನು ||
ಭೂವಂದಿತಂ ನಿತ್ಯತೃಪ್ತಂ ಸಹಸ್ರಮುಖಿ |
ಜೀವಾನುಕಂಪಿ ಯೆಂದೆನಿಸಿ ರಾಜಿಪಸುಕೃತ |
ಭಾವಿ ಹಂಪೆಯಶಂಕರಪ್ರಭು ಮದೀಯಮತಿಗೀಗೆ ಪ್ರಸಂನತೆಯನು || ೧೧ ||

ಸಕಲಾಗಮಾಚಾರ್ಯ ಸಪ್ರತಿಮ ನನಸೂಯ |
ನಕಳಂಕ ಸತ್ತ್ವಮನನಂತವೇದಾರ್ಥಗಾ |
ಧಕನವಿದ್ಯಾತೀತನಾನಂದಮಯನು ಶಾಪಾನುಗ್ರಹಸಮರ್ಥನು ||
ಪ್ರಕಟಿತಯಶೋಮಯಂ ಗುಪ್ತಲಿಂಗಪ್ರೇಮಿ |
ಸುಕವಿ ಹಂಪೆಯಮಹಾದಿರಾಜ ಸುಜ್ಞಾನದೀ |
ಪಕೆಕವಿವಮಾಯಾತಮಂಧವಳಿಮಂತೆನ್ನಹೃದಯದೊಳು ಬೆಳಬೆಳಗುಗೇ
|| ೧೨ ||

ಭವಿಭಕ್ತರಲ್ಲೆಂದು ಕೈಯಾಸದುದು ತಂಸ |
ಯುವತಿಗಲ್ಲದೆಮನದೊಳೆಳಸದುದು ಕರಣಾಟ |
ಚ್ಛೆ ಪಿಡಿಯದುದನ್ಯಸಿಂದೆಯನಾಡದಿಹುದು ಪರದ್ರವ್ಯವಂ ಬಗೆಯದಿಹುದೂ ॥
ಶಿವಲಿಂಗಪೂಜೆಯಂ ಮಾಡಿಹಿಂಗದುದು ದೇ |
ಹವಿಕಾರವಾದಷಡ್ವರ್ಗವರಿಯದುದು ಸೇ |
ಮವಿದೆಂದು ನಡೆವ ಹಂಪೆಮಹಾದೇವಗುರುರಾಯ ರಕ್ಷಿಸುಗೆಮ್ಮನೂ ॥೧೩॥

ಆಮಹಾದೇವರುವರರವೊಳು ಗುರುಭಕ್ತಿ ಸಿ |
ಷ್ಟಾಮ ವರಿವಾಚಾರ ಸ್ಸೀತಿ ದಯೆ ಜಂಗಮ |
ಪ್ರೇಮ ಶಮೆದಮೆಶಾಂತಿದಾಂತಿ ಚಾತುರ್ಯ ಸತ್ಯೌದಾರ್ಯವೇಕಸಿಷ್ಟ್ಯೇ ॥
ಸಾಮರ್ಥ್ಯವೆಲ್ಲಾ ಕಲಾಪ್ರೌಢಿ ಸದ್ಗುಣ |
ಸ್ತೋಮವೆಲ್ಲಂಕೂಡಿ ರೂಪಾದುದೆನಿಸುವ ಮ |
ಹಾಮಹಿಮಹಂಪೆಯಹರೀಶ್ವರನ ಮೂರ್ತಿ ನೆಲಸಿರ್ಕೆನ್ನ ಚಿತ್ತದೊಳಗೆ ॥೧೪॥

ಮನವಚನಕಾಯದೊಳಗೊಮ್ಮೆಯುಂ ಭಾಳಲೋ |
ಚನನನಲ್ಲದೆ ಹೊಗಳದುದ್ಭಟನನಾ ಮಯೂ |
ರನ ಕಾಳಿದಾಸನ ಹಲಾಯುಧನ ಕೇಶಿರಾಜನ ಮಲುಹಣನ ಬಾಣನಾ ॥
ವಿನುತಭೋಜನ ಭಲ್ಲಟನ ಭಾರವಿಯ ಪದವ |
ನೆನೆದು ಬಲಗೊಂಡು ತೊಡಗಿದೆಸೋಮಹಾಕೃತಿಯ |
ನೆನಗೆಸರವಕ್ಕೆ ನಡಸುಗೆ ರಸಂಗೊಡುಗೆ ತಿದ್ದುಗೆ ಸುಸಿರ್ಪಿಷ್ಣುಟಂದಾ ॥೧೫॥

ರಸದೊಳರ್ಥದೊಳಲಂಕಾರದೊಳು ಭಾವದೊಳು |
ಹೊಸರೀತಿಯೊಳು ಬಂಧದೊಳು ಲಕ್ಷಣದೊಳು ಪದ |
ವಿಸರದೊಳು ಕಾವ್ಯದೊಳು ತಪ್ಪುಳ್ಳೊಡಿದರೊಳಗೆ ಪರರುಕ್ಕೈಯೆಕ್ಕದಂತೆ ॥
ಸಸಿನೆಮಾಡುವುದು ತಿದ್ದುವುದು ಕೈಕೊಂಡು ಲಾ |
ಲಿಸಿ ಕೇಳ್ವುದೆಲ್ಲಾ ಶಿವಾರ್ಚಕರು ನಾ ಸಿಮ್ಮ |
ಶಿಶುವೆನಗೆ ಕುಂದಿಲ್ಲವೇತರಿಂದೆನಲನ್ನ ಭರಭಾರ ಸಿಮ್ಮದಾಗ ॥೧೬॥

* ಪರೆದುಪರೆದೀಕೃತಿಯೊಳುಳ್ಳ ಲೇಸುಗಳ ನಾ।
ದರಿಸಿ ಮೇಲುಳ್ಳ ತಪ್ಪಂ ಹಿಡಿವೆನೆಂಬ ನಿ।
ಷ್ಠುರದುರ್ಜನಂಗೆ ವಂದಿಸುವೆ ನೆನ್ನಂ ಜನಂ ನಗಲಾಗದೇಕೆಂದೆನೇ ॥
ವರಮುಕುರವಂ ತೊಳೆವರಾರಂಗಳವನು ಜೋ।
ಹರಿಪರಾಮರ್ಲಿನಾಂಬರವ ನೊಗೆವರಾರಿದಂ।
ಪರಿಕಿಪೊಡೆ ಸುಜನರಾಗಿರ್ದರೀಕೃತಿಗವರು ಕುಂದ ಕಾಣಿಸಲರಿಯರೂ
॥ ೧೭ ॥

* ನಡೆವರೆಡಹದೆ ಬರುಬರೆಡಹುವರೆ ಕಾವ್ಯಮಂ।
ನಡೆಸುವಾತಂ ರಸಾವೇಷ್ಟಿ ಮರಹಾಲಸ್ಯ।
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃತಪ್ಪುವನೆ ಬಂದೆರಡೆಡೆಯೊಳೂ ॥
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ।
ಕಡೆತನಕ ಬಂದಲೇಸಿಂಗೆ ತಲೆದೂಗೆ ತಲೆ।
ಯೊಡೆವುದೇ ಬೇಸಮುರಿಯದ ನೀರಸರನೇಕೆ ಹುಟ್ಟಿಸಿದನೋ ಬೊಮ್ಮನೂ
॥ ೧೮ ॥

* ವ್ಯಾಕರಣಪರಿಣತ ನಲಂಕಾರಪರಿಚಿತ ನ।
ನೇಕರಸನಿಪುಣ ನಭಿದಾನಪ್ರವೀಣ ನೆ।
ಲ್ಲಾಕಳಾಕುಶಲನೆನಿಪಾತಂ ಕವೀಶ ನವನಿದಿರೊಳೇನುವನರಿಯದಾ ॥
ಕಾಕುದುರ್ಭೋಧಕಂ ಕವಿಯೆನಿಸಿ ಕೊಂಡೊಡೆ ಮ।
ಹಾಕವಿಗೆ ಕುಂದೆ|ಜಲಶಯನವಿಷ್ಣು ಹರಿಯೆನೆ।
ಭೇಕನುಂ ನೀರೊಳಗೆ ಹರಿಯೆನಿಸಿಕೊಂಡೊಡವ ಕೊಂದನೇ ಚಕ್ರಧರನೂ
॥ ೧೯ ॥

* ಕವಿಯುಘಕನಿರ್ದೊಡೇಂ ಕೇಳ್ವರಿಲ್ಲದೊಡೆ ಗಾ।
ನವಿನೋದಿಯಿರ್ದೊಡೇಂ ಜಾಣರಿಲ್ಲದೊಡೆ ಜಾ।
ತಿವಿದಗ್ಧೆಯಿರ್ದೊಡೇಂ ಸುವಿಟರಿಲ್ಲದೊಡೆ ಹೊಸಹೂವಮಾಲೆಯಿರ್ದೊಡೇನೂ ॥
ತವೆಮುಡಿವರಿಲ್ಲದೊಡೆ ನಾನಾಕಳಾನ್ವಿತರ।
ನಿವಹವಿರ್ದೇನೋ ಕಳಾಘ್ರಾಹಕರಿಲ್ಲದೊಡ।
ಮಿವನಯ್ದುಬಲ್ಲವನಪೂರ್ವ ಮೇಣುಳ್ಳೊಡವ ದೇವನಲ್ಲದೆ ಮನುಜನೇ ॥೨೦॥

* ಬಗೆವೆರಸಿ ಬಂದಡ್ಡವಾಯ್ದೊಡರಿಯೆನು ಪರೋ |
ಕ್ತಿಗಳರ್ಥವುಂ ಕಳ್ವುದವನುತನ ವದನಳುಪಿ |
ತೆಗೆದೆನಾದೊಡೆ ಬಳಿಕ್ಕವರವ್ಮೈನೀರ್ಗೆ ಮುಡಿಯಿಂತೆಗೆದಪ್ರೊವಾಳಗೇ ||
ಉಗುಳ್ದತಂಬುಲಕುಟ್ಟುಕಳೆದ ಮೈಲಿಗೆಗೆ ಸಫಿ |
ದೊಗಡಿಸಿದ ಕೂಳ್ಗೆ ಕೈಯ್ಯಾಂತವನು ಬೇರೆ ಸಂ |
ದೆಗವಿಲ್ಲೆಸಿಪ್ಪಾಪ್ರತಿಜ್ಞೆ ಹಂಪೆಯರಾಘವಾಂಕ ನಿನಗಲ್ಲವಹುದೇ || ೨೦ ||

* ಮುಂತೆ ಸರಿಯಿಲ್ಲೆಂದುಪ್ರೊಗಳ್ದವರು ಪ್ರೊರವಟ್ಟ |
ಪ್ಪಿಂತವನ ಕವಿತೆ ಯೇನೆಂದು ನಿಂದಿಸಿ ತವ್ಮ |
ತೊಂತಗವಿತೆಯ ತುಂಬಸುರ್ಚೆ ನೆರೆದೂರುಗರ ಮುಂದೆ ಸಿಜಸಿಳಯದೊ[ಳಗೇ ||
ಮಂತಣಂಗೊಂಡು ಕಾಳ್ಗೆಡದೊಳ್ವ ಕವಿಗೆದೆಯ |
ಕೊಂತ ಮೂಗಿನಕತ್ತಿ ಯುಧಟುಕವಿಸಿಕರಚಾ |
ದಂತ ಹಂಪೆಯರಾಘವಾಂಕಪಂಡಿತ ಸುಭಯಕವಿಶರಭಭೇರುಂಡನೂ ||೨೧||

* ಕೆಳೆತನವನಂಟುವಿಷಯದ ಬಂಧುಬಳಗಗಳ |
ಬಲದೊಳಾಂ ಕವಿಯೆಂದು ಕವಿರಾಯನೆಂದು ವೆ |
ಗ್ಗಳಿಸಿ ಕಾಳ್ಗೆಡೆದೊಡದ ಸ್ಯೆರಿಸುವ ನಲ್ಲದಾನಂಟಸೀಡಾಡಿ ಮಲತೂ ||
ಬಳಿಕ ನಾಂ ಕವಿಯೆಂದು ಭೈರವಾಕಾರದಿಂ |
ಗಳಹಿ ದಸಿಗೆಯ್ವುದುಷ್ಕವಿಯು ಗರ್ವದ ಮೂಗ |
ಸಿಳುಹದಿರನುಭಯಕವಿಶರಭಬೇರುಂಡ ಹಂಪೆಯರಾಘವಂ ಸಭೆಯೊಳೂ
|| ೨೩ ||

ರಸಜೀವ ಭಾವವ್ಪೆಡಲರ್ಥವವಯವ ಶಬ್ದ |
ವಿಸರನುಡಿ ಯಲಂಕಾರವೇ ತೊಡಿಗೆ ಲಕ್ಷಣ |
ವೆಸುಲಕ್ಷಣಂ ವಿಪುಳಪದದವಿನ್ಯಾಸನಡೆ ಯ.ತಿರೀತಿ ಸುಕುಮಾರತೇ ||
ರಸಿಕರವುನಂ ಸುಳಿವಸುಖಿಸಿಳಯ ವಿಂತಪ್ಪ |
ಹೊಸಕಾವ್ಯಕನ್ಯಕೆಯನುರೆಪಡೆದು ಹುಲಿಗೆರೆಯ |
ರಸಸೋಮನಾಥಂಗೆ ಕೊಟ್ಟ ಹಂಪೆಯರಾಘವಾಂಕನೇಂಕೃತಪುಣ್ಯ
ನೋ ||೨೪||

ಕೃತಿವೆಸರು ಸೋಮನಾಥಚರಿತ್ರ ವೀಕೃತಿಗೆ ।
ಪತಿಸೋಮನಾಥ ನಿದಕೆಸಹಾಯಿಗಳು ಭಕ್ತ ।
ತತಿ ಯಿದಂಪೇಳ್ದ ಕವಿಹಂಪೆಯಹರೀಶ್ವರನಸುತರಾಘವಾಂಕನೆನಲೂ ॥
ಕ್ಷಿತಿಯೊಳಿಂನೀಕಾವ್ಯಮಂ ಮಹಾಕವಿಗಳೊಳು ।
ಚತುರರೊಳು ರಸಿಕರೊಳು ಬುಧರೊಳತ್ಯಧಿಕಮಂ ।
ಡಿತರೊಳಾರೋದರಾರ್ಕೇಳರಾರ್ಮೆಚ್ಚದವರಾರೆಂದೊಡೇಪೊಗಳ್ವೆನೂ
॥ ೧೫ ॥

+ ಎನಿತುಸಿರಿ ಸಾರ್ದೊಡಂ ಮಾಣ್ದೊಡಂ ನಿತ್ಯತ್ವ ।
ವನುವಪ್ಪೊಡಂ ಸಾವೊಡಂ ಮೆಚ್ಚಿ ಹಂಪೆಯಪುರ ।
ಜನಪೊಗಳ್ವನಾಲಗೆಯೊಳಸ್ವಪ್ನದವಭವಿಗಳಂಕೀರ್ತಿಸಿದೆನಾದೊಡೇ ॥
ಮನಸಿಜಾರಿಯ ಭಕ್ತನಲ್ಲ ನಾನೆಂಬ ಬಿರು ।
ದಿನಕವಿಯೆನಿಸಿಪ್ಪ ಹಂಪೆಯ ರಾಘವಾಂಕನೊ ।
ಯ್ಯನೆ ಪೇಳ್ದನೆಂಬಾಗಳೀಕೃತಿಯ ನಾವಸಜ್ಜನರು ಕೊಂಡಾಡದಿಹರೊ
॥ ೧೬ ॥

ಅಮರರುಂ ಮನುಗಳುಂ ಮುನಿಗಳುಂ ಕವಿಸಮೂ ।
ಹಮುಮತ್ಯತಿಷ್ಠದ್ದಶಾಂಗುಲಮೆನಿಸಿಪ್ಪ ಚಕಿ ।
ತಮಭಿಧತ್ತೇ ಶ್ರುತಿರಪಿಪ್ರಕಟಮೆನಿಸುವನ ನಾವೆಂತು ಪೊಗಳ್ವೆವೆಂದೂ ॥
ತಮತಮಗೆ ಪೊಗಳಲಂಜುವರಂಜುತಿರ್ಕೆ ಬೆ ।
ಟ್ಟಮನಾಸೆಯೇರಲಾರದೊಡಿರುಹೆಯೇರದೇ ।
ವಿಮಲಮಲಿಗೆರೆಯಸೋಮೇಶನಂಬಣ್ಣಿಸುವೆನೆನ್ನಸದ್ವಾಕ್ಯದಿಂದ ॥ ೧೭ ॥

ನುಡಿಲಕ್ಷಣಾರ್ಥರಸಭಾವಜ್ಞರೆನಿಪ್ಪ ।
ಘ್ಳಡವ ಕವಿಗಳ ಕಾವ್ಯದಿದಿರಲೀಕೋ ತನ ।
ಜಡಮತಿಯೊಳೀಶನಂ ಬಣ್ಣಿಸುವನೆಂದೆನ್ನ ನಗಲಾಗದೇಕೆಂದೊಡೇ ॥
ಜಡವರ ಮನೆಯ ಸೊಡರು ಕಂದುವುದೆ ಗುಡ್ಡಿಪಶು ।
ಬಿಡವೆಕರೆದಾಹಾಲು ಕಹಿಯಹುದೆ ಯೆಂನಕೃತಿ ।
ಪೊಡವಿಯೊಳುಸಲುವುದಕ್ಕೇನುಸಂಶಯಬೇಡನಂಬುನೀಡಿದೆಕ್ಕೈಯನೂ ॥ ೧೮ ॥

ಇಳೆಯೊಳೊಂದೂರೊಳಂತಕ್ಕೆ ಪುಣ್ಯಾಧೀನ ।
ದೊಳು ಸಮಂತೊಬ್ಬಿಬ್ಬರಂ ಮೆಚ್ಚಿಸುವನಲ್ಲ ।
ತಿಳಿದು ಕೇಳದೊಡರಿಯೆ ಕೇಳ್ದ ಸ್ವಕಾವ್ಯಾರ್ಥಮಂ ಕಿವಿಯ ಸೆರಗುಗಳಲೀ ॥
ತಿಳಿದ ಕವಿಗಳ ಗಮಕಿಗಳ ವಾದಿಗಳ ವಾಗ್ಮಿ ।
ಗಳ ರಸಾವೇಷ್ಟಿಗಳ ತಣಿವಡಗಿಸುವೆನೆಂದೊ ।
ಉಳಿದ ದುರ್ಜನರು ಮೆಚ್ಚದೊಡೆಂತೆನಲ್ಕದಕೆ ಕೇಳು ಮೇಲುತ್ತರವನೂ ॥
॥ ೨೯ ॥

ರೋಗಿ ಹಳದೊಡೆ ಹಾಲು ಹುಳಿಯಪ್ಪುದೇ ಹಗಲು ।
ಗೂಗೆ ಕಾಣದೊಡೆ ರವಿ ಕುಂದುವನೆ ಕಣ್ಗುರುಡ ।
ನೇಗೃದುವುಂ ಕಾಣದಿರೆ ಮುಕುರ ಕೆಡುವುದೇ ದುರ್ಜನರು ಮೆಚ್ಚದಿರಲೂ ॥
ನಾಗಭೂಷಣನ ಕಾವ್ಯಂ ಕೆಡುವುದೇ ಮರುಳೆ ।
ಪೋಗಲಾ ಮಾತದೇಕಂತಿರಲಿ ಕಡೆತನಕ ।
ನೇಗುತ್ತರೋತ್ತರವನೀವಭಾಷೆಗಳ ನವಧರಿಸುವುದು ಸಾಹಿತ್ಯರೂ ॥೩೦॥

ನಾರದನ ಮುಖದಿಂದ ಕಲಿಕಾಲವನುವ ಮದ ।
ನಾರಿ ಚಿತ್ತೈಸಿ ಗಣನಾಥನಂ ಕಳುಹಿದೊಡೆ ।
ಸೌರಾಷ್ಟ್ರದೊಳಗಾತನಾದಯ್ಯನೆಸರಿಂದ ಜನಿಸಿ ಹುಲಿಗೆರೆಗೆ ಬಂದೂ ॥
ವೈರಿಗಳ ಮೂದಲೆಗೆ ಶಿರಮಂ ಬಸುತಿಯೊಳಳಿ ।
ಧಾರಿ ಸೋಮಯ್ಯನಂ ಸಿಲಿಸಿ ತನ್ನಂ ಮುತ್ತಿ ।
ದಾರುಹತರಂ ಗೆಲ್ದನೆಂಬುದು ಕಥಾಗರ್ಭವಿದಬೆಳಸು ಕೃತಿಮನಕ್ಕನೂ ॥೩೧॥

ಈ ಕಥೆಗೆ ಪೂರ್ವಪ್ರಸಂಗವೆಂತೆನಲು ಪ್ರ ।
ಣ್ಯಾಕಾರದಂತಿರ್ಪ ಸಕಲಲೋಕದ ಭಾಗ್ಯ ।
ವೇಕಕಾಲದೊಳು ಗೂಳಿಯುದೆಗದತೆರದೊಳೆಸೆವುದು ದೇವಲೋಕವದಕೇ ॥
ನಾಕಾಣೆ ಪಡಿಯನದರ ಶಿರೋರತ್ನವೆನಲು ।
ನೇಕವಿಧದಿಂದೊಪ್ಪುವಮರಾವತಿಯೊಳರಿವು ।
ಸಾಕಾರಮಾದಂತೆ ನಾರದಮುನೀಂದ್ರನೆಸೆದಿರ್ದನೀಂ ವರ್ಣಿಸುವೆನೂ ॥ ೩೨ ॥

ಏಸೆವ ಭಕ್ತಿ ಜ್ಞಾನವೈರಾಗ್ಯ ಮೊದಲಾಯ್ತೊ ।
ಮಸೆದು ಪುಟವಿಟ್ಟ ಪುಣ್ಯಂ ಪುರುಷನಾಯ್ತೊ ಶೋ ।
ಭಿಸಿದ ಬೆಳುದಿಂಗಳಂಗಂಬಡೆದುದೋ ಶಿವನ ನೋಲಿಸುವ ರಾಗಂಗಳಾ ॥
ರಸ ಬಲಿದು ಮುನಿಯಾಯ್ತೊ ಸರ್ವಸಾಮರ್ಥ್ಯಂಗ ।
ಳೊಸೆದು ಜಡೆವೊತ್ತುದೋ ಕೌತುಕವಿದೆನಲು ರಾ ।
ಜಿಸುವನಾರದಮುನಿಯ ಚರಿತಮಂ ಬಣ್ಣಿಸುವೊಡೊಂದುನಾಲಿಗೆಯ್ಕೆದದೂ ॥ ೩೩ ॥

ಮಂತ್ರಗೊಂಡಲ್ಲಿ ಜಗಳವ ಹತ್ತಿಸುವೆನೆಂದು ।
ಚಿಂತಿಸುವ ಮನ ಕೊಂಡೆಯಕ್ಕೆಳಸಿ ಗದಗದನೆ ।
ತಿಂತಿಮುಸುಗುವಬಾಯಿ ಪರರ ಕಾಳಗದಲಗ್ಗಯಕೇಳಲೆಳಸುವಕಿವಿ ॥
ಸಂತಸುಖವಿಪ್ಪವರ ಕಾಡಬೇಕೆಂದು ಕಿಸು ।
ರಾಂತುಗುರಮುಸೆವಕ್ಕೆ ತಲೆಯೊತ್ತಿ ಕುತ್ತಿಹಲ ।
ರಂತವಸುಮುರವಂ ನೋಡಲೆಳಸುವಕಣ್ಣು ಸಿಂಗರಂ ನಾರದಂಗೆ ॥ ೩೪ ॥

ಜವೆವ ಸುರಭಿಯಂತಿರದಿ ಮುಳ್ಳೊಳ್ಳ ಕಲ್ಪವೃ ।
ಕ್ಷದತೆರದಿ ವರವೇಷದಿಂ ದುಶ್ಚರಿತ್ರಮಂ ।
ಹುದುಗೊಳಿಸಿ ನಡೆಸುವಮುಹಾಪುರುಷನೊಂದುದಿನವಲಸಿಕೆಯೊಳೊಕ್ಕಾಡುತ॥
ಕದನವಿಲ್ಲದೆ ಹೊತ್ತು ಹೋಗದಿಂನೆಲ್ಲಿ ಬೆಳ ।
ಸುವನೆನೆಂದುಮ್ಮಳಿಸುತಿಪ್ಪುದ್ದುನೆನೆದೆದ್ದು ।
ಮದನಹರನೋಲಗಕೆ ಹೋಗಿನೋಡುವೆನೆಂದು ಪೊರಮಟ್ಟು ನಿಜಗೃಹವನೂ ॥ ೩೫ ॥

ಉರವಣಿಸಿ ಬರವರಲು ಹರನೋಲಗಂ ಹರೆದು ।
ಕರಿ ತಗರು ಕೋಣಂ ನರಂ ಮಕರಯೆರಳೆಬಲು ।
ತುರಗವೃಷಭಂಗಳಂಬಿಗಿದೇರಿಬೀಳ್ಕೊಂಡು ಬೀಡಿಂಗೆ ಮರಳಿಬಪ್ಪಾ ॥
ಸುರಪತಿಯುನಗ್ನಿಯುಂ ಶಮನನಂ ನಿರುತಿಯಂ ।
ವರುಣನಂ ಮರುತನಂ ಧನದನಂ ರುದ್ರನಂ ।
ಭರದೊಳೀಕ್ಷಿಸುತ ಪರಮನ ಸಮಯಮಂ ಕೇಳುತಂ ಮುನೀಶ್ವರ ನಡೆದನೂ ॥ ೩೬ ॥

ನೆರೆನೆರೆದು ತರತರದೊಳೊತ್ತೊತ್ತೆಯಾಗಿ ಬಿ ।
ತ್ತರದಿ ಬರುತಿಪ್ಪ ಕಿಂಪುರುಷರಂ ಖಚರರಂ ।
ಗರುಡರಂ ಗಂಧರ್ವರಂ ಯಕ್ಷರಂ ಮಯೂರರನುರಗಸಂತಾನಮಂ ॥
ಸುರರ ವಿದ್ಯಾಧರರ ನಖಿಳಸಿದ್ಧರಂ ಖೇ ।
ಚರರನೀಕ್ಷಿಸುತ ಬೆಸಗೊಳುತ ನಡೆತಂದನೊ ।
ತ್ತರಿಸಿ ಮುಂದಿಯನು ಬಗಿದುಕ್ಕಿ ಹರಿತಪ್ಪ ಕಡುಗಡಲನೀರೇರುವಂತೇ ॥ ೩೭ ॥

ಹರಿಯುಂ ವಿರಿಂಚಿಯುಂ ಮನುಗಳುಂ ಮುನಿಗಳುಂ ।
ವರಗಣೇಶ್ವರರಂ ನವಗ್ರಹಂಗಳ ನಧಿಕ ।
ತರನವಬ್ರಹ್ಮರಂ ದ್ವಾದಶಾದಿತ್ಯರೇಕಾದಶಮಹಾರುದ್ರರಂ ॥
ಸಿರಿ ಸರಸ್ವತಿ ರಂಭೆ ಮೊದಲಾದ ಸುರವನಿತೆ ।
ಯರ ನಂದಿಮಹಾಕಾಳರಂ ಚಂಡಕೀರ್ತಿಯುಂ ।
ಹರುಷದಿಂನೋಡುತ್ತ ಬಂದೊಳಗೆ ಹೊಕ್ಕ ನೆಡೆಗೋಲಿಲ್ಲದಪ್ರತಿಮನೂ ॥ ೩೮ ॥

ದಿಟ್ಟವಾರಿಯ ಮೇಳದಾಲೋಚನೆಗಳೊಳಳ ।
ವಟ್ಟ ಹತ್ತೈದುಗಣನಾಥರ್ವೆರಸಿ ತನ್ನ ।
ಪಟ್ಟದಂಗನೆಸಹಿತ ಸುಖದಸುಗ್ಗಿಯಮೇಲೆ ಸೂಳಿ ಪರಿಮಿತದೊಳಿರಲು ॥
ಕಟ್ಟೆಗೆಯಕಲಿಗಳಾಜ್ಞೆಗಳು ಸಮಯಾಸಮಯ ।
ನಟ್ಟಿರುಳು ಹಗಲೆಂಬ ನೇಮವಿಲ್ಲದೆ ಬಲದ ।
ಕಟ್ಟದಿರೊಳ್ಕೈತಂದು ಸಿಂದನಪ್ರತಿಮಮುನಿ ಸಲುಗೆಗಳ ಸಾಮಂತನೂ ॥ ೩೯ ॥

ಶಶಿಧರನು ತನ್ನನಚ್ಚಿ ನವಲ್ಲಭೆಯನು ಭಾ ।
ವಿಸುವ ನಿಟ್ಟಿಸುವ ತಕ್ಕಿಸುವ ಮುದ್ದಿಸುವ ಬೋ ।
ಧಿಸುವ ಲಾಲಿಸುವ ಪಾಲಿಸುವ ಪಾಟಿಸುವ ಪರಿಕಿಸುವ ನಗಿಸುವ ನುಡಿಸುವಾ ॥
ಬೆಸನದೆಸಕಕ್ಕೆ ಪರವಶನಾಗಿ ಸುಖದಿ ಯೋ ।
ಣ್ದೆಸೆಗಾಣದಿರೆ ವೀಣೆಯಂ ಜಾಣ್ಮೆಯಿಂದ ಬಾ ।
ಜಿಸಿ ಸರಂದೋರಿ ಕೈಮುಗಿದು ಶಿರದೊಳು ಹೊರುವನಂ ತಿರುಗಿ ಪರ ಕಂಡನೂ ॥ ೪೦ ॥

ದೇವ! ಕುಪಿತಾಂಧಕಾಸುರಕಂದಕುದ್ದಾಲ! ।
ದೇವ! ಕರ್ಕಶಕಾಲತೂಲವಿಲಯೋಜ್ವಲನ! ।
ದೇವ! ಮದನಮದೇಭವಿದಳನಪ್ರಬಲಬಲವಂತಪಂಚಾನನಾ! ॥
ದೇವ! ದಾನವಪುರತ್ರಯಗಹನದಹನ! ಜಯ।
ದೇವ! ಜಯಜಯಯೆಂಬ ನಾರದಮುನೀಂದ್ರನಂ ।
ದೇವರಾಯಂ ದೇವರಾದಿತ್ಯನಿತ್ತಬಾ ಯಿತ್ತಬಾಯೆನುತಿರ್ದನೂ ॥ ೪೧ ॥

ಇನಿತುಮನ್ನಣೆಯನೀಲಿಡಗಿಚ್ಛನಿಕ್ಕಬೇ ।
ಕೆನುತ ಬಹುದೂರದಿಂ ಬಂದಂತೆ ಮೆಲ್ಲಮೆ ।
ಲ್ಲನೆ ತೊಡೆಯನೊತ್ತಿಕೊಳುತಡಿಯಿಟ್ಟು ಬಳಲ್ದಂತೆ ಬಸುರುಬ್ಬಿಲುಸುರಿಕ್ಕುತಾ ॥
ತನುಬೆಮರ್ದಂತೆ ಹಸ್ತದ ಕಮಂಡಲಜಲವ ।
ನನುವಾಗಿ ಪ್ರೋಕ್ಷಿಕೊಂಡೆದೆಯನೂಡಿಕೊಳುತ್ತ ।
ಮನದೊಳಗೆ ನೊಂದಂತೆ ಮೋರೆಯಂ ಮುರುಕಿಸುತ ಬಂದು ಮೂರಡೆ ನಿಂದನೂ ॥ ೪೨ ॥

ಇತ್ತಬಾ ಬಳಲ್ದೆ ಯೆಲ್ಲಿಗೆ ಹೋದೆ ಹುಸಿಯದಿರು।
ಚಿತ್ತದನುಮಾನ ಮೊಗದೊಳು ತೋರುತಿದೆ ಮುಖಂ ।
ಕಿತ್ತಡವನಾಲಿಂಗಿಸುತ್ತಿದೆ ವಿಟಂಹೇಳು ಹೇಳೆಂದು ಹರ ನೇಮಿಸೀ॥
ದತ್ತ ಕರೆದೋವಿ ಶಶಿಮೌಳಿ ನಾರದನ ಕೇ ।
ಳುತ್ತಿರಲು ಕೈಮುಗಿದು ನರಲೋಕದೊಳಗೆಲ್ಲ ।
ಸುತ್ತಿ ಬಳಲಿದೆನೆಂದು ನುಡಿದೊಡಲ್ಲಿಗೆ ಹೋದ ಕಾರಣವದೇನೆಂದನೂ॥೪೩॥

ಗುರುನಿಷ್ಠರಾರು ಲಿಂಗಾರೂಢರಾರು ಸ ।
ತ್ಪುರುಷರಾರನೃತವರಿಯದವರಾರತಿವಿಮು ।
ಕ್ತರರಾರು ಪರಸತಿಯ ತಾಯ ಸರಿಯೆಂದು ಕಾಣ್ಬವರದಾರೂ॥
ಕರುಣಿಗಳದಾರು ವಿದ್ಯಾನಿಚಯನಿಪುಣಗುಣ ।
ಪರಿಣತರದಾರು ದಾನಿಗಳಾರು ಧರ್ಮರತ ।
ತ್ಪರರಾರು ಧರಣೀತಳಾಗ್ರದೊಳಗೆಂದು ನೋಡಲುಹೋದೆ ನಾನೆಂದನೂ ॥
॥ ೪೪ ॥

ಉನ್ನತಾಶ್ಚರ್ಯಂಗಳೇನೇನ ಕಂಡೆಯೆನೆ ।
ನಿನ್ನ ಸಚ್ಛಿನಋಷಿಯಗಸ್ತ್ಯನಾಶ್ರಮವಾತ ।
ತನ್ನ ಕಯ್ಯಾರೆ ಪ್ರತಿಷ್ಠಿಸಿದಗಸ್ತ್ಯೇಶ್ವರಂ ರಾಮನನುಜನುಮೂ ॥
ಚೆನ್ನಿಂ ಪ್ರತಿಷ್ಠಿಸಿದ ಲಕ್ಷ್ಮಣೇಶ್ವರನವಕೆ ।
ಮುನ್ನ ನಿಂಸಂಶವಹರುದ್ರರ್ ಪ್ರತಿಷ್ಠಿಸಿದ ।
ಪನ್ನೊಂದುತೀರ್ಥವಂ ಕಳೆದು ಪುಲಿಗೆರೆನಗರಿಯುಂ ಕಂಡೆನಾನೆಂದನೂ ॥೪೫॥

ಮೂಲೋಕದೊಳಗಿಲ್ಲ ಶಿವಶಿವಾ! ಪೊಗಳ್ವ ।
ನಾಲಿಂಗ ಮಾತೀರ್ಥ ಮಾಕ್ಷೇತ್ರಮಾಸ್ಥಾನ ।
ಮಾಲೋಕಿಪರ ಕಂಣ ಪುಣ್ಯ ನೆನೆವರಮನೋಪರ ಪಿಪರ ಸುಖದ ಸುಗ್ಗೀ ॥
ಲೀಲೆಯಿಂ ಪೊಗಳ್ವ ಬಾಯ್ಮನವಸಂತವದೆಸಿಸಿ ।
ಸೋಲವಿಲ್ಲದ ಮಹಿಮೆಯಿಂದೊಪ್ಪುತಿದೆ ಯೆನಲು ।
ನೀಲಕಂಧರನದರಭೋಗದಾಗಂ ಪೂಜೆಯೋಜೆಯುಂ ಬೆಸಗೊಂಡನೂ ॥೪೬॥

ಅದರ ಮಾತೆಲ್ಲಿಯುದ, ಹೊಗಲಂತಪ ಶಿವಾಲ ।
ಯದ ಬಾಗಿಲಂತಕ್ಕೆ ತೆಗೆವುದೇ ಯೆಂದು ಕೇ ।
ಳದೆ ಪೂಜೆಯುಂ ಕೇಳ್ವರೇ ಯೆನಲು ತೆಗೆಯುಲೀಯುದದಾರು ಪೇಳೆಂದೆನೇ ॥
ಪದೆದು ಜೈನರು ಹೆಚ್ಚಿ ಸೊಕ್ಕಿ ಕಂಗಾಣದತಿ ।
ಮದದಲಂತಹ ಕದವ ಕೆತ್ತು ಭೋಗವ ಕೆಡಿಸಿ ।
ಸದೆಸೊಪ್ಪಸೊಟ್ಟ ತೀರ್ಥಮಹೊಳ್ದುದುರ್ನೀತಿಯುಲಿ ನಡೆವುತಿಹರೆಂದನೂ ॥
॥ ೪೭ ॥

ಜ್ಞಾನವಿಲ್ಲರಿವುಹುಗದಾಚಾರವಡಿಯಿಡದು ।
ದಾನಧರ್ಮಂ ದೂರ ನೀತಿಯುತ್ತತ್ತಲಭಿ ।
ಮಾನವಂ ಕಂಡರಾಭೂರ್ತದಯೆ ಯೆಲ್ಲಿಯುದು ಭಕ್ತಿಯೆದ್ದಿರಗದಲ್ಲೀ ॥
ದೀನರುಂ ದುಷ್ಟರುಂ ಧೂರ್ತರುಂ ನೆರೆಪುಣ್ಯ ।
ಹೀನರುಂ ಭವಿಗಳುಂ ನೀಚರುಂ ಘಾತಕ ।
ಧ್ಯಾನರುಂ ನೆರೆದು ಪುಲಿಗೆರೆ ಪುಲಿಯುಗುಹೆಯುಂತಿರದೆ ದೇವ ಕೇಳೆಂದನೂ
॥೪೮॥

ಶಿವನೆಂಬದೈವವಿಲ್ಲೆಂಬರೆಲೆದೇವ!ನಿಂ ।
ನವಿನೋದಸಾಮರ್ಥ್ಯಶಾಸನವೆನಿಪ್ಪ ವೇ ।
ದವನು ಹುಸಿಯೆಂಬರಜ್ಞಾನನಿರ್ಹರಣಪುರಾಣವಂ ಕಾಕೆಂಬರೂ॥
ವಿವಿಧಲೋಕಾನುಗ್ರಹಾರ್ಥಾಗಮಾದಿಶಾ ।
ಸ್ತ್ರವನೇಳಿಪರು ಪಾಪಹರವೆನಿಪ ಪುಣ್ಯನದಿ ।
ನಿವಹಮಂ ನಿಂದಿಸುವರಾಜೈನರೆಂದಾಡಿದನು ಬಾಯಬರಮುಡುಗಲೂ ॥೪೯॥

ದೇವ!ನಿಮ್ಮ ಗುರುಪೂಜೆಗಳನೊಲಿದೀವ ಯಾ ।
ಗಾವಳಿಯನಲ್ಲೆಂಬರದುವಿಡಿದು ನಡೆವನಾ ।
ನಾವಿಪ್ರರೌಪಾಸನಾಗ್ನಿಹೋತ್ರಂ ದೇವಋಷಿಪಿತೃಸಮರ್ಪಿತವನೂ ॥
ಸಾವಿತ್ರಿಗಾಯತ್ರಿಸಾರಸ್ವತಪ್ರಭೃತಿ।
ದೇವಿಯರುಪಾಸನಂಮೊದಲಾದನುಷ್ಠಾನ ।
ವೇವುವವು ಬಯಲುಬಯಲೆಂದೆಂಬರಾಜೈನರೆಂದನಾಯತಿರಾಯನೂ ॥೫೦॥

ಅಂತದಂ ಕಂಡು ಕಂಗೆಟ್ಟು ಕಲುಷರನಾಗಿ ।
ಚಿಂತೆನೊಳೆತರಿಪರತು ಮನನೊಂದು ಮತಿಯುಡುಗಿ ।
ಸಂತಸಂಗುಂದಿ ಬರುತಿಂತು ಬಳಲಿದೆನಿಂತು ಬೆಂಡಾದೆನದರದೆಸೆಯಿಂ॥
ಮುಂತಿನ್ನಿದಕ್ಕೆ ತಕ್ಕುದನು ನೀವೇ ಬಲ್ಲಿ।
ರಂತಕಾಂತಕ ಯೆನಲು ಕುಪಿತನಾಗುತ ತಿರುಗಿ।
ಪಿಂತೆ ನಿಂದಾದಿಗಣನಾಥನಂ ಕರೆದೆಲವೊ ಹೋಗು ನೀನಲ್ಲಿಗೆನಲೂ ॥೫೧॥

ಕಾಲನೊಕ್ಕಲು ಕಾಮನೊಳಗ ಮಹಾರೋಗ ।
ಮಾಲೆಯೊತ್ತೊತ್ತೆ ಮಾರಿಯಮುಸಕ ಮೃತ್ಯುವಿನ ।
ನಾಲಗೆಯ ಮೊಯಿಲು ಮಾಯಾಭಯಂ ಕ್ಷುತ್ಪಿಪಾಸೆಗಳ ಹೊಳದಹೊಯ್ಯ
ಮೇಲೆ ಕೋಪದ ಕಿಚ್ಚು ಲೋಭದಂಡಲೆ ಮೋಹ । ಲೂ ॥
ಜ್ವಾಲೆ ಮದಮತ್ಸರದ ಬೇಗೆ ಘನವಾಗೆ ಕಲಿ ।
ಕಾಲಕ್ಕೆ ಟೆಂಟಣಿಸದಾನರರೊಳೆಂತು ಜನಿಸುವೆ ದೇವ ಕರುಣಿಸೆನಲೂ॥೫೨॥

ಕಲಿಕಾಲದುಗ್ರತ್ವ ನಿನ್ನ ಮಾಡುವುದೇನು ।
ಜಲಜ ಕೇಸರದೊಳ್ ಮೆರೆವ ಹಾಲು ಗೋವುಗಳ ಕೆ ।
ಚ್ಚಲ ಮಾಂಸದೊಳು ಚಾರುಮಧು ನೊಣವಿನೊಳು ಸುಕಸ್ತೂರಿ ಮೃಗತತಿ
ನೆಲದೊಳಿಂನು ವಿಶೇಷವಸ್ತುಗಳನಂತವೆ ।　　[ಯೊಡಲೊಳೂ ||
ಗ್ಗಳಿಸಿ ಪುಟ್ಟವೆ? ಪುಟ್ಟಿ ಕುಂದಾಯಿತೇ? ಹೇಳು ನಾ ।
ನೊಲವಿನಿಂ ಕಳುಹುತಿರೆ ನಿನಗೇಕೆ ಚಿಂತೆ ಸುಮ್ಮನೆ ಜನಿಸು ಹೋಗೆಂದನೂ
|| ೫೩ ||

ಮೇದಿನಿಗೆ ಹೋಗೆಂದೆ ನಿನ್ನೊಡನೆ ನುಡಿದು ಸುಖಿ ।
ಯಾದ ಬಾಯಿಂದಾರ ನುಡಿಸುವೆಂ ನೋಡಿಸುಖಿ ।
ಯಾದ ಕಣ್ಣಿಂದಾರ ನೋಡುವೆಂ ಪುರಹರನೆ! ನಿನ್ನನು ನಿಮಿಷವಗಲದೇ ||
ಆದಿತೊಡಗಿದ್ದಾರ್ಪಿಗಣನಾಥನೆಂಬ ಹೆಸ ।
ರಾದೆನೊಂದೇದಿವಸ ವಗಲಿರಲ್ಬಲ್ಲನೆ ಯು ।
ಮಾದೇವಿಯರಸ ಹೇಳೆಂದು ಚರಣದ ಮೇಲೆಹೊಡೆಗೆಡೆದು ಬಿನ್ನೈಸಲೂ
|| ೫೪ ||

ಹಲವುಮಾತೇನಲವೊ ತನ್ನಿಮಿತ್ತಂ ಬಂದು ।
ಹುಲಿಗೆರೆಯ ಬಸತಿಯೊಳ್ ನಿಂದು ನಿಂನೆನೆದುದಂ ।
ಸಲಿಸುವೆನೆನಲು ಲಿಂಗ ನುಡಿವುದೇ ನೋಡುವುದೆ ಬೇಡಬೇಡೀಹುಸಿಗಳೂ ||
ನಿಲುವೆನಾಂ ಜಂಗಮಾಕಾರದಿಂದಂ ಬಂದು ।
ನೆಲಸಿ ನಿನ್ನೊಡನೆ ಮಾತಾಡುವೆಂ ಬೇಡಿತಂ ।
ಸಲಿಸುವೆಂ ಸಲಹುವೆಂ ಚಿಂತಿಸದಿರೆಂದಾದಿಮಯ್ಯನಂ ಬೋಳೈಸಲೂ ||೫೫||

ಒಸೆದು ಹರಿಯಜರು ಸೇವಿಸುವ ವೇದಾಳಿ ಕೀ ।
ರ್ತಿಸುವ ಮುನಿನಿಕರಂಗಳರ್ಚಿಸುವ ರಂಭೆಮೋ ।
ಹಿಸುವ ತುಂಬುರರುಕೇಳಿಸುವ ಭೃಂಗೀಶನರ್ತಿಸುವ ನಾನಾಮುಖದಲೀ ||
ಮಸಗಿ ಗಣವೃಂದಲಾಲಿಸುವ ಸುರನಿಕರಭಾ ।
ವಿಸುವ ದೇವಿಯರು ಸಾಗಿಸುವ ಸುಖದೊಳಗೆ ಸಂ ।
ತಸದೊಳಿಹ ನಿನ್ನನಾನೆಂತು ಸಂತೈಸಿಕೊಂಡಲ್ಲಿರಲಿ ಹೇಳೆಂದನೂ　|| ೫೬ ||

ಸುರಸಿಂಧುವಡೆಕುವಗ್ಗಣಿಯು ಸಗ್ಗದಮಂದ ।
ಮರುತನಡಕುವ ಪರಿಮಳಪ್ರಸೂನವನು ಯ ।
ಕ್ಷರು ನೀಡುವನುಲೇಪನವನು ಧನದಂ ನೀಡುವಾಭರಣಸಂದೋಹಮಂ ॥
ಧರಿಸಿ ಸುಖವಿಪ್ಪ ನೀವೆನ್ನೊಡನೆ ಬಂದು ನಾ ।
ದರದಿ ಕೊಡುವೊಕ್ಕುಡಿತೆಯಗ್ಗಣಿಯೊಳೊಂದುಹರಿ ।
ದರಳನಲಿ ತಣಿಯಲಾಸ್ಯೆ ತಂದೆ ಹೇಳೆಂದೊಡೀಶನೊಲಿದಿಂತೆಂದನೂ ॥೫೭॥

ಇನಿತರ್ಕೆ ನೀನಂಜಲೇಕೆಲವೊ ನಾನೆನ್ನ ।
ಮನವರಿಪ ಋಷಿಗಳಂ ಕ್ಷೇತ್ರವಾಸತನಕ್ಕೆ ।
ಮನುಗಳೊಳಗುತ್ತಮರೆನಿಸುವಬೇಹಾರಕ್ಕೆ ಗಣಾಧಿಪರೊಳಂ ಕೆಲಬರಾ ॥
ಘನದೇವಪುತ್ರಿಕತನಕ್ಕತುಳಬಲಕುಮಾ ।
ರನ ಕುಮಾರಿಕೆಗೆ ಸತತಂ ಕುಬೇರನನು ಸ ।
ಚ್ಚಿನ ಕೊಟಾರಿಕೆಗೆ ಪರುಟವಿಸಿಕೊಂಡಾಂ ಬರುತ್ತೊಡಗೊಂಡು ಬಹೆನೆಂ
ದನೂ ॥ ೫೮ ॥

ಲಸಿತವರುಣನನು ಮಜ್ಜನಕೆ ವಾಯುವನು ಸ ।
ತ್ಕುಸುಮಪ್ರತಾನಸೌರಂಭಕ್ಕೆ ರಂಭೆಯೂ ।
ರ್ವಶಿತಿಲೋತ್ತಮೆಮಂಜುಘೋಷೆಮೇನಕಿಯರೊಳಗಾದ ನಾನಾಸತಿಯರ ॥
ಅಸಮಲಾಸ್ಯಕ್ಕೆ ತುಂಬುರನಾರದರನು ರಾ ।
ಗಸಮೂಹದಾಳಾಪಿಕೆಗೆ ನಂದಿಮಾಕಾಳ ।
ರಸಮವಾದ್ಯವ್ಯಾಪ್ತಿಗಳಮಡಿಸಿಕೊಂಡು ಬಂದಪೆನಂಜಬೇಡೆಂದನೂ ॥ ೫೯ ॥

ಹರಿಯಜರನೆಲ್ಲಾಧುರಂಧುರಿಕ್ಕೆಗೆ ಗಣೇ ।
ಶ್ವರರ ಬಾಹತ್ತರ ನಿಯೋಗಕ್ಕೆ ಬೆಸಸಿ ಪುಲಿ ।
ಕರನಗರಿ ಗಯೆಗೆ ಪೊಯ್ಕ್ಕೈ ಕಾಶಿಗೆಕ್ಕೆಕ್ಕೆ ಸೌರಾಷ್ಟ್ರಪುರದಕೂಡೇ ॥
ಸರಿಪೊರೆಗೆ ಶ್ರೀವಿರೂಪಾಕ್ಷದೇವಾದಿಯೂ ।
ಗಿರೆ ಸಲಿಪ ಮೇದಿನಿಯೊಳತುಳಕೈಲಾಸಮಾ ।
ಗಿರುತಿಹೆಂ ಬಲ್ಲಹಂ ಬಿಟ್ಟುದೇ ಕಟಕ ಪಂಜದೆ ಪೋಗುಹೋಗೆಂದನೂ ॥
॥ ೬೦ ॥

ನೀನಿನ್ನದೆಂತಕ್ಕೆ ಬರ್ಪನ್ನೆಗಂ ಭಕ್ತಿ ।
ಹೀನಪುರದೊಳ್ ಜನಿಸಿ ಬೆಳೆಯಲಾರ್ಪನ! ಮದನ ।
ಮಾನಮರ್ದನ! ಕರುಣಿಸೆಂದಾಡಿದಾತನ ಭಯಕ್ಕೆ ಮನದೊಳಗಮೆಚ್ಚೀ ॥
ನಾನೊಲಿದು ನೆಲಸಿಪ್ಪ ಸೌರಾಷ್ಟ್ರವೆಂಬ ಸು ।
ಸ್ಥಾನವುಂಟದರೊಳಗೆ ಜನಿಸು ಹೋಗೆನೆ ಶಿವ ।
ಜ್ಞಾನಿಯೆನಿಪಾದಿಗಣನಾಥನಂತಕದರ್ಪದಲ್ಲಣನ ಬೀಳ್ಕೊಂಡನೂ ॥ ೬೧ ॥

ಧರಣೀತಳಕ್ಕಾದಿಗಣನಾಥನೈತರು ।
ತ್ತಿರೆ ಮುಂದೆ ಮೆರೆದುದತಿಕೌತುಕಂ ಕಡಲಿಡಲು ।
ಮೆರೆವ ವೇದಂಗಳಿಗೆ ಶಾಸ್ತ್ರಕ್ಕೆ ಪೌರಾಣತತಿಗಾಗಮಪ್ರತತಿಗೇ ॥
ಸಿರಿಗೆ ಸಂಪದಕೆ ಭಕ್ತಿಗೆ ಮುಕ್ತಿಗಾಚಾರ ।
ದುರವಣೆಗೆ ಶಮೆದಮೆಗೆ ಸತ್ಯಕ್ಕೆ ಶಾಂತಿಯು ।
ಬ್ಬರಕೆ ಪುಣ್ಯಕ್ಕೆ ಪುರುಷಾರ್ಥಕ್ಕೆ ನೆಲವೀಡಿದೆಂದೆನಿಸಿ ಸೌರಾಷ್ಟ್ರವೂ ॥ ೬೨ ॥

ಅಣಿಯರದೊಳೆರೆದರ್ಗೆ ಭಕ್ತಿಯುಂ ಸುಕೃತಮುಂ ।
ದಣಿಯಂ ಮನೋರಾಗಮುಂ ಸೌಖ್ಯಮುಂ ತತ್ ।
ಕ್ಷಣದೊಳೊಲಿದೀವಗುಣದಿಂದಿಂಸುಧರೆಯೊಳತರತೀರ್ಥಕ್ಷೇತ್ರದಿಂದಾ ॥
ಎಣಿಸುವೊಡೆ ದ್ವಿಗುಣತ್ರಿಗುಣಚತುರ್ಗುಣಪಂಚ ।
ಗುಣಷಡ್ಗುಣಂ ಸಪ್ತಗುಣ ವಷ್ಟಗುಣಂ ನವ ।
ಗುಣದಶಗುಣಂ ಮಿಗಿಲು ಸೌರಾಷ್ಟ್ರವೆಂಬಾಗಳಿನ್ನದಂ ಪೊಗಳ್ವರಾರೂ ॥
॥ ೬೩ ॥

ಕಣ್ಗೆ ಬೆಳತಿಗೆ ಬೆಳಗನನವರತಮೀವ ಬೆಳಂ ।
ದಿಂಗಳ ನಡುವೆ ಪೂರ್ಣಶಶಿ ಪೊಪ್ಪುವಂದದಿಂ ।
ಮಂಗಳಾಕಾರಸೌರಾಷ್ಟ್ರದೊಳು ಸೋಮನಾಥಂ ಮೆರೆವನಂತಲ್ಲಿಯೂ ॥
ಸಿಂಗರದ ಪೂಜೆಗಳ ವಿವಿಧೋಪಚಾರಭೋ ।
ಗಂಗಳ ವಿಳಾಸಮಂ ಬಣ್ಣಿಸುವೊಡುರಗಧರ ।
ಜಂಗರಿದೆನಲು ತೋರ್ಪುದಾ ಶಿವಾಲಯದ ಹಿಂದಣಮೈಯ್ಯೊಳ್ ಪೊಗಳ್ವೆನೂ
॥ ೬೪ ॥

ಇಡುಕುದೆರೆಯುಟ್ಟುದೆರೆಕಟ್ಟುದೆರೆ ।
ಯಡಕಿಲ್ದೆರೆಗಳುಲಿದು ಹಳಚಲು ಮರಹು ಮರುಗಿ ।
ಕಡೆದುಮಲ್ಲಣಿಗಡಲನೊಡೆಗಲಸಿ ಕುಡಿದು ಮೊರೆದಡಸಿ ಗುಳುಗುಳಿಪ ಸುಳಿ
ಸಡಗರದ ಹೊಯ್ಲುಗಳ ಮುತ್ತುಮಾಣಿಕಹವಳ । ಯೊ ॥
ಗಡಿ ತಿಮಿಂಗಿಲಮತ್ಸ್ಯಕಚ್ಛಪಕರಿಮಕರಂಗ।
ಳಡಸಿ ತುಂಬಿದ ಹಗೆವೆಸಿಸಿ ಮಹಿಮೆಯಿಂ ಮೆರೆದುದರರೆಪಶ್ಚಿಮವನನಿಧೀ
॥ ೬೫ ॥

ಬಡಬಾಗ್ನಿಯುಂಡಲೆಗೆ ಮುಂನೊಬ್ಬಮುಸಿ ಮೊಗದು ।
ಕುಡಿದ ಕೋಟಲೆಗಂಜಿ ಶಿವನ ಮರೆವೊಕ್ಕು ಹಿಂ ।
ದಡಗಿದಂತೆಸೆದಿರ್ದುದೊಮ್ಮೆ ಮತ್ತೊಮ್ಮೆ ಧರೆಯುರಿಯಲ್ಕೆತನ್ನೊಳುಳ್ಳ ॥
ಜಡವೆಸುರ ಸಾರತ್ವದಘತತಿಗಳೆಲ್ಲ ನೆರ ।
ಕೆಡಲು ಲಿಂಗಾರ್ಚನಂಗೈವಂತೆ ಸೌರಾಷ್ಟ್ರ ।
ದೊಡೆಯನ ಸಿವಾಸದೊತ್ತಿನೊಳಪ್ಪಿ ಮೆರೆದುದಾಪೂಜೆಯೆಂತೆನೆ ಪೇಳ್ವೆನೊ
॥ ೬೬ ॥

ತಡಿಗಧೀಂಕಿಡುವತೆರೆ ಯರ್ಘ್ಯಪಾದ್ಯಂ ಬೆಳ್ಪ।
ಪಿಡಿದನೊರೆ ಕುಸುಮ;ಮೊರಹಿನಹೊಯ್ಲು ಹೋರಟೆಯು ।
ನಡುವೊಗೆದಮುಂಜು ಧೂಪ;ಕಡಲಕದಡಿಸೊಳುನೆಗೆದಮಾಣಿಕ ವಾರತೀ ॥
ಕಡುಗಿ ಗುಳಿಗುಳಿಲೆಂಬ ದನಿ ಗೀತವಾದ್ಯ ಸಂ ।
ಗಡವಾಗಿ ಮೆರೆವ ವನಪಿಧಿ ಬಂದು ಸೌರಾಷ್ಟ್ರ ।
ದೊಡೆಯನಂ ಪೂಜಿಸುತ್ತಿರ್ದಪುದೊ ಪೇಳೆಂಬ ಬಗೆಯನನುಕರಿಸಿರ್ದುದೊ
॥ ೬೭ ॥

ಅರುಚಿರಸೌರಾಷ್ಟ್ರಪುರದೊಳಗೆ ಧನದಿಂ ಕು ।
ಬೇರನೊಲು ಕುಲದಿಂ ದಿವಾಕರನೊಲೊಪ್ಪುವಾ ।
ಚಾರದಿಂಬ್ರಹ್ಮನೊಲು ಚಾರಿತ್ರದಿಂಗಂಗೆಯೊಲು ಸತ್ಕಲಾಪ್ರೌಢಿಯಿಂ ॥
ಭಾರತಿಯೊಳಕ್ಕಕ್ಕೆ ಹೊಯ್ಕಯ್ಯೆನಿಸಿ ಮದನ ।
ವೈರಿಸೋಮಯ್ಯನೆಂ ಪ್ರಾಣಲಿಂಗವೆನಲ್ಕೆ ।
ದೊರೆವತ್ತನೆನಿಸಿಪ್ಪ ಸೆಟ್ಟಿಯಿಪ್ಪಂ ಪುಣ್ಯಶಾಭಕ್ತ ಹರದಾಡುತಾ ॥ ೬೮ ॥

ಆತನಂಗನೆ ಪುಣ್ಯವತಿ ಯೆಂಬವನಿತೆ ರೂ ।
ಪಾತಿಶಯದೊಳು ಪುರುಷಭಕ್ತಿಯೊಳು ಯುಕ್ತಿಯೊಳು ।
ನೀತಿಯೊಳು ಸರ್ವಾಭಿಮಾನದೊಳು ಸೌಭಾಗ್ಯದೊಳು ಶಂಕರಾರ್ಚನೆ
ಭೂತಳದೊಳನ್ನು ಸರಿಯಿಲ್ಲೆನಿಸಿ ವಿಮಳವಿ । [ಯೊಳೂ ॥
ಖ್ಯಾತಿಗೆ ತವರ್ಮನೆ ಯೆನಿಸಿ ಬಾಳುತಿರ್ದರ್ ಸಂ ।
ಪ್ರೀತಿಯಿಂ ತನಯರ್ಕಳೆಂಬಯಸುತಿರ್ಪ ಚಾತುರ್ಯಮಂ ಪೊಗಳ್ವರಾರೂ
॥ ೧೯ ॥

ಮೊಳೆಯುಂಬ ಮುದ್ದಿಸುವ ನಗುವ ಮೊಗನೋಡಿ ಕಂ ।
ಡಲಗಳಲುಗಲು ಪರಿದು ಬಂದಪ್ಪಿ ಸಿರಿವಿಡಿದು ।
ಗಿಳಿಬಿಳಿಂದೆರಗಿ ನಡೆನೋಡಿ ದಾದಾಯೆಂದು ನರ ಬೆಳೆದುದುವೆಯಾಗೀ ॥
ಅಲಸದೊದಗಿಪ್ಪ ಧನಕೊಡೆಯನಾಗಿರ್ದ ಭುಜ ।
ಬಲವಂತನಾಗಿ ತಂದೆಯ ಸಂತಸದ ಸಿರಿಯ ।
ಸಲಹುವ ಕುಮಾರನಂ ಬಯಸಿ ಬಾಯೊರೆವುತಿರ್ದಾವನಿತೆಯೊಂದುದಿವಸಾ
॥ ೨೦ ॥

ಬಿಡದೆ ಪಿರಿಯರ ತಲೆಮಾವಿಡಿದೊದಗಿದೀಪ್ರೊಡನೆ ।
ಗೊಡೆಯನಪ್ಪೊಬ್ಬ ಮಗನಂ ಬೇಡಿ ಶಿವನಲ್ಲಿ ।
ಪಡೆವೆಪಾವೆಂದೊಡಾಸತಿಗೆ ಪತಿ ಕೆರಳಿ ಕೇಳೆಲೆ ಮರುಳೆ ಕಾಣಿಗಾಡ್ಡೀ ॥
ಕಡವರವ ನಂಬಿಲದ ಹುಳಗಾಡಿ ಯಮೃತಮಂ ।
ಬಿಡುವರೆ? ಸುತಂಗಾಡಿ ಪೂಜಿಸಿದ ಪುಣ್ಯಮಂ ।
ಕೆಡಿಸುವೆನೆ? ಭಕ್ತಿಗಂಕೂಲಿಬೇಡುವವ ಭಕ್ತನೇ? ಎನುತಿಂತೆಂದನೂ॥೨೧॥

ಹಾಡಿ ಪಡೆದಾಡಿ ಪೋಗಾಡಿದಂ ಕಡೆಗೆಂಬ ।
ನಾಡನುಡಿಯಂತೆ ಸುತನಂ ಬೇಡಿ ನಾಂ ಪಿಂದೆ ।
ಮಾಡಿದ ಶಿವಾರ್ಚನೆಯ ಫಲವನಳಿವೆನೆ ಯದಂತಿರ್ಕೆ ಕೇಳನ್ನು ಮೇಲೇ ॥
ಬೇಡಿ ದಾನದಿ ಹಡೆದ ಪುತ್ರನುಂ ತನಗೆಂದು ।
ಕೂಡಿದ ಧನಂ ಕೆಡುವುದದಕೆ ಪರಮಂ ನೀಗ ।
ಬೇಡಳುಪಿ ಬೇಡಿದೊಡೆ ಕೈಯ್ಯ ಶಿಶು ಸತ್ತು ಬಸುರಿಳಿವಕಥೆಯಂತಪ್ಪುದೂ
॥ ೨೨ ॥

ಪತಿಯಾಜ್ಞೆಗಂಜಿ ಸಂತತಿಯ ನೆನಹಂ ಪುಣ್ಯ |
ವತಿ ಮರೆದು ಸುತಭಕ್ತಿಯಿಂ ಶುಶ್ರೂಷೆಯಿಂ ಧರ್ಮ |
ತತಿಯಸತಿಸಂತೋಷದಿಂ ಮಾಡಿಕೊಂಡಲಸದಿಹ ಪುಣ್ಯದಂಪತಿಗಳಾ ||
ಮತಿಯ ನಿಷ್ಠೆಯ ನಿಮಿರ್ಕೆಗೆ ಮೆಚ್ಚಿ ಸಂತತಂ |
ಕ್ಷಿತಿಯೊಳಗೆ ಪುಟ್ಟಲಿರ್ಪಾದಿಗಣನಾಥನಂ |
ಸತಿಯುದರದೊಳಗಂದು ಮಡಗಿದಂ ಕರುಣದಿಂ ಸೌರಾಷ್ಟ್ರಪುರದರಸನೂ || ೨೩ ||

ಜಗದ ಭರಭಾರಮಂ ಹೊತ್ತು ನಿತ್ತರಿಸಲೆಂ |
ದೊಗೆವವನನೆಲ್ಲರೋಪಾದಿಯಿಂದಾವಸಿತೆ |
ಬಗೆದೆಂದಿನಂತೆ ನಡೆಯಲು ಬಸುರ ಭಾರದಿಂ ಭೂಮಿಯೊಳಗದ್ದ ಕಾಲಂ ||
ತೆಗೆದೊಯ್ಯನಿಟ್ಟಡಿಗಡಿಗೆ ಮುಳುಗೆ ಮೆಲ್ಲನೆ |
ಲ್ಲಗೆ ಕಿತ್ತುಕಿತ್ತಿತ್ತನಡೆವವಳೊ ಯೆಂಬಂತೆ |
ಮೃಗವಿಲೋಚನೆಯ ನಡೆ ಮಾಂದ್ಯದೊಳ್ಬೆರಸಿಮುದು ಹಂಸೆಗಳು ಹುರುಡಿಸುತಿರೇ || ೨೪ ||

ಕಂತುವುಂ ಮಾಯೆಯುಂ ವಿಧಿಯುಂ ವಿಧಾತ್ರನುಂ |
ಸಂತತಂ ಸೂತ್ರಿಸಿದ ದುಷ್ಕರ್ಮರೇಖೆಗಳ |
ಸಿಂತಳಿವಳಂನೀಕೆ ಯೆಂದು ಪೇಳ್ವಂದದೆ ವಳಿತ್ರಯಂ ಮೈದೆಗೆದವು ||
ಎಂತಧಿಕರಾದೊಡಂ ಪುತ್ರನುದಯಿಸನೆಂಬ |
ಚಿಂತೆಯಿಂ ಬಡವಾದ ತೆಳ್ವಸುರು ಸುತನಾದ |
ಸಂತಸದಿ ಹೆಚ್ಚಿ ಪುಟನೆಗೆದುದಂಬಿನ್ನಯಿಸುವಂತೆ ಗರ್ಭಂ ನೂಂಕಿತೂ || ೨೫ ||

ಬಳಗುದೋರದನಾಭಿ ಯೆಂಬ ಹುತ್ತದ ಹೊರಂ |
ಗುಳ ಗರ್ಭದಿಂ ಹೊಳ್ದೊಡೆಡೆಗೆಟ್ಟು ಕಾಳಾಹಿ |
ತಳರ್ದು ಮೊಲೆವೆಟ್ಟಂಗಳೆರುಬಿನೊಳು ಪೊಕ್ಕಪುದೊ ಎನೆಬಾಸೆದಳವೇರಿತೂ ||
ಮುಳಿದು ಕತ್ತಲೆಯನರೆಗಚ್ಚಿ ಮುಗಿದಬ್ಜಕು |
ಟ್ಮಳಯುಗಳದಂದದಿಂ ಮೆರೆವ ವಿಮಳಕ್ಷೀರ |
ಜಳಭರಿತಪೀನಕುಚಚೂಚುಕಂ ಕಪ್ಪನಾಲಿಂಗಿಸಿದವೇಪ್ರೊಗಳ್ವೆನೂ || ೨೬ ||

ಎದೆಯು ಗೆರೆ ಹಸುರೇರೆ ತನು ಬೆಳರ್ಪೇರೆ ತೋ ।
ಳ್ಮೊದಲು ಕಪ್ಪೇರೆ ಕೊಂಕಿವ ಕುರುಳು ಕವಲೇರೆ ।
ಪವನರಸಪ್ರೋಸರಿಸೆ ನಸುಮುಗಿದ ಕಣ್ಣಕಡೆ ಕಿರುಬೇನೆಯಂ ಸೂಚಿಸೇ ॥
ಒದವಿಮುಸುರೊಳಗಣ ಬಳಲ್ಕೆಯಂ ತೋರೆ ನುಡಿ ।
ಮೃದುವಾಗೆ ಮುಡಿ ಜಡಿವು ಬೆನ್ನನೋಲೊಲೆಯುಲಾ ।
ಸುದತಿಯಾಲಿಂಗಿಸಿದ ನವಮಾಸವಾಯ್ತು ಮೈವೆಚ್ಚಿ ಕೈಪಿಡಿದ ಪತಿಗೇ॥೭೭॥

ಜನಕನುತ್ಸವಿಸೆ ಸುಮುಹೂರ್ತಪ್ರೊಲವೇರೆ ಪರಿ ।
ಜನಂ ನಲಿಯೆ ವಸುಧೆ ತಣಿಯೆ ಶಿವಾಚಾರಲತೆ । ।
ನನೆಯೊತ್ತೆ ಜೈನರೆದೆ ನಡುಗೆ ಹುಲಿಗೆರೆಯು ಸುರಹೊನ್ನೆಯು ಮಹಾಬಸ
ಜಿನನ ಹಣೆ ಛಟಛಟನೆ ಬಿಡಿಯೆ ಸೌರಾಷ್ಟ್ರವರ ।   ಏಯೂ॥
ಸನು ನಂದಿಯಂ ತಳೆಯೆ ಪುಣ್ಯವತಿಯುದರದಿಂ ।
ಜನಿಸಿದಂ ಸುಕುಮಾರಶೇಖರ ನನಂಗನಲ್ಲದ ಕುಸುಮಕೋದಂಡನೂ॥೭೮॥

ಮಂಗಳಂ ಸುಂದಣಿಸಿ ಕಣ್ಗೆಸೆಯೆ ಪುಟ್ಟಿದಣು ।
ಗಂಗೋತು ತಾತ ಸಂಪ್ರೀತಿಯಿಂ ಜಾತಕ ।
ರ್ಮಂಗಳಂ ಮಾಡಿ ನಾನಾದಾನಧರ್ಮದಿಂ ಸರ್ವರಂ ದಣಿಸುತಿರಲೂ ॥
ಸಿಂಗರಿಸಿ ನಲಿವಬಲೆಯರ ನಡುವೆ ಮಾನಿನಿ ಕ ।
ಡಂಗಿ ಮೊಲೆಯೂಡಿ ಕಾಡಿಗೆಯೆಚ್ಚಿ ನೋಳ್ಪೆಸೆಂ ।
ದಂಗವಿಸೆ ಕಣ್ದೆರೆಯದಳದೆ ಮೊಲೆಯುಂಡಿರುತಿರ್ದ ನಾಸುಕುಮಾರನೂ॥
॥ ೭೯ ॥

ತ್ರಿಳಿದ ಹೊಸಬೆಳ್ದಿಂಗಳೊಳ್ ನೋಡವೆದ್ದಂತೆ ।
ಬೆಳೆದ ಸುಗ್ಗಿಯು ಕೊಟಾರದೊಳು ಮಳೆ ಬಂದಂತೆ ।
ತಳುವಿ ಕಾಲಾನುಕಾಲಕ್ಕೆ ಪುಣ್ಯಾತಿರೇಕದಿನೊಬ್ಬ ಮಗನ ಪಡೆದೂ ॥
ದಳವೇರಿದುತ್ಸವದ ಹೆಚ್ಚಿಗೆಯ ಬೀಜಮಂ ।
ಬೆಳಸುವೈಸಲ್ಕೆ ಯಿಂತಾದನಿಂನಾವಾಗ ।
ಳೆಳಸಿ ಮೊಲೆಯುಂಬನೋಎಂದು ಹೊತ್ತಂ ಬಯಸುತಿರ್ದೊಂದು ದಿವಸದಿ
ರುಳೂ ॥ ೮೦ ॥

ತೆಗೆದು ತನುದೊಡೆದುಸುರನಾರೈದು ತೂಪಿರಿದು ।
ನೊಗದೊಳು ಮೊಗವನಿಟ್ಟು ಬಾಯ್ಗೊಟ್ಟು ಸುಯ್ದು ಮೆ ।
ಲ್ಲಗೆ ಬಸುರೊಳಪ್ಪಿ ದಣಿನೈದಿಸದೆ ಮರುಗಿ ಸಿಡಿಮಿಡಿಗೊಂಡು ಕಂಬನಿಗಳೂ॥
ಬಗುವ ಕಣ್ಣಿಂ ನೋಡಿ ತೊರೆದ ಸೆರೆ ಝುಂಮೆಂದು ।
ಬಿಗಿದ ಮೊಲೆದೊಟ್ಟುಸೆರಡುಸೆರಳಿಂದ ಹೊಸೆಹೊಸೆದು ।
ಮಗನತ್ತು ಕಣ್ದೆರೆದು ಮೊಲೆಯುಂಬುದಂ ನೋಡುತ ಹಂಬಲಿಸುತಿಂತೆಂದಳೂ
॥ ೮೧ ॥

ಎಲೆ! ಮಗನೆ! ಮಗನೆ! ನೀಂ ಗಳಗಳನೆ ಬೆಳೆದು ಭುಜ ।
ಬಲವಂತನಾಗಿ ಹರದರ ಶಿರೋಮಣಿಯಾಗಿ ।
ಕಲಿಯಾಗಿ ಗುಣಿಯಾಗಿ ಸಿರಿಗೆ ಸಿಂಗರವಾಗಿ ಶಿವಭಕ್ತಿಕುಶಲನಾಗೀ ॥
ಕುಲತಿಲಕನಾಗಿ ತಂದೆಯು ಕೀರ್ತಿವರ್ಧನಗೆ ಬೆಂ ।
ಬಲವಾಗಿ ಬಾಳ್ವನೆಂದಾಂ ನಲಿವುತಿರಲಿಂತು ।
ಮೊಲೆಯುಂಣದಿರ್ದೊಡೆನಗೆಂತೆಂದಳುತ್ತ ಸಂತೈಸಿಕೊಳುತಿಂತೆಂದಳೂ
॥ ೮೨ ॥

ಈಮಗಂ ಕಣ್ದೆರೆದು ಮೊಲೆಯುಂಡೊಡೀವ್ರೂರ ।
ಸೋಮನಾಥಂಗೆ ಪೈಯಿಕ್ಕುವೆಂ ಸೇತುವಿನ ।
ರಾಮೇಶ್ವರನ ಕ್ರಾಣ್ಬೆ ಪರ್ವತದ ಮಲ್ಲಿನಾಥಂಗುಪಾಹಾರವಿಡುವೇ ॥
ಹೇಮಕೂಟದ ವಿರೂಪಾಕ್ಷನಂಬಲಗೊಂಬೆ ।
ನೇಮದಿಂ ಕಾಶೀಪತಿಗೆ ತೊಡಿಗೆಯೊಡ್ಡುವೆ ಮ ।
ಹಾಮಹೇಶ್ವರರಿಗರ್ಚನೆಗೈವೆನೆಂದಿರುಳು ಹರಸಿಕೊಂಡಳುತಿರ್ದಳೂ ॥೮೩॥

ತರುಣಿ ತರಳನನು ಕೈಯಿಂದ ಹಾಸಿನೊಳೊಯ್ಯ ।
ಸಿರಿಸಿ ಕೆಲಬಲಕೊತ್ತನಿಕ್ಕಿ ಸೆರಗಂಹೊದಿಸಿ ।
ಹರಸಿ ಭಸಿತವನಿಟ್ಟು ತೂಪಿರಿದು ಕಾಹನೊಯ್ಯನೆ ಕಟ್ಟಿ ಮಗ್ಗುಲಿಕ್ಕೀ ॥
ತೊರೆದ ಮೊಲೆಯಂ ಬಾಯೊಳೊಯ್ಯನಾನಿಸಿ ತನ್ನ ।
ಸಿರಿಮಂಚವಂ ಸುತ್ತಿಮುತ್ತಿ ಕುಳ್ಳಿರ್ದ ಸತಿ ।
ಯರ ಕೂಡೆ ಮಾತಾಡುತಿರುತಿರಲು ತೆಳುನಿದ್ರೆ ಕವಿದುದೇಂ ವಣ್ಣಿಸುವೆನೂ
॥ ೮೪ ॥

ಒಡಲು ಘೂರ್ಣಿಸಿ ಶಿರಂ ಭ್ರಾಮ್ಯಸಿ ನೆನಹಳಿದು ।
ನುಡಿವ ನುಡಿಗಳು ಮೆಲ್ಲನಾಗಿ ತೊದಳಿಸಿ ಹುಬ್ಬು ।
ಜಡಿಜಡಿದು ಕಣ್ಗಳರೆಮುಗಿದುಸುರು ಬಾಯಿಂದ ನಸುಮೊರಸುವೆರಸಿ
ತೊಡೆ ತೋಳ್ಗಳಂಗಳೊಪ್ಪುಮಸ್ಕೆ ಪಿಡುಕಾಡಲ್ಕೆ ।　　ಸೂಸೇ ॥
ದೆಡೆಯಿಂದ್ರಿಯವ್ಯಾಪ್ತಿ ಮನದೊಳಡಗಲು ತನುವ ।
ನೆಡೆಗೊಂಡ ನಿದ್ರೆಯೊಳು ಕನಸು ಕಂಡೆಮ್ದು ಹೇಳ್ದಳ್ ನೆರೆದ ಸಖಿಯರೊಡನೇ ॥ ೮೫ ॥

ಅನವರತವೆಮ್ಮ ಮನೆಗಾರ್ಯ್ಯಸುಬಹ ತಪೋ ।
ಧನರತೆರದಿಂದೊಬ್ಬ ಗುರುದೇವ ಸ್ಮೈತಂದು ।
ವನಿತೆ! ಕೇಳ್ತನಯನಂ ಮನುಜನೆಂದೆನಬೇಡ ಪ್ರಮಥಾದಿಗಣನಾಥನೂ ॥
ನಿನಗೀತು ಬಂದನೀತಂಗೆ ಶಿವಲಿಂಗದ ।
ರ್ಶನವನೊದವಿಸಿ ಪ್ರಸಾದದ ಬೆಣ್ಣೆಗೊಡು ನಿನ್ನ ।
ನೆನದರಿಕೆಯುಹುದೆಂದು ಹರಸಿ ಭಸಿತವನಿಡುವುದಂ ಕಂಡೆನಾನೆಂದಳೂ ॥ ೮೬ ॥

ಗುರುಗಳೆಂಬುದು ದೇವರವರೆಂದ ವರಗಣೇ ।
ಶ್ವರನೀತಗಾಪೆಸರನಿಟ್ಟು ಲಿಂಗವ ತೋರಿ ।
ಪರಮಪ್ರಸಾದಮಂ ಬಾಯ್ಬೆಣ್ಣೆಯಿಕ್ಕ ಕಣ್ದೆರೆಗತ್ತು ನೋಡಯುಂಡಪಂ ॥
ಕರುಣಿಸಿದ ಭಸಿತವೈಶ್ವರ್ಯ ನಿಂತಿವನಧಿಕ ।
ತರನಾಗಿ ಬಾಳ್ವನಂಜದಿರು ಚಿಂತಿಸದಿರೆಂ ।
ದೊರೆದೊರೆದು ಕನಸನಿದಿರ್ಗೊಂಡು ಬಣ್ಣಿಸಿ ಪೇಳ್ದರಂಗನೆಯರಾವನಿತೆಗೇ ॥ ೮೭ ॥

ಪಂದುವರಿದುತ್ಸವದ ಮೊಳೆನಗೆಯು ಘನಸುಖಾ ।
ನಂದಜಲಪೂರವರ್ಣಕಂಗಳ ಮಧುರವಚನಗಳ ।
ಲಿಂದುಮುಖಿ ಗಂಡನಂ ಕರೆದಿರುಳು ಕನಸನಾನಿಂತಿಂತು ಕಂಡೆನೆನಲೂ ॥
ಇಂದು ಕಣ್ದೆರೆದು ಮೊಲೆಯುಂಡೊಡಿಂತೀಗಳವ ।
ರೆಂದ ಪೆಸರಿಡುವೆನೆಂದೊಂದು ಶಿವಲಿಂಗಮಂ ।
ತಂದ ನೆರೆಡನೆಯೆಂಬ ಜವಳಿಗದವಿಸ ಬಿಂಜಂಗದ ಕೈಯ ತರ್ಪಂತಿರೇ ॥ ೮೮ ॥

ದಿನಪನಂ ಕಾಣುತ್ತ ಕಮಲವರಳ್ವಂತೆ ಲಿಂಗ ।
ವನು ಕಾಣುತಾ ಬಾಲಕಂ ಕಣ್ದೆರೆಯಲು ಜನ ।
ಕನ ಹರುಷ ಕಣ್ದೆರೆಯೆ ಬೆಳುದಿಂಗಳುದಯುವ ಚಕೋರಿ ಯೊರೆಗಿ
ವಿನುತಪ್ರಸಾದನಪವಿತ್ರವಂ ಸವಿದು ಮಾ । ಪಂತೆ ॥
ನಿನಿ ತಣಿಯೆ ಫಳರಸವಗಿಳಿಯೀಂಟುವಂದದಿಂ ।
ತನುಜನೊಲೆಯುಂಡನಾಬಂಧುವರ್ಗಂ ಹೆಚ್ಚಿ ಹೆಚ್ಚಿ ತೂಗಾಡುತಿರಲೂ
॥ ೪೯ ॥

ಕನಸು ದಿಟವಾದುದಿಂದಿನಸುಮಾನವಾವುದೆಂ ।
ದೆನುತಂದು ನಾಮಕರಣೋತ್ಸವೋದ್ಯೋಗಮಂ ।
ಜನಿತಸಂಭ್ರಮರಾಗಿ ಸೋಮನಾಥಂ ಬಸುಸಿದಾಟಿಗಣನಾಥನೆಂದೂ ॥
ತನಯಂಗೆ ಪೆಸರಿಟ್ಟು ಸರ್ವಜನಮಂ ತನ್ನ ।
ಮನವಾರೆ ತಣಿಪಿ ಸುಖದಿಂದಿರಲು ಹನ್ನೆರಡು ।
ದಿನದಂದು ಮಣಿದೊಟ್ಟಿಲಿಕ್ಕಿದರು ವನಿತೆಯರು ಬಾಲಕದಿವಾಕರಂಗೇ
॥ ೫೦ ॥

ಬಾಗಿದೆಳೆಲತೆಯೊಳೊಂದೊಂದು ಮಿಡಿಗಾಯ್ವಿಡಿದು ।
ಪೂಗೊಂಚಲಂ ಜಿನುಗುವಳಿವೆರಸಿ ತಂಗಾಳಿ ।
ತೂಗುವಂತ ಣಾಗನಂ ತೊಟ್ಟಿಲೊಳ್ ಪಟ್ಟಿರಿಸಿ ವನಿತೆಯರು ತೂಗಿ ಬಳಿಕಾ ॥
ಜೋಗುಳಿಯ ಪಾಡಿ ಯೂಡಿಸುವ ಸೊರವಾಳರವ ।
ಸಾಗಿಸುವ ಸಂತೈಸುತತ್ತಿ ಕೊಂಬೆಲ್ಲಾನಿ ।
ಯೋಗಕಾಂತೆಯರ ಕೈಯೊಳು ಬೆಳೆದನೊಲಿದು ಶಿಶುವಾದಯ್ಯನಾದಯ್ಯನೂ
॥ ೫೧ ॥

ಅರಳೆಲೆಯ ಗರುವ! ಮಾಗಾಯುಮುದದಾನೆ! ತಳ ।
ಗುರುಳತಂಗಾಳಿ! ಭಸಿತದಸುಸಿ! ತೊದಲ್ನುಡಿಯು ।
ತರುಣ! ಹುಲಿಯುಗರ ಹೂಗಣ! ಕೊರಳರುದ್ರಾಕ್ಷೆಗಳಮುದ್ರಿಸಿದಪುಣ್ಯಾ
ಕರತಳದ ಕಾಮ! ಬಂಡಿಯುನಂದಿ! ಯಿಡುವಣಿಗ । ಣೇ! ॥
ಳರಸು! ಗೆಜ್ಜೆಯಗುಣಿಯೆ! ಬಾರಯ್ಯ ಯೆಂದಪ್ಪೆ ।
ಕರೆಯೆ ಪರಿತಂದಪ್ಪಿ ಸಿರಿವಿಡಿದು ನಿಂದಿಪ್ಪ ಭಾವಮಂಪೊಗಳ್ವರಾರೂ ॥ ೫೨ ॥

ಎರಡುಚರಣಂ ಮೊದಲು ಸತುವೆ ನಡುಸೀರೆಯುಂ ।
ಬರಪಿಡಿದ ಕೈ ಹರಿವ ಕುಡಿಗಳೆಸೆವೀರೈದು ।
ಬೆರಳಂಕುರಂಗಳರಳೆಲೆಗಳೆಲೆ ತೊಗಾಡುವಳಕವಳಿಗಳು ಕಿವಿಯುಲೀ ॥
ಕರವೆಸೆವ ಮಾಗಾಯಿ ಫಳ ತೊದಲ್ನುಡಿಯೆ ನುಡಿ ।
ವರಗಿಳಿಗಳೊಸರ್ವ ಲಾಲಾಜಲಂ ರಸ ಪಡರ್ದ ।
ತರುಣಿ ತರು ಫಲವೆರಸಿಬೆಳೆವೆಳೆಯ ಕಲ್ಪಲತೆಯಂತೆಸೆದನಾವಯ್ಯನೂ ॥
॥ ೯೩ ॥

ಮುಗಿಲು ಮುಸುಕಿದ ಚಂದ್ರಕಳೆಯಂತೆ ಕವಿದು ಕಾ ।
ಬೊರ್ಗೆ ಮುಸುಕಿದಗ್ನಿಯಂತಿರೆ ಮಂಜು ಮುಸುಕಿರ್ದ ।
ಗಗನಮಣಿಯಂತವನಿ ಮುಸುಕಿದ ನಿಧಾನವಂತಧಿಕತರಸಂಸಾರದಾ ॥
ಸೊಗಸು ಮೊವ್ವತಿಸಿ ಮುಸುಕಿದ ದೇಹಿಯಂತೆ ಮಾ ।
ಯೆಗೆ ವಶಂಗತನಾದನಂತೆ ಪೇಯಂಗಳಂ ।
ಬಗೆಯದಜ್ಞಾನಮಯಮಪ್ಪ ಬಾಲ್ಯವ ನಟಿಸುತಿರ್ದ ಸೋಮಣ್ಣೆಸುವೆನೂ
॥ ೯೪ ॥

ಪೇಳಲೇನಾದಯ್ಯನಂಗಲತೆಯುಂ ಬಿಟ್ಟು ।
ಜಾಳಿಸುವಬಾಲ್ಯಮಂ ಕೆಡೆಮೆಟ್ಟಿ ಮನ್ಮಥನ ।
ಬಾಳಬಾಯ್ ಕೂರ್ಪೇರುವಂದದಿಂದಘಟಮಿಗೆ ಯೌವನಂತಲೆದೋರಿತೂ ॥
ಮೇಳದಿಂದೊಂದೆರಡುಮೂರುನಾಲ್ಕೈದಾರು ।
ಏಳದೆಂಟೊಂಭತ್ತು ಹತ್ತುಹನ್ನೊಂದುವ ।
ಷಾರ್ಳಾಪಮಂ ಕಳೆದು ಬೆಳವುತಿರ್ಪವನು ಕಂಡವರ್ಕೈಯ್ಯಸಿಂತೆಂದನೂ
॥ ೯೫ ॥

ನಡೆಯೊಳು ನಟನೆ ನೋಟದೊಳು ವಿಳಾಸಂ ಚಲ್ವು ।
ನುಡಿಯೊಳು ವಿದಗ್ಧತ್ವ ಕರಣದೊಳು ಚೆಲ್ವು ಮೆರೆ ।
ಮುಡಿಗೆಯೊಳುರೀತಿ ಸಿಂಗರದೊಳಗೆ ಜಾಣ್ಮೆ ನುತಮೂರ್ತಿಯೊಳು ಸುಕು
ಪ್ರೊಡಮೆಗಳೊಳಾರ್ಯ್ಯಕೆ ಯಭಿಮಾನದೊಳಗಾಸೆ । (ಮಾರತೇ ॥
ಕಡುಭೋಗದೊಳು ವಾಂಛೆ ಚಾರಿತ್ರದೊಳು ಭಾಗ್ಯ ।
ಕೆಡೆಯಾಗಿತೋರುತಿರ್ದಾದಿಮಯ್ಯಂಗೆ ಮದುವೆಮಾಡಬೇಕೆಂದು ಪಿತನೂ
॥ ೯೬ ॥

ಕಮನಕಲ್ಪದ್ರುಮಕೆ ಕಲ್ಪಲತೆಯುಂ ಕೂಡಿ ।
ಪಮನೋಜಮಿತ್ರನಂತಾದಿಮಯ್ಯಂಗೆ ನೆರೆ ।
ಸುಮುಹೂರ್ತ ಸುದಿನಂ ಸುತಾರೆ ಸುಗ್ರಹಸುಕರಣಂ ಸುಯೋಗಂಗಳಲ್ಲೀ ॥
ಸಮಕುಲಂ ಸಮರೂಪು ಸಮಬಲ ಸಮಪ್ರಾಯು ।
ಸಮರೀತಿ ಸಮಧಾತು ಸಮಶೀಲ ಸಮಗುಣಂ ।
ಸಮವಾದ ಕನ್ನೆಯುಂ ಮದುವೆಯುಂ ಮಾಡಿದರು ನೆರೆ ಮಹೋತ್ಸವದಿಂದಲೀ
॥ ೯೭ ॥

ಹರದಿಕೆಯು ಹರಿಬಕ್ಕೆ ಮಂಸಣೆಯು ಮೊದಲಿಂಗೆ ।
ಗರುವಿಕೆಯು ಗತಿಗೆ ಪಟ್ಟಣಸ್ವಾಮಿಕೆಯು ಪದಕೆ ।
ನೆರೆದು ಪಟ್ಟಂಗಟ್ಟಿ ಹಲರು ಕಾಣಿಕೆಗೊಟ್ಟು ಪುಡಿಯು ಚೀಲಂಗಟ್ಟಿಸೀ ॥
ಪೊರೆಯಾಣಿ ಕೇಣಿ ನೋಟಂ ತೂಕ ಬಡ್ಡಿಯೂ ।
ವರಿಯುಭಯುವಟ್ಟಹಿಡಿಹತ್ತೆಗನ್ನಗತಕಭಾ ।
ಸುರರತ್ನದ ಪರೀಕ್ಷೆಗಳೊಳು ಪರಿಣತನ ಮಾಡಿದನಯ್ಯನಾದಯ್ಯನಾ ॥ ೯೮ ॥

ಸುರತರುವಿನಗೆಯಂತೆ ತರುಣಶಶಿಯಂತೆ ಬಂ ।
ಧುರಕುಸುಮಸರದಂತೆ ಬೆಳುದಿಂಗಳಂತೆ ತಂ ।
ಬೆರಲಂತೆ ನಳನಳಿಸಿ ಕಳೆಯೇರಿ ಮೋಹಿಸಿ ನಯಂಬಡೆದು ರಂಜಿಸುತ್ತಾ ॥
ಪುರಜನಂ ಹರಸಿ ಹಾರೈಸೆ ತಂದೆಯು ಸಕಲ ।
ಭರಭಾರವಂ ತಳೆದು ಮನವಾರ್ತೆಗತಿಧುರಂ ।
ಧರನಾಗಿ ಸುಖದೊಳಾದಯ್ಯನಿರ್ದಂ ಸೋಮನಾಥನಂ ಪೂಜಿಸುತ್ತಾ ॥೯೯॥

ಹತ್ತೈದುಕಾಲ ಹದುಳಿರುತಿರಲು ಶೂಲಿ ಬೆಸ ।
ನಿತ್ತವಧಿದಿನ ಹತ್ತೆಬರೆ ಸಾರ್ವ ಪದದೊಳನಿ ।
ಮಿತ್ತ ಮನವೆತ್ತಿಕ್ಕಿ ವಿಪುಳತರಲಾಭಕ್ಕೆ ಮನವೆಳಸಿ ಹೇರುಗಳಲೀ ॥
ಮುತ್ತುಮಾಣಿಕವೆರಸಿ ಹೋಹೆನಾಂ ತೆಂಕನಾ ।
ಡತ್ತ ಬಣಜಿಸಿ ಧನಂಬಡೆದು ಬಂದಪೆನೆಂದು ।
ಹೆತ್ತತಾಯ್ತಂದೆಗಳಗೊಂದುದಿನ ಹಗಲೊಳೇಕಾಂತದಿಂಬಿನ್ನೈಸಲೂ ॥
॥೧೦೦॥

ಕುರುಡ ಕಣ್ಬಡೆದಂತೆ ನವೆವ ಕಡುಬಡವ ಕಡ।
ವರವ ಕಂಡಂತರಸುಮತಿರೋಗಿ ಗಮೃತ ಮುಂ।
ವರಿಸಿದಂತೆಂತಕ್ಕೆ ಪಡೆದೆನೆಲೆ ಮಗನೆ ನಿನ್ನಂತಪ್ಪ ಸುಕುಮಾರನಾ॥
ಪಿರಿದೆಮಗೆ ಕಣ್ಣಾಗಿ ಗತಿಯಾಗಿ ಪ್ರೊಬ್ಬಳ್ಳ।
ತರುಣನಂ ನಿನ್ನನಗಲ್ದಿರಲಾರೆನಾ ನಗಲ।
ದಿರು ಹಡಹು ಬೇಡೆಂದು ನುಡಿದತಾಯುಂ ಜರಿದು ತಂದೆ ಬಳಿಕಿಂತೆಂದನೂ
॥ ೧೧೧ ॥

ಹಡೆದ ಹಲಬರು ಮಕ್ಕಳೊಳಗೊಬ್ಬನಂತಕ್ಕೆ।
ಹಡಪಾಳಿಯುಹುದರಿದು ಕೇಳ್ಮರುಳೆ ಪುಣ್ಯಕ್ಕೆ।
ಪಡಿಯುಂಟೆ ಪ್ರೊಬ್ಬಳ್ಳ ಮಗ ದುರುಳನಾಗಿ ಜಡನಾಗಿ ಧಾವತಿಗೊಳಿಸದೇ॥
ನಡೆದು ಪರದಾಪಿ ಘಳಿಸದಪೆನೆಂಬುದನು ನಂ।
ಮ್ಮೊಡಲು ಹದುಳಿಪ್ಪಲ್ಲಿ ಕಂಡೆಪಿದು ಸಾಕು ನೀ।
ನೆಡೆಮಾಯ್ದು ಪಯಣಮಂ ಕೆಡಿಸಬೇಡೆಂದು ವನಿತೆಯನು ಪತಿ ಸಂತೈಸಲೂ॥
॥ ೧೨೦ ॥

ಏಸುವರುಷಕ್ಕೇಸುತಿಂಗಳಿಂಗೇಸುದಿನ।
ಕೋಸರಿಸುದ್ದೈತಪ್ಪ? ಯೆಲೆ! ಮಗನೆ! ನಾಂ ದೂರ।
ದೇಶಕ್ಕೆ ಕಳುಪಿದವರುಂಟೆ ತನಯನನೆಂಬ ಸತಿಯ ನುಡಿ ಪತಿಯ ಮನವಾ॥
ಬಾಸಣಿಸಲೆಂದುಬಂದಪೆ ? ಕಂದ ! ಹೇಳೆಂದು।
ಬೋಸರಿಸಿ ತಂದೆ ಕೇಳಿದೊಡಿರದೆ ಹತ್ತ್ರದು।
ಮಾಸಕ್ಕೆ ಬಪ್ಪೆನುಮ್ಮಳಿಸಬೇಡೆಂದೊಡಾಮಾತ ಪಿತರಂತೆಂದರೂ ॥ ೧೦೩ ॥

ಬಪ್ಪಿ ಕುರುಡನ ಕೈಯ್ಯ ಕೋಲು ಹೆಳವನಬಂಡಿ।
ತಪ್ಪಲಿದ್ದಲ್ಲಿರಲ್ಕಲ್ಲದೊಂದಡಿಯಿಡಲ್।
ಬಪ್ಪುದೇ? ಯೆಂಬಾತಿರೆಲೆ ಮಗನೆ ! ಕೇಳು ನೀನಮಗಾಡಿದವಧಿಯದಿನಾ ॥
ಬಪ್ಪಂಮತನಕುಸುರುವಿಡಿದು ಬಟ್ಟೆಯನೋಡು।
ತಿಪ್ಪೆವಾದಿನಕೆ ಬಾರದೊಡೆ ಧಾರುಣಿಯು ಮೇ।
ಲಿಪ್ಪುದಿಲ್ಲಿದನರಿದು ಬೇಗಬಾ ಬಾರದಿರು ಸುಖಿಯಾಗುಹೋಗೆಂದರೂ॥೧೦೪॥

ಮಗನ ಹಡಪಕ್ಕೆ ಕಂಬಳಿಗೆ ದಂಡಿಗೆಗೆ ಕಂದು ।
ರೆಗೆ ಕೊಡೆಗೆ ಲಿಂಗಪೂಜೆಗೆ ನೀಡುವುದಕೆ ಪಂ ।
ತಿಗೆ ಬಾಣಸಕ್ಕಂಗರಕ್ಷೆಗುಗ್ರಾಣಕ್ಕೆ ಮೇಳಕ್ಕೆ ಮಜ್ಜನಕ್ಕೇ ॥
ಬಗೆದು ತಕ್ಕವಕೆ ತಕ್ಕವರ ಪರುಟವಿಸುತಂ ।
ಮಗನ ಭರಭಾರಕ್ಕೆ ಹತ್ತೃದು ಮೊದಲಸೆ ।
ಟ್ಟಿಗಳ ನಪ್ಪಯಿಸಿ ನಂಬುಗೆಗೊಂಡು ಭಂಡವಂ ಸಲಿಸಿದನದೇಂಪೊಗಳ್ವೆನೂ
॥ ೧೦೫ ॥

ಈನಾಡೊಳೀಕಡೆಯೊಳೀಬಿಶಾಪರದೊಳಂ ।
ಶ್ರೀನಗರನಗರಗಳೊಳೀರಾಜ್ಯವಿತ್ರತಿಗಳೊ ।
ಳೀನೆಲದೊಳಂತಿವುಪ್ರಿಯವಿವು ಸಲುವವಿವು ಬೇಹವಿವುಬೆಲೆವೈವಪ್ರೂ ॥
ಆನಾಡಿಗಕ್ಕುವವಿವೆಂದರಿದು ಸಂವರಿಸಿ ।
ನಾನಾವಿಧದ ಪಟ್ಟೆಯಂ ಗಂಧಸೂತ್ಕರ ।
ತ್ನಾಸೀಕಮೊದಲಾದನರ್ಘ್ಯಭಂಡವನು ಪರುಟವಿಸಿದರು ಹರುಷದಿಂದಾ
॥ ೧೦೬ ॥

ಬಂದಧಿಕಟನದೊಳುತ್ತಮಮುಹೂರ್ತದೊಳು ತಾ ।
ಯ್ತಂದೆಗಳಿಗೆರಗ ತದನುಜ್ಞೆಯಂ ಪಡೆದು ಶಿವ ।
ಮಂದಿರಕ್ಕೈತಂದು ನೀನಿತ್ತ ಬೆಸನ ನಡೆಸಲು ನಿನ್ನ ಮಾತ ನಂಬೇ ॥
ಮುಂದೆ ನಾ ಹೋಗುತ್ತೈದೆನ ಹಿಂದೆ ಬೇಗ ಬಹು ।
ದೆಂದು ಕಾರ್ಪಣ್ಯಮಂ ತೋರಿಪಿಂಗೆ ಬೇಡಿಕೊಂ ।
ಬಂದದಿಂ ಸೋಮನಾಥಂಗೆರಗಿ ಬೀಳ್ಕೊಂಡು ಹೊರಪಂಟನಾದಯ್ಯನೂ ॥
॥ ೧೦೭ ॥

ಶ್ರೀಪಿದೂರೂರ್ಗಳೊಳು ನಗರಿನಗರಿಯೊಳರಸು ।
ಚಾವಡಿಯೊಳಗ್ರಹಾರಂಗಳೊಳು ಮನ್ನೆಯರ ।
ತಾವಿನೊಳು ಪಟ್ಟಣಂಗಳೊಳುರುಪವಸ್ತುವಂ ಬೇಹರಿಸುತೆಡೆಗೆಯ್ವುತಾ ॥
ಆವೆಡೆಯೊಳಾರಧಿಕರುತ್ತಮಕ್ಷೇತ್ರಂಗ ।
ಳಾವವು ವಿಶೇಷವುಂಟಲ್ಲಲ್ಲಿ ಹೊಕ್ಕು ಪರಿ ।
ಭಾವಿಸುತ್ತಯ್ದೆ ಚಂದ್ರಾದಿತ್ಯಚಕ್ರೇಶನಿರ್ಪ ಹುಲಿಗೆರೆಗೆ ಬರಲೂ ॥ ೧೦೮ ॥

॥ ಶ್ರೀಮದ್ರಾಘವಾಂಕಕವಿವಿರಚಿತ ಶ್ರೀಸೋಮನಾಥಚರಿತ್ರದೊಳ್ ಪ್ರಥಮಸಂಧಿ ಸಂಪೂರ್ಣಂ. ॥

## ಎರಡನೆಯ ಸಂಧಿ.

ಶ್ರೀಸೌರಾಷ್ಟ್ರ ಸೋಮನಾಥಾಯನಮಃ

ಸೂ॥ ಧರಣಿ ಕಂಪಿಸೆ ಪೂಕ್ಕು ಹುಲಿಗೆರೆಯ ಪುರವನಿ ।
ಸ್ತರವನಲ್ಲಿನ ಸೊಬಗ ಕಂಡು ಪದ್ಮಾವತಿಯ ।
ವರವಿವಾಹದ ಮಾವಗುತ್ತರಂಗೊಟ್ಟು ಭಾಷೆಯನಿತ್ತನಾದಯ್ಯನೂ ॥ ಪ ॥

ಚತುರಚಂದ್ರೋದಯದ ರಾತ್ರಿಯ ವಿಳಾಸದು ।
ಸ್ಥಿತಿಯ ಪದ್ಮಾವತಿಯ ಸಂಗವಿಸಿದಾ ಪತಿ ।
ವ್ರತಿಯ ಕೇಳೀವನದ ಘನಪಥಿಕರೆಸಿಪ ತಾಪಸ್ಸುಗಳ ಬೇಹಾರದಾ ॥
ಸ್ಮೃತಿಗತೀತಾನಂದನಾದಯ್ಯನ ಪ್ರಣಯ ।
ಗತಿಯ ಬೇಂಟೆಯ ತಪೋವನದ ನುತವರ್ಣನೆಯ ।
ಚಿತರಸದ ರಹಣಿಯನು ಚಿತ್ತೈಸಿ ಕೇಳುವುದು ಸದ್ಭಕ್ತಸಾಹಿತ್ಯರೂ ॥
॥ ೧ ॥

ತೆಂಕನಾಡಿನೊಳಧಿಕಪಟ್ಟಣಂಗಳ ಹಲವ ।
ನಾಂ ಕಂಡೆನಲ್ಲಿಯಿಲ್ಲಿದು ಧರಾಂಗನೆಯ ಮುಖ ।
ಪಂಕೇಜದಂತತಿಮನೋಹರಾಕಾರವಿಂತಿವಕೆ ಸಮನಿಂನಾವುದೂ ॥
ಮುಂಕುಬೇರನ ರಾಜಧಾನಿಯಳಕಾಪುರ ।
ಕ್ಕಂ ಕೆಲರು ನಗರೇಷು ಕಾಂಚಿಯನಿಪಂತದ ।
ಕ್ಕಂ ಕರಂ ಚಲುವೆಂದು ಹುಲಿಗೆರೆಯ ನಾದಯ್ಯ ನಿಂದು ನೋಡುತ್ತಿ
(ರ್ದನೂ ॥ ೨ ॥

ನಗಳು ನಲೆಗಂಡರಿಯದೆನಿಪಗಳಂಗಳು ಮುಂದೆ ।
ಗಗನವಂ ಮುಟ್ಟಿರ್ದ ಕೋಂಟೆ ಕೋಟೆಯನೋಳ ।
ಹಗೆಯೊದೆಯ ಸೀಳ್ವ ಗರಗಸದಂತೆ ಮೆರೆವ ತೆನೆ ತೆನೆಯೊಡೆಯೊಳುದ್ಯದ್ಧ್ವಜ॥
ಅಗಣಿತಧ್ವಜದೊಳೊಲೆವ ಪತಾಕೆ ಯಾಪತಾ ।
ಕೆಗಳ ತಣ್ಣೆಳಲೊಳಧ್ವಶ್ರಮಂ ಕಳೆವ ವಾ ।
ಖಗನಪ್ಪ ವೆಂದೊಡಿದರುನ್ನತಿಯ ಬಣ್ಣಿಸಲ್ಕರಿದೆಂದ ನಾದಯ್ಯನೂ ॥ ೩ ॥

* ಅಟ್ಟಳೆಯೊ ಸುರರನಗರಕ್ಕೆ ಧಾಳಿಡಲು ತಂ ।
ದಿಟ್ಟ ನಿಚ್ಚಣಿಗೆಯೋ ಕೊತ್ತಳವೊ ಗಗನದಾ ।
ಬಟ್ಟೆಯೊಳ್ ಬಂದುಬೆಂಡಾದ ಖಚರರು ಸಾರಲೆಂದಿಟ್ಟ ಛಂದ್ರಂಗಳೋ ॥
ನಟ್ಟ ಡೆಂಕಣಿಗಳೋ ಹಗೆಗಳಂ ಕೋಂಟೆಯೊದ ।
ರ್ದಟ್ಟಲೆಂದೆತ್ತಿದಾಹಲವುಕ್ಕೈಗಳೊ ಪರ್ವಿ ।
ದೊಟ್ಟಜೆಯೊ ಪುರದಪರಿವೇಷವೋ ಎನಿಪ ಪುಲಿಕರದುರ್ಗವೆಸೆದಿರ್ದುದೂ
॥ ೪ ॥

* ಪುರದೊಳಮರಾವತಿಯು ಸೊಬಗನಳಕಾಪುರದ ।
ಸಿರಿಯು ಮಧುರಾಪುರದ ಮಂಗಳವ ಶೋಣಿತಾ ।
ಪುರದ ದರ್ಪವನು ಲಂಕಾಪುರದ ಯಶವ ಸಂಯಮಿನೀಪುರದ ರೌದ್ರವಾ ॥
ಉರಗೇಂದ್ರಪುರದ ರಚನೆಯು ಸೋಷಧಪ್ರಸ್ಥ ।
ಪುರದ ಬಳವಂ ಬಳಿಮ ಹಿಳಿದು ಕರುವಂ ಕಟ್ಟಿ ।
ಸರಸಿಜದಕಂದ ನೀಪುರವ ನೆರೆದು ಮಾಡಿದನೆನಿಸಿತಂದಾದುರ್ಗವೂ ॥ ೫ ॥

ಅಪ್ಪುರಕ್ಕಧಿಪಚಂದ್ರಾದಿತ್ಯನೆಂದೆಂಬ ।
ಭೂಪಾಲಕಂ ಹರಿಶ್ಚಂದ್ರನಳಪುರುಕುತ್ಸ ।
ನಾಪುರೂರವಸಗರಕಾರ್ತವೀರ್ಯರ ನೊಂದುಮಾಡಿದಂದದೊಳು ಸತ್ಯಾ ॥
ಭಾಪೆಂದೆನಿಪ ಹಯಾರೂಢತ್ವ ನವನವಿಯು ।
ಚಾಪಾಗಮತ್ವ ಸೌಂದರತೆ ಬಹುಸಂತತಿ ।
ಶ್ರೀಪರಾಕ್ರಮವೆಸೆವ ಮಾನವಮನೋಜನಿನತೇಜದಿಂದೆಸೆದಿರ್ದನೂ ॥ ೬ ॥

ಚತುರಂಗಬಲದ ಸಪ್ತಾಂಗರಾಜ್ಯದ ಶೌರ್ಯ ।
ಜಿತರಿಪುಬಲದ ದಶದಿಶಾಂತಕೀರ್ತಿಯು ಸಮ ।
ಗ್ರತೆಯೊಳಾರುಂ ತನ್ನಸಮವಿಲ್ಲೆನಿಪ್ಪ ವಿಕ್ರಮಗುಣಾವಾಸನಾಗೀ ॥
ಕ್ಷಿತಿಯ ಪಾಲಿಸುತ ಹುಲಿಗೆರೆಯ ಚಾವಡಿಯ ನಾ ।
ಯತಮಾಡಿ ಹರುಷದಿಂದಿರುತಿಪ್ಪನಲ್ಲಿ ಸಂ ।
ತತಚಾರುಮೂರ್ತಿ ಚಂದ್ರಾದಿತ್ಯನೃಪನಾರುಹತಸಮುದ್ಧರಣನಾಗೀ ॥ ೭ ॥

ಹಲವುದೇಶಂಗಳೌದಾರ್ಯಮುಂ ಶೌರ್ಯಮುಂ ।
ಚೆಲುವಂ ಪರಾಕ್ರಮಂ ಖ್ಯಾತಿಯುಂ ನೀತಿಯುಂ ।
ಸುಲಲಿತಾಚಾರಮುಂ ವೀರಮುಂ ತಂದೊಂದುಮಾಡಿದಂದದಿ ರಂಜಿಪಾ ॥
ಹುಲಿಗೆರೆಯ ಜನಪತಿಂತಿಣಿಯ ಸೋಳ್ಪನ್ನವರ ।
ಬಳಲಿಕೆಯ ಪರಿಹರಿಸಲೆಂದು ಮನದಂದು ಸೀ ।
ತಳಜಲವ ನೆಳಲ ನುಣ್ಮಳಲ ಸುಖಕೆಳಸಿ ಪೊರಪೊಳಲಿಗೆಯ್ತರುತಿರ್ದನೂ
॥ ೮ ॥

ಗಳಿತಶ್ರಮಂ ಸಿಮರ್ಗಲಾಂಗಪ್ರತ್ಯಾರೂಢ ।
ವಳಿತಪಿಂಛಾತಪತ್ರಂ ಮಣಿಗಣಾಕಲ್ಪ ।
ಲುಳಿತಚಾಮರಂ ಪರಿಮಿತಾಪ್ತಜನಾವೃತಂ ಸಿತವಸನಕಲಿತಹಸ್ತಂ ॥
ಲುಳಿತಕೇಶಾಕೀರ್ಣದಿವ್ಯಪ್ರಸೂನ ಮುಂ ।
ಜುಳಮುಖಿಸ್ಥಿತಪ್ರಣ್ಯಾಪವಚನವಚಲಿತಧೈರ್ಯ ।
ದಳಿತತಾಂಬೂಲನಾದಯ್ಯ ಹುಲಿಗೆರೆಯ ಪೊರವಳಲಿಗೈತರ್ಪಾಗಳೂ
॥ ೯ ॥

ಇದು ಮಾಗಿಯುಸು ಪೆತ್ತ ತಾಯ್ಮನೆಯೊ ಮೇಣಲ್ಲ ।
ವಿದು ಶೀತಕರನಾಡಿ ಬೆಳೆದ ಸಿಳಯುವೊ ರಾಜಿ ।
ಪಿದು ವಸಂತನ ಘನಸುಕೃತಶಾಲೆಯೋ ಮಲಯಮುಂದಮಾರುತನಮಠ
ಇದು ಮದನನರಳಂಬ ಮಡಲಿರಿದು ಪೊದೆಗೈದ । (ಪ್ರೋ ॥
ಸವನಪ್ರೋ ಚಾರುಶೈತ್ಯಂಗಳೊಗೆದೆಡೆಯೊ ಪೇ ।
ಳದು ಚಿತ್ರವೆಂದೆ ನುತ್ತೊಂದೆರಡುಗಳಿಗೆ ನೋಡಿದ ಬನವನಾದಯ್ಯನೂ
॥ ೧೦ ॥

ಬಿಳಿಯ ಕಬ್ಬಿನಜಂತೆಯೊತ್ತಿಸೊಳು ಕೇತಕೀ ।
ದಳದ ತಗಡವಕೆ ಮುಡಿವಾಳದ ಪೊದಿಕೆ ಬಾಳ ।
ದೊಳು ಭಿತ್ತಿ ಮರುಗದೆಡೆಸೆರಕೆ ನಾನಾಪುಷ್ಪಸರದ ಮೇಲ್ಗಟ್ಟು ಬಿಗಿದ ॥
ಮಳಯಜದ ಸಾರಣೆಯು ಪಂಸೀರ ಸಿಂಪಸಂ ।
ತಳಿರಹಾಸಿಗೆ ಕಮಲದಳದಾಲವಟ್ಟ ಹಿಮ ।
ಜಳಪೂರ್ಣಕುಂಭ ಹೊಂಬಾಳೆಗಳ ಚಾಮರಂ ಮೆರೆವವರವಟಿಗೆಂಜೊಳಗೇ
॥ ೧೧ ॥

ಅಳಿಗಳಳಕಕೆ ಸವಿಲ್ಕುಡಿಗೆ ಸಸಿ ವದನಕು ।
ತ್ಪಳ ಕಣ್ಗೆ ಬಿಂಬವಧರಕ್ಕೆ ಮಾಣಿಕ ದಶನ ।
ಕುಳಕೆ ಬೆಳ್ದಿಂಗಳ್ ನಗೆಗೆ ಕೋಕಿಲ ದನಿಗೆ ತಂಬೆಲರು ಸುಯ್ಗೆ ಪ್ರಪವಾ ॥
ಗಿಳಿ ನುಡಿಗೆ ಲತೆ ನಡುಗೆ ಚಕ್ರವಾಕಂ ಕುಚ ।
ಸ್ಥಳಕೆ ಕೃತಕಾಚಳ ನಿತಂಬಕ್ಕೆ ತಳಿರು ಕರ ।
ತಳಕೆ ಹುರುಡಿಸುವ ರೂಪಂ ತಾಳ್ದ ವನಿತೆಯರು ಮೆರೆದರರಮಟ್ಟಿಗೆಯೊಳೂ
॥ ೧೨ ॥

ನಡೆ ನೋಡಿ ನೋಡದಂದದಿ ಮುಗಿವ ಕಡೆಗಣ್ಣು ।
ಮುಡಿಯಿಡುವ ನೆವದಿ ಮೊಲೆಗೆಲನತೋರಿಸಿ ಮೇಲು ।
ದಿಡುವ ಕೈ ಸಿರಿಯುನಡಿಗಡಿಗೆ ಕಳೆದುಡುವ ನೆವದಿಂ ಮನವನರಿವ ಚದುರೂ ॥
ನುಡಿಸಿದೊಡೆ ನಸುನಗುವ ಕೆಲದೆಗೆದು ಮುಖವ ನೀ ।
ಗುರ್ಗಿಡಿಯುಲಿರೆವೃತ್ತ ದೊರೆವಸಿಗಲೆಯ ತುಟಿಗೆ ಹದ ।
ಗೊಡುವನಾಲಗೆಯ ಸುದತಿಯರೊಪ್ಪಿದರು ಪಾಂಥಜನಕಿಟ್ಟಬಲೆಗಳಂತೇ
॥ ೧೩ ॥

ವಿಳಸಿತವೆನಿಪ್ಪ ಪೊರವಳಲು ಪಾಂಥಾವಳಿಗೆ ।
ನೆಳಲು ಜೇಪ್ರೊಸ್ಮಖದ ತಳಲು ಶ್ರಮದ ಬೇರ ।
ಕಿಳಲು ಮನವಂ ಸೂರೆಗೊಳಲು ಸಾಕೆಂದು ಹೊಗಳುತ್ತಲ್ಲಿಯರವಟಿಗೆಯೂ ॥
ಬಳಗಣಬಲೆಯರ ರೂಪಂ ಶೈತ್ಯಸೌರಭ್ಯ ।
ಜಳವನೀಕ್ಷಿಸಿ ಕೌತುಕಂಬಡುತ ಕುದುರೆಯಿಂ ।
ದಿಳಿದ ನಲ್ಲಿಯಸತಿಯರಾದರಿಸಿ ಕಾಲ್ದೊಳೆದು ಕೈಗೊಟ್ಟು ಕೊಂಡೊಯ್ದರೂ
॥ ೧೪ ॥

ತಳಿರ ಹಾಸಿನ ಮೇಲೆ ಕುಳ್ಳಿರ್ದ ಸುವತಿಯರ್ ।
ತಳಿವ ಪಂನೀರ ಕುಂಚಿಗೆಯ ಬೀಸುವ ಕಮಲ ।
ವಳದಾಲವಟ್ಟದೆಲರಿಂಗೆ ಪೂಸುವ ಚಂದನದಶೈತ್ಯಸೌರಭ್ಯಕೇ ॥
ಎಳಸಿ ಮೈಯೊಡ್ಡಿ ನೀಡುವನವ್ಯಘಳವ ನಿ ।
ರ್ಮಳಜಲವ ನಾದರಿಸಿ ಕೌತುಕವನಾಳುತ್ತ ।
ಕೆಳೆಯರಂ ಕಳುಹಿದನು ಪುರಕೆ ಬೀಡಿಕೆಗೆ ಭಕ್ತರ ಮನೆಯನರಸಲೆಂದೂ
॥ ೧೫ ॥

ಹಲವುಹಂದಿಯೊಳೊಂದು ಗಜವ ನೆರೆ ಬೆಳೆದ ಬೊ ।
ಬ್ಬುಲಿಯಡವಿಯೊಳಗೊಂದು ಕಲ್ಪತರುವಂ ಹೀನ ।
ಜಲದೊಳಗೆ ಸಿದ್ಧರಸಮಂ ನೆರೆದ ಕಾವಲಿಗಳೊಳಗೊಂದು ಕನ್ನಡಿಯನೂ ॥
ಅಲಸದರಸುವ ಮರುಳರಂದದಿಂ ಪರಿಪರಿದು ।
ಹುಲಿಗೆರೆಯ ಕೇರಿಕೇರಿಯ ಜೈನನಿಳಯದೋ ।
ಳೊತ್ತಿಳಲಿ ಭಕ್ತರ ಮನೆಯನರಸ ಕಾಣದೆ ತಿರುಗಿ ಬಂದರಾದಯ್ಯನೆಡೆಗೇ ॥
॥ ೧೬ ॥

ಪುರಪುರಂಗಳೊಳವರ ಕೇರಿಕೇರಿಗಳಲ್ಲಿ ।
ನೆರೆದ ಮನೆಮನೆಯೊಳರಸಿದೆವು ಕೇಳಿದೆವು ಭ ।
ಕ್ತರ ಮನೆಗಳಿಲ್ಲೆಂದರೆನೆ ಶಿವಾಲಯಮನದರೊಳು ಕಂಡುದುಂಟೇ ಎನೇ ॥
ಮೊರಡಿಗಳ ನಡುವೆ ಮಂದರ ಬಕಂಗಳನಡುವೆ ।
ವರಹಂಸೆ ಯಿಪ್ಪಂತೆ ಬಸದಿಹಲವರ ನಡುವೆ ।
ಪರಮಹೋಜೇಶ್ವರನಿರಲ್ ಕಂಡೆನೆನಲದಕೆ ಪೋಗಲುದ್ಯೋಗಿಸಿದನು ॥
॥ ೧೭ ॥

ಶ್ರೀಮೋದಿಸೀವದನಮಕುರಸೌರಾಷ್ಟ್ರಪತಿ ।
ಸೋಮನಾಥನ ಕುವರನಾದಯ್ಯನಾದಯ್ಯ ।
ನೀಮಹಾತೆಂಕನಾಡಿಂಗಿದುತ್ಕೃಷ್ಟವೆಂದೆನಿಪ ಪುಲಿಕರಪುರದೊಳೂ ॥
ಸಾಮರ್ಥ್ಯಪುರುಷಹರದರ್ಪಲಬರುಂಟಲ್ಲಿ ।
ಕಾಮಿತವ್ಯವಹಾರಕ್ರಯವಿಕ್ರಯಸ್ಥಾನ ।
ನಾವೆಲ್ಲರುಂ ಹೋಗಿ ನೋಡುವಂ ಬನ್ನಿಮೆನೆ ಹರುಷದಿಂ ನಡೆತಂದನೂ ॥
॥ ೧೮ ॥

ಇತ್ತಲೂರೊಳಗೆ ಪದ್ಮಾವತಿಯ ವಾಮಭುಜ ।
ಕೆತ್ತೆ ಸುರಹೊಂನೆವಸದಿಯ ದಡಿಗಜಿನನ ನಡು ।
ನೆತ್ತಿಬಿರಿವಂತಾಗೆ ಸೌರಾಷ್ಟ್ರಸೋಮನಾಥಂ ಪಯಣಕುದ್ಯೋಗಿಸೇ ॥
ಕತ್ತಲೆಯ ಘನಗಳೊಳು ಸೊಡರು ಕರಿನಿಕರದೆ ಮೃ ।
ಗೋತ್ತಮಂ ಪುಗುವಂತೆ ನಗರಿಯಂ ಪೊಗುತಂದು ।
ಚಿತ್ತಜಬಲಾಹಕಶ್ವಸನಹೋಜೇಶಲಿಂಗವ ಕಂಡನಾದಯ್ಯನೂ ॥ ೧೯ ॥

ಹರುಷದಿಂದಲ್ಲಿ ಬೀಡಾರಮಂ ಬಿಟ್ಟು ಪುರ ।
ಹರನ ಶಶಿಧರನ ಶಂಕರನ ಶುಭಕರನ ಸನ ।
ವರತ ಪೂಜಾಸುಖವನಪ್ಪಿ ಪಾದೋದಕವನಾದರಿಸಿ ಧನ್ಯನಾಗೀ ॥
ಪರಮಪ್ರಸಾದಸಂತುಷ್ಟತೆಯನೈದಿ ನಿಜ ।
ಪರಿಜನಂ ಬೆರಸಿ ಸುಖಗೋಷ್ಠಿಯಿಂದಿರಲು ಜೈ ।
ನರ ಭಾಗ್ಯ ಕಡೆಗಾಣ್ಬ ತೆರದಿಂದ ಹಗಲು ಕಡೆಗಂಡುದೇಂ ವರ್ಣಿಸುವೆನೋ
॥ ೨೦ ॥

* ಹೊಂದದಹಿವೃಂದಮಂ ಕೊಂದ ಕುಂದಂ ತೊಳೆವೆ ।
ನೆಂದಬ್ಧಿಗಿಳಿವ ಸಿಡಿಲೋ ಮಮದ್ವೇಷಿಗಿರಿ ।
ನಂದನಂಗೆಡೆಗೊಟ್ಟಡಂಗಿಸಿತಿದೆಂದು ಮುಳಿಸಿಂದ ಸುರಪತಿ ಯಿಟ್ಟೊಡೇ ॥
ನಿಂದುರಿವುತಬ್ಧಿಗೆಯ್ದುವ ವಜ್ರವೋ ನೀರ್ಗೆ ।
ಬಂದ ಕಾರ್ಮೋಡಂಗಳೊಳ್ಸಿಲುಕಿ ಪೋಗಿ ಮೇ ।
ಲಿಂದ ಕೆಡೆವಾವಾರ್ಗ್ನಿಯೋ ಎನಿಸಿ ಪಡುವಕಡಲಂ ಸಾರ್ದನಬ್ಜಸಖನೂ ॥
॥ ೨೧ ॥

ಮೊಳೆವ ಸಂಧ್ಯಾಂಗನೆಗೆಯಂಬುಧಿ ಸಿವಾಳಿಸಲ್ ।
ತಳೆದ ಮಾಣಿಕದ ಸೊಡರೋ ದಿವಾರಾತ್ರಿಗಳ ।
ನಳೆದು ಹೊರಮೋರೆಯೊಳು ನಡಲೆಂದು ವರುಣ ನಿಲಿಸಿದ ಹವಳದೊಂದುಸರಿಯೋ ॥
ಬೆಳಗೆಂಬ ಲತೆ ಯೊಲೆದು ಕುಡಿಜಡಿದು ಕೆಂಪಡರ್ದ ।
ಕಳಿವಣ್ಣೊ ಪಡುವಣದಿಶಾಂಗನೆಯ ಮುಂದಲೆಯ ।
ತೊಳಪ ಚೂಡಾರತ್ನವೋ ಎನಿಸಿ ಕಡೆವಗಲ ರವಿ ಕಣ್ಗೆಸೊಗಸಿರ್ದನೂ॥
॥ ೨೨ ॥

ಪಡೆಯುಡುಗಿ ಮುಪ್ಪಾಗಿ ಕಾಂತಿ ಮಸುಳಿಸಿ ತೇಜ ।
ಮುಡುಗಿ ಹುಟ್ಟಿದ ಠಾವನಗಲಿ ಬೇರೊಂದೆಡೆಯ ।
ಕಡೆಗೆ ಸಾರ್ವಂತಾದುದೀಗ ಹಿಂದೆನ್ನ ಹೆಸರೆಂದೊಡೋಡುವ ಕತ್ತಲೇ ॥
ಹೊಡಕರಿಸುತಿರ್ಪುದೆನ್ನಾಳಿಕೆಗೆ ಸಸಿಯ ಮುಂ ।
ಗುಡಿ ಧಾಳಬರುತಿದೆ ಯಿವಂ ಕಂಡು ಜೀವಿಪ ।
ನ್ನೊಡಲಾಸೆ ಯೇಕೆಂದು ಲಜ್ಜೆಯಿಂದಿಳಿವಂತೆ ಬಿದ್ದನಿನನಬ್ಧಿಯೊಳಗೇ॥೨೩॥

ನೀರಬಿದ್ದಿನನಳಿದನಿಂದೆಂದು ಹಗಲೆಂಬ ।
ನಾರಿ ಚಿಂತಿಸಿ ಕಂದಿದಳೊ ಗಾಳಿಯೆಂಬ ಸುಕು ।
ಮಾರನಂ ಪಡೆದು ಸಂಧ್ಯಾದೇವಿ ಹೊಳೆಮುಟ್ಟಿ ಹೊದೆವ ಕಾರ್ಗಂಬಳಿಯ
ಸೂರಾಂಶುವೆಂಬಕಿಚ್ಚಂ ಕಾಯ್ದು ಗಗನ ಕೆಂ ।        (ದೋ ॥
ಪೇರಿಬೆಳಗಾರಿ ಕಪ್ಪಾಯ್ತು ಹೇಳೆಂಬ ವಿ ।
ಸ್ತಾರದಿಂ ಕಾಳಗತ್ತಲೆಲೋಕದೊಳುಪರ್ಬಿಪರಕಲಿಸಿ ಮಡಲಿರಿದುದೂ ॥
॥ ೨೪ ॥

ಮಿಕ್ಕು ಮಾಸುವ ಬೆಳಗು ಕೆಂಪಡರ್ದ ಮುಗಿಲು ತಲೆ ।
ಯಿಕ್ಕುವಬುಜಂ ನಗುವ ಕುಮುದ ನೆಲೆಗೆಡುವಬ್ಧಿ ।
ತೆಕ್ಕೆಯಿಂದಗಲ್ವ ಚಕ್ರಂ ಹೂವನರಸುವಳಿ ಪ್ರೆಂದೊಂದು ನೆಗೆವ ತಾರೆ ॥
ಪಕ್ಕೆಗೆಯ್ದುವ ಮೃಗಂ ಮೊಳೆವಮಾರುತ ಕೋಟ ।
ರಕ್ಕೆ ಹಾರುವ ಪಕ್ಕಿ ಬಿಲುಪ್ರೊಯ್ವ ಮದನನೂ ।
ಟಕ್ಕೆಬಯಸುವ ಚಕೋರಂನಲಿವ ಜಾರೆಯರು ಸಂಜೆಯುಲಿ ರಂಜಿಸಿದರೂ
॥ ೨೫ ॥

* ಇದು ಪುರದ್ವಾರದಿಂ ಜಸಿಸಿ ಪರ್ವಿದ ಪಾಪ ।
ದೊದವೊ ಕಮಳಿನಿಯಿನೆಯನಸ್ತಮಿಸಿದಳಲುರಿಯ ।
ಲೊದವಿ ಮುಂಗುಡಿವರಿದು ಗಗನಮಂತಳ್ಕಿಡಿದುಬೆಂದಕಾಬೊರ್ಗೆಯೋ
ಇದು ಕಡಲಕಡೆವೆಡೆಯೊಳಹಿರಾಜನುಗುಳ್ದ ವಿಷ ।        ಎನೆ॥
ಮದನಾರಿ ಮುಳಿದು ಪಿಡಿದೊರಸಿ ಬಿಡಲೊಡನೆಮುಗು ।
ಳ್ದದು ಲೋಕಮಂನುಂಗಲೆಂದು ಪರ್ವಿದುದೊಪ್ಪೆಳೆನಿರಾತ್ರಿಕಣ್ಗೆಸೆದುದೂ ॥
॥ ೨೬ ॥

* ಪದಮೂರೆ ಪೃಥ್ವಿಯುಂಟೆಂದು ತಲೆಯೆತ್ತೆ ತಾ ।
ಗದೊಡೆ ನಭದತ್ತಲೆಂದು ಕೈಯೆತ್ತೆ ನೆರೆ ಸೋಂ ।
ಕದೊಡೆ ದೆಸೆ ಯುಂಟೆಂದು ದೂರದೋಳ್ನುಡಿಗೇಳ್ದ ನರಲೋಕ ವೆಂದು
ಇದುಪೂರ್ವ ಪಶ್ಚಿಮಂ ದಕ್ಷಿಣೋತ್ತರಗಳೆಂ ।        (ಸಂಬೀ ॥
ಬುದ ವಿಧಾತ್ರನಾದೊಡಮರಿಯನೆಂದೆನಲು ಕವಿ ।
ದುದು ವಿಲಯಘೋರಾಂಧಕಾರವಖಿಳಜನಾಳಿಗತಿಭಯಂಕರವಾದುದೂ
॥ ೨೭

* ರವಿಯುಳಿದ ಮರುಕದಿಂ ರಾಗಿಸುವ ಗಗನ ಕಂ ।
ದುವಬೆಳಗು ಕಣ್ಗೆಡುವಜನ ಕೊರಗುವಬುಜ ಹಿಂ ।
ಗುವಚಕ್ರ ವೆಡೆಗೆಡುವಗಾಳಿ ನೆಲೆಗೆಡುವಳಿಗಳುರೆ ಗೂಡುಗೊಂಬಪಕ್ಷೀ ॥
ಕವಿವ ಸಂತೋಷದಿಂ ಹೆಚ್ಚುವಂಬುಧಿ ನಗುವ ।
ಕುವಲಯಂ ನಲಿವ ಜಾರೆಯರೊಸರ್ವಪಳುಕು ಮೂ ।
ಡುವ ತಾರೆ ಬಿಲ್ವೊಯ್ವ ಕಾಮನೆಚ್ಚುವ ಚಕೋರಾಳಿ ಸಂಜೆಯೊಳೆಸೆದವೊ ॥ ೨೮ ॥

* ಕಡಲ ಸಿಡಿವಸಿಯೊ ಮೇಘಾವಳಿಯ ತತ್ತಿಗಳೊ ।
ಪೊಡವಿಯೊಡೆಯನು ನೋಳ್ಪ ಗಗನರಂಧ್ರವೊ ಅಲುಗ ।
ಗೊಡದಂತೆ ಕೀಲಿಸಿದ ವಜ್ರದಮೊಳೆಯೊ ನಭದಲತೆ ಹಬ್ಬಿಯೊಗೆದ
ಕಡುಹಸಿದವೆಂದು ಸಸಿ ಯೆಲ್ಲಾ ಚಕೋರಕ್ಕೆ ।   (ನನೆಯೋ ॥
ಕೊಡುವ ಸವಿದುತ್ತುಗಳೊ ಸಿಡಿವ ಸೀಮುರ್ತ್ತುಗಳೊ ।
ತಡೆಯದೆ ವಿಚಾರಿಸೆನೆತಾರಾಳಿನೆಗದವಾಜಗದಜನಪರಿವೃತಿರಲೂ ॥ ॥ ೨೯ ॥

* ನಿಶಿಯೆಂಬ ಗಜಮಂ ವಿದಾರಿಸಲು ಹರಿ ಪೂರ್ವ ।
ದಿಶೆಯದ್ರಿಶಿಖರದಿಂ ನೆಗೆಯಲು ಸುಧಾಕಿರಣ ।
ವಿಸರವೆಂದೆಂಬ ಕೇಸರ ಕೆದರಿ ಘರ್ಜಿಸುತ ಸೀಳಲ್ಕೆ ಗಗನತಳಕೇ ॥
ಪಸರಿಸಿದ ಮೌಕ್ತಿಕವೊ ಯೆಂಬಂತೆ ನಕ್ಷತ್ರ ।
ಮುಸುಮುಸನೆ ತೊಳಗುತಿರೆ ಮೂಡಿದಂ ಸಸಿ ನಾಲ್ಕು ।
ದೆಸೆಯ ದಿಗುಭಿತ್ತಿಯಂ ಧವಳಿಸುತ ಕಣ್ಗೆ ಮಂಗಳವಾಗಲೊಪ್ಪಿತಂದೂ ॥ ॥ ೩೦ ॥

ಮನಸಿಜನ ಬಡಿಕೋಲೊ ಶಿವಂ ಸೂಡಿರ್ದ ಚಂ ।
ದ್ರನ ಭಾಗವೋ ರಾಹು ತೋಡಿ ತಿಂದುಳಿದು ಮಿ ।
ಕ್ಕನಿತೋ ವಿಯೋಗಿಗಳು ವಿರಹವಾರ್ಧಿಯೊಳು ಕೆಡೆವಾಗಳುರುಗಿರ್ದ
ಘನತರಾಕಾಶಕೇಶನ ಕೈಯ ಪಾತ್ರೆಯೋ ।   (ಕೋಲೋ ॥
ವಿನುತಪಡುವಣ ದಿಶಾಂಗನೆಯ ಮುಂದಲೆಯ ಮು ।
ತ್ತಿನ ಹೆರೆಯೊ ಯೆಂದರ್ಧಚಂದ್ರನಂ ಬಣ್ಣಿಸುವೊಡರಿದು ಕಾವ್ಯಂಗಳೊಳಗೇ ॥ ೩೧ ॥

ಕುಸುಮಶರವಂ ಮದನ ಮಸೆವ ಪಳುಕಿನದೊಂದು ।
ಹೊಸಸಾಣೆಯೋ ಗಗನವನಿತೆ ಯುಟ್ಟಾ ಡಲ್ಕೆ ।
ಪಸರಿಸಿದ ನಕ್ಷತ್ರಕವಡಿಕೆಗಳೆಡೆಯೊಳಿಳುಪಿಟ್ಟ ರಜತದಹಲ್ಲೆಯೋ ॥
ಒಸೆದು ರತಿ ಸಿಟ್ಟಸುವಕನ್ನಡಿಯೊ ಮನ್ಮಥನ ।
ಹೊಸಚಕ್ರವೋ ತಿಳಿದ ಬೆಳುದಿಂಗಳಂ ತಂದು ।
ವಸುಧೆಯೊಳು ಖೇಚರರು ಸುರಿವ ಘಟವೋ ಎಸಿಸಿ ಮೂಡಿತ್ತು ಶಶಿಬಿಂ
(ಬವೋ॥ ೩೨ ॥

* ಇದು ಪೂರ್ವದಿಗ್ವಧೂಸಿಂಧೂರತಿಲಕವೋ ।
ಇದು ಸುರಪನೋಲಗದೊಳುಪ್ಪರಿಗೆಗಳಸವೋ ।
ಇದುವೆ ಐರಾವತದ ಕೊರಳ ಪೊಂಘಂಟೆಯೋ ಅಮರಪುರದಾಲವಟವೋ ॥
ಇದು ವಿರಹಿಗಳ ಹೃದಯ ದುರಿಯ ವುಕ್ಕಿನಗುಂಡೊ ।
ಇದು ರತಿಯಲಂಕಾರವಿರ್ಪ ಬೆಳ್ಳಿರಡಿಗೆಯೊ ।
ಇದುಜಾರಚೋರರೆಡೆಯಾಟ ಬೇಡೆಂದು ಯಮ ಪೊಡೆವ ಡಂಗುರವೆನಿಸಿ
(ತೂ ॥೩೩॥

ಬೆಳೆದ ಕತ್ತಲೆ ಮುತ್ತು ಹಣ್ತುದೋ ಕುಮುದಿನಿಯ ।
ಕೆಳೆಯ ಬಹಡಮುವು ಸುಂಧ್ಯಾವನಿತೆ ಭುವನವುಂ ।
ಮಳಯಜದಿ ಧವಳಿಸಿದಳೋ ರೂಪನಡಗಿಸಿ ದಿವಾಕರನ ಕಿರಣಂಗಳೂ ॥
ಜಳಜವುಂ ನೋಡಬಂದವೊ ಚಕೋರಿಗಳ ನಿ ।
ರ್ಮಳಹರ್ಷ ಬೆಳೆಯಿತೋ ಎಂದೆಂಬ ಸಂದೇಹ ।
ಕೊಳಗಾಗಿ ಚೌಪಟಂಬರಿದು ಪಸರಿಸಿತು ಬೆಳುದಿಂಗಳೆಲ್ಲಾ ಕಡೆಯೊಳೂ ॥
॥ ೩೪ ॥

ಕುಂದದಂದಂದಿಂಗೆ ಬಂದು ಕಾಡುವ ರಾಹು ।
ವಿಂದೆನ್ನ ತಾವಿಂಗೆ ಬಾರದಿರದಂದದಿಂ ।
ದೊಂದುಪಾಯಂಮಾಳ್ಪೆನೆಂದು ವಿಧು ಬಿಂಬಕ್ಕೆ ನಡೆಗೋಂಟೆ ಯಿಕ್ಕಿ
(ಸಿದನೋ ॥
ಸಂದ ಬೆಳುದಿಂಗಳೆಂಬ ವೃತಾಂಬುನಿಧಿಯನಾ ।
ನಂದದಿಂದುತ್ತರಿಸಲೆಂದು ತಾನೊಲಿದೇರಿ ।
ನಿಂದಹರುಗೋಲ್ವಾಟ್ಟೆ ಯೆನಿಸಿ ಶಶಿಮಂಡಲದ ಪರಿವೇಷವೆಸೆದಿರ್ದುದೂ ॥
॥ ೩೫ ॥

ಹರೆವುತಿದೆ ತಿಮಿರ ಮೈಮುರಿವುತಿದೆ ಬೆಳುದಿಂಗ ।
ಳುರವಣಿಸುತಿದೆ ವನಧಿ ಗಗನಾಂಗಣದೊಳು ಸಸಿ ।
ಯುರಳೆ ದೂವ್ವಾಳಿಸುತ್ತಿದೆ ಬೀದಿ ಬೀದಿಯೊಳು ಬೆಳುಮುಸುಕು ಪಸರಿಸು
ಬಿರಿಯುತಿದೆ ಪೂ ಕಂಪುವೆರಸಿ ಬರುತಿದೆಮಂದ । (ತಿದೇ ॥
ಮರುತ ಸರಗೈವುತಿದೆ ಕೋಗಿಲೆಗಳೀಹೊತ್ತು ।
ಪುರವ ನೋಡುವೆನೆಂದು ಪೊರಮಂಟನಾದಯ್ಯ ಹತ್ತೈದುಸಖರುಸಹಿತಾ ॥
॥ ೫೬ ॥

ತೋರಹಾರದ ಜಳವಟಿಗೆಯ ಪದಕದ ಬಾಹು ।
ಪೂರಯುದ ತೊಳತೊಳಗುವೊಳ್ಳುಮಾಣಿಕದ ಕರ್ನ ।
ಪೂರದ ಮಹಾಮುದ್ರಿಕೆಗಳ ಮಣಿಮಯಕಟಕಮೊರೆವ ಸರ್ವಾಭರಣದ ॥
ಸೌರಭ್ಯ ಚಂದನೋದ್ವರ್ತನದಿಂ ವಕ್ಷದೊಳು ।
ಸಾರೈಸಿಯಚ್ಛ ಸಾದಿನಲಿ ಬಟ್ಟಿಟ್ಟು ಕಿವಿ ।
ದಾರೆ ಮುಸುರಿದ ಮೃಗಮದದ ಸೊಬಗ ನಡಿಯಿಟ್ಟನಪ್ರತಿಮನಾದ ॥
(ಯ್ಯನೂ ॥ ೫೭ ॥

ಇಟ್ಟ ಕತ್ತುರಿಯತಿಲಕದ ಕಪೋಲದೊಳು ಜವು ।
ಗಿಟ್ಟೊ ಸರುವಂತೊಟ್ಟಕೊಂಡ ಪುಣುಗಿನ ಕಂಪ ।
ನೊಟ್ಟೈಸಿ ತುರುಬಿದ ಕದಂಬಕುಸುಮಕ್ಕೆರಗಿ ಮಂಡಳಿಪ ಮರಿದುಂ
ಉಟ್ಟಧವಳಾಂಬರದ ಹಡಿಪಿಗನ ಕೈಯಲಳ । ಬಿಯಾ ॥
ವಟ್ಟ ವೀಳೆಯದ ಚೆಲುವಾವರಿಸಿ ಮನುಮಥನ ।
ಕಟ್ಟದಲಗಿನ ತೆರದಿ ನಡೆದು ಪುರವೀಥಿಯೊಳು ಬರುತಿರ್ದನಾದಯ್ಯನೂ ॥
॥ ೫೮ ॥

* ಪುರವ ನೋಡುವೆನೆಂದು ತನ್ನಾಪ್ತಸಖರುಗ ।
ಳ್ವೆರಸಿ ಪೊರಮಟ್ಟು ಜಾಣಿನ ಜನ್ಮಭೂಮಿ ಸಿಂ ।
ಗರದಮಡು ಮೋಹನದಬೀಡು ಸೊಬಗಿನಸೀಮೆ ವಿತತಚದುರಿನಚಾವಡೀ ॥
ಹುರುಡಿನೆಡೆ ಯುಪಚಾರದಿಕ್ಕೆ ವೈಶಿಕದ ಹರ ।
ವರಿ ಹುಸಿಯ ಹಸರ ಕೃತಕದ ಕೇರಿ ಯಾಧಿಯಾ ।
ಗರವಳಿಕದಾವಾಸವೆಂದೆನಿಪ ಸೂಳೆಗೇರಿಯ ಹೊಕ್ಕನಾದಯ್ಯನೂ ॥ ೫೯ ॥

* ಪಳುಕಿಂದ ನಯವಡೆದ ನೆಲೆಗಟ್ಟು ಶಶಿಕಾಂತ ।
ವಳವಟ್ಟ ಭಿತ್ತಿ ವಜ್ರದಕಂಭ ವಿದ್ರುಮದ ।
ತೊಲೆ ಪುಷ್ಪರಾಗದೊಪ್ಪುವಜಂತೆ ಮರಕತದಲೋವೆ ಮುತ್ತಿನಸೂಸಕಾ॥
ಥೊಳೆವ ಮಾಣಿಕದ ಕಳಶಂಗಳೋವರಿಯೊಳಗೆ ।
ಕಳಹಂಸಗಮನೆಯರ ಕುಚಕಳಶಮುಖಕಮಳ ।
ದೊಳುಸುಡಿಯು ಚಳನಯನದೊಳು ಸುಳಿವ ಸೂಳೆಯರ ಕಂಡನಂದಾದ
ಯ್ಯನೂ ॥ ೪೦ ॥

* ಇಡಿದ ಗಣಿಕೆಯರ ಹವರ್ಮ್ಯಾವಳಿಯು ನೇಪ್ರೊಗಳ್ಗೆ ।
ಕಡುಚೆಲ್ವ ಪಳುಕಿನೊಳು ಹೊಳೆಹೊಳೆವ ಭಿತ್ತಿಗಳ ।
ನೆಡೆಗೆಡೆಗೆ ಪಚ್ಚೆಪವಳಂಗಳ ಸ್ತಂಭಗಳ ಶಶಿಕಾಂತಶಿಲೆಯ ತೊಲೆಯಾ ॥
ಕಡೆದ ರೂಹಾರಗಳಲೀಕ್ಷಿಸಲು ತಮ್ಮಮನ ।
ವೆಡೆಗೊಂಡ ತೆರದೊಳೊಪ್ಪಿಹ ಪಣಾಂಗನೆಯರ ।
ಪ್ಪಡಕಿಲುಪ್ಪರಿಗೆಗಳು ಸಪ್ತಾದ್ರಿಯೊಂದಸೂಂದರ ಮೇಲೆ ನಿಂದಂತಿರೇ ॥
॥ ೪೧ ॥

ಓರಣದ ತೋರಣದ ಮೆರೆವ ಮುತ್ತಿನ ಮತ್ತ ।
ವಾರಣದ ಮಂಟಪದ ಲೋವೆಗಳ ದೆಸೆಯುಚೌ ।
ಭಾರದುಪ್ಪರಿಗೆಗಳ ತರತರದ ಜವನಿಕೆಯ ನೆಲೆಯ ಕರುಮಾಡದಾ ॥
ಚಾರುಭದ್ರಂಗಳ ಸುಧಾವೇದಿಕೆಗಳ ವಿ ।
ಸ್ತಾರದೆಡೆಗಿರಿದ ಹೊಂಗಳಸದ ತೆರಳ್ಕೆಗಳ ।
ಕೇರಿಯೊಯ್ಯಾರಂಕುಬೇರನಳಕಾಪುರವ ನೇಳಿಸಿತದೇವ್ರೊಗಳ್ವೆಸೂ ॥ ೪೨ ॥

* ಪುದಿದಕಣ್ಮುಸುಕಿದಮುಖೇಂದು ಮುಡಿಗಟ್ಟು ಮುಸು ।
ಕಿದ ಬೆನ್ನತೆರಪು ಮೊಲೆ ಮುಸುಕಿದುರ ಬಾಸೆ ಮುಸು ।
ಕಿದ ನಡು ನಿತಂಬ ಮುಸುಕಿದ ವಿಪುಳಥೊರವಾರು ಮಂದಗತಿ ಮುಸುಕಿದ
ಚದುರು ಮುಸುಕಿದ ಮಾತು ಸೊಗಸು ಮುಸುಕಿದ ಸರಂ ।  (ಪದಂ ॥
ಸುದಮಳಾಭರಣ ಮುಸುಕಿದ ವೈ ವಿಳಾಸಮುಸು ।
ಕಿದ ನಿಲವು ಮೋಹನಂ ಮುಸುಕಿದಾಕಾರ ವೆಸೆದಬಳೆಯರುಕಣ್ಗೆಸೆದರೂ
॥ ೪೩ ॥

* ನೆಗೆದಳಕಮನ್ನೆತ್ತುವಂತೆ ಕೈಯೆತ್ತೆ ಬೆಮ |
ರೊಗೆವ ಕಕ್ಷಂ ಕಂಪನೀವುತ್ತೆ ನೆಯ್ದಿಲೆಸ |
ಳುಗಳಲಿಡುವಂತೆ ಮೆಲ್ಲನೆ ತಿರುಗಿ ನೋಡುತ ಪಿಟರಕನ್ಗೆ ಬಿನ್ದಿಕ್ಕುತಾ ||
ನೆಗೆದು ಬಿಗಿದುಬ್ಬಿ ಕೊಬ್ಬಿದ ಕುಚದ ಮೇಲ್ಸೀರೆ |
ಜಗುಳ್ದೊಡೊಯ್ಯನೆ ತೆಗೆವ ನೆವದೊಳದತೋರಿ ನಸು |
ನಗುತ ಮಾಯಾಪಾಶಮಂ ಬೀರುತಿರ್ಪ ಸತಿಯರ ಭಾವಮಂ ಕಂಡನೂ ||
|| ೪೪ ||

ಎಳಸ ಚೀಳಿತೊಳು ಕೊಟ್ಟಗೆಯೊಳಂಗಡಿಯೊತ್ತು |
ಗಳೊಳಾದೆಸೆಗಳೊಳೋವರಿಯೊಳೊದವಿದ ಹಿತ್ತಿ |
ಲೊಳು ಮರೆಗಳೊಳು ಮರದತಳ ಪ್ರೋಣಿ ಗುಣಿ ತೆಪರು ಕಲುಮುಳುಗಳೆಂ
ಎಳೆಯ ನುಡಿ ನಸುಚುಂಬನಂ ಸೂಸದುಸುರು ಸೊ | (ದೆನ್ನದೇ ||
ಪ್ಪುಳನುಳಿದಪಂತಿ ನಡದುಗುರು ಸಡಿಲಿಸದುಡಿಗ |
ಗಳೊಳು ನೆರೆನೆರೆದು ಕತ್ತಲೆ ಹರೆಯ ಹರಿವುತಿಹ ಜಾರಮಿಥುನವ ಕಂಡ
(ನೂ || ೪೫ ||

* ಕಂಕಣಂಗಳ ತೋಳಬಂದಿಗಳ ಕಟಿತಟದ |
ಕಿಂಕಿಣಿಯ ನೇವುರದ ಮುದ್ರಿಕೆಯ ಕಳನಾದ |
ಮಂ ಕಟ್ಟಿ ಮನೆಯಪರಮರಪಿಟ್ಟು ಪೊರಮಟ್ಟುಮರೆಗೊಂಡುಸುಳಿವ
ಶಂಕಿಸುತ ನೆಳಲದೆಸೆಯಂ ಸಾರ್ದು ನಡೆವುತುಲು | (ಜನಕೇ ||
ಹಂ ಕೇಳ್ದ ಸಿಲುತೋರ್ವ ಜಾರೆ ಜಾರಂ ಪೇಳ್ದ |
ಸಂಕೇತದತ್ತಲಾರುಂ ಕಾಣರೆಂದೆಯ್ದಿ ನಲಿದು ಬರಲೇನಾದುದೋ! || ೪೬ ||

* ನಡೆಗಂಡು ಕವಿವ ಕಳಹಂಸೆಯುಂ ಜಡಿವ ಸವಿ |
ನುಡಿಗೇಳ್ದು ಮುತ್ತುವರಗಿಳಿಗಳಂ ಕೊಡಹೆ ಮುಸು |
ಕೊಡವಳಿವೊಡೆದ್ದ ಪರಿಮಳಕಳಿಕುಳಂ ಕುರುಳ್ಗಳಂಮುಸುರೆ ಬಿಚ್ಚುಮು
ಮುಡಿಗೆ ನವಿಲಡರೆ ಹೊದಿಕೆಯನು ಬಿಸುಟೋಡುತಡಿ | (ಡಿಯಾ ||
ಗಡಿಗೆ ದನಿಗೆಯ್ಯೆ ಕೋಗಿಲೆಯುಲಿದು ಜನವರಿಯೆ |
ಕಡುಲಜ್ಜೆಯಂ ತಾಂದವನ್ಯಾಯಿಗಿಂನುಳಿವನರರೊಳಾವಂ ಹಿತವನೂ || ೪೭ ||

ತಡವುತ್ತ ಹರೆದಮುಂದಲೆಯ ನುಬ್ಬಿದ ತುಟಿಯ ।
ಕುಡಿನಾಲಗೆಯೊಳಂಟುತುಸುರನೊಳದೆಗೆದು ತೋ ।
ಳ್ತೊಡೆಯ ನಖವ್ರೊಯ್ಗಳ ಗಂದೆಯನೊರಸಿಕೊಳುತೆದೆಯಕಿರುಬೆಮರನೂ
ಮುಡಿದರಳನೊಗುತಣಲತಂಬುಲವನುಗುಳುತ್ತ ।　　(ದಿಕೊಳುತಾ ॥
ನಿಡುಮುಸುಕಸಿಡುತುರವಣಿಸಿ ನಡೆವುತಭಿಮುಖ ।
ಕ್ಕೆಡೆಗೈದುನಿಲುತಹಿತ್ತಿಲಬಟ್ಟೆಯಿಂದೊಳಗೆ ಹೊಗುವ ಜಾರೆಯ ಕಂಡನೂ॥
॥ ೪೮ ॥

ಉಟ್ಟಧವಳಾಂಬರದ ಸುಲಿಪಲ್ಲ ಮೈಯೊಳಳ ।
ವಟ್ಟ ಗಂಧದ ಮುಡಿವ ಮಲ್ಲಿಗೆಯ ನಗೆಮೊಗದ ।
ತೊಟ್ಟಮುತ್ತಿನ ತೊಡಿಗೆಗಳ ಬೆಳಗು ದೆಸೆಯ ಪಸರಿಸಿ ಪರ್ಬೆ ಬೀದಿವರಿದೂ॥
ದಟ್ಟೈಸಿ ಬೆಳುದಿಂಗಳಂತೆಸೆಯೆ ಬೆಳ್ಮುಗಿಲ ।
ಮೆಟ್ಟಿರ್ದ ಚಂದ್ರಕಳೆಯಂತೆಸೆವ ಭಾವವಳ ।
ವಟ್ಟ ಬಿಳಿಯುಪ್ಪರಿಗೆಯಗ್ರದೊಳು ನಿಂದೋರ್ವ ಸತಿಕಣ್ಗೆ ಸೊಗಯಿಸಿದ
(ಳೂ ॥ ೪೯ ॥

ಮುಡಿಯ ಪರಿಮಳದೊಡನೆ ಮರಿದುಂಬಿಗಳು ಪರಿಯೆ ।
ನಡೆಯ ನಟಣೆಗಳೊಡನೆ ಹಂಸೆಗಳು ಜಡಿವಸುವಿ ।
ನುಡಿಯ ಸೊಗಸುಗಳೊಡನೆ ಗಿಳಿಗಳೊಯ್ಯನೆ ಕುಣಿವ ಕುಚದೊಡನೆ
ಬಡಲ ಚಕ್ರ್ವಗಳೊಡನೆ ನೋಟಕರ ದೃಷ್ಟಿಗಳು ।　　(ಕೋಕಂಗಳೂ ॥
ಬಿಡದೆ ಕೊಲ್ಲಣಿಗೆವರಿದೆಡೆಯಾಡುತಿರಲಿಂತು ।
ಮಡದಿಯರು ಚಿಟ್ಟುಮುರಿಯಾಡುತೊಪ್ಪಿದರು ಮಾಳಿಗೆಯ ಭದ್ರದ ಬಯ
(ಲೊಳೂ ॥ ೫೦ ॥

ಮುಡಿ ಜಡಿಯೆ ಕುಂತಳಂ ಕುಣಿಯೆ ಕಡೆಗಣ್ ಪೊಳೆಯೆ ।
ನಡು ನಲಿಯೆ ಕರ್ಣಪಾಲಿಕೆ ಪೊಳೆಯೆ ಹಾರವೊಲೆ ।
ದೆಡೆಯಾಡೆ ಲಂಬಿಸುವ ಮೇಲುದಿನ ತೆರಹಿನೊಳು ಮೊಲೆಗಳಲುಗಲು ಬಾಗಿ
ಬಡಲು ಝೋಂಪಿಸೆ ತಪ್ಪುತೆಡಮೆಟ್ಟುವಡಿಗಳೊಡ ।　　(ದಾ ॥
ನೊಡನೆ ನೇವುರ ಝಣಝಣರೆನಲು ವನಿತೆಯರ ।
ನಡುವೆ ಚಂಡಾ ಹೊಯ್ವುತಿರ್ದಳೋರ್ವಳು ಕಾಮನಂಕಮಾಲೆಯ
(ನೋದುತಾ ॥ ೫೧ ॥

* ತುಂಬಿತುಂಬಿಯು ನಟ್ಟುವಂತಳಕವಳಕವಲ ।
ರಂಬಾಬ ತೆವರುವಂತಕ್ಷಿಯಕ್ಷಿಗಳಿಂದು ।
ಬಿಂಬ ಬಿಂಬವ ತಗುಳ್ವತೆರದಿ ಮುಖಕಮಲ ಕಮಲವ ಲತೆಲತೆಯಕಾಡಿಗೇ॥
ಲಂಬಿಸುವ ತೆರದಿ ತೋಳ್ತೋಳ ಚಕ್ರಂಚಕ್ರ ।
ವಾಬಿಡದಪ್ಪೋಲ್ಕುಚಕೆ ಕುಚ ಹಂಸೆ ಹಂಸೆಗ ।
ಡ್ಡಂಬರಿವ ಪ್ಪೋಲ್ಪದ ಪದಕೆ ಮೆರೆಯೆ ಚಿಟ್ಟುಮುರಿಯಾಡಿದರು ಕಾಮಿಸಿ
(ಯರೂ ॥ ೫೨ ॥

* ನಿನ್ನ ಮುಖಕಮಲ ಕಮಲದೊಳೆಗೆದ ಕಮಲಮಂ ।
ನಿನ್ನಕ್ಷಿಕುವಲಯಂ ಕುವಲಯದ ಕುವಲಯವ ।
ನಿನ್ನ ರೂಪಲತಾಂತಶರ ಲತಾಂತವೋಳ್ಪಟ್ಟದ ಲತಾಂತಶರಾಳಿಯಾ ॥
ನಿನ್ನ ಕುಚಕುಂಭ ಕುಂಭಿಯು ಕುಂಭಯುಗಳವಂ ।
ನಿನ್ನತನುಮಧ್ಯನತನುತನುವಂ ನಗುವುದೆನೆ ।
ಲಿನ್ನಾವುದುಪಮಾನಮೆಂದು ಚರಿಮಂತೊಪ್ಪಜಾಣೆ ಮಗಳಂಪ್ರೊಗಳ್ದಳೂ ॥
॥ ೫೩ ॥

* ಪಾಡಳಿಳಿ ಕೋಗಿಲೆಯ ದನಿಗೆಡುವುದೆಂದುಮಾ ।
ತಾಡಳರಗಿಳಿಯ ಚಟುಳತೆ ಕೆಡುವುದೆಂದು ನಡೆ ।
ದಾಡಳರಸಂಚೆಗಳ ನಡೆಯ ಚಲುವಳಿಗೆಂದು ಮುಸುಕುದೆಗದಂಗಣದೊಳೂ॥
ನೋಡಳಿಂದುವಿನ ಸೊಬಗಳಿಗೆಂದು ಮುಡಿಯನ ।
ಳ್ಳಾಡಿಸಳು ನವಿಲ ಸಿರಿ ಕೆಡುಗೆಂದು ಕಣ್ದೆರೆದು ।
ನೋಡಳುತ್ಪಲದ ಸೊಬಗಳಿವುದೆಂದೆನ್ನ ಮಗಳೆಂದೊಪ್ಪುಸತಿನುಡಿದಳೂ ॥
॥ ೫೪ ॥

* ಅಳಿವ ಮುಡಿ ಪರೆದಳಕ ತೊರೆದತುಟಿ ನಸುದಿಲಕ ।
ವೆಳೆಗೆಂಪುವಿಡಿದ ಕಂಣಾಲಿಗಳ್ಬಮರ್ಪಡಿದ ।
ಪುಳಕತತಿ ಹೊಯ್ಪಳ್ಳೆ ಬಿಗುಹುಗುಂದಿದಕುಚಂ ಬೆಳರ್ತಮುಖ ನಖಹತಿ
ಮೊಳೆತಬಾಸುಳು ಪೊಯ್ಪುಪೂಮಾಲೆಗಳದಂತೆ । (ಯಲೀ॥
ಯಳವುಗೆಟ್ಟನಟು ಸಾಗಿಪದುಡಿಗೆಗಳ್ವೆರಪ ।
ತಿಳುಗಾಳಿಯುಂ ಬಯಸಿ ಭದ್ರದೊಳು ಚರಿಪಸುರತಾಂತಸತಿಯರಕಂಡ
(ನೂ ॥ ೫೫ ॥

* ಅಳುಪಿ ನೋಡಿದೊಡೊಂದು ಚಿಂತಿಸಿದೊಡೆರಡು ಸು |
ಯ್ಯಳೆಯೆ ಮೂರು ಜ್ವರಂ ತೋರಿದೊಡೆ ನಾಲ್ಕು ಬಿಗು |
ಹಳಿಯಲೈದೂಟಮಂ ಬಿಡಲಾರು ವಿಕಳವೆಡೆಗೊಳಲೇಳು ಕಡುಪಾನಮಂ||
ತಳೆಯಲೆಂಟತಿಮೂರ್ಛೆಮೂಡಲೊಂಭತ್ತು ತನು |
ವಳಿಯೆ ಪತ್ತಿವು ದಶಾವಸ್ಥೆಯಿವರಂದಮಂ |
ತಿಳಿಯೆ ಕೇಳೆಂದೊಬ್ಬ ಕಡುಜಾಣೆ ಹೇಳೆ ಬೋಳೈಸಿದಳು ಬಾಲಕಿಯನು||
|| ೫೬ ||

ಮುಸಿಗಪ್ಪಡವನಡಸಿ ತುರುಬಿಟ್ಟು ಸರೆದಲೆಗೆ |
ಮುಸುಕಿಟ್ಟು ಬಿದ್ದ ಪೇರ್ವೊಲೆಗಳಿಗೆ ರವಕೆಯಂ |
ಸಸಿನೆಬಿಗಿದೆವೆಯುದಿರ್ದಕಣ್ಗೆ ಕಾಡಿಗೆ ಯೆಚ್ಚು ಸದೆ ಸೊಪ್ಪನಣಲೊಳಡಸಿ||
ಮುಸುಡುಗಾಣದ ತೆರದಿ ಹಿಂದೆ ಸೊಡರಿಟ್ಟು ಸದೆ |
ನಸಿದ ರಾಗದಿ ಕಾಳುಹಾಡ ಬೊಗಳುತ ಗಂಡು |
ವೆಸರುಸುಳಿಯಲು ಬಾರೊಯೆನ್ನಾಣೆಯೆಂದು ಮುದುಪಾರಿರ್ದಳೊಂದೆಸೆ
(ಯಲೀ || ೫೭ ||

* ನೊರಜುಗಣ್ಣಿನ ಸಳಿದಮೂಗ ಜೋಲುವತುಟಿಯ |
ನುರುಟುವಲ್ಲಿನ ಕರಿಯಕಬ್ಬಾಯ ತುರುಬಿಸಿದ |
ನರೆಗೂದಲಿನ ಬಂಗುವಡೆದ ಮುಸುಡಿನ ಸುಬ್ಬುರೆದ್ದ ಗಲ್ಲದ ಕೊಡಕೆಯಾ ||
ಮುರುಟಿದ ಮೊಲೆ ಪೊದಿಸದ ಸೀಗೆ ಬಿಗಿದ ಹೊಟ್ಟೆಯ |
ಧರದ ಗಂಟುಗಳ ಕಂಕುಳಿಂದಡರ್ದರೋಮಗ |
ಳುರುವಿಕಾರದೆ ಮೆರೆವ ಮುದಿಸೂಳೆ ಗೊಂದಿಯೊಳೆ ಮಗಳ ಬೋಧಿಸುತಿ
(ರ್ದಳೂ ||೫೮||

* ಈನಗರದೊಳಗೆನ್ನಮಗಳಿಗೆಣೆಯಿಲ್ಲ ಸು|
ಮ್ಮಾನಿ ಸುಮ್ಮಾನಿ ಯಭಿಮಾನಿ ಕಡುನೀರೆ ಕರ |
ಜಾಣೆ ಕಮಳಾನನೆಯ ರೂಪಿಂಗೆ ಸಮವಪ್ಪ ವಿಟರನಾನಾರುಮಂ ಕಂಡು
ನೀನೊಬ್ಬನಾದೆ ಮೆಚ್ಚಿ ಮರುಳ್ಗೊಂಡೆ ಮನೆಯೊಳ | (ದಿಲ್ಲ||
ಗೇನಿರ್ದೊಡೆಲ್ಲವಡವೆಯಸಿಕ್ಕಿ ಭೋಗಿಸುವುದು |
ಹೀನಮನಬೇಡ ಕಂಡ್ಯಾ ಭುಜಗಯೊಂದೊಬ್ಬ ಮುದಿಸೂಳೆ ಬೋಧಿಸಿದ
(ಳೂ || ೫೯ ||

ಹೂವನರೆ, ಚಂದನವ ಕೊಯ್, ಗಿಳಿಗಳಂ ಬೆಳಗು ।
ದೀವಿಗೆಯನೋದಿಸೋವರಿಗೆ ನೀರೆರೆ, ವನದ ।
ಮಾವ ಧವಳಿಸು, ಹಸಿದಹಾಸಿಂಗೆ ಹಾಲನೆರೆ.ಹಂಸೆಯುಂಪಚ್ಚವಡಿಸೂ ॥
ತಾವರೆಯ ಹಣ್ಣಿತಾ, ದ್ರಾಕ್ಷಿಯರಳಂ ನೀಡು ।
ಬಾವಿಯಂ ತೊಳೆ, ಯೆಲೆಯ ಪೂಗವಿರೆಂದೊಬ್ಬರಾ ।
ಜೀವವಮುಖಿ ವಲ್ಲಭನನಗಲ್ದವಿಕಳತೆಯಿಂದ ನುಡಿದಳಬಲೆಯರಕೂಡೇ॥
॥ ೬೦ ॥

* ತರುಣಿ ! ಕತ್ತುರಿಯ ಕೊಯ್ಯರವಿಂದಧೂಳಿಯಂ ।
ಬೆರಸು, ಗಂಧಕ್ಕರದು ತಿಗುರಾಲವಟ್ಟವುಂ. ।
ಅರಸಿನವ ಬೀಸು, ಕನ್ನಡಿಯ ಕುಳ್ಳಿರಲಿಕ್ಕು, ಗದ್ದುಗೆಯ ಬೆಳಗೆನುತ್ತಾ ॥
ಮೊರೆವಳಿಯ ಸರಗಟ್ಟು, ಮರುಗಮಲ್ಲಿಗೆಯಸೋ ।
ಹರಗಿಳಿಯ ತುರುಬು, ಸುರಗಿಗೆ ಕುಟುಕನಿಕ್ಕೆನುತ ।
ಕರೆವರಾರೆಂದು ಕೋಗಿಲೆಯ ದನಿಗೇಳ್ದು ಹರಿದಳು ಮುಗ್ಧೆ ವಿರಹದಿಂದಾ
॥೬೧॥

* ಚೆಕ್ಕಸಾರಿಸು, ಮನೆಗೆ ಮಿಕ್ಕ ಕೂಳನೆ ಯಿಕ್ಕು, ।
ಹಿಕ್ಕುಸೀರೆಯನು, ಮಂಜೆಯನುಡಿಸು, ಪದಕವಂ ।
ಯಿಕ್ಕು ಕಿವಿಯಲಿ, ಪ್ರೋಲೆಯಂ ತೊಡಿಸು ಕೊರಳಲ್ಲಿ, ಹರಿಯಣಿವನಡ
ಅಕ್ಕಿಯಂಬೆಳಗು, ಯೆಣ್ಣೆಯ ಹಾಸು, ಉಂಗುಟದ । (ಸೆನುತಲೀ॥
ಲಕ್ಕಮೆಟ್ಟಸುಹಾವುಗೆಯ, ನೆನುತಲೆಂದೊಬ್ಬ ।
ಚಿಕ್ಕಹರೆಯದ ಬಾಲೆ ನುಡಿದಳೆನೆ ಕಾಮತಾಪದಿ ನೊಂದುಮುಂದುಗೆಟ್ಟೂ
॥ ೬೨ ॥

* ಕಂಕಣವನೆಚ್ಚು, ಕಾಡಿಗೆಯ ಕೈಯಲಿತೊಡಿಸು, ।
ಕುಂಕುಮವ ಸೊಡೆ, ಯಡಕೆಯಂಪ್ರೊಸುಹಣೆಯಲ್ಲಿ, ।
ಕಂಕುಳಲ್ಲಿಕ್ಕು ಮೂಕುತಿಯ, ತ್ವರಿತದಲಿ ಸೊಗಸಾದ ಮೂಗಿನಲಿ ಹೂ
ಝೋಂಕಾರದಂದುಗೆಯ ಕೇಶದೊಳಗಳವಡಿಸು । (ಸೂ॥
ಭೋಂಕೆಂದು ಪುಷ್ಪವುಂ ಚರಣದೋಳ್ತೊಡಿಸೆಂದು, ।
ಶಂಕರನ ಹಗೆಯ ತಾಪದಿ ಬೇಗೆವಡೆದು ಮರುಳ್ಗೊಂಡೊಬ್ಬಸತಿ ನುಡಿದಳು
॥ ೬೩ ॥

ಅತಿಮುಗುದೆ ಯುಪ್ಪೆನ್ನವಂಗಳ ಕಾಮಜ್ವರಾ ।
ರ್ಜಿತತಾಪವಾರಿದೊಡೆ ಕಾಮನಂ ನೋನುವೆಂ ।
ರತಿಯನರ್ಚಿಸುವೆ ಸಸಿಗರ್ಘ್ಯವೆತ್ತುವೆ ಬೆಳುದಿಂಗಳಂ ಬೇಡಿಕೊಂಬೇ ॥
ಲತೆಗೆ ನೀರೆರೆವೆ ಯೆಳೆಮಾವ ಬಲಗೊಂಬೆನು ।
ನ್ನತದ ಗಿಳಿಕೋಗಿಲೆಗೆ ಕುಟುಕನಾಸೀವೆನೂ ।
ರ್ಜಿತವಸಂತದೊಳು ಕಾಮಸತ್ರವ ನಿಡುವೆನೆಂದಜ್ಜಿಹರಸುತ್ತಿದ್ದಳೂ ॥
॥ ೬೪ ॥

ಮುಡಿಯ ಭಾರಕೆ ಕೊರಳು ಸಳೆವ ಕುಚಭಾರಕ್ಕೆ ।
ಬಡನಡು ನಿತಂಬಭರಭಾರಕ್ಕೆ ಬಟ್ಟನು ।
ಣ್ಣೊಡೆ ಚೆಲುವನಾಂತವಯವಗಳಸುಕುಮಾರತೆಯ ಭಾರಕ್ಕೆ ಸರ್ವಾಂ
ಬಿಡದೆ ಮುನ್ನವೆ ಬಳುಕುತಿವೆ ಯಿದರ ಮೇಲಿವಳು । (ಗವ್ರೊ ॥
ತೊಡಿಗೆಗೊಟ್ಟಳು ಕಳೆಯೆಸಲ್ಕಳೆಯುಳಿವಕಳಚು ।
ವೊಡೆ ಬುದ್ಧಿಯಾವುದೆಂದವರವ್ವೆ ಚಿಂತಿಸುತ ನೆಸೆದುಪಾಯಂಗಂಡಳೂ ॥
॥ ೬೫ ॥

ಸಿಂಗರಿಸಿ ಹೊರಗಿರದಿರೆಲೆಮಗಳೆ ನಿನ್ನ ಚೆಲು ।
ವಿಂಗೆಳಸಿನೋಡಿದರ ಕಣ್ಣೀರಿನಿಂದ ಸಿ।
ನ್ನಂಗಲತೆ ಬಡವಾದೊಡದನರಿಯದವರಿವಳು ರೋಗಿಯೆಂದೇಳಿಸುವರೂ॥
ಕಂಗೊಳಿಪ ಸಸಿ ತನ್ನ ನಡುವಿರ್ದ ಚೆಲ್ವಪು ।
ತ್ತಿಂಗೆ ಫಣಿಬಂದೊಡದಕಂಜಿ ಕಂದಿದೊಡೆಲೋ ।
ಕಂಗಳರಿಯದೆ ಸರ್ಪದಷ್ಟವಾಯ್ತೆಂಬರೆಂದವಳುಸೇಳಿದಳಾಗಳೂ ॥
॥ ೬೬ ॥

ನೆರದ ಮಿಂಡರೊಳಧಿಕರರಿದೊಡಲಸಿಕ್ಕಿ ಬೋ।
ಸರಿಸಿ ಕೊಡುವೊತ್ತೆಯಂ ಕೊಳ್ಳದೆ ಸದರ್ಘಯಂ ।
ತಿರು ವೊಲಿಸುವಂಸಕೊಲಿವವಳಂತೆ ಮುಸಿದುಮುದ್ದಿಸಿ ನುಡಿದು ಕಾಲ್ವಿಡಿ
ಹುರುಡಿಸುವುದಳುವುದೊಳಗಾದ ಹವಣರಿದುಗೋ । (ವುದೂ ॥
ಣ್ಮರಿಗೊಂಡು ಹಣದಿಂಬುದೊಬ್ಬನೊಳಿರದಿರೆಂದು ।
ತರುವಲಿಗೆ ಮುದಿಸೂಳೆ ಕಲಿಸಿದಳು ಹುಲಿ ಮರಿಗೆ ಬೇಂಟೆಯಂ ಕಲಿಸು
ವಂತೆ ॥ ೬೭ ॥

* ಉಟ್ಟಸಿರಿ ದಾಂಟಿದೊಡೆ ಕಚ್ಚುವುದೆ? ದೈವಮಂ।
ಮುಟ್ಟಿದೊಡೆ ಬೆರಳು ಹತ್ತುವುದೆ? ಬಳಿನೀರ್ಗುಡಿಯೆ।
ಹೊಟ್ಟೆಯೊಡೆವುದೆ? ನೆಲಸಮಾರಪ್ಪೆ ನುಂಗುವುದೆ? ತಾಯುವಧಿಸಿದೆನೆಂ
ನೆಟ್ಟನಾಂ ಸತ್ತವಳೆ? ಸೋದರಕ್ಕೆಳಸಿ ಕ। (ದೊಡೇ ॥
ಣ್ಣಿಟ್ಟೆನೆನಲಿಟ್ಟವಳೆ? ಸೂರುಳಿಸಿ ನೆರೆಬಾಯ।
ಕಟ್ಟಿ ಹಣವಂ ಕೊಳಲು ಕಲಿವುದೆಂದೊಬ್ಬ ಕುಂಟಿಣಿ ಮಗಳ ಬೋಧಿಸಿದ
(ಳೂ ॥೬೮॥

ತಂಗಿತಲೆವೀಡಿಯಂ ತೊಡೆಅಡಿಗೆಮಾಡು ಚಳೆ।
ಯಂಗೈದಲಂಕರಿಸು ಹೊರಗನರಿದು ಭೋಗ।
ಕ್ಕಂಗವಿಸಿ ಹೊಗಲೊಳಗೆ ಹೊಗೆಮಾಡದಿರು ಬಳಿಕ್ಕವರು ಕಂಡೊಡೆ ನಗ್ಗ
ಸಂಗಕ್ಕೆ ಹಿರಿಯರಂ ಕರೆ ಸೀರತಾ ಮುಖಕೆ। (ವರೂ ॥
ಹಿಂಗದಿರು ಹಣವಹಡೆ ಮಿಗೆ ಮೊಗಸಿ ಜಾತಿಗೋಯ್।
ಕಂಗಳಸಿದಂತಿರೆಂದೆಳೆಯಳ್ಗೆ ಕಲಿಸಿದಳು ತೊತ್ತನಾಡಿಸುವ ನೆವದಲೀ॥
॥೬೯॥

ಜಗವರಿಯೆತಾ ಕಳಂಕಂ ಕಳಾಹೀನ ಪಾ।
ವಗಿದುಗಿವ ವಕ್ರಿಯಾದೋಷಿಯಸ್ಥಿರಹಂದೆ।
ಮೃಗಡಿಕ್ಕೆಗಾಡು ಹುತ್ತಿಟ್ಟಡವಿ ಯಾಲಹಬ್ಬಿದ ಹಳುವ ಶ್ವೇತಾಂಗನೂ॥
ಮಿಗ ತನ್ನ ದೆಸೆಯೆಲ್ಲ ತಪ್ಪಂಜದಿಂದೆನ್ನ।
ಮೊಗಸುಸಿಯ ಮುಂದೊಗೆದನೆಂದು ಕೋಪದಿ ಶಶಿಯ।
ನೆಗೆದು ಥಳಿಟ್ಟೊದೆವ ಮಾಳ್ಕೆಯಿಂದೊದೆದಳುಯ್ಯಾಲ ಮಣೆಯನಂ
(ದೋರ್ವಳೂ ॥ ೭೦ ॥

* ಇಂಬುಳ್ಳ ಸುಲಭನೆಂದೊಲಿದೆ! ಯೆಲೆಮಗಳೆ! ಯಾ।
ಡಂಬರದ ಚದುರ ನವಸೊಡವೆ ನಿರ್ಮಳಜಲಂ।
ತುಂಬಿದ ತಟಾಕದೊಳು ಹೊಳೆವ ಮಣಿ, ಬೀಟೆಯೊಳು ಬಿದ್ದ ಹಣ, ಗೆಜ್ಜೆ
ಲಂಬಿಸುವ ಹರಳು, ಕಲ್ಲಿಯ ನೆಲ್ಲಿ, ಯುವನನೀ। (ಯೊಳಗೇ ॥
ನಂಬದಿರು ನೆಚ್ಚದಿರು ಬೇಡೆಂದೊಡೆನ್ನ ಮಾ।
ತಂಬಗೆಯೆ ಕೈಕೊಳ್ಳ ಯೆಂದೊಬ್ಬ ಮುದಿಸೂಳೆ ತರುವಲಿಗೆ ಹಲುಮೊರೆ
ದಳೂ ॥ ೭೧ ॥

* ನೋಡದಿರ್ದಪೆನೆಂಬೆ ಕಣ್ನೋಡದಿರವು ಮಾ ।
ತಾಡದಿರ್ದಪೆನೆಂಬೆ ಬಾಯ್ ಮಿಡುಕದಿರದು ನಗೆ ।
ಯಾಡದಿರ್ದಪೆನೆಂಬೆ ಮುಸುಡು ನಗದಿರದು ಮೈಯೊಡ್ಡಿ ಕುಳ್ಳಿರೆನೆಂದೊಡೇ ॥
ನಾಡೆ ತನು ಮೇಲ್ವಾಯದಿರದು ಸುಖಂ ದೋರಿ ।
ಕೂಡೆನೆಂದೊಡೆ ಕಳೆಗಳಿರವು ಸಾನಿನ್ನೇನ ।
ಮಾಡುವೆಂ ಮುನಿಸವನ ಕಂತ ಬಳಿಕಿರದೆಂದು ಸಖಿಗೆ ಸೂಚಿಸಿದಳನಳು ॥
॥ ೭೨ ॥

* ಗುರುಭಕ್ತಿಗಾರದಾ ಸತ್ತವಂ ಸತ್ತವಂ ।
ಹರಪೂಜೆಮಾಡದಾತಂ ಮಾಡದಾತ ನತಿ ।
ಸಿರಿಯುಳ್ಳಿ ಧನವನಿಂಬಿಟ್ಟವಂ ಬಿಟ್ಟವಂ ಪುಣ್ಯವನು ಪರವಸತಿಗೇ ॥
ಮರುಳಾದ ಮಾನವಂ ಮಾನವಂ ತೊರೆದವಂ ।
ವರಕುಲಮತಂಗೆಟ್ಟವಂ ಕೆಟ್ಟವಂ ಪಾಪ ।
ಘರಸಾದವಂ ನಾದವಂ ನರಕದೊಳಗೆಂದು ಗುರು ಶಿಷ್ಯನುಂ ಬೋಧಿಸಿದನು
॥ ೭೩ ॥

ಗಡಣದುಪ್ಪರಿಗೆಗಳೊಳುರೆ ಸತ್ತ ಚದುರಂಗ ।
ಮಿಡಿವ ವೀಣೆಗಳನಭ್ಯಾಸಿಸುವ ಗಿಳಿಗಳಂ ।
ನುಡಿಯಿಸುವ ಕಾಮಶಾಸ್ತ್ರವ ನೋದುವತಿನೃತ್ಯಗೀತವಾದ್ಯವನ ಕಲಿವಾ ॥
ಕಡೆಗೆ ವೇಶ್ಯಾವಿಡಂಬನವರಿವ ಕಥೆಗೇಳ್ವ ।
ಬಿಡದೆ ಸಿಂಗರಿಸಿ ನಲ್ಲರೊಳು ಗೋಷ್ಠಿಯೊಳಿಪ್ಪ ।
ಮಡದಿಯರ ನೀಕ್ಷಿಸುತ್ತಾದಯ್ಯನೈತರುತ್ತಿರಲಿದಿರಲೇ ಪೊಗಳ್ವೆನೂ ॥ ೭೪ ॥

ಹಡಪದನುಲೇಪನದ ಕುಸುಮಮಾಲೆಗಳ ಕಂ ।
ನಡಿಯ ಸಿರಿಮುಡಿಯ ಪಡಿಸಣದ ಪಂತಿಯ ಹಲವು ।
ತೊಡಿಗೆಗಳ ಸೀಗುರಿಯ ಚಾಮರಂಗಳ ಹದಿರ ಹಾಡುವಾಡುವ ನಗಸುವಾ ॥
ನುಡಿವ ಗಿಳಿಯೋದಿಸುವ ಹಂಸಮಿಥುನಂಗಳಂ ।
ನಡೆಯಿಸುವ ನವಿಲ್ಗಳಂ ಕುಣಿಯಿಸುವ ವನಿತೆಯರ ।
ನಡುವೆ ಪದ್ಮಾವತಿ ವಿರಾಜಿಸಿದಳಮಮ ಕಾಮನಕ್ಕೆಯ ಸರಳಿನಂತೇ ॥
॥ ೭೫ ॥

* ಎಸಳುಂಗುರಗಳ ಸೋರ್ಮುಡಿಯ ಹೊಳೆವ ಕದಪುಗಳ ।
ಅಸಿಯಸೆಳ್ಳುಗುರ ಸುಲಿಪಲ್ಲ ಬಿಂಬಾಧರದ ।
ನೊಸಲ ತಿಲಕದ ನಸುನಗೆಯ ವೃತ್ತಕುಚದ ಪಲ್ಲವಪದದ ಸುಳಿನಾಭಿಯಾ॥
ಶಶಿಮುಖದ ಯೆಳೆವಾಳೆದೊಡೆಯ ಷಟ್ಪದಗುರುಳ ।
ಪಸರಿಸಿದ ಪೀನಮಂಜುಳನಿತಂಬದ ಚೆಲ್ವ ।
ಮಿಸುಪ ಬಾಸೆಯ ಸಿಂಹಮಧ್ಯದ ಸುಭಗೆಯಿರ್ದಳೇನ್ಪೊಗಳ್ವೆ ಪದ್ಮಾವತೀ॥
॥ ೨೬ ॥

ಪದ್ಮಾವತಿಯ ನೊಸಲು ಪೆರೆಯ, ಪದ್ಮವ ಮುಖಂ ।
ಪದ್ಮದೆಸಳ್ಗಳಸಕ್ಷಿ, ಪದ್ಮರಾಗಮಧರ ।
ಪದ್ಮಕುಟ್ಮಳವ ಕುಚ, ಪದ್ಮನಾಳವ ಬಾಸೆ, ಪದ್ಮಾಕರವಸು ನಾಭೀ ॥
ಪದ್ಮರುಚಿಯಂ ಹಸ್ತ, ಪದ್ಮಗಂಧವ ನುಸುರು ।
ಪದ್ಮಮೈಯೊಳುರೂಪು, ಪದ್ಮವಸತಿಯ ಜಾಣ್ಮೆ ।
ಪದ್ಮರಜಮಂ ಕಾಂತಿ, ಪೋಲ್ತು ಪದ್ಮಿನೀಜಾತಿಯೆನಿಸಿದಳು ಪದ್ಮಾವತೀ॥
॥ ೨೭ ॥

ಹರೆಯಮಂಕುರಿಸಿ ಚೆಲುವೆಲೆಯಿಟ್ಟು ಜವ್ವನಂ ।
ಹರಿದು ಕುಡಿವರಿದು ಸುಕುಮಾರತೆ ತಳಿರ್ತು ಸೊಬ ।
ಗರರೆ ಸರ್ವರ ಮನದ ದರ್ಪಮಂ ಪರ್ವಿ ಮುಗ್ಧಾಭಾವವಡಸಿ ತುರುಗೀ॥
ಪಿರಿದುಮುಗುಳೊತ್ತಿ ಹೊಸಜಾಣೊದವಿ ಹೂವಾಗಿ ।
ಪುರುಷಸಪ್ಪಾದಿಮಯ್ಯನ ಕಣ್ಗೆ ಮಿಸುಳಫಳ ।
ಭರವಾಗಲಿರ್ದ ಸುರಲತೆಯಂತೆ ಮೆರೆದಳಬಲಾರತ್ನ ಪದ್ಮಾವತಿಃ ॥೨೮॥

ತೆಳುಗಾಳಿಗೊಲೆವ ಮೇಲುದು ಗುಡಿ, ಚಳಾಳಕಂ ।
ಗಳು ತೋರಣಂ, ಕುಚಂ ಕಳಶ, ಮುಖ ಮುಕುರ, ಕರ ।
ತಳ ತಳಿರು, ನಖಕುಸುಮ, ತೊಡಿಗೆಗಳ ಮುತ್ತುಸನೆಯಕ್ಕಿ, ಪುರ್ಬಿಕ್ಷು
ಬಳಸಿ ಮುಡಿಗಂಪಿಂಗೆ ಮಂಡಳಿಸುವಳಿ ಹೀಲಿ । (ದಂಡಾ॥
ದಳೆ, ಕಂಕಣಂಗಳ ಝುಣತ್ಕಾರ ವಾದ್ಯಸಂ ।
ಕುಳವಾಗೆ ಬಪ್ಪಾದಿಮಯ್ಯನನಿದಿರ್ಗೊಳಲುನಿಂದಳೆಂಬಂತೆಸೆದಳೂ ॥ ೨೯ ॥

ಕಡಗಿ ಕವಿದೆಡೆವಯಲೊಳುಭಯದೃಷ್ಟಿಗಳಡಸಿ ।
ಬಿಡೆ ಹಳಚಿ ತುಳುಕಿಕ್ಕಿ ಸೆಳೆಯೆ ನೋಡಿದಬಳೆಯ ।
ಲೊಡಲು ಸಡೆಯುಡುಗಿ ನಿಲುವಲ್ಲಿ ಪಲ್ಲವದ ತೋಮರದ ಕಮಲದಘಂಟೆಯಾ
ಪಿಡಿದ ತುಂಬಿಯ ನಾರಿಯುಚ್ಚಕಬ್ಬಿನ ಬಿಲ್ಲ ।
ಬೆಡಗನಣುಕೆದ್ದಾರ್ದು ಕುಸಿದೆರಗಿ ನೆರೆ ತೆಗೆದು ।
ಕೆಡೆಯೆಚ್ಚನೊಂದು ಹೂಗಣೆ ಯೆರಡುಮನವ ನಿರ್ಮ್ಮೈಗಂಡು ತೂಗಾಡಲೂ ॥ ೮೦ ॥

ತೆಳುನೋಟದೊಳು ಕಡುಪು ಚದುರು ಚಾತುರ್ಯನುಡಿ ।
ಗಳೊಳು ತಡಬಡ ವೆಚ್ಚರಳವಟ್ಟ ಕರಣಂಗ ।
ಳೊಳು ಮರವೆ ಸಖಿಸಖರ ಮಾತುಗಳನಾಲಿಸುವ ಕಿವಿಗಳೊಳು ಮಂದ
ತಿಳಿವ ಮನದೊಳು ಸಂಚಲತ್ವ ನಡೆಯೊಳು ಸಿಲವು । (ಭಾವ ॥
ಬಳಸಿ ಕವಿದುಭಯರೊಳು ತೋರೆ ಕಂಡವರವರ ।
ಕೆಳೆಯರೆಡೆಯಾಡಿ ಮಾತಾಡಿ ಕೂಡಿದರವರ ನೆಸೆವಸೆಜ್ಜೆಯ ಮನೆಯೊಳೂ ॥ ೮೧ ॥

ಮನವರಿದು ಭರವರಿದು ವಳಸರಿದು ಕಳೆಯರಿದು ।
ನೆನಹರಿದು ತವಿಲರಿದು ತಣಿವರಿದು ಜಾತಿಯರಿ ।
ದನುವಿತ್ತು ಬೋಳೈಸಿ ಪಲ್ಲಟಿಸಿ ಮೂದಲಿಸಿ ಬೆರಸಿ ಕಳೆಯಂ ತೋರಿಸೀ ॥
ಮುನಿದು ಬೋಸರಿಸಿ ಷೋಡಶಕಳಾಸ್ಥಾನಚಯಂ ।
ಬನದ ನಾನಾಕರಣಗಳ ಕೌಶಲಂಗಳಂ ।
ದನುಭವಿಸುತಿರ್ದರಂದೆಲ್ಲರಂತೆನಲಂಮೊಸವರು ಜಗವಂದ್ಯರಾಗೀ ॥ ೮೨ ॥

ತುದಿಗಾಣದರ್ತಿ ಹಿಂಗದ ಮೋಹ ಮಗ್ಗಲಿ ।
ಕ್ಕದ ತವಕ ಬೆಸುಗೆ ಬಿಡದಪ್ಪು ಬೀಯದ ಮನಂ ।
ಪದೆದುರವಣಿಸದ ತಣಿವೈದಿಸದ ಸಮತೆ ಸಂಧಿಸಿ ಮುತ್ತಿಮೂವಡಿಸಲೂ ॥
ಇದು ಗಳಿಗೆ ಯಿದು ಜಾವ ವಿದುದಿವಸ ವಿದುಪಕ್ಷ ।
ವಿದು ಮಾಸವೆಂದೆ ನಿಪ್ಪುದನರಿಯದವುಮು ತವು ।
ಗೊದವಿದ ಮಹಾಸುಖದೊಳೊಂದೆರಡು ತಿಂಗಳನುಭವಿಸುತಿರ್ದೊಂದು (ದಿವಸಾ ॥ ೮೩ ॥

ಕವಿದಮರಹೆಚ್ಚರೊಳಡಂಗಿ ಕಟ್ಟರ್ತಿವು ।
ಕ್ಕವತನುವಿನೊಳ್ಮುಳುಗಿ ತವಕರಸ ಸಮತೆಯೊಳು ।
ತವಿಶಾಗಿ ಬೆಸುಗೆಬಿಡದಿರ್ದತೆಕ್ಕೆಯಬಿಗುಹು ಮೆಲ್ಲಮೆಲ್ಲನೆಜಾರಿತೂ ॥
ಸವಿನುಡಿಗಳಾರೈಕೆಗಳವಟ್ಟ ನಟ್ಟನೋ ।
ಡುವದೃಷ್ಟಿ ಯೆವೆಯಿಕ್ಕೆ ಲಟಲಟಿಸುತಿರೆ ಚಿತ್ತ ।
ವಿವಳಾರಮಗಳಾವಕುಲವಾವಸಮಯವೆಂದಾರಯ್ಯಲನುಗೈದನು ॥ ೮೪ ॥

ಶಶಿವದನೆ ! ನೀನಾರಮಗಳು ? ತಾಯ್ತಂದೆಗಳ ।
ಹೆಸರಾವುದಾವಕಾಯಕವಾವವರ್ಣವ ।
ರ್ಚಿಸುವದೇವತೆಯಾವುದೆನಿಬರೊಡಹುಟ್ಟಿದರು ? ಪೇಳೆನುತ್ತಾದಯ್ಯನೂ ॥
ಬೆಸಗೊಂಡೊಡಿಳೆಗುರುವ ಹರದನೆಮ್ಮಯ್ಯಪಾ ।
ರಿಸಶೆಟ್ಟಿ ಯೆಂದುಪೆಸರೊಬ್ಬಳೇಮಗಳು ಮ ।
ತ್ತಿಸೆವರುಹ ನಂಮೊಡೆಯ ಜೈನಮತ ನಮ್ಮದೆಂದಾಡಿದಳು ಪದ್ಮಾವತೀ ॥
॥ ೮೫ ॥

ನರಕಕ್ಕೆ ನಾಚದೀದೇಹವೋಹದಿ ಭವಿಯು ।
ಬೆರಸಿದೆನು ಭವಿಯಾದೊಡೇನೆಂಬೊಡಿಂತಿವಳು ।
ಪರಸಮಯ್ಯ,ಸುಡುಸುಡೆನ್ನಯಜೀವನಸವನೆಂದು ತನಗೆ ತಾನೇ ಹೇಸುತಾ ।
ಪಿರಿದು ದುರ್ವ್ಯಸನವೇಪೊತ್ತುತನಗುಂಟೆಂದು ।
ವರ ಪರಮಭಕ್ತಿ ಯುಳವಡದವಂಗೆಂಬುದಿದು ।
ಪರವಾಕ್ಯವಿಂನಿವಳಕೂಟ ವತಿಕಷ್ಟವೆಂಬುದನರಿದನಾದಯ್ಯನೂ ॥ ೮೬ ॥

ಬಂದೆರಡುದಿವಸ ಮಾನವವ ಹಿಂದಿಕ್ಕಿ ಸುಖ ।
ದಿಂದಿರುತ್ತೂರ್ಗೆ ಪೋದಪೆನೆಂದೊಡಾಕೆ ಕಡು ।
ನೊಂದು ಹವ್ವನೆ ಹಾರಿಹಮ್ಮದಂಬೋಗಿ ತಾಪದಿಕಾಲಮೇಲೆಕೆಡೆದೂ ॥
ಕೊಂದುಹೋಗಲ್ಲದೊಡೆ ಕೊಂಡುಹೋಗಿರಲಾರೆ ।
ನೆಂದೊಡಿದು ಮುಂದೆ ತೊಡಕಹುದೆನಗೆ ನೀನುತಾ ।
ಯ್ತಂದೆಯುಳ್ಳವಳು ನಿನ್ನಿಚ್ಛೆಯಲ್ಲಬಳೆ ಪೇಳೆಂದನಂದಾದಯ್ಯನೂ ॥ ೮೭ ॥

ಕಡೆಗೆ ಬಂದುದು ಬರಲಿ ಮುನಿದವರು ಮುನಿಗೆ ಸ ।
ತ್ತೊಡೆ ಸಾವೆನಲ್ಲದೆತೆಯೊಳು ಬಿಡೆಂ ಬಿಡೆನೆಂಬ ।
ಮಡದಿಯೊಡನೊಲಿದೊಂದನೊಂದರಿಂದಹುದೊಂದರಿಂಪೋಗದೇಕೆಂಬೊಡೇ ॥
ಮೃಡಭಕ್ತೆಯಾಗೆಂದುದಂ ಮಾಳ್ಪನಾಗದಿ ।
ದೊರ್ತೆಪ್ರೊಲ್ಲೆಸೆನೆ ಕಾಣವಾಗೆ ಬಾಯಂ ತೆರೆದು ।
ಕಡಿವಾಣವಾದೊಡಾನೊಲ್ಲೆನೆನಬಹುದೆ ಕರುಣಂಮಾಡಿಸೇಳೆಂದಳೂ ॥೭೮॥

ಪರಮವೈರಾಗ್ಯವಿದರಪ್ಪ ಶಿವಪೌರಾಣ ।
ಪರಿಚಿತಗಣಾಧೀಶರಪ್ಪ ಹೋಜೇಶ್ವರದ ।
ಹಿರಿಯಮೊದಲಾಚಾರ್ಯರಿಂ ದೀಕ್ಷೆಯಂ ಮಾಡಿಸಲ್ಪಡೆದು ಪದ್ಮಾವತೀ ॥
ದುರಿತಮಂ ನೀಗಿ ಶೈವಕ್ಕೆತಲೆವಾಗಿ ದು ।
ಷ್ಟರ ದೈವವಂ ತೊರೆದು ಪೂರ್ವಗುಣಮಂ ಮರೆದು ।
ನಿರುತಲಿಂಗಾರ್ಚನಂಗೈಯುತ್ತೊಂದೆರಡುದಿನವಿರೆ ಕೇಳ್ದನವರಯ್ಯನೂ ॥೭೯॥

ಹಂದಿಯುಂ ಹಾವಡರ್ದಂತೆ ನಿರ್ಧನನ ಮನೆ ।
ಬೆಂದೊಡಂತಪ್ಪುದಂತಾಗಿ ಹವ್ವನೆ ಹಾರಿ ।
ಹಿಂದೆ ನಮ್ಮನ್ವಯದಿ ಭಕ್ತರಾದವರಿಲ್ಲ ಭಕ್ತರಂ ನೆರೆವರಿಲ್ಲಾ ॥
ಕೊಂದಳೋ ಮಗಳು ಹದುಳಿರ್ದ ಜಿನಸಮಯಕ್ಕೆ ।
ಕುಂದ ತಂದಳು ಸಿಂದೆಯೆಂದಳವುದೆಂದು ಕಡು ।
ನೊಂದು ಹರಿತಂದು ಹಲುದಿಂದು ನುಡಿದನು ಪಾಪಿಬಂದುಪದ್ಮಾವತಿಯನೂ ॥೮೦॥

ಮುಳಿಸುಳ್ಳ ಚೋರ ನಾಜನಸಿದ್ಧ ನವಗೆಮನೆ ।
ಯೊಳಗಣವರೆಚ್ಚರಿಕೆಯಿಂದಗುಳಿಗದತೆಗೆದೊ ।
ಡುಳಿವ ಧನವಾವುದೌನಂಮತಲೆಯರಿವಹಗೆ ಭಕ್ತರೆಂಬುದನುನೀನೂ ॥
ತಿಳಿದೊಡಂ ತಿಳಿಯದಾದಯ್ಯನೊಳು ನೇಹವಂ ।
ಬೆಳಸುವರೆ ಬೆಳಸಿಯಲ್ಲದೆ ಭಕ್ತೆಯಪ್ಪರೇ ।
ಕುಲದ ಬೇರ್ಗಕಟ ಕುಡಿಗೋಲ್ವಿಡಿದೆಯಾಯೆಂದು ಹಲುಮೊರೆದನವರ
(ಯ್ಯನೂ ॥೮೧

ಶಿಲೆಗೆ ನೀರೆರೆದು ಬೊಬ್ಬುಲಿಗೆ ಬೇಲಿಯನು ಕೆ।
ತ್ತೊಲೆಗೆ ಹೂವಿಕ್ಕಿ ಹಂದಿಗೆ ಚಂದನವ ಪೂಸಿ ।
ಫಲವಾವುದೆಲೆ ಮರುಳೆ ನಿಂನ ವಂಶದೊಳಗಿಪ್ಪತ್ತೊಂದು ತಲೆಯೆನಿಸಿದಾ ॥
ಕುಲವನುದ್ಧರಿಸಲಾ ನನುಗೈವುತಿರಲು ನೀ ।
ನಲಗುಗೊಂಡುಲಿದು ಹಲುಮೊರೆಯಲೇಕಿಂನು ನೀಂ ।
ಹಲವ ಗಳಹದಿರೆಂದು ತಂದೆಯಂ ಧಟ್ಟಿಸಿದಳೆಮ್ಮವ್ವೆ ಪದ್ಮಾವತೀ ॥ ೯೨ ॥

ಬಿಡದಡುವ ಮಡಕೆ ಯುಂಬೊಡೆ, ಕರೆವ ಮೊಲೆ ಹಾಲ ।
ಕುಡಿವೊಡುಸುರೊಡಲಿಂಗೆ ಹಗೆಯಹಡೆ, ಮನೆ ನುಂಗು ।
ವೊಡೆ, ಕೆರೆ ಜಲವನೀಂಟುವೊಡೆ, ಬಯಲು ಬಡಿವಡೋರಂತಿವನ್ಯಾಯಮೆಂ
ಬಡಿದು ಶಿಕ್ಷಿಸಲು ಬಲ್ಲವರುಂಟೆ? ಮಗಳೆ! ಯೆಂ । (ದೂ ॥
ನೊಡಲ್ಗೊಡವೆಗೊಡತಿಯಹ ನೀನ ಭಕ್ತಂಗೆ ಕೂ।
ರ್ತಡೆಗೊಟ್ಟು ನೀಂಕುಲವಪಳಿದೊಡಿಂನಾರ್ಗೆ ದೂರುವೆನೆಂದ ನಾಕೆಯೊ
ಡನೇ ॥ ೯೩ ॥

ನಿನ್ನ ಕುಲವೆಲ್ಲವಂ ಕೆಡಿಸಲೆಳಸುವರ ಕಟ ।
ಮುನ್ನಿನಂತಿರೆನೆ ಕೇಡಿಂಗಲಸಿ ಶೈವಸಂ ।
ಪನ್ನೆಯಾದೇಂ ಕೆಟ್ಟು ನುಡಿಯದಿರದಿಂತಿರ್ಕೆ ಬಿಡದೆ ರಸಮುಂಡ ಲೋಹಾ ॥
ಹೊನ್ನಾದ ಬಳಿಕ ಲೋಹದ ಸಂಗವುಂಟೆ ? ಬಳಿ ।
ಕಿನ್ನು ನೀನಾರು ನಾನಾರು ಸರ್ವಸ್ವಮೆನ ।
ಗೆನ್ನಿನೆಯನಲ್ಲದಿಲ್ಲೆಂದು ನಿರ್ದಾಕ್ಷಿಣ್ಯದಿಂ ತಂದೆಯಂ ಜರಿದಳೊ ॥ ೯೪ ॥

ಹರಸಮಯಮಂ ಹೊಕ್ಕ ತೇಜವೊಂದಧಿಕಸಂ ।
ಬೆರಸಿ ಮಚ್ಛಿದ ದರ್ಪವೆರಡದರ ಮೇಲಿವಳ ।
ಪರಿಭವಿಸಿ ನುಡಿದೆ ನಾದೊಡೆ ಬಿಟ್ಟು ಹೋದಪಳು ಹೋದೊಡೇನೆಂದೊಡಾ
ಪರಿಣಾಮಿಪೊಡೆ ಮತ್ತೆ ಮಕ್ಕಳಿಲ್ಲಂ ತನ್ನ। (ನೂ ॥
ಹರಿದಂತೆ ಹರಿದು ಮನಬಂದಂತೆ ನಡೆದು ಸುಖ ।
ವಿರುತಿಪ್ಪುದೇ ಲಾಭಮೆಂದು ಮನದೊಳು ನೆನೆದು ಮಗಳಕೂಡಿಂತೆಂದನೂ॥
॥ ೯೫ ॥

ಹಿಂದೆ ಕುಲದೊಳಗಿಲ್ಲದಂವಮಂ ಮಾಡಬೇ ।
ಡೆಂದೆನಿದು ನಿನಗೆ ಮುನಿಸಹಡೆ ಬೇಡವ್ವ ಮನ ।
ಬಂದ ದೈವವನರ್ಚಿಸುತ್ತಾದೊಡಂ ಹದುಳವಿರು ಸಾಕು ನಿನ್ನದೆಸೆಯಿಂ ॥
ಕುಂದಾದುದಕ್ಕೆ ನೀನಿಂನು ಮಾಡಲು ಬೇಡು ।
ದೊಂದುಂಟು ಗಂಡನಂ ಬಿಟ್ಟು ಹದುಳೆವ್ಮಿಚ್ಛೆ ।
ಯಿಂದಿರೆಳಸಿದ ತೊಡಿಗೆಗಳ ನೀವೆನೀಗಳೆನೆ ಕೋಪದಿಂ ಮಾಕೊಂಡಳೂ ॥
॥ ೯೬ ॥

ಕರಿಗೆ ಮದ ಮಾಮದಕ್ಕಳಿ ಯಳಿಗೆ ಸರಸಿಜಂ।
ಸರಸಿಜಕ್ಕುದಕಮುದಕಕೆ ಸರೋವರ ।
ಸರೋವರಕೆ ಬನ ಮಾಬನಕೆ ಪುರ ಮಾಪುರಕಧಿಕದೇಶ ಮಂತಾದೇಶಕೇ ॥
ಅರಸ ನರಸಿಂಗೆ ಸಿರಿ ಸಿರಿಗೆ ಜನ ಮಾಜನಕೆ ।
ಹರುಷವೇತೊಡಿಗೆ ಯೆಂತವರಂತಿರೆನಗೆನ್ನ ।
ಪುರುಷನೇ ತೊಡಿಗೆ ನೀಂ ಕೊಡುವತೊಡಿಗೆಯ ನೊಯ್ದು ಸುಡುಹೋಗು
(ಹೋಗೆಂದಳೂ ॥ ೯೭ ॥

ಇಲ್ಲಿಂದ ಮೇಲೆ ನುಡಿದೊಡೆ ನಿನ್ನಮೇಲಾಣೆ ।
ಬಲ್ಲಂತೆ ಹಮಳಿಪ್ಪುದೆನಲಿಂನು ಮುಂನಿನಂ ।
ತಲ್ಲೆನ್ನವಲ್ಲಭನನಿನಿಲ್ಲಿಗೊಡಗೊಂಡುಬಂದೂರೊಳವರಿವರೆನ್ನದೇ ॥
ಎಲ್ಲರರಿವಂತೆನ್ನನಿತ್ತು ಸುಖದಿಂದಿರಿಸಿ ।
ದಲ್ಲದಿರೆನೆನಲು ಕೇಳ್ದಾಪರಿಯಮಾಡಿ ಮನ ।
ದಲ್ಲದ ಮನದೊಳಾದಿಮಯ್ಯನಂ ಮೋಹದಿಂ ಮುಂದಿಟ್ಟುಕೊಂಡಿರ್ದನೂ
॥ ೯೮ ॥

ಎಳಸಿ ಸಿಂಹದ ಮರಿಯ ಸಾಕುವಾನೆಗಳಂತೆ ।॥
ಬೆಳಕಿನಗೆಯುಂ ಸಲಹುತಿಪ್ಪ ಕತ್ತಲೆಯಂತೆ ।॥
ಅಳವಲ್ಲದಿರ್ದುದಕ್ಕಂತಿಂತೆನಲ್ಕವ್ಮದೊಳಗೆ ಪಿಡಿಮಿಡಿಗೊಳುತ್ತಾ ॥
ಕೆಳೆಗೊಂಡ ಪಗೆಯಂತೆ ಚಿತ್ತದೊಳು ಮುನಿಸನುಡಿ ।
ಯೊಳು ನಯಮನಿಟ್ಟು ಮುಂದಿಟ್ಟುಕೊಂಡಿರ್ದರ ।
ಗ್ಗಳಸಿ ಮನೆಯೊಳು ಮನೆಯನಿತ್ತು ಬಿಡದಾದಿಮಯ್ಯನಸತ್ತಿಮಾವಂದಿರೂ
॥ ೯೯ ॥

ಪರಮಸುಖದಿಂದೆ ಪದ್ಮಾವತಿಯಕೂಡೆ ನಾ ।
ಲ್ಕೆರಡು ತಿಂಗಳು ಹದುಳವಾದಯ್ಯನಿರಲಿತ್ತ ।
ಪರಸಮಯಿಗಳ ಕುಲಕೆ ಸೆಕಳ ಬಪ್ಪಂತೆ ಬೇಸಗೆ ಪೊಳೆತು ತಲೆದೋರಿತೂ
ತರುಗಳೆಲೆಯುದರಿದವು ಕೆರೆತೊರೆಗಳಿಂಗಿದವು ।
ಧರೆ ಬೀಟೆಬಿರಿದುದು ಹೊಲಂ ಕರುಕುವರಿಯಿತ್ತು ।
ಗಿರಿ ಸಿಡಿದು ಸೆಕ್ಕೆಹಾರಿದವೆಂದೊಡಿನ್ನುಳಿದ ಜೀವರಂ ಕಂಡರಾರೂ ||೧೦೧||

ಬಿಸಿಲ ಬೇಗೆಯ ಸೋಂಕಿಸಿಂ ಕಾದ ನೆಲನ ಬಿಸಿ ।
ಯುಸುರ ಹೊಯ್ಲಿಂ ಬಾಡಿ ಬಸವಳಿದ ಕುಸುಮಕುಲ ।
ಹೊಸೆದಂತೆ ಕೊರಗಿ ಸ್ವರಿಸದೆ ಜಿಮುರ್ದನಿಯಿಂದನಾದಯ್ಯನಾದಯ್ಯನೂ ||
ಬಸವಲ್ಲದಂಡಲೆವ ಝಳದದರ್ಪವನು ನಂ ।
ದಿಸಲು ನಿಜಸಖರು ಸಹಿತಾ ಜಲಕ್ರೀಡೆಗನು ।
ವಿಸಿ ಪುರದ ಮೂಡಲು ವಿರಾಜಿಸುತ್ತಿರ್ದ ಕೇಳೀವನಕ್ಕೆಯ್ದುವನೂ
|| ೧೦೦ ||

* ವಿರಹಿಗಳ ಚಿತ್ತಮಂ ಸೀಳ್ವ ಕಾಮನ ಕಯ್ಯ ।
ಗರಗಸದ ಕಕ್ಕುಗಳೊ, ಕಂತು ಪ್ರೋಡೆಯುಲು ಮನೀ।
ಶ್ವರಕಠಿಣಮನಕಾಂತು ಧಾರೆಗಳು ಮುರಿದಲಗುಗಳ ಮುಕ್ಕುಗಳ ಬಳ
ಪರಿಮಳದ ಮುಳ್ಳುಮೇಲಿಯೊ, ಎನಿಸಿ ಕಂಟಕೋ। (ಗವ್ರೋ ||
ತ್ಕರಭರಿತಕೇತಕಿಗಳೊಪ್ಪಿದವು ಹೊರಗೆ, ಶಂ ।
ಕರವಿರೋಧಿಯನು ನಡವಿರಿಸಲಮ್ಮದೆ ವನಂ ಪೊರಮಡಿಸಿತೆಂಬಂದದೀ ||
|| ೧೦೨ ||

* ಹಂಗ ಮಗುಚುವೆನೆಂದು ಭೂಮಿ ಕೈಸೀಡಿ ಮೇ।
ಘಂಗಳಿಗೆ ಕೊಡುವಮೃತಕಳಶಸಂಕುಳವೊ ಗಗ।
ನಾಂಗಣದೊಳುರೆ ಸುಳಿವ ವಿದ್ಯಾಧರಾಳಿಗೆ ವಸಂತನಿಟ್ಟರವಟಗೆಯೋ ||
ಇಂಗಡಲ ಕಡೆವ ಕಡೆಯಿಂದ ಹುಟ್ಟಿದ ಪದಾ ।
ರ್ಥಂಗಳಂ ತಮತಮಗೆ ಕೊಂಡೊಯ್ಯುತಿರೆ ಭೂಲ ।
ತಾಂಗಿ ತೆಗೆದೆತ್ತಿಟ್ಟ ರಸಕಳಶವೋ ಎನಸಿ ಪಣ ಚೆಂದೆಂಗೆಸೆದುವೂ||೧೦೩||

ಬೆಳೆವೆತ್ತ ಮದನನರಮನೆ ವಸಂತನ ಬೀಡು ।
ಯೆಳೆಲತೆಗಳಿಕ್ಕೆ ನಾನಾಭೂಜದಾಗರಂ ।
ತಳಿರ ತಾಣಂ ಕುಸುಮಕುಲದ ನೆಲೆ ಫಳನಿಳಯ ಕೋಕಿಲಂಗಳ ಚಾವಡೀ ॥
ಅಳಿಗಳಾಡುಂಬೊಲಂ ಗಿಳಿಗಳೋದುವ ಮಠಂ ।
ಮಲಯಾನಿಲನ ಜನ್ಮಭೂಮಿ ಪುಳಿನಾಕೀರ್ಣ ।
ಕೊಳನ ಹರವರಿ ಸವಿಲ ನಂದನವೆನಿಪ್ಪ ಕೇಳೀವನಂ ಕಣ್ಗೆಸೆದುದೂ ॥೧೧೪॥

ಮಿಸುಪಂಕುರಂ ಕೊನರು ಕೆಂದಳಿರು ಪಲ್ಲವಂ ।
ಪಸುರೆಲೆತಳಿರುಮುಗುಳುನನೆಮೊಗ್ಗೆ ಕುಸುಮಬಿಡ ।
ದೆಸೆವಮಿಡಿಹದರುಹದಬಲಿವಕಾಯ್ದೋರೆವಣ್ಣೆಂಬವಂ ಪಿಡಿದೊರಗುವಾ ॥
ಹೊಸಮಾವು ಜಂಬುಸಿಂಬಂ ಕದಳಿಕುರವಕಪ ।
ನಸುದಾಡಿಮಂ ನಾಳಿಕೇರಪೂಗನೇರಿಲು ।
ಮುಸುಕಿಪೇರಿಳೆಕಿತ್ತಿಳೆಮಾದಲದಿಂದಲಾವನಂ ಕಣ್ಗೆಸೆದುದೂ ॥ ೧೧೫ ॥

* ಎಸೆವ ಲತೆಗಳು ಸತಿಯರಾಕುಸುಮವಿಸರವೇಂ ।
ಮುಸುಕು ತತ್ಫಳ ಕಳಶ ವೆಳೆದಳಿರುಕನ್ನಡಿಗ ।
ಳಸುಗೆಮರವೆಸೆವಝಲ್ಲರಿಗಳುಲಿವರಗಿಳಿಗಳಬ್ಬರಂಡಿಂಡಿಮರವಾ ॥
ಮಿಸುಪನನೆ ಸೇಸೆಯಕ್ಕಿ ಕೋಕಿಲರವಂ ಕಹಳೆ ।
ಮಸಗುವಳಿರವಂಗೀತಮೆಸಲಿದಿರ್ಗೊಂಡರಂ ।
ದೊಸೆದು ವನದೇವಿಯರುಮುಚಿತೋಪಚಾರದಿಂ ಸರರೂಪಮನಸಿಜನನೂ
॥ ೧೧೬ ॥

ಮಡಲಿರಿದು ಹಬ್ಬಿ ಹರಕಲಿಸಿ ಬೆಳೆದೆಳೆಲತೆ ಗ ।
ಳಿಡುಕುರಿಂ ತಳಿತು ಕೆದರಿದ ಹೊದರು ಗೊನೆಗೊಂಬು ।
ಮಿಡಿದಭೂಜಂಗಳಿಂ ತರುಗಿದೆಲೆಮರೆಯೊಳೊಲೆದಾಡುವ ತಮಾಲಂಗಳಿಂ ॥
ಜಡಿವ ಹೊಡೆಯೊತ್ತಿನೊಳು ಬಾಗಿ ತೂಗುವ ।
ಯೆಡೆಗೆಡೆಗಿಡಿದ ತೆಂಗು ಕೌಂಗಿನೊತ್ತೊತ್ತೆಯಿಂ ।
ಹೊಡಕರಿಸಿ ಬೆಳೆದ ಕತ್ತಲೆ ಬೆಳಗ ಕನಸಿನೊಳು ಕಾಣದಂ ತಾವನದೊಳು ॥
॥ ೧೧೭ ॥

ಹೊಸಬನದೊಳಪ್ಪ ಬಲೆಯರ ತೊಡಿಗೆವೆಳಗು ಪೊಂ |
ಬಿಸಿಲಂತಿರಲ್ಕಂಡು ಕಮಲವರಳ್ವವವರ |
ನಸುನಗೆಯ ಬೆಳಗು ಬೆಳುದಿಂಗಳಂತಿರೆ ಕಂಡು ಕುಮುದವರಳುವವಲ್ಲವೇ ||
ಶಶಿರವಿಗಳೆಡೆಯಾಟವಿಲ್ಲವಾವನದಿ ಭಾ |
ವಿಸಲು ರವಿ ಕಾಣದುದ ಕವಿಕಂಡನೆಂಬನುಡಿ |
ಹುಸಿಯಲ್ಲ ಸುಕವಿ ಹಂಪೆಯರಾಘವಾಂಕನದರಿರವ ಬಣ್ಣಿಸಿದನಾಗೀ ||
|| ೧೦೮ ||

ಗಿಳಿಗಳೋದುಘ್ಘಡಣೆ, ಕೋಕಿಲರವಂ ಕಹಳೆ |
ಫಲವಿಡಿದ ಪನಸು ಮದ್ದಳಗ, ಮೊರೆವಳಿಕುಲಂ |
ಬಳಸಿ ತಾರ್ಯೈಪ ಚಿಹಣಿಯರು, ನೆಲಕೊಲೆವಶೋಕೆಯ ತಳಿರು ಹೊಸಜವ
ಬೆಳುಮುಸುಕು ಕುಸುಮ, ಲತೆಗಳುಸತಿಯ ರ್ತ್ಸೆಲೆಯುಲುಹು | (ನಿಕೇ ||
ತಳೆದ ಕಂಸಾಳ, ಮರದೊಲಹು ತಲೆದೂಕ, ನೆರೆ |
ಕಳಲ್ವ ಹಣ್ಣೆಲೆ ಮೆಚ್ಚಿಸಲು ನವಿಲ ನರ್ತನಂ ಸೊಗಸಿದುರ್ದಾವನದೊಳು||
|| ೧೦೯ ||

ಗಿಳಿಗಳರಗಳ ನವಿಲುಸೋಗೆನವಿಲಾಕೊಳಂ |
ತಿಳಿಗೊಳಂ ತುಂಬಿ ಮರಿದುಂಬಿ ಮಾವಿಂಮಾವು |
ಪುಳಿನ ಸೀತಳ ಪುಳಿನ ತೆಂಗು ಚೆಂದೆಂಗು ಕೇದಗೆಯೆಲ್ಲ ಹೊಂಗೇದಗೇ ||
ಸುಳಿವೆಲರು ತಂಬೆಲರು ಕೋಕಿಲಂ ಮತ್ತಕೋ |
ಕಿಳ ಪಲಸು ಬಕ್ಕೆವಲಸೀಳೆ ಕಿತ್ತೀಳೆಯು |
ತ್ಪಳವೆಲ್ಲ ನೀಲೋತ್ಪಳಂ ಹಂಸೆ ರಾಜಹಂಸೆಗಳೆಸೆದವಾವನದಲೀ || ೧೧೦ ||

ಈವನಂಸತಿಯರಿಂಸೋವನಂಕಾವನಿಂ |
ಸಾವನಂವಿರಹದಿಂಜೀವನಂಸಂತಸದಿ |
ಕಾವನಂವಿಗ್ರಹದಿಸೋವನಂಸುಖವನೊಸೆದೀವನಂಸಗುವುದೊಲಿದೂ ||
ಈವನಂಶುಕಪಿಕವಜೀವನಂ ಪಥಿಕಜನ |
ಪಾವನಂಸೌಖ್ಯಸಂಜೀವನಘನೋತ್ತರಣಾ |
ನಾವನೆನಿಸುವವನವಹೊಕ್ಕೀಕ್ಷಿಸುತತುಷ್ಟನಾದನಂದಾದಯ್ಯನೂ
|| ೧೧೧ ||

* ಬಳವದಂಗಜ ನೆಂಬನೇತರವನೆಂದು ವೆ |
ಗ್ಗಳಸುವ ಜಿತೇಂದ್ರಿಯರು ನಿಷ್ಕಾಮಿಗಳು ವ್ರತಿ |
ಗಳೊಳಗಾದವರ್ಕುಸುಮಬಾಣದಂಡಳೆಯೊಳಳವಡಿಪಂತೆ ಮಾಳ್ಪೆವೆಂದೂ ||
ಬಳಸಿ ಗುಂಡಿಗೆಗಳಡಸಿದಮಾಲೆ ರುದ್ರಾಕ್ಷಿ |
ಗಳು ಚಕ್ರಚೇತ್ಕೃತಿ ಮದನಮಂತ್ರವೆಂದೆನಲು |
ಮುಳದು ವನದೇವಿಯರು ಜಪವಮಾಡದೆ ಮಾಣರೆನಿಸಿ ರಾಟಳವೆಸೆದುದೂ||
|| ೧೧೨ ||

* ಜನದಪಂಚೇಂದ್ರಿಯುವ ಸಾಗಿಸುವ ಮಾವತುಳ |
ವನಿತೆಯರು ಸಲಹಿದೆಳೆಲತೆ ಸಕಲಮಂಧ್ಯರಿಡೆ |
ಯೆನಿಪ ಪ್ರೋರಣದ ಮದವಾಳೆಗಳು ಹರಸಿ ಮುತ್ತಿನ ಸೇಸೆಯಿಟ್ಟರೆನಿಪಾ ||
ನಸೆಯಮಲ್ಲಿಗೆ ಮನೋರಾಗ ಮಯುರೊಲ್ದುನೆ |
ಟ್ಟನೆ ಹೊರೆದದಾಡಿಮಂ ವಸುಮತಿಯೆನಿಪ್ಪಕಾ |
ಮಿನಿಬಳಂಗೊಟ್ಟ ಚಂಪಕೆಗಳೊಪ್ಪಂಬೆತ್ತು ಮೆರೆದವಾನಂದದಿಂದಾ ||
|| ೧೧೩ ||

* ಹೃದಯದಿ ಕಳಂಕಿಲ್ಲದೋರಂತೆ ನಾರುಟ್ಟ |
ಉದಕವಂ ಕುಡಿದು ಮಳೆವಿಸಿಲುಚಳಗಾಳಗಳ |
ಕದೆ ವನದೊಳೊಂದೆಡೆಯೊಳದು೯ಕೊಂಬಾಸೆಯಿಲ್ಲದೆ ನೆಲಕ ಹೊರೆಯಾ
ಬದುಕಿ ತಳೆವಾಗಿ ಬೆಳೆದೊಂದು ವಿಡಿದಿದು೯ ತ |　　(ಗದೇ ||
ನ್ನುದಿತ ಫಲಗಳನಾಂತವರಕ್ಕೈಯ ಮೇಲೆ ತಾ |
ಳದೆನೆನ್ನ ನೋಡಿ ಮುನಿಕುಲವೆಂದು ಬುದ್ಧಿವೇಳ್ವಂತೆ ಕದಳಗಳೆಸೆದವೂ ||
|| ೧೧೪ ||

* ಮರುಗ ತೆನೆದೋರೆ ಸುರಗಿಗಳು ಪರಿಮಳಸೆ ಜಾ |
ಜಿಗಳಜಾಣ್ಮೆಗೆ ಭರದೆ ಮುಡಿವಾಳ ಚೆಲುವಿನಿಂ |
ಭರವಸದಿ****ಕರಿಯುಮಲ್ಲಿಗೆಗಳರಳು ತೊಲವಿಂದೆಸೆಯಲೂ ||
ನಿರುತನಿಜವಾಹಿನಿಗೆ ತವರುಮನೆಯೆಂಬಂತೆ|
ವರಸುಧಾಕರನ ಮೋಹರದ ಮನೆಯೆಂದೆನಿಸಿ |
ಕರಿಮಕರನಕ್ರಾಳಪುಷ್ಪಭರಿತದೊಳೆಯ್ದೆ ಬನದ ತಿಂಥಿಣಿಯೆಸೆದುದೂ ||
|| ೧೧೫ ||

* ಎಳೆಯುಪಳುಕಿನ ಸಿಲೆಯೊಳಡಸಿ ಕಟ್ಟಿದಕಟ್ಟು ।
ಗಳಲಿ ದಂಡಾವಳಿಯ ಸೂಸಕದ ಪತ್ರತತಿ ।
ಗಳೊಳೋರಣಂಗೊಳಿಸಿ ಕೇವಣಿಸಿದಮಳನವರತ್ನಂಗಳೊಯ್ಯಾರದಾ ॥
ತಳದೊಳೋವಡೆ ಸುರಿದ ಕಿರುಮುತ್ತುಗಳ ಮಳಲು ।
ಗಳ ತುಂಬಿ ತುಳುಕಾಡುವತುಳನಿರ್ಮಳಜಲಂ ।
ಗಳಮೇಲೆ ಬೆಳೆದನಾನಾಕಮಳಕೈರವದಿನೆಸೆದಮುಮುಕೊಳನಿರ್ದುದೂ ॥
॥ ೧೧೬ ॥

* ಬಸವಳಿದ ಸೆಯ್ದಿಲಂ ಸೋಡಿ ನಗುವಂತರಳ್ವ ।
ಹೊಸಕಮಳಕುಟ್ಮಳದ ಕರ್ನಿಕೆಯ ಕೆಲದಕಿರು ।
ಯೆಸಳಡುಕುರಂಬಗಿದು ಕೇಸರದ ಕುತ್ತುರೊಳುನುಸುಳಿ ನುಸುಳಿ ಪರಾ
ಮಿಸುಪ ರಜದೊಳು ಹೊರಳಿ ಬೆಳದ ಬಂಡೆನಿಪಕೊ । (ಗದಾ ॥
ಗ್ಗಸರೊಳಗೆ ಸಿಲುಕಿ ಜಿನುಗುವ ಮರಿಗೆ ಸೌರಭ್ಯ ।
ರಸದಕುಟುಕಿತ್ತು ಸಾಗಿಸುವ ಬಾಣತಿದುಂಬಿ ಮೆರೆದವಂದಾಕೊಳದೊಳೂ
॥೧೧೭॥

ಬಳಸಿದ ಬಳಲ್ಕೆಯಂ ಶ್ರಮಮಂ ಪಿಪಾಸೆಯಂ ।
ತೊಳೆಯಲ್ಕೆ ಪರಿಣಾಮಮಂ ತುಷ್ಟಿಯಂ ಸುಖವ ।
ಬೆಳೆಯಲ್ಕೆ ನೀರೆರೆಯಲೆಂದು ಮನಸುಂದು ನಡೆತಂದು ಪೂಗೊಳನಹೊಕ್ಕೂ ॥
ನಳಿನದಳದಲಿ ತುಹಿನಜಲವನಾಂತಿಟ್ಟಾಡಿ ।
ಮುಳುಗಾಡಿ ತುಳುಕಾಡಿ ನೆಗೆದು ಮೊಗೆದೀಜಾಡಿ ।
ಪೊಳದಾಡಿ ತಣಿದುತಡಿಯಂಪತ್ತಿದಂ ನಿಖಿಳಸುಖಿಯಾಗಿ ಸುಖರುಸಹಿತಾ ॥
॥ ೧೧೮ ॥

ತಿಳಿಗೊಳನ ಬಳಸಿ ನಳನಳಿಸಿ ಬೆಳೆದೆಳೆಲತೆಯ ।
ತಳಿರ ತಂಣೆಳಲ ಪುಳಿನಸ್ಥಳದ ಮೇಲೆ ಕೆಂ ।
ದಳಿರ ಹಸೆಗಳಲಿ ಕುಳ್ಳಿರ್ದು ನಾನಾಸವ್ಯಫಳಕುಲವನಾರೋಗಿಸೀ ॥
ಕುಳಿರ್ವ ಪರಿಮಳದ ಜಲವೀಂಟ ತಾಂಬೂಲಕರ ।
ತಳನಾಗಿ ನವನಳಿನದಳದಾಲವಟ್ಟಂಗ ।
ಳೊಳೆಲ್ಲರನಾದರಿಸುತಾದಯ್ಯನುಚಿತರಚನಾಳಿಯಿಂದಿರ್ಪ್ಪಗಲೂ ॥ ೧೧೯॥

ನಡೆ ಯುಡುಗಿ ಮೊಗ ಕಂದಿ ಬಾಯ್ಬತ್ತಿ ಕಣ್ಗುಳಿದು ।
ನುಡಿಯುರೆತು ತನುಬಾಡಿ ಬಸುರು ಬೆಂನಂ ಹತ್ತಿ ।
ಪಡಪಡಿಸಿ ತೆಂಡಣಿಸಿ ತರಹರಿಸಿ ತಳ್ಳಂಕಗೊಳುತಡಿಯನಿಡಲಾರದೇ ॥
ಹಿಡಿದ ಕೋಲೂರಿ ಸಿಂವಲ್ಲಲ್ಲಿ ಸುಯ್ಸುಯ್ದು ।
ವೃತಭಕ್ತರ್ಶೈವರು ತಟಾಕದೇರಿಯಮೇಲೆ ।
ನಡೆತರಲು ದೂರದಿಂ ಕಂಡು ದಿಟ್ಟಿಸಿ ನಿಲುಕಿ ನೋಡಿದಂ ಕಣ್ಮುಚ್ಚದೇ ॥
॥ ೧೨೧ ॥

ನಡೆನೋಡಿ ನೋಡಿ ಕಂಗೆಟ್ಟು ಕಲುಮರನಾಗಿ ।
ನಡುಗಿ ಹರಣಂ ಹೊತ್ತಿ ಮನವುರಿದು ತನುಬೆಂದು ।
ಮಿಡುಮಿಡನೆ ಮಿಡುಕಿ ಸುಖಮಂ ಮರೆದು ಕೈಯೆಳೆಯನೀಡಾಡಿ ಭೋಂ
ದುಡುದುಡನೆ ಹರಿದು ತೂಗಾಡುತ್ತ ಬಪ್ಪೊಡೆಯ । (ಕನೆದ್ದು ॥
ರಡಿಗೆರಗಿ ಕೈಗೊಟ್ಟು ಮೆಲ್ಲನೊಬ್ಬೊಬ್ಬರಂ ।
ನಡಸಿತಂದಾರವೆಯ ಕೊಡೆವರನ ತಡಿನೆಳಲ ತಂಪಿನೊಳು ಕುಳ್ಳಿರಿಸಿದಾ ॥
॥ ೧೨೧ ॥

ಕುಳಿರ್ವ ಪರಿಮಳಜಲವನಿತ್ತು ಪದಮಂ ತೊಳೆದು ।
ತಳಿರ ಮೆಲ್ವಾಸಿಕೆಯೊಳಟ್ಟೋವಿ ನವಕಮಲ ।
ದಳದಾಲವಟ್ಟದಿಂ ಬೀಸಿ ತಂಪಂ ಬೀರಿ ಹಂಣುಹಂಪಲುಗಳಿತ್ತೂ ॥
ಬಳಸಿದ ಬಳಲ್ಕೆಯಂ ತೆವರಿ ಪರಿಣಾಮಮಂ ।
ಸಲಿಸಿ ಸುಖವಿರಿಸಿ ನೀವಿಂಗಾವದೇವತಾ ।
ಸ್ಥಲದಿಂದ ಬಂದಿರೆಂದಾತಪಸ್ವಿಗಳನೊಯ್ಯನೆ ಕೇಳ್ದನಾದಯ್ಯನೂ ॥೧೨೩॥
ಕ್ಷೇತ್ರದಿಂ ಬರುತೆ ಬರುತೆಡೆಯೂರ್ಗಳೊಳಗಂನ ।
ದಾತೃಗಳು ದೊರಕದೀರೈದುಪವಾಸದಿಂ ।
ಧಾತುಗೆಟ್ಟರಿಯದೀವ್ಯಾಘ್ರಪುರಮಂ ಪುಗಲು ವ್ಯಾಘ್ರಪುರವಾಮದೆಮಗೇ ॥
ಓತು ನುಡಿಸರು ನುಡಿಸದೇಂಹದುಳವಿರ್ದರೇ ? ।
ಬೂತುಗೆಡದೇಡಿಸಲ್ತೊಡಗಿದರದೇಂಬರಿಯ ।
ಬೂತಾಟವೇಂ ? ನಗರಿಯಿಂ ಪೊರಮಡಿಸಿದರೆಂದಾಡಿದರು ಮನದಳಲನೂ ॥
॥ ೧೨೪ ॥

ಕಡುಹಸಿದು ಹರಿದು ಕಲ್ಲಂ ಕವರಿದಂತೆ, ನೀ ।
ರಡಸಿ ಬರಿಗೆರೆಯ ಹೊಕ್ಕಂತೆ, ಬೆಂಡಾಗಿ ಜೀವ ।
ರಡಸಿ ಬೊಬ್ಬುಳಿಯ ನೆಳಲಂ ಸಾರಿದಂತಾಗಿ, ಸುಯ್ದು ತಳ್ಳಂಕಗೊಂಡೂ ॥
ಮೃಡಭಕ್ತರಂ ಕಾಣದಾಸತ್ತು ಬೇಸತ್ತು ।
ಕಡೆಗೆ ನಿಂನಂ ಕಂಡು ಬದುಕಿದೆವು ಪರಿಣಾಮ ।
ವಡೆದೆವೀಶಂಕರುಣಿಸುತ್ತಿರಲಿ ನಿನಗೆಂದು ಹರಸಿ ಭಸಿತವನಿಟ್ಟರೂ ॥೧೨೪॥

ನಾನಾವಿರೋಧದಿಂ ಬೆಂಡಾದಿರಿಂತೀಗ ।
ಬೋನಮಂ ಮಾಡಹೇಳಿ ಬಹೆ ನೊರ್ನಿಮಿಷಕಾ ।
ಲಾನಬೇಕೆಂದು ಬಿನ್ನೈಸಿ ನಿಜಸಖರನಿಬ್ಬರನವರಹತ್ತಿರಿರಿಸೀ ॥
ಆನಂದದಿಂದ ಬಂದೊಳಪೊಕ್ಕು ತನ್ನ ಕಮ ।
ಲಾನನೆಯ ಕೈವಿಡಿದು ಸರ್ವಸಾಧನಮುಮಂ ।
ನೀನೇ ನಿಮಿರ್ಚ್ಚು ಕಡುವೇಗದಿಂ ದೊಡೆಯರೈವರು ಹಸಿದು ಬಂದರೆನಲೂ ॥೧೨೫॥

ಅಂಗನೆಯ ಸದ್ಗುಣವ ನೇನನೆಂಬೆಂ! ಮಹಾ ।
ಲಿಂಗನೇ ಬಲ್ಲನಿಂತೀಗಳೊಡೆಯರನು ಬಿಜ ।
ಯಂಗೈಸಿ ತನ್ನಿ ಬೇಗದೊಳದರಬೋನತನವೇನೆಂದು ವಲ್ಲಭಂಗೇ ॥
ಕಂಗಳಂ ಸಸಿವೆಳಗನಳಕದಿಂದಳಿಯಂ ಕು ।
ಚಂಗಳಂ ಚಕ್ರಯುಗಮಂ ನಗುವ ತೆರದಿ ನಗು ।
ತಂಗನೆ ಕಡಂಗಿ ಕಳುಹಲ್ಕಿತ್ತ ನಡೆದನತಿಹರ್ಷದಿಂದಾದಯ್ಯನೂ ॥೧೨೬॥

ನಂದನದೊಳಪ್ಪ ಹರಭಕ್ತರಂ ಕರತಪ್ಪೆ ।
ನೆಂದಾದಿಮಯ್ಯನತ್ಯಾನಂದದಿಂಪೋದ ।
ಹಿಂದೆಕೋಪಣದಕಡೆ ಘೋರಮಲಧಾರಿಗಳೆನಿಪ್ಪ ಹಲಬರುಸವಣರೂ ॥
ಬಂದುಸುರಹೊನ್ನೆಯ ಮಹಾಬಸದಿಯುರುಹಂಗೆ ।
ವಂದನಂಗೈದು ಚಾವಡಿಗೆಂದು ಬರೆ ಕಾಣು ।
ತಂದು ಪಾರಿಸಶೆಟ್ಟಿ ತಡೆದನವರೆಲ್ಲರಂ ತನ್ನ ನಿಳಯದ ಚರಿಗೆಗೇ ॥ ೧೨೭ ॥

ಇತ್ತೃದ ಘಳಿಗೆಯಂ ಕಳೆದು ರಸಬಸಿವ ಸವಿ
ದುತ್ತುಗಳ ಲಂಪಟರು ಚರಿಗೆಯಂ ಮಾಡಲು ಬ ।
ರುತ್ತಿರಲು ಸಟ್ಟೆ ಕಂಡಿದಿರೆದ್ದು ಕಾಲ್ದೊಳೆದು ತನ್ನನಿಳಯಕ್ಕೆ ತಂದೂ ॥
ಮೊತ್ತಗೊಳಿಸಲು ಮುನ್ನ ಕೈಕೊಂಡು ಹೋದುದಿ ।
ಪ್ಪತ್ತು ಬಳಿಕುಂಬಹೊತ್ತಿಂಗೆ ಹರಿತಂದುದೈ ।
ವತ್ತಾಗೆ ಮನೆಯೊಡತಿ ಕಂಡು ಸಿಡಿಮಿಡಿಗೊಂಡು ಪತಿಯಕೂಡಿಂತೆಂದಳೂ ॥೧೨೮॥

ಹವಣಿಂಗೆ ಚರಿಗೆಯಂ ಮಾಡಿದೆ ನಿದೀಸೊಂದು ।
ಕವಿದೊಡಿದಕಿನ್ನೆಲ್ಲಿ ತಪ್ಪೆನೆಂದಂಜಿ ನಡು ।
ಗುವಸತಿಗೆ ಪತಿಯೊಂದುಪಾಯವುಂಟೆಲೆ ಹೆದರಬೇಡೆನಲದಾವುದೆನಲೂ ॥
ತವೆ ತಂಗಿ ತಮ್ಮಗೊರವರ್ಗೆಂದು ಬೋನವಂ ।
ಸವೆದಳದ ನೆತ್ತಿ ತಹೆವೆನೆ ಬಳಿಕ್ಕಾಗದೀ ।
ಗವರು ಬಾರದ ಮುನ್ನತರಬೇಹುದೆಂದಿಬ್ಬರುಂ ಹೋದರಾಕೆಯೆಡೆಗೇ ॥ ॥೧೨೯॥

ತಡೆಯದಿಂದೀಗ ನೀಂಸವೆದಿಟ್ಟ ಬೋನವಂ ।
ಕೊಡು ಮಗಳೆ ಬೇಗಮೆನಲೇತಕ್ಕೆ? ಗುರುಗಳಿಗೆ ।
ಕೊಡೆನದೇತಕ್ಕೆ ಕೊಡಲಮ್ಮೆನಂತಾಗಿನೀಂ ಕೊಡಲಮ್ಮದಿರಲೇತಕೇ ॥
ಒಡೆಯರಾರೋಗಿಪುದು ಕೆಟ್ಟಪುದು ಸಾರು ಕೆ ।
ಟ್ಟೊಡೆ ಕೆಡಲಿ ಕೆಟ್ಟೊಡೆಂನಿನೆಯಮುನಿದಪನು ಮುನಿ ।
ದೊಡೆ ಮುನಿಗೆ ನಾವಿರುವೆವೆನೆ ನಿಮ್ಮನೊಯ್ದು ಸುಡು ಸುಡು ಹೋಗು (ಹೋಗೆಂದಳೂ ॥೧೩೦॥

ಆದೊಡಂ ಕೊಡಬೇಕು ಕೊಡೆನುಕೊಡೆನಾಂ ಕೊಂಡು ।
ಹೋದಲ್ಲದಿರನಿಯ್ಯೆನೆಂದು ಬಾಗಿಲೊಳಡ್ಡ ।
ವಾದಪದ್ಮಾವತಿಯ ಸಿಂದುಕಳೆಯಂ ರಾಹುಪಿಡಿವಂತೆತಂದೆಪಿಡಿದೂ ॥
ಆದುದಾಗಲಿ ಕೊಂಡುನಡೆಯೆನಲು ತಾಯೊಳಗೆ ।
ಸೋದಿಸಿ ಸಮಸ್ತ ಬೋನವನೊಯ್ದರಕಟ ಮರು ।
ಳಾದಿರಯ್ಯೋ! ಬೇಡೆನುತ್ತೊರಲಲಕ್ಕಿಯಂ ಕೊಡುವೆವೆನುತೊಯ್ದರಂದೂ॥ ॥೧೩೧॥

ಕೆಸರ ಕೊರತೆಗೆ ಕಸ್ತುರಿಯನ್ನೈದಿಸುವ ತೆರದಿ ।
ಮಸಿಯ ಕೊರತೆಗೆ ಮಾಣಿಕವನು ತಿಪ್ಪೆಯೊಳೊಗುವ ।
ಕಸದಕೊರತೆಗೆ ಪಚ್ಚೆಕರ್ಪುರದ ರಜವನಂಬಿಲದಕೊರತೆಗೆ ಸುಧೆಯನೂ ॥
ಪುಸಿಯಕೊರತೆಗೆ ಸತ್ಯವನು ಕೊಟ್ಟು ಕೆಡಿಸುವಂ ।
ತೆಸಿತಗಳನಣುಗರ್ಗೆ ಸವೆದ ಬೋನವ ತಂಪು ।
ಋಷಿಯರ್ಗೆಕೊಂಡೊಯ್ದರೊಳಗೆ ಪದ್ಮಾವತಿಮಹಾಸಿರೋಷಂಗೊಂಡಳೂ ॥ ೧೩೨ ॥

ಅತಿಪುಣ್ಯತನುವನೊಲಿಸುರೆ ದುರಿತವಪ್ಪಿಗಾ ।
ಹುತಿಗೊಡುವ ದುಷ್ಕರ್ಮಿಯಂತೆ, ಸುಕೃತಾನ್ನಸಂ ।
ತತಿಯ ನಥಮರಿಗಿಕ್ಕಲುಂಡು ತೆರಳದರು ಬಸದಿಗೆಸವಣರತ್ತಲಿತ್ತಾ ॥
ಪಿತಗಳನಭಕ್ತರಂ ಕೊಂಡಾದಮಯ್ಯನಾ ।
ಯತನಕ್ಕೆ ಬಂದೊಳಗೆಪುಗುವಾಗ ಮುಂದೆನಿಜ ।
ಸತಿಕಂಣನೀರಿಂದ ಪಿತನಪಾಪದ ಸಸಿಗೆ ತಳಿವಂತಿರಳುತಿರ್ದಳೂ ॥ ೧೩೩ ॥

ಎತ್ತಣನಿರೋಷ ವರುಸೆಂದೊಡಾಸೀಗಳೊಲ ।
ವೆತ್ತು ಮಾಡಿದ ಮಹಾಬೋನವೆಲ್ಲವ ಸಾಮ ।
ಹೆತ್ತತಾಯ್ತಂದೆಗಳು ಬಲುಪಿಂವಮೂರ್ಖತನದಿಂದಕೊಂಡೊಯ್ದರೆನಲೂ ॥
ಕುತ್ತಿದಂತಾಗಿ ಬೆದಬೆದನೆ ಬೆಂದು ಕಡುಮರು ।
ಗುತ್ತೊತ್ತಲ ಹೊಸೆದುಕೊಳುತಕ್ಕಟಾ ಪಾಪಿಸೀಂ ।
ಸತ್ತಿರ್ದೆಯೋ ನಿಜನಿವಾಸವಂ ಬಿಟ್ಟೆಲ್ಲಿ ಹೋಗಿರ್ದೆ ಹೇಳೆಂದನೂ ॥೧೩೪॥

ಕೊಡೆನೆಂದೆ ಬಿಡೆನೆಂದೆನಲ್ಲೆಂದೆ ಪೊಲ್ಲೆಂದೆ ।
ನಡೆಯೆಂದೆ ಹೋಗೆಂದೆ ನೆನಲೆಂನಮಾತನೊಂ ।
ಪಡಕೆಗೆಣಿಸದೆ ಬಂದು ಕೈವಿಡಿವನೆಮ್ಮಯ್ಯನಮ್ಮವ್ವೆಯೊಳಗೆಹೊಕ್ಕೂ ॥
ಕೆಡುವಿರೊಯ್ಯದಿರೆಂದು ನಾನೊರಲುತಿರಲಿರಲು ।
ಕಡೆಗಣಿಸಿ ಬೋನವಂಕೊಂಡವಕ್ಕಕ್ಕಿಯಂ ।
ಕೊಡುವೆವೆಂದೆನುತ ಹರುಸಲುಗೆಯಿಂದೊಯ್ದರೆನುತಳುತಹೇಳದಳುಪತಿಗೇ ॥ ೧೩೫ ॥

ಇಂತಪ್ಪಸಲುಗೆಯಂ ಮಾಡಿದವರುಂಟೆ?ನಿಜ ।
ಕಾಂತೆಯೆರವುಂಟೆ? ತಲೆಮುಯ್ಯುಂಟೆ? ಸಾಕ್ಷಾತ ।
ಸಂತತಿಗಳಳಿಯೊಳಗೆ ಕಡಸುಂಟೆ?ಕಂಣಸಲಗಂದಿರಿವಸರಸವುಂಟೇ? ॥
ಅಂತಕಾರಿಯ ಭಕ್ತರಾರೋಗಿಪುದು ಕೆಟ್ಟು ।
ದೆಂತುಮಾಡುವೆನಂತುಗೆಯ್ವೆನೆಂತೀಕ್ಷಿಸುವೆ ।
ನೆಂತೆಂದುಚಿಂತಿಸುತ ಕೊಂತವೆದೆಯಲಿ ಮೂಡಿದಂತೆ ಸಂತಾಪಿಸಿದನೂ ॥೧೩೬॥

ನೆನೆದನದಕೇನಾಯ್ತುನೋಡುವಂ ಸರ್ವಗಾ ।
ಧನವನತಿಬೇಗ ಮಾಡೆನೆ ಬೇಡಬೇಡ ಸೂ ।
ರ್ಯನಹೋಕು ಸಾರೆರಾತ್ರಿಯೊಳು ಭೋಜನವಾಗದೆಂದು ತಾಪಸರುನುಡಿ
ಎನಗೇಕೆ ಪಾಪಿಗೀಮಾಟ ಪಾತಕನಸಾ ।　(ಯೇ ॥
ಧನನಿಮಗೆಸಲುವುದೆಯೆನುತ್ತಾರ್ತದಿಂ ತಪ್ರೋ ।
ಧನರತಣಿಪಲುಬೇಗದಿಂ ಹರಿದನಾನವ್ಯಫಲವಿಕ್ರಯದಪಸರಕೇ ॥ ೧೩೭ ॥

ಬಾಳೆಹೇರಿಳೆಕಿತ್ತೀಳೆಪಲಸಿಂಮಾವು ।
ನಾಳಕೇರಂದಾಡಿಮಂನೇರಿಲಾದಿಯಫ ।
ಳಾಳಿಗಳನಿಕ್ಷುದಂಡಂಗಳಂತಂದು ಸುಲಿಸುಲಿದು ಮೆಲಲಿತ್ತುತಣಿಪೀ ॥
ಬೋಳೈಪಿ ತುರುಯೊಂಮೆಯಕ್ಷೀರವಿತ್ತುತಾಂ ।
ಬೂಲಮಂಕೊಟ್ಟೆನ್ನನಂಬಿ ಬಂದಿರಿ ಮುನಿಸ ।
ತಾಳದಿರಿ ಸರ್ವಾಪರಾಧವೆಂನದು ಕರುಣಿಸುವುದೆಂದು ಮೈಯಿಕ್ಕಲೂ ॥೧೩೮॥

ಹೋದರತ್ತಲು ಶರಣರಿತ್ತಜೈನರ ಪುಣ್ಯಾ ॥
ತೀದುದೆಂದಿಳೆಗರುಪುವಂದದಿಂ ಕಮಲಿನಿಯ ।
ಕಾದಲಂ ರಸೆಗಿಳಿದಸವರಪಖ್ಯಾತಿ ಹಬ್ಬುವ ತೆರದಿ ಕಾರ್ಗತ್ತಲೇ ॥
ಬೀದಿವರಿದುದು ಕೋಪದಿಂ ಸಿತ್ಯನೇಮವಸ ।
ನಾದರದೊಳಂತಂತೆ ಮಾಡಿ ಮುಸುಕಿಟ್ಟೊರಗು ।
ಮಾದಯ್ಯನಂವನಿತೆಯಸಾರೋಗಿಸೇಳೆಂದೊಡಿನ್ನೊಲ್ಲೆಹೋಗೆಂದನೂ ॥೧೩೯॥

ಕೆಟ್ಟಸವಣರಕಥದಿಸೆಂನಿನೆಯುಸೂಟಮಂ ।
ಬಿಟ್ಟನಿನ್ನೇಗೈವೆನೆಂದುಲಿದು ಹಲುಬುತ್ತ ।
ಸಟ್ಟರುಳುತಾಯ್ತಂದೆಗಳಗೆಕ್ಕೈನೀಡಿ ಬಸುರಂ ಹೊಸೆದುಕೊಂಬಬಲೆಯಾ ॥
ದಟ್ಟೈಸುತೆದ್ದು ಮನೆಗಯ್ದಿ ಮಂಚದಲಿಮುಸು ।
ಕಿಟ್ಟೊರಗಿದಾದಿಮಯ್ಯನಹೊದ್ದಿ ಹೊರದೊಡೆಯ ।
ತಟ್ಟ ಕರೆದೆಬ್ಬಿಸಿದನಾರೋಗಿಸೇಳೆಂದು ಸಟ್ಟ ಸತ್ಪುರುಷನಂತೇ ॥೧೪೦॥

ಇನ್ನೇತರೂಟ ವೇತರಮೋಹ ವೇತರಿರ ।
ವಿನ್ನೇಕೆ ಜೀವಿಸುವ ಕಕ್ಕುಲಿತೆಯಾಸೆಗಳು ।
ಪನ್ನಗಾಭರಣನಣುಗರು ಹಸಿದು ಬಸವಳಿದು ಬೆಂಡಾಗಿಹೋದರದಕೇ ॥
ಎನ್ನನಾನಳಿಯಲಾರದೊಡಿಂದಿಸೂಟಮಂ ।
ಮನ್ನಿಸಿದರೆಂನೊಡಲುಕೆಡುವುದೇ?ಹೇಳೆಂದು ।
ತನ್ನಳಲನೊಡೆಮನುಡಿದಂಕಂಬನಿಗಳುಗಲುಮನದೊಳಗೆಹಲುಮೊರೆವುತಾ ॥
॥೧೪೧॥

ಹಸಿದು ಭಕ್ತರು ಹೋದ ಮರುಕವ್ರೊ ಬೋನಮಂ ।
ರುಷಿಯರ್ಗೆಕೊಂಡೊಯ್ದು ರೆಂದೆಂಮಮೇಲಣಾ ।
ಬ್ಬಸದಮುನಿಸೋ ಭೋಜನವನೊಲ್ಲದಿಹಕಾರಣದಕಡೆಯಹದನಾವುದೂ ॥
ಹುಸಿಯದುಳ್ಳುದನು ಹೇಳೆಮ್ಮಲ್ಲಿತಪ್ಪಾಗೆ ।
ಸುಸಿನಿರುವೆವೆನಲಿಂನುಹೇಳ್ದೊಡೇನಹುದೆಂದು ।
ಬಿಸಿಗೋಪಮಾವರಿಸುತಾಮಯ್ಯನಿರಲುಮತ್ತಲೆದಲೆದು ಬೆಸಗೊಂಡನೂ
॥೧೪೨॥

ಸಸಿಕಂದಿದೊಡೆ ಸತ್ಯವಾದಿಹುಸಿದೊಡೆ,ದಯಾ ।
ವ್ಯಸನಿ ಕೊಲುವೊಡೆ,ಹೆತ್ತತಾಯ್ ಮುನಿವೊಡುಂಬಮೃತ ।
ವಿಷವಾದೊಡಾಜಬಹುದಲಸುಬಹುದುಂಮಳಸುಬಹುದುಸಜ್ಜನನಲ್ಲದೇ ॥
ಮಸಿಕಂದಿತೆಂದನಾಮಿಕಹುಸಿದನೆಂದುಕ ।
ಲ್ಲುಸುರಿಕ್ಕದೆಂದುಕೋಪಿಸಬಹುದೆ?ದುರ್ನೀತಿ ।
ಹುಸಿ ಯುಸೂಯತೆ ನಿಮಗೆನಿಜನಿಮ್ಮೊಳಗೆ ಗುಣವನರಸುವರು ಮರುಳೆ ॥
(ರೆಂದಾ ॥೧೪೩॥

ಏನೇನನೆಂದು ನಿಂದಿಸಿನುಡಿದೊಡಂ ಕಡೆಗ ।
ನೀನೆಂದುದಲ್ಲೆಮ್ಮ ಮಗಳೆನಿಸಿದವಳದ ।
ಕ್ಕೇನಾದುದದಕೆ ತಕ್ಕುದನಾಡಬಲ್ಲೆನದ ನೀಗಾಡಿ ತೋರಲೇಕೇ ॥
ಆನಿಮಿತ್ತುಪವಾಸವಿದ್ದನೆಂದೆನಗೊಂದು ।
ಹಾನಿಯುಂ ಹೊರಿಸದುಂಟೇಳೆಂದು ಲೋಕವಭಿ ।
ಮಾನಿಯುಂವದಿ ಬೇಡಿಕೊಳುತಿರ್ದೊಡುಂಟೆನುಂಟೆನು ಹೋಗುಹೋಗೆಂ
(ದನೂ ॥ ೧೪೪ ॥

ಮಂನಿಸಿದೊಡುಲಿದು ವೆಗ್ಗಡಿಸಿ ನುಡಿವವ ಮುಂನ ।
ತಂನ ದೇವರನು ತಂದೆಮ್ಮ ಹುಲಿಗೆರೆಯು ಪುರ ।
ಹೊಂನೆಯುಮಹಾಬಸದಿಯೊಳು ನಿಲಿಸಿಬಳಿಕಾನುಮೊದಲಾದಜೈನಕುಲವಾ॥
ಬುಸಂಬಡಿಸಿ ಹಲಕೆಲಂಬರೊಕ್ಕಲ ನೊರಸು ।
ಮಂನಬರ ಮರೆದುಂಣ ನತಿಮೂರ್ಖನೆಂದು ಸಿಡಿ ।
ಗಂನದೊಳು ಕಟಕಿಯೊಳು ಹದಿರೊಳಣಕದೊಳಾದಿಮಯ್ಯನಂನುಡಿದನ
(ವನೂ ॥ ೧೪೫ ॥

ಲೇಸನಾಡಿದೆಯೆಂದಂ ಮಾಡದೊಡೆ ಸಂನ ವಿ ।
ಶ್ವಾಸವೇವುದು ? ಶಿವನಬರವು ನಿನಗಿನಿತುಸಂ ।
ತೋಷವಪ್ಪುದ ಕಂಡು ನಿನಗಳಿಯನೆನಿಸಿ ನೀನೆಂದುದಂ ತರಲಾರದೇ ॥
ಓಸರಿಸಿ ನಿಂದೊಡೆಮ್ಮವರು ನಗರೇ ? ಭಕ್ತಿ ।
ಹೇಸದೇ? ತಂದಲ್ಲದುಂಟೆನೆನಲಳವಡದ ।
ಭಾಷೆಗಳ ನೇರಿಸಿಕೊಳುತ್ತಿರದಿರೆಂದಾದಿಮಯ್ಯನಂ ನುಡಿದನವನೂ ॥
॥ ೧೪೬ ॥

ಪರವನಿತೆಗೆಳಸು ಪರರರ್ಥಮಂ ಸೆಳೆದುಕೋ ।
ಪರದೈವಕೆರಗು ಪರಸಮಯಂಗಳೊಳು ಬೆರಸು ।
ಪರರಜೀವಕ್ಕೆ ಮುನಿ ಯೆಂದೆನಗೆ ಹೇಳ್ದೊಡಾನಾರೆನೆನಬಹುದಲ್ಲದೇ ॥
ಹರನನಿಲ್ಲಿಗೆ ಬರಿಸು ಹರ ದೂಷಕರನೊರಸು ।
ಹರಮತವನುದ್ಧರಿಸು ಹರಸಮಯದೊಳು ಬೆರಸು ।
ಹರಪುರದೊಳವತರಿಸು ಯೆಂದು ನೀನೆನಲೊಲ್ಲೆನೆನಬಹುದೆ ? ಹೇಳೆಂದನೂ॥
॥ ೧೪೭ ॥

ಯುಕ್ತಿಗೆಟ್ಟರಿವಿದಲ್ಲವೆ ಪೇಳರೂಪಸವಿ ।
ಮುಕ್ತನವಾರ್ಗಚೀನನೆಂದು ಹೊಗಳ್ವರಿ ಮತ್ತೆ ।
ಸತ್ತನಂ ತಪ್ಪಂತೆ ತಹೆನೆನಲು ಸಿಂನಿಚ್ಛೆಯೋ ಶಿವನು ಹೇಳೆಂದೆನೇ ॥
ಭಕ್ತಾನುಕಂಪಿ ಭಕ್ತಾರ್ಥಿ ಭಕ್ತಪ್ರೇಮಿ ।
ಭಕ್ತವತ್ಸಲ ಭಕ್ತಸುಲಭ ಭಕ್ತರಬಂಧು ।
ಭಕ್ತದೇಹಿಕನೆಂಬ ಬಿರುದುಳ್ಳ ಶಿವನನಾಂತಹುದರಿದೆ ಹೇಳೆಂದನೂ ॥೧೪೮॥

ಎಂದುತಂದರೆಹುಸಿಯುದೇ ಹೇಳೆನಲು ತಿಂಗ ।
ಳಂದಿಂಗದಾಪೂರದೇವರೆಸೆ ಸೌರಾಷ್ಟ್ರ ।
ಮಂದಿರಸುಖಾಸೀನನನು ತಹೆನು ತಾರದಿರ್ದೊಡೆ ಬಾರನೆಂದಣಕಿಸೀ ॥
ತಂದಲ್ಲದಿಂನುಂಣನುಂಣನಕ್ಕಕ್ಕ ನೀ ।
ನೆಂದಂತೆತರಲಾರೆ ತಾರದಿರಲದಕೇನು ।
ಕುಂದಿಲ್ಲ ಮೇಲಿಂನು ಶಾಸ್ತಿಯೇನೆಂದೊಡೆಂದಾ ಧೀರನಾದಯ್ಯನೂ ॥೧೪೯॥

ಗುರುಮರ್ತ್ಯನೆಂಬವನು ಗುರುಧನವತಿಂಬವನು ।
ಗುರುಮತವಮೀರುವನು ಗುರುಮಂಚವೇರುವನು ।
ಗುರುವಾಕ್ಯವಾದಕನು ಗುರುಚರಿತಶೋಧಕನು ಗುರುವಂದನಾಲಸ್ಯನೂ ॥
ಪರವಸ್ತುಸಾಧಕನು ಪರಸತಿಯವೇಧಕನು ।
ಪರಸಮಯಬೋಧಕನು ಪರಜೀವಬಾಧಕನು ।
ಹರಿದಿಳವನರಕದೊಳಗಿಳವೆ ನೀಶ್ವರನಿಲ್ಲ ದಾಂಬುದೆನಾದೊಡೆನಲೂ ॥೧೫೦॥

ಬೇಕಾದೊಡುಂಣು ಬೇಡದೊಡೆ ಮಾಣೀಶನಂ ।
ತಾಕಡೆಗೆ ತಾರದಿರು ಸುಡಿಸಿ ಸೋಡಿದೆನ್ನೈಸೆ ।
ಕಾಕನಂಮಚ್ಚಿ ಮರುಳಾದಳೀಮಗಳೆಂದು ತನ್ನೊಳಗೆ ತಾನೆಮರುಗೀ ॥
ಸಾಕಿನ್ನು ನಿನ್ನಕೂಡಣತರ್ಕವೆನುತ ಮಾ ।
ಯಾಕಾರಿಹೋಗೆ ಬೆಳಗಹಜಾವ ವಾಗೆ ಧೈ ।
ರ್ಯಾಕೀರ್ಣನಾದಯ್ಯನಂಗನಾಮಣಿ ಹೋಗಿಬಹೆನೆಂದುಬೆಸಗೊಂಡನೂ॥
॥ ೧೫೧ ॥

ಪೋಗಬೇಡೆಂನೆನತಿದೂರ ನೆರವಿಲ್ಲಿದರ ।
ಮೇಗೆಯುಪವಾಸ ಬೇಸಗೆಬಿಸಲು ಘನನಿಂವು ।
ಸಾಗಿಸುವರಿಲ್ಲ ಶಿವನಿಷ್ಕರುಣಿಸಿಮೋರ್ಗಹಿ ಮೇಲೆ ತನ್ನವರೆಂದೊಡೇ ॥
ಕೂಗಿಡಿಸಿ ಕಾಡುವ ನದಕ್ಕೆ ತೆಕ್ಕದಿರಿ ತಲೆ ।
ವಾಗದಿರಿ ಸೋಮಯ್ಯ ಬಾರದೊಡೆ ಬಾರದಿರಿ ।
ಪೋಗಿಯೇ ಕಳೆಯೆಂದಳಾನುನೀಂ ಹೋದೊಡಾನಿಹಪರಿಯ ಕೇಳೆಂದಳೂ॥
॥ ೧೫೨ ॥

ಎಂದು ಸೋಮಯ್ಯನಂಕೊಂಡು ನೀಬರ್ಪೆಬ ।
ಪೆರ್ಗಂದುತನಕುಂಚೊಡೋಲೆಗಳ ತಿರುಪಿದೊಡೆಳಸಿ ।
ವಿಂದೊಡುಟ್ಟಿರ್ದ ವೈಲಿಗೆಗಳೆದೊಡೆಲೆಗಚ್ಚಿದೊಡೆತುರುಬನಳೆದಿಟ್ಟೊಡೇ॥
ತಂವೆತಾಯ್ಗಳ ಕೂಡೆನುಡಿದೊಡೆ ಬಳಿಕ್ಕವೆಂ ।
ನಿಂದಖಳರುಂಟೆ ನಿಂನಂತಪ್ಪಪತಿಯುನಾ ।
ನೆಂದುವುಂ ಕಾಣದಿರಲೆಂದಾಣೆಯಿಟ್ಟುಕೊಂಡಳು ಜಾಣೆ ಪದ್ಮಾವತೀ ॥
॥ ೧೫೩ ॥

ನಿಲಹಾಸವಿರದೆ ಸೋಮಯ್ಯನಂ ತಂದಿಲ್ಲಿ ।
ನಿಲಿಸು ದೂಷಕರ ಮೂವಲಿಸು ತತ್ತವರ ನೊಡೆ ।
ಗಲಸು ಶಿವಸಮಯವಂಗೆಲಿಸು ಭಕ್ತಿಯ ನಿಳೆಗೆ ಕಲಿಸುಪುಣ್ಯಕ್ಕೆನ್ನನೂ ॥
ಸಲಿಸು ಮುಕ್ತ್ಯಂಗನೆಯ ನೊಲಿಸು ಗಣವೃಂದದೊಳು ।
ನೆಲಸು ನಿಜಕೀರ್ತಿಯಂದಿಗ್ಭಿತ್ತಿತನಕಹರ ।
ಕಲಿಸೆಂದುಹರಸಿಸೇಸೆಯ ನಿಕ್ಕಿದಳು ತನ್ನ ವಲ್ಲಭನ ಸಿರಿಮುಡಿಯೊಳು ॥
॥ ೧೫೪ ॥

ಶ್ರೀಮದ್ರಾಘವಾಂಕಕವಿವಿರಚಿತ ಶ್ರೀ ಸೋಮನಾಥ ಚರಿತ್ರೆ
ಯೊಳ್ ದ್ವಿತೀಯ ಸಂಧಿ ಸಮಾಪ್ತಿಮಗಮತ್
ಶ್ರೀ ಶ್ರೀ ಶ್ರೀ

## —ಮೂರನೆಯ ಸಂಧಿ —

ಶ್ರೀ ಸೋಮನಾಥಾಯನಮಃ ||

ಸೂ || ಈಸುಮುನಿಸುವನೆಮ್ಮ ಬಸದಿಯೊಳು ತನ್ನ ಸೋ।
ಮೇಶನಂ ನಿಲಿಸದೇಕುಂಬನೆಂದಣಕಿಸುವ ।
ದೂಷಕರಮೂದಲೆಗೆ ತಂದು ಬಳಿಕುಂಬೆ ನೆನುತಂ ಹೋದನಾ ವಯ್ಯನೂ ||

ವೃಡನ ಕರುಣೋದಯುವ ಬಿನ್ನೈಸುವಂದದಿಂ ।
ದಡಸಿದರುಣೋದಯುದೊಳತ್ತ ಮಾವಂದಿರೆಬೆ ।
ಹಡಿದೆರೆಯೆ ಹಡಿದೆರೆದು ಹಿರಿಯು ಬಸದಿಯು ಜಿನನಕಳೆಬಳಿಕ ನಿಲಲಂಮದೇ||
ನಡೆದು ಹುಲಿಗೆರೆಯಿಂದ ಪೊರಮಡಲು ಪೊರಮಟ್ಟು।
ನಡೆಯೆ ನಡೆದಾದಯ್ಯನಖಿಳಪರಿವಾರಬಳಿ ।
ವಿಡಿದು ಮರುಗುತ್ತ ಳಲುತುಂಮಳಿಸುತೆಯ್ತರಲ್ ನಿಂದವರಿಗಿಂತೆಂದನೂ||೧||

ಈತನಿಂನೇನತಂದಪನೆಂದು ಚಿತ್ತದಲಿ ।
ಧಾತುಗುಂದದಿರಿ ನೀವೆಲ್ಲ ಪದ್ಮಾವತಿಯು ।
ಮಾತ ಮಿಾರದಿರಿ ನಾನೇಗೈದುವುಂಕೊಟ್ಟದಿನವವಧಿಪೊಗದಮುನ್ನಾ ||
ಭೂತೇಶನಂ ತಂದು ನಿಮ್ಮಯುಮನಕ್ಕೆ ಸಂ ।
ಪ್ರೀತಿಯಂ ಮಾಡುವೆಂ ಹೋಗಿ ಮನೆಗೆಂದು ದು ।
ರ್ನೀತಿದೂರಂಕಳುಪಲವರೆಲ್ಲಬಂದೊಡತಿಯಂಸಾರ್ದುಕುಳ್ಳಿರ್ದರೂ ||೨||

ಇಟ್ಟಮುಸುಕಿಳವಸುಯ್ ನಯನದೊಳು ಹೊಳೆಹೊಳೆದು ।
ಬಟ್ಟಾಡುವುದಕ ಗಲ್ಲವಹೊತ್ತ ಕೈ ಬಯಲ ।
ನಿಟ್ಟಸುವಬೆರಗಿಂತುಮಾಡಿತೇದೈವವೆಂಬುಮ್ಮಳಿಕೆ ಕಾಮನೊಡಲಾ ||
ಸುಟ್ಟಾತನಳಲಿಸದೆ ಬಹನೊ ಬಾರನೊ ಯೆಂದು ।
ನಟ್ಟು ಚಿಂತಿಸುವ ಚಿತ್ತದೊಳಾಗಳೋಲಗಂ ।
ಗೊಟ್ಟು ಪದ್ಮಾವತೀದೇವಿ ಯಿರ್ದಳುದುಗುಡಸರದಿಯೊಳುಮುಳುಗಾಡುತಾ
|| ೩ ||

ನೆರೆದ ಮಾಗಿಯ ಕೋಗಿಲೆಯ ತೆರದಿ ಮೌನಗೊಂ।
ಡಿರುಳುದಾವರೆಯಂತೆ ಮೊಗಕಂದಿ ಬೇಸಗೆಯ।
ಮರನಂತೆ ತೊಡಿಗೆಗಳೆದುದಯದಚಕೋರಿಯಂತಾರೋಗಣೆಯನೊಲ್ಲದೇ ॥
ಮರುತನಲ್ಲಾಡದೆಳೆಲತೆಯಂತುಸುರುಮಿಡುಕ ।
ದಿರಲು ಹುಳುಬಿಟ್ಟ ಹುಟ್ಟಿಯ ತೆರದೊಳಂಪಾರಿ।
ತರುಣಿ ವಲ್ಲಭನ ಚಿಂತಾಲಗ್ನಭಗ್ನಮತಿಯಾಗಿರ್ದಳೇವ್ರೊಗಳ್ವೆನೂ ॥ ೪ ॥

ಮಡದಿಯಿಂತಿರಲಿತ್ತಲಾದಯ್ಯನತಿವೇಗ।
ಮೃಡನತಪಾರ್ವೇಶಮನನಾಗಿತೂರ್ಯಮನ ।
ವೆಡೆಗೊಂಡು ಬೆಳೆದೇರಿಯಿದುದಾರಿಯಿದು ಬೆಟ್ಟವಿದು ಘಟ್ಟವಿದು ಹೆಚ್ಚಿದಾ॥
ಅಡವಿಯಿದು ನಗರವಿದು ಹಳ್ಳವಿದು ಕೊಳ್ಳವಿದು ।
ಗಿಡುವಿದೊದವಿದಮರನಿದೆಂಬುದರಿಯದೆದೈವ ।
ನಡೆಸಿದಂದದಿವಾಯುವೇಗದಿಂದನಡೆದುಘೋರಾರಣ್ಯಮಂಪೊಕ್ಕನೂ ॥ ೫ ॥

ಶ್ರೀಗಿರಿಜೆಯರಸುಸೌರಾಷ್ಟ್ರಪತಿಸೋಮನಂ ।
ಬೇಗದಿಂ ತಂದು ಪುಲಿಗೆರೆಯ ಜನನೊಡಲಸಿ।
ಬ್ಬಾಗವಂಮಾಡುವೆಂದೂಷಕಂಗಾನಾಡಿದವಧಿಯಿಂಮುನ್ನವೆಂದೂ ॥
ಹೋಗೆ ವಿಂಧ್ಯಾರಣ್ಯಪಶ್ಚಿಮವನಧಿಮೇರೆ ।
ಯಾಗಿ ಗಗನಂ ಮುಟ್ಟೆ ಹಗಲಿರುಳಭೇದವಾ ।
ರ್ಗೇಗೈದೊಡಂತಿಳಿಯದೆನಿಸಿಕ್ರೂರಮೃಗಂಗಳಿಂಭಯಂಕರವಾದುದೂ ॥ ೬ ॥

ಜಾಲವಾಲಂನೆಲ್ಲಿಕಂನೆಲ್ಲಿಕಡವ್ರೊಡವು ।
ಹಾಲೆಯಂಕೋಲೆದಿಂಡಂತಂಡಸುರನೆರಳಿ ।
ಬೇಲವರುಟಾಳಪುಲುವಿಲುಯೆನಂದಿಚಂದನಕಕ್ಕೆಬಿಕ್ಕೆತರಿಯಾ ॥
ಹೂಲಿಮಾಲಿನಿ ಬಂನಿಹೊಂನೆ ಚನ್ನಂಗಿಕಿ ।
ತ್ತಾಲಹೆಜ್ಜಾಲಹೆದ್ದುಂಬೆಯೌದುಂಬುರಿಂ ।
ಗಾಲಯವೆನಿಪ್ಪ ನಾನಾಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದೂ ॥ ೭ ॥

* ಸಲೆಶಿವಮಯಂ ಶಿವಮಯಂ ಶಿವಮಯಂ ಸಮು ।
ಜ್ವಲ ಶಿಖಿಮಯಂ ಶಿಖಿಮಯಂ ಶಿಖಿಮಯಂ ನಿರಾ ।
ಕುಲ ಶುಕಮಯಂ ಶುಕಮಯಂ ಶುಕಮಯಂ ಗಿರಿಯುಸಾನು ವಿಂದೊಸ
ಜಲಹರಿಮಯಂ ಹರಿಮಯಂ ಹರಿಮಯಂ ಮೃಗಾ । (ದುರ್ಗಪರಿವಾ
ಕುಲಮಧುಮಯಂ ಮಧುಮಯಂ ಮಧುಮಯಂ ಶಬರ ।
ಬಲಬಾಣಮಯ ಬಾಣಮಯ ಬಾಣಮಯುವಾಗಿಕಾನನಂ ಕಣ್ಗೆಸೆದುದು
|| ೮

* ದೇವಸಭೆಯಂತೆ ಮುನಿಸಭೆಯಂತೆ ಸುಗ್ರೀವ ।
ಜೀವಿಯಂದದಿ ಕೌಶಿಕಾವೇಷ್ಟಿತಂ ಪಾಂಡ ।
ವಾವಾಸದಂತೆ ಲೋಚನದಂತೆ ಬೆಳದಿಂಗಳಂತರ್ಜುನಾಡಂಬರಂ ||
ಓವಿ ಸುರಸಭೆಯಂತೆ ಮದದಂತಿಯಂತೆ ಮೇ ।
ಘಾವಳಿಗಳಂತೆ ವೃಂದಾರಕೋಂನತಮಂತು ।
ಭಾವಿಸುವೊಡರಿದೆಸಿಸಿತತಿಭೀಕರಾಕಾರದಿಂದ ಘೋರಾರಣ್ಯವೊ || ೯

* ಕಾರೊಡಲು ಮೊಗವಡರ್ದಕಿರುರೋಮ ಕೆಂಗಲಿಪ |
ತೋರಗಣ್ ಕೆಂಮೀಸೆ ಗುಜುರುವಲೆ ಬೆಳೆದಕಾ ।
ಳೋರಗನನೇಳಿಸುವತೋಳ್ಕಾರಿ ಹೊಡೆಹೊಡೆದು ಹುಂಣಮೆಗ್ಗಣಕ್ಕೆಪೊಡೇ।
ಪೇರುರಂ ಕಿರಿಯನಡು ಕೊಬ್ಬಿದ ಹೆಗಲು ಪಿಡಿದ ।
ಕೂರಂಬು ದೀರ್ಘಧನುವೆರಸಿ ನೆರೆವರುವನದ।
ಮಾರಿಗಳೆನಿಪ್ಪ ಶಬರಾಧಿಪರಕಣ್ಬೆಳಗುಕಾಂತಿ ದೆಸೆಯಂಮುಸುಕಲೂ ||
|| ೧೦ ||

* ಹರನಂತೆ ಕಾನನಾಂತಕರದ್ರಿಯಂತೆ ಕುಧ |
ರರು ದಿವಿಜರಂತಿರೆ ವಿಶೇಷಭುಕ್ತರು ಶೀತ ।
ಕರನಂತೆ ದೋಷಿಗಳು ಧರ್ಮದಂತೆ ವಿನಾಶರಿಸನಂತಿರಪದಸ್ಥರೂ ||
ಹರಿಯಂತೆ ವನವಾಸಿಗಳು ದಶಗ್ರೀವನಂ ।
ತಿರಲನಿಮಿಷಾದಿಗಳು ಚಾರುಮಂಗಳನಂತೆ ।
ವರಕುಜಾತರುಗಳೆನಿಸುವ ಕಿರಾತರ ತಂಡಮಂಕಂಡನಾದಯ್ಯನೂ. || ೧೧ ||

* ಹರಿಣದಲ್ಲಣನೆಂಬ ಪುಲಿಬಾಕನೆಂಬ ಸೂ ।
ಕರಮೃತ್ಯುವೆಂಬ ಸಾರಂಗಮರ್ದನನೆಂಬ ।
ಮರೆಮಾರಿಯೆಂಬ ಕಾಡ್ಗೋಣಕಂಟಕನೆಂಬಭಲ್ಲೂಕಮಲ್ಲನೆಂಬಾ ॥
ಕರಿಸಿಂಹನೆಂಬ ಸಿಂಹಪ್ರಕರಶರಭನೆಂ ।
ಬರಿಶರಭಚಯಚಂಡಭೇರುಂಡನೆಂದೆಂಬ ।
ಪರಿಪರಿಯ ಬಿರುದುಬಾವುಲಿಯುಕುನ್ನಿಗಳ ನೋಡುತನಡೆದ ನಾದಯ್ಯನೂ॥ ॥ ೧೨ ॥

* ತಡಿಕೆವಲೆತಟ್ಟಿವಲೆ ಹಾಸುವಲೆಬೀಸುವಲೆ ।
ಕೊಡತಿವಲೆಕೊಕ್ಕವಲೆತಳ್ಳಿವಲೆಬಳ್ಳಿವಲೆ ।
ತೊಡಕುವಲೆ ತೋರುವಲೆತೋಟವಲೆ ಗೂಟವಲೆ ಕಣ್ಣಿವಲೆಕಾಲುವಲೆಯಾ॥
ಸಿಡುಕುವಲೆ ಸಿಲುಕುವಲೆ ಹಾರುವಲೆ ಜಾರುವಲೆ ।
ಬಡಿಗೆವಲೆಬಾಚುವಲೆಗಾಡವಲೆಗೂಢವಲೆ ।
ಹುಡಿಕೆವಲೆವಂದಾಸುವಲೆಯುಪೂರೆಗಳವೊತ್ತುವಂಕಂಡನಾದಯ್ಯನೂ ॥ ೧೩ ॥

* ತಡಿಕೆವಲೆ ಗಳೆಗಣ್ಣ ಕೂಳಬಿಲುಸರಳುನಾಯ್ ।
ಸಿಡಿಗನೆರೆವಡ್ಡಿ ಬೇಳಾರ್ಪಟಂ ತೋರೆತ್ತು ।
ಹಿಡಿಯೆರಳೆ ಸಿಂಗಗಟ್ಟಿಗೆ ಬೀಸುಗಣ್ಣಿಗುಗ್ಗರಿಯರಳು ಕಾಜುಸುರಗೀ ॥
ಕೊಡಲಿ ಕರವತಿಗೆ ಕೂರುಳೆ ಕವಡೆ ದಂಡೆ ಕೈ ।
ಪೂಡೆಯಿಟ್ಟಿಗೂಡುಗಳು ಕತ್ತಿಬಡಿಕೋಲ್ಕಲ್ಲಿ ।
ಹಿಡಿದ ಪುಲಿ ಶರಭಭೇರುಂಡ ಸಿಂಹಪ್ರಕರವೆರಸಿನಡೆವರಕಂಡನೂ ॥ ೧೪ ॥

ಮಿಕ್ಕಸರುವಿಂಗೆದರುವಿಂಗೆ ಹಳ್ಳಕ್ಕೆ ಕೊ ।
ಳ್ಳಕ್ಕೆಗಿಡುವಿಂಗೆಮಡುವಿಂಗೆಬೆಟ್ಟಕ್ಕೆಘ ।
ಟ್ಟಕ್ಕೆಕುತ್ತುರುಕೋಣೆಗಿಡುಕುರಿಂಗಿಡಿದ ಮೆಳೆಮೆಳೆಗೆ ನಡುವಾನಲಿಂಗೇ ॥
ತೆಕ್ಕೆಗತ್ತಲೆಗತಿಕ್ರೂರತರನಾನಾಮೃ ।
ಗಕ್ಕೆ ನಾನಾಧ್ವನಿಗೆ ನಾನಾಭಯಂಕರ ।
ಕ್ಕಿಕ್ಕೆವನೆಯಾನೆಂದು ಬೊಬ್ಬಿಟ್ಟುಸೇಳ್ವಂತೆ ಕಾನನಂ ಘೀಳಿಟ್ಟುದೂ ॥೧೫॥

ಎರೆಯಗುಂಡಿಗೆಗ್ಗಾಳೆಕೂಳೆಬಲೆಯರೆಮಸೆದ ।
ಸರಳಮೂಡಿಗೆತಡಿಕೆಗಳೆಬೀಸುಗಂಣೆಹಿಡಿ ।
ಯರಳೆಬೆಳ್ವಾರ್ಪಟಂ ಹಿಡಿನಾಯಿ ಗಳು ಹೆಗಲಸಾಳುವಂಬಾಡಿಯಹುಲೀ ॥
ಸುರಗಿಹಾರುವಸಿಂಗಿಹಿಡಿದಬಡಿಕೋಲೀಟ ।
ಮರವಿಲುಗಳೆಕ್ಕವಡೆ ತೋರಿತ್ತುಗೂಡುಗಳ ।
ಪರಿಪರಿಯಹಕ್ಕಿವೆರಸಡವಿಗಂತಕರಂತೆ ನಡೆವಶಬರರಕಂಡನೂ ॥ ೧೬ ॥

ಎರಳೆ ಸರಳಿಸಿ ಹಾದುದಿಲ್ಲಿ, ಹಿಂಗಾಲೊದೆದು ।
ತೆರಳ್ದಮಣ್ಣಿದೆ ಸೊಕ್ಕಿದೆಕ್ಕಲಂಗಳು ಹೋದ ।
ವೆರಡುಕಟವಾಯಿಂದ ಸುರಿದ ನೊರೆಯಿದೆ, ಕರಡಿತಣಿದಾಡಿಹೋದುದಿಲ್ಲೀ ॥
ನೆರದಿರುಹೆಗಳ ಹೀರಲೊಡೆದಹುತ್ತವಿದೆ, ಹುಲಿ ।
ಮರೆಯನೆಳೆಯಿತ್ತಿಲ್ಲಿ, ಬಿಸಿನೆತ್ತರಿದ್ದುದೆಂ ।
ದಿರದೆರಗಿಹೆಜ್ಜೆಯಂ ನೋಡಿಬೆಂಬಳಿವಿಡಿದು ಹರಿವಶಬರರಕಂಡನೂ ॥ ೧೭ ॥

ಹರದುನಡೆ, ಬಲೆಯಹಸುರಿಸು, ಹೆಜ್ಜೆಯಂನೋಡು, ।
ಸರುಹಕಟ್ಟುಲುಹನಾಲಿಸು, ಕುತ್ತುರಂಸೋವಿ ।
ಸೆರೆಗೆದರು ಬೆಳ್ವಾರಬಿಗಿತೋಹಿನೊಳುನಿಲ್ಲು, ತಿರಿಯಂಬುವಿಡಿ, ನಾಯ್ಗಳ ॥
ಕೊರಳಹಾಸದ ನೇಣಸುಡಿಲವಿಡು, ಸನ್ನೆಗಯ್, ।
ಮರನೇರು, ಬೇಗಕುಳಿಯೊಳು ಕುನ್ನಿಯಂಹೊಗಿಸು, ।
ಚರಿತವೆಂದೊಬ್ಬರೊಬ್ಬರ ನಾಡುವಬ್ಬರದಬೊಬ್ಬೆಯದ್ಭುತವಾದುದೂ ॥೧೮॥

ತೆರೆಯಸರಳಿಸುವೆರಳೆ, ಬಲುನಾಯಬಾಯಿಂದ ।
ಮುರುಚಿಕೊಂಡೋಡುವ ಮೊಲಂ, ತೋಹುಕಾರರಂ ।
ಹರಿದೆರಗಿ ಕೊಲುವ ಕೋಣಂ, ಗುಳಿಗೆಬಾರದಳಲಿಸುವಕರಿ, ಸೆರೆನಾಂಟಿದ ॥
ಸರಳೊರಸಿ ಹೋದ ಮರೆ, ಹೊಕ್ಕಜಾಯಿಲನಕಿ ।
ಬ್ಬರಿಗೊರೆವ ಹಂದಿ, ಬಲೆಯಂ ಹುಗದಹಕ್ಕಿಯ ।
ಬ್ಬರವಕಂಡತಿನೊಂದು ಮೊಸಗಡಿದಾಬೇಡವಡೆಯೊಡೆಯನಿಂತೆಂದನೂ॥೧೯॥

ಎತೆಗೊಡದು ಬೇಂಟೆ ದಿಗುಬಂಧನವ ಮಾಡು ಕಾ ।
ಡೊಡೆಯನಂ ನೋಸು ಸೊಕ್ಕಿನ ಧೂಮಮಂ ಬೀಸು ।
ನಡೆ ಕೋಣನೆಲುವಮುರಿವೆಂ ಮರೆಯಮೂಳೆಯಂ ಕೊರೆವೆನಳಲಿಸುವೆರಳೆ
ಅಡಗನುಗಿವೆನು ಸೊಕ್ಕಿದೆಕ್ಕಲನ ರಕ್ತವಂ । (ಯಾ ॥
ಕುಡಿದೀಯರಣ್ಯವೆಲ್ಲಂ ದಣಿಯಬೇಕು ಬಿಡು ।
ಬಿಡೆನುತ್ತಸಾಳುವಂಗಳನನಂತವಂಬಿಡಿಸಿದಂಟೊಪ್ಪಿಗೆಯನುಗಿದೂ ॥ ೨೦ ॥

* ನಡೆವ ದನಿ ಹರಿವ ದನಿ ನುಡಿವ ದನಿ ಬಿಲ್ಲಜೇ ।
ವಡೆವ ದನಿ ಯೆಸುವ ದನಿ ಬಯ್ವದನಿ ಕೂಗಿಬೊ ।
ಬ್ಬಿಡುವ ದನಿ ಯಿರಿವದನಿಮುರಿವದನಿತರಿವದನಿ ಬೇಗೆಯೆಂಸುತ್ತಿಮುರಿವಾ ॥
ತುಡುಕುದನಿ ತಿತ್ತಿರಿಯದನಿ ಹರೆಯ ದನಿ ಸನ್ನೆ ।
ಗೊಡುವದನಿ ಖಗಮೃಗದ ಗರ್ಜನೆಯದನಿಯೊರಲಿ।
ಕೆಡೆವದನಿಗಳ್ಬೆರಸಿಬೆಳೆದ ಘೋರಾರಣ್ಯವತಿಭಯಂಕರವಾದುದೂ ॥ ೨೧ ॥

* ನೆಗೆದವೊಗ ಹಿಡಿದುಸುರು ಹುರಿಯೊಡೆದ ರೋಮ ನಸು ।
ಮುಗಿದ ಕಂಣರೆಗಚ್ಚಿದೆಳೆಗರಿಕೆ ಮರೆವ ಮೈ ।
ಬಿಗುಹುಗೆಟ್ಟಳ್ಳೆ ಡೆಂಡಣಿಸುವಡಿ ಯಾಲಿಸುತ್ತಿಳಲ್ವ ಕಿವಿ ರಾಗರಸದಾ ॥
ಸೊಗಸನಪ್ಪಿದ ಚಿತ್ತ ವಳ್ಳಿರಿವ ಜನದ ಬೊ ।
ಬ್ಬೆಗೆ ಹೆದರುತಿಪ್ಪಮನ ವೆರಸಿ ಮರುಳಾಗಿ ಗೋ ।
ರಿಗೆ ಸಿಕ್ಕಿ ದೆರಳೆಗಳನಕಟಕಟನಿಷ್ಕರುಣ ಲುಬ್ಧಕರು ಕೆಡೆಯೆಚ್ಚರೂ
॥ ೨೨ ॥

* ಗೋರಿವೇಂಟೆಯನಾಡಿಲುಬ್ಧಕರು ತಿರುಗಿಕಾಂ ।
ತಾರದೊಳುಮೃಗವ ನೆಳೆಗೊಳಿಸಿಮೋಘಾಳಿಯೊಳು ।
ದೂರದಿಂತೋರೆತ್ತನೊಡ್ಡಿಕ್ಕಿಗಾಳಿಯೊಳು ಭಂಡಿಯಿಂದಿಳುಹಿಹುಲಿಯಾ ॥
ಆರ್ದೈದು ತಳೆದಡವಿ ತೋರಿ ಹಾಸವ ತಿವಿದೊ ।
ಡಾರ್ದೈದು ಕಂಡು ಹಸರಿಸಿ ಹಣುಗಿ ತಗ್ಗಿ ನೆಲ ।
ಕೋರಂತೆಯಡಗಿ ತನ್ನಸುವಿನಳಸಿಗೆ ಜುಣುಗಿಸಡೆದಬಳಿಕೇಗೈದುದೂ ॥ ೨೩ ॥

* ಕುಸಿದ ತಲೆ ಹಣುಗಿದೊಡಲರಳ್ವ ಬಾಯ್ ಸುಗಿದಕಿವಿ ।
ಯುಸುರಿಡದ ಮೂಗು ಮರೆದೆವೆಯೊಕ್ಕದುರಿಗಣ್ಣು ।
ಬಸುರೊಳಡಗಿದಬೆನ್ನು ನಿಮಿರ್ದಕೊರಲಡಿಗಡಿಗೆ ಗಡಬಡಿಸುತಿಹಮುಂದಡೀ ||
ಎಸೆಯೆ ಲಂಘಿಸಿ ನೆಲನನೊದೆದು ಪುಟನೆಗೆದು ಘ ।
ರ್ಜಿಸುತ ಬರೆ ಹೆದರಿ ಕಂಗೆಟ್ಟು ಡೆಂಡಣಿಸಿ ಸರ ।
ಳಿಸುವಹರಿಣಂಗಳಂಸೋಡಿ ಮುರಿದಾಡಿಕೆಡಹಿದವು ದೀಹದಹುಲಿಗಳೂ
|| ೨೪ ||

* ಹುಲಿಯಬೇಂಟೆಯನಾಡಿ ತಿರುಗಿ ನಡೆವಾಗ ಮುಂ ।
ದೆಲೆಲೆ ಗರ್ಜಿಸಿ ಗಜರಿ ಧೀಂಕಿಟ್ಟು ಮುಟ್ಟುವತಿ ।
ಬಳಸಿಂಹ್ಮಮಂ ಕಂಡು ಕಣ್ಮುಚ್ಚಿ ನೆರೆತಗ್ಗಿ ತಲೆಗುತ್ತಿಯಂಡುಗೊಂಡೂ ||
ನೆಲಕಾಸೆ ಸುಂಡಿಲಂ ಹರಹಿ ಪೊಳಕಾಲಿಕ್ಕಿ ।
ಬಲವಳಿದು ಘೀಳಿಟ್ಟು ಬೆಂನುಡುಗಿ ಗೂಡುಗೊಂ ।
ಡಲುಗಲಮ್ಮದೆ ಸುಕ್ಕಿಸುಗಿದುಮದವಳಿದುಮಾನೆಗಳ್ಬಳಕೇವ್ರೊಗಳ್ವನೂ
|| ೨೫ ||

* ಅಡಿಸಿಲುಕಿ ಹತ್ತಿದೊಡಲೆತ್ತಿದ ಕೊರಳ್ಕದರಿ ।
ಜಡಿವ ಕೇಸರ ನಟ್ಟಕಿವಿ ಬಿಟ್ಟಕಣ್ ಸೆಗೆದ ।
ಕುಡಿವಾಲ ಬಾಗಿಮುರಿದೌಡಿಕೆಡಹುವ ಮೊಗಂ ಬಗಿದುಬಾದಣದಂದದಾ ||
ತೊಡೆ ಕಾಲಹೀರಿ ಹಿಂಡುವ ಕಂಠ ಹೂಂಕರಿಸಿ ।
ಹೊಡೆದೆತ್ತಿ ಮೆರೆದು ತೋರುವ ಮುಂದಣಡಿ ಕೈಯ ।
ಕಡೆಯನಾಂಕಿವ ಹಿಂದಣಡಿ ಮೆರೆಯೆ ಕರಿಗಳಂ ಕೆಡಹಿದವು ಸಿಂಹ್ಮಂಗಳೂ
|| ೨೬ ||

* ಮಿಕ್ಕಪಚ್ಚಳಕೆತ್ತಿ ಮೆಯ್ನುಮಿರಿ ಗುಗ್ಗುರಿಸಿ ।
ಹೊಕ್ಕುಳಲ್ಲಡೆ ಮುಂಬಲ್ಲನೊರೆಯುಗಲದಂ ।
ನೆಕ್ಕಿಮಾಸಿಸಿ ಲೊಳೆಬೀಳೆ ಮೂಗಂಸುಗಿದು ನೆಗಹಿಪಿಚಕಕ್ಕೆ ಮುಸುಡಾ ||
ಇಕ್ಕಿಕವಿ ದೇಳೆಕಣ್ಣಾರೆ ಮುಚ್ಚಿ ನೆಗೆದು ಮೇ ।
ಲಿಕ್ಕಿ ದನಿಗುಡುತ ಲಂಘಿಸುತ ಕಾಡೆಮ್ಮೆಗಳ ।
ತೆಕೆಯೊಳು ಕೊಣನಿರೆ ಕಂಡು ಶಬರಿಯರು ಬೊಬ್ಬಿಟ್ಟುಮಗುಳ್ದಲಿಸು
(ತಲೀ || ೨೭ ||

* ದಿಟ್ಟಿಸುವಕರ್ಣ ನಟ್ಟಕಿವಿ ಮರಳ್ದಮುಸುಡು ಸುರು |
ಕಿಟ್ಟು ಘುರುಘುರಿಪ ಮೂಗಲಗದಂಗಂ ಸೆಲನ |
ತಟ್ಟಬೆರಟುವ ಪದಂ ನೆಗೆದಳ್ಳೆ ಬೆನ್ನಡರ್ದಬಾಲದಿಂರೌದ್ರಕೋಪಾ ||
ಪುಟ್ಟೆ ಕೋಡಂ ಜಡಿದು ತನುವ ಝಾಡಿಸಿ ಹಿಂಡ |
ಬಿಟ್ಟು ರೋಂಕಿಟ್ಟು ಹರಿಯಿತ್ತು ಕಾನನದೊಳರೆ |
ಯಟ್ಟವನದುರ್ಗಿಯಡೆಗೈದೆ ಹರಿದಿಡುವ ಮಹಿಷಾಸುರನನದು ಪೋಲ್ತುದೂ || ೨೮ ||

* ಕಡಗಿಕೈಕೊಂಡಟ್ಟು ಮುಟ್ಟೆ ಬರೆ ತಂಮೊಳೂ |
ಗ್ಗಡಿಸು ಬಿಲುಪ್ರೊಯ್ದು ತೆಗೆನೆರೆದುಕಾಕಿಲಿರಿದುಕೆಡೆ |
ಕೆಡೆಯೆನುತ್ತೀರ್ಣ್ದ ಸೆಗಳಂದೆಚ್ಚ ಶಬರಿ ಕೂರ್ಗಣೆಗಳಂದೊಡಲನೊಡೆವೂ ||
ಅಡಸಿತುರುಗಿರೆ ಹೆಚ್ಚಿ ದೆಯ್ಯೆ ಮೃಗದಂತಿರ್ದ |
ಸಿಡುಕೋಣನಂ ನೋಡುತಾದಯ್ಯೆ ಬರೆಮುಂದ |
ಣಡವಿಯೊಳು ಸಾಳುವಂಗಳನುಖಗವೇಂಟೆಗಾಲಂಬ್ಯಕರು ಬಿಡುತಿರ್ದರೂ || ೨೯ ||

* ಮರವಿಡಿದು ಶಬರನಿಕರಂ ಕೊರಳ ಗಹಗಹಿಕೆ |
ಮೊರೆಯೆ ಲಾವುಗೆ ಹರಡೆ ಗೌಜು ಟಿಟ್ಟಿಭ ಕಾಕಿಲು |
ತುರುವೆ ಕಳಹಂಸೆಶುಕ ಪಾರಿವದ ದನಿಗಳಂದೊದರಿತಾವ್ ಕರವೃತಿರಲು ||
ತುರುಗಿ ಮಂಡಳಸಿ ನಭದೊಳು ಖಗನಿಕರಬಿ |
ದ್ದೊರಲಿ ಕೊಲಲುಳದೋಡೆ ಯುವಕಂಡು ಸಾಳ್ವಂಗ |
ಳೆರಕೆಗಳನೀವಿಸರಪಳ ಬಿಟ್ಟುಟೊಪ್ಪಿಗೆಯನುಗಿದಿಡಲ್ಕೇನಾದುದೂ || ೩೦ ||

ಕಾಗೆ ನವಿಲಿಬ್ಬಾಯು ಗುಬ್ಬಿ ಪಾರಿವ ಕೊಂಚೆ |
ಗೂಗೆ ಗುಗಿಲಿರಿವಗಂಟೆಗ ಕಿರುಬ ಗೊರವ ಗಿಣಿ |
ಜಾಗರಿಗ ಹರಡೆ ಹಸುಬಂ ಪಿಸುಣಹೆಬ್ಬಕ್ಕಿಗಿಡುಗಹೊರಸೋರೆಶಕುನೀ ||
ಮೂಗನುರಿಗಂಣಚಾಳಕ್ಕಿ ಬೆಳ್ಳಕ್ಕಿಯುಂ |
ಬೂಗಹದ್ದೆಂಬಿವಂ ಸಾಳುವಂಗಳು ನೆಗೆದು |
ತಾಗಿ ಹೊಡೆಹೊಡೆದಿಕ್ಕೆ ಹಕ್ಕಿಗಳ ಮಳೆ ಕರೆದ ತೆರನಾದುದಡವಿಯೊಳಗೇ || ೩೧ ||

ಹಿಡಿನವಿಲ ಸಿರಿಪುಲಿಯು ನಟ್ಟುಮರೆವಿಂಡ ದರಿ ।
ಗೆಡಹುಕರಿಯುನು ರೊಪ್ಪವಿಡಿದ ಹಂದಿಗೆ ತಡವಿ ।
ಬಿಡುನಾಯುನೆಚ್ಚಿರಳೆಯು ಕಲ್ಲಿಯಲಿಕ್ಕ್ಕಕೋಣನ ನೋಡುಹೋಗಗುಡದೇ॥
ಹೊಡೆಯುಡುವ ಮರವಿಡಿದು ಕುತ್ತು ಕೋಣನನೋಯು ।
ಲಿಡು ಮೊಲನಮುರಚು ಸಿಂಹವ ಪಲವು ಬಲೆಗೆದರಿ ।
ನಡೆಗೆಡಿಸು ಹಕ್ಕಿಗಳ ನೆಂಬ ಬೇಡರ ಬೊಬ್ಬೆಯಿಂದಡವಿ ಘೀಳಟ್ಟುದೂ ॥೩೨॥

ನೆರೆದೊಡಟ್ಟುವ ಹೊಕ್ಕೊಡಂಡಿಸುವ ಮುರಿದೊಡಂ ।
ಮುರಿವ ಬೊಬ್ಬಿಟ್ಟೊಡುಬ್ಬೇಳ್ವ ಬೆರಸಿವನಾಯು ।
ನೆರಡು ಕಡಿಗಳೆವ ಕವಿದೆಚ್ಚಂಬ ಟೊಣೆವರೊಪ್ಪದೆಮಲಗಿದಾಡೆಗಡಿವಾ ॥
ಹರಿದಿಟ್ಟೊಡಾದಿಗೊಂಡೊಳಪೊಕ್ಕುತಿವಿದವನ ।
ಶಿರತನಕ್ಕೆತ್ತುವ ಮುಗುಳ್ದರಿದೊಡೊಳಹೊಯಿದು ।
ಕರುಳತೊಂಗಲನುಗಿವ ಸೊಕ್ಕಿದೆಕ್ಕಲನಬೇಂಟೆಗಳನೋಡುತ ನಡೆದನೂ
॥೩೩॥

ಇಡಿದಪುಲ್ಲೊಳಗೆ ಪುಲಿಯುನಟ್ಟಲು ಬಲೆ ಕಾಲ ।
ತೊಡಕಲೊದೆದೊದೆವು ಬಿಡದಿರೆ ಹಾರಿದೊಡೆ ಮರಿಗೆ ।
ಯೊಡೆದುಬರಿಯುಂಬಿಡದೆ ಹೊಡೆವದಡಿವಲೆಗೆ ಸೊಂದೆಡೆಮೊಳೆಯುಹೊಕ್ಕನೇ
ಕಡಿವುತಿರೆ ಹುಲಿ ಯಿತ್ತ ಮುದಿಬೇಡನೆಯ್ದಿ ಬಳಿ । (ಣಾ ॥
ವಿಡಿದು ಮರೆಯೊಂದು ಬಗೆದೆರಗಿ ನೋಡಲು ಕಂಡು ।
ಕಡುಮುಳಿದು ಘರ್ಜಿಸಲು ಬಿಲ್ಲಬಿಸುಟೊರಲುತ್ತಲೋಡಿದನದೇವ್ರೊಗಳ್ವೆನೂ
॥೩೪॥

'ಬಿಟ್ಟತಲೆ ಗಿಡುಹಿಡಿದು ಕಳೆದುಡಿಗೆ ಕಾಡಮುಳು ।
ನಟ್ಟು ಕುಂಟುವ ಕಾಲು ಬೆನ್ನಬಿಗುಹಳದೆಳೆವ ।
ಮೊಟ್ಟೆ ಕೂಳೆಡಹಿಕೆಡೆದೊಡೆದ ಮೊಣಕಾಲ್ತೇಕುವಳ್ಳೆಗಳು ಮೆರಸೂರಲು
ಕೆಟ್ಟೋಡಿ ಬಪ್ಪವನಸುಖರು ಕಂಡಿದಿರಡ್ಡ । (ತ ॥
ಗಟ್ಟ ಕೇಳಲು ಹು ಹು ಹು ಹುಲಿಯೆನುತ ಹೆದರಿದನು ।
ತೊಟ್ಟನಲ್ಲಿದ್ದರ್ಪುದುತೇರೆಂದೊಡಾನಮ್ಮ ನೀವರಸಿಕೊಳರೆಂದನೂ ॥೩೫॥

ಕೆವರುವೀಲಿಯುಚಲ್ಲಣವ ಸೊಕ್ಕಿದೆಕ್ಕಲನ ।
ತಿದಿಯುಕ್ಕವಡದ ಗರುಡನಗರಿಯು ತಲೆವರಿಯು ।
ಮದಗಜದ ಮುತ್ತಿನೇಕಾವಳಿಯು ಹೊಂಮೃಗಾಜಿನದ ರವಕೆಯು ದಂತದಾ ॥
ಹದವಿಲ್ಲ ಬೆನ್ನ ಬತ್ತಳಿಕೆಗಳ ಕೆಲದಚಮು ।
ರದ ಗೊಂಡೆಯುದಲೆಸೆವಜವ್ವನದ ಶಬರಿಯರು ।
ಪದೆದುಲಿವ ಕುಸಿದು ತೆಗೆದಣುಕೆದ್ದು ಹರಿವ ಹುಲ್ಲೆಗಳನೆಸೆವುವ ಕಂಡನೂ ॥ ೪೬ ॥

ಕರಿಯಿರಿದ ಕೋಣಸೆರಗಿವ ಪಂದಿಸೀಳ್ದ ಕೇ ।
ಸರಿಬಗಿದ ಪುಲಿಪೊಯ್ದ ಕರಡಿಕಾರಿದ ಕಡವೆ ।
ಬರೆತುಳಿದ ಹರಿಣಸೆಗೆದೊರೆದ ಚಿತ್ರಕನಗಿವನಯಿಯೆಚ್ಚ ಬಿಗ್ಗಿಪೊಯ್ದಾ ॥
ಮರೆಕುತ್ತಿದೇರುಗಳ ವೇದನೆಗೆ ಬಾಯ್ವಿಟ್ಟು ।
ಹೊರಳಿ ನರಳುವ ಕಿರಾತರನು ಮಲಗಿಸಿಕೊಂಡು ।
ಮರನತಣ್ಣೆಳಲತಂಪಿನೊಳು ಸಾಗಿಸುವ ಶಬರಿಯರ ನೋಡುತ ನಡೆದನೂ ॥ ೪೭ ॥

ಓವಿ ಹೀಲಿಯನುಟ್ಟು ತಳಿರ ಮೇಲುದನುರಕೆ ।
ತೀವಿ ಗುಂಜಾಭರಣವನು ತೊಟ್ಟುಕೇದಗೆಯು ।
ಹೂವಿನೆಸಳೋಲೆಯನು ತಿರುಪಿ ಶಿಲೆಯೊರಳಕ್ಕಿದಂತದೊನಕೆಗಳನಾಂತೂ ॥
ಸೂವಿ ನಲ್ಲನೆ ಸುವ್ವಿ ಸುವ್ವಿ ಕಾನನವಿಜಯ ।
ಸೂವಿ ಬಲುಬಿಲುಗಲಿಯೆ ಸುವ್ವಿ ಮೃಗಕುಲಮಥನ ।
ಸೂವಿಯೆಂದಲ್ಲಿಯಪುಳಿಂದಿಯರುಹಾಡಿ ತೊಳಸಿದರು ಬಿದಿರಕ್ಕಿಗಳನೂ ॥ ೪೮ ॥

ಕುರುಹುಗೊಂಡೊಂದೆರಡುತೆರನಲ್ಲ ನಾಲ್ಕೆಂಟು ।
ತೆರದಬೇಂಟೆಯೊಳಡವಿಯು ಪ್ರಾಣಿಮಾತ್ರದುಸು ।
ರರತವೆನೆಯಿದರಿಂದೆ ಮೇಲೆ ನಾನಾಖಗಮೃಗಾವಳಿಯುನಂತಧ್ವನೀ ॥
ಅರೆಯುದನಿ ಮೂವಲಿಸಿ ಬೈವದನಿ ಕೂಗಿ ಜೊ ।
ಬ್ಬಿರಿವದನಿ ಬಿಲ್ಲ ಜೇವಡೆವ ದನಿ ನಿಲಲು ಸೈ ।
ವೆರಗಾಗಿ ವಿಶ್ವ ಬೇಂಟೆಯಭೀತಿಯಿಂ ಮೂಗುವಟ್ಟುದೆಂಬಂತಿರ್ದುದೂ ॥ ೪೯ ॥

ಹೆಗಲಚಮರಿಯು ಕಟ್ಟು ತೆಕ್ಕೆವೀಲಿಗಳು ದಂ ।
ಡಿಗೆಯೆಕ್ಕಲಂ ಹಸಿಯ ಮುತ್ತುಗಳ ಮೂಡೆ ಮೋ ।
ಳಗೆಯುದಂತಂಕೈಯುಮೊಲಹಲವು ಹಕ್ಕಿಗಳಕಲ್ಲಿಗಳನಂತಮೃಗದಾ ॥
ತೊಗಲ ಹೊರೆ ಜೇನನಳಗೆಯು ಕಂಬಿ ಮಡಿದಹು ।
ಲ್ಲಿಗಳ ಬೆಕ್ಕಡಗುಗಳ ಹೆಡಗೆ ಹೆಬ್ಬುಲಿಯು ಛಂ ।
ಡಿಗಳನೇರಿದಕೋಣವೆರಸಿತಿರುಗಿದಬೇಡರಂಕಂಡು ಜಿರಗಾವನೂ ॥ ೪೦ ॥

ಮೃತ್ಯುವಗಿದುಳಿದಂತೆ ಬೇಡರಟ್ಟುಳಿಗಳೊಳು ।
ಕುತ್ತುರೊಳಡಂಗಿರ್ದು ಬಳಿಕೆದ್ದು ತಮತಂಮ ।
ಹೆತ್ತತಾಯ್ಗಳಸರಸುತತ್ತಲಿತ್ತಂ ಹರಿದು ಬಾಯ್ವಿಡುವ ಮೃಗಶಿಶುಗಳಾ ॥
ಸುತ್ತಿಕಿರುಮರಿಗಾಣದಳಲಿಕೆಕ್ಕಳಿಸಿಕೊರ ।
ಳೆತ್ತಿ ಹೂಂಕರಿಸಿ ಗಿಡುಗಿಡುಗಳೊಳು ಹೊಕ್ಕುಬಾಯ್ ।
ವತ್ತಲೊರಲುತ್ತಿಪ್ಪ ಬಾಣತಿ ಮೃಗಕ್ಕೆ ಮರುಗುತಬಂದನಾಮಯ್ಯನೂ ॥ ೪೧ ॥

ಕಡುಗಿಬರುತಿಪ್ಪಾದಿಮಯ್ಯನತಿಸಿಷ್ಟ್ರಯುಂ ।
ತುಡುಕಿನೋಡುವೆನೆಂದು ಮನದಂದು ಸೌರಾಷ್ಟ್ರ ।
ದೊಡೆಯಪಶುಪತಿಯತೀಶ್ವರನೆಂಬ ನಾಮವಂತಳೆದು ಮುನಿವೃಂದಸಹಿತಾ ॥
ನಡೆತಂದುವಿಪುಳ ಘೋರಾಕಾರ ಕಾನನದ ।
ನಡುವೆಸೆವ ಪರ್ಣಶಾಲೆಗಳನಂತವನೊಪ್ಪ ।
ವಿಡಿದುಮಾಡಿದ ತಪೋವನದೊಳೊಪ್ಪಿದನವಿದ್ಯಾಬಳಾಹಕಮರುತನೂ
॥ ೪೨ ॥

ಪ್ರೇಮದಿಂದಾದ್ಯೆಯ್ಯಸೈತಂದು ಪುಣ್ಯಾಭಿ ।
ರಾಮವೆನಿಸುವ ತಪೋವನದಿಂದ ಪೊರಮಡುವ ।
ಹೋಮಧೂಮಕ್ಕೆ ಲಿಂಗಾರ್ಚನೆಯ ಜಯಜಯಧ್ವನಿಗೆ ಘಂಟಾನಾದಕೇ ॥
ಕಾಮಿಸಿದ ಸುರಭಿಪರಿಮಳಕೆ ವಿಹಿತಶ್ರುತಿ ।
ಸ್ತೋಮಂಗಳುಚ್ಚರಣಪೌರಾಣರಭಸಕ್ಕೆ ।
ಶ್ರೀಮಹಾದೇವ ಹೊಸತಿದು ಮಹಾವಿಂಧ್ಯಗೊಳಗೆನುತಪೊಗಳುತಬಂದನೂ
॥ ೪೩ ॥

ಸಾರಸೀರೆಯನೊಗೆವ ಜಡೆಯುಸುಂಕಿಕ್ಕುವಾ ।
ದಾರಮುಂ ಬಿಗಿವಕ್ಷಮಾಲೆಯುಂ ಸರಗೈವ ।
ಪೌರಾಣವಂಕಲಿವ ಮೌಂಜಿಮೇಖಲೆಗಳಂಮಾಡುವವಿಭೂತಿಯಿಡುವಾ ॥
ಸಾರಶಾಸ್ತ್ರವನರಿವ ಕೃಷ್ಣಾಜಿನದ ಕಣೆಗೆ ।
ದಾರವಿಕ್ಕುವ ಕಂದಮೂಲಫಲಮಂ ತಪ್ಪ ।
ಚಾರುಮುನಿಪುತ್ರರ್ಗೆ ವಂದಿಸುತಬಂದಿದಿರೊಳೊಂದುಕೊಳನಂಕಂಡನೂ
॥೪೪॥

ಎಸೆವ ವಿಷಮುಂಟಾಗಿಯುಂ ವಿಷಂತಾನಿಲ್ಲ ।
ಹೊಸಕಮಲಮುಂಟಾಗಿಯುಂ ಕಮಲವಿಲ್ಲ ಸಿ ।
ಟ್ಟಿಸೆ ಕುಮುದಮುಂಟಾಗಿಯುಂ ಕುಮುದವಿಲ್ಲಲ್ಲಿಪ್ರತಿಕೂಲಮುಂಟಾಗಿಯುಂ॥
ಪೆಸರಿಡಲ್ ಪ್ರತಿಕೂಲವಿಲ್ಲಲ್ಲಿ ಕಡೆಗೆ ಸೋ ।
ದಿಸೆ ವಿಜಾತಿಗಳುಂಟೆನಿಸಿ ವಿಜಾತಿಗಳಿಲ್ಲ ।
ವಸುಧೆಗೆ ವಿಚಿತ್ರಮೆಂದೊಂದೆರಡುಗಳಿಗೆ ನೋಡಿದ ಕೊಳನ ನಾದಯ್ಯನೂ
॥೪೫॥

ಬಿಸಕಂದದಂತಿಪ್ಪಯತಿವೃತ್ತದಿಂ ಪೂರ್ಣ ।
ರಸಭಾವದಿಂದಲಂಕಾರದಿಂ ಸೋಪಾನ ।
ವಿಸರದೊಳು ಕೇವಣಂಗೊಳಿಸಿದ ಪದಾರ್ಥದಿಂಕೇಳ್ದುನೋಡಿದರಮನಕೇ॥
ಎಸೆವ ಪ್ರಸನ್ನಗಂಭೀರದಿಂ ಸಲಿನಲಿದು ।
ದೆಸೆದೆಸೆಗಳಿಂ ಬಂದು ಪದವಿಡುವ ಕವಿಗಳಿಂ ।
ವಸುಧೆಗೆ ಮಹಾಕವಿಯ ತೆರದೊಳಂತಲ್ಲಿಯ ಸರೋವರಂ ಕಣ್ಗೆಸೆದುದೂ
॥೪೬॥

ಬಳಸಿದೆಳೆಲತೆಗೆ ತಂಪಿಂಗೆ ಕಂಪಿಂಗೆ ಕೆಂ ।
ದಳಿರಿಂಗೆ ಕರ್ನಿಕೆಗೆ ಯೆಸುವ ಪ್ರಸೂನಕ್ಕೆ ।
ಫಳಕೆ ತುಂಬಿಗೆ ಗಿಳಿಗೆಕೋಗಿಲೆಗೆ ಕುಣಿವನವಿಲಿಂಗೆ ಹಂಸಸಿಕರಕ್ಕೇ ॥
ಪುಳಿನಕ್ಕೆ ತಂಗಾಳಿಗೆಸೆವ ದೀಹದ ಮೃಗಾ ।
ವಳಿಗೆ ಬೆರಗಾಗುತ್ತ ನಡೆತರುತ್ತರರೆ ಕಂ ।
ಣಳವಿಯೊಳುಕಂಡನಪ್ರತಿಮಯತಿರಾಯಪಶುಪತಿಶಿವನಸುಪ್ರಭೆಯನೂ
॥ ೪೭ ॥

ಕಡುಹಿಮಂ ಕಡುಬಿಸಿಲು ಕಡುಗಾಳಿ ಯಿಲ್ಲ ಮರ ।
ನಡಿಯನೆಳಲತ್ತಿತ್ತ ಲೊಲೆಯವನವರತಬೆಳೆ ।
ಯುಡುಗಪೆಲ್ಲಾ ಭೂಜ ಲತೆಯೋಷಧಿಗಳು ಫಲವಿಡಿದೊಲೆದು ಜಡಿವುತಿಹವೂ ||
ಬಿಡದೆ ಹುಲಿಹುಲ್ಲೆ ಹರಿಕರಿ ಯೆರಳೆಸೀಳ್ನಾಯಿಗ ।
ಳೆಡೆಯಮುಂಗುರಿ ಮೂಸಕಂ ನವಿಲು ನಾಗಂಗ ।
ಳಡಸಿನಿಜವೈರಮಂ ಮರೆದಿಪ್ಪವೆನೆ ಮುನಿಯ ಮಹಿಮೆಯಂಪೊಗಳ್ವರಾರೂ
||೪೮||

ಈ ಮುನಿಯ ಚಾರಿತ್ರದೊಳು ಗಂಗೆ ಹುಟ್ಟದಿರ ।
ಳೀಮುನಿಯ ಶಾಂತಿಯೊಳು ಚಂದ್ರಮಂ ಜನಿಸದಿರ ।
ನೀಮುನಿಯ ವದನದೆ ದಯಾಗುಣದೆ ಸುರಕುಜಂ ಸುರಧೇನು ಪೊಣ್ಮದಿರ
ಈ ಮುನಿಯ ನುಡಿಯಸವಿಯಿಂದಮೃತಪೊಗೆಯದಿರ । (ವೂ ||
ದೀಮುನಿಯ ಸುಳುವಿನೊಳು ತಂಗಾಳಿ ಬೆಳೆಯದಿರ ।
ದೀಮುನೀಂದ್ರಂ ಮುನಿಯ ವೇಷದೀಶ್ವರನಾಗದಿರನೆಂದು ನಡೆನೋಡುತಾ
|| ೪೯ ||

ನವಿದು ನೋಡುವ ನೋಡುವೈನಕಂಗದೊಳು ಪೊ ।
ಣ್ಮುವ ಪುಳಕ ಪೊಸವರ್ಣಬೆಮರುಕ್ಕುವಾನಂದಾಶ್ರು ।
ಕವಿವ ತಂಪೇಳ್ವಪರಿಣಾಮಮಂ ಕಂಡು ತನ್ನೊಳು ತಾನೆಬೆರಗಾಗುತಾ ||
ಇವರ ಕಂಡೆನಗೀಸುಖಂ ಪುಟ್ಟಲೇಕಿವರು ।
ಶಿವನಂಶದವರಾಗದಿರರು ನೋಡುವೆನಿದರ ।
ವಿವರವನಿದಾವದೆಸೆಯಿಂದಾದುದೆಂಬುದಂ ನೆನೆದೊಯ್ಯನಡಿಯಿಟ್ಟನೂ
|| ೫೦ ||

ತಿಳಿಗೊಳನ ಬಳಸಿನಳನಳಿಸಿ ಬೆಳೆದೆಳೆಮಾವು ।
ಗಳ ತಳದ ಮಲ್ಲಿಕಾಮಂಟಪದ ತಣ್ಣೆಳಲ ।
ತೆಳುಗಾಳಿಯೊಳು ಪುಟಂಬೆತ್ತ ಪುಳಿನಸ್ಥಳದ ಮೇಲಶೋಕೆಯ ತರುವಿನಾ ||
ತಳಿರತೊಂಗಲ ಗದ್ದುಗೆಯೊಳೋಲಗಂಗೊಟ್ಟು ।
ತಳೆದು ಹಿಂದೆಡಬಲದೊಳೊಪ್ಪಿಕುಳ್ಳಿರ್ದ ಮುನಿ ।
ಗಳಕೂಡೆ ನುಡಿವ ಪಶುಪತಿಯತೀಂದ್ರನನು ಕಂಡಂಧನ್ಯನಾದಯ್ಯನೂ
|| ೫೧ ||

ನೀತಿ ಬಲಿದುದೊ! ಶಾಂತಿ ರೂಪಾಯ್ತೊ! ಸದ್ಗುಣ |
ವ್ರಾತವೇ ಮುನಿಯಾಯ್ತೊ! ಮುಕ್ತಿ ಜಡೆವೊತ್ತುದೋ! |
ಭೂತದಯೆ ವಲ್ಕಲವಸನವಾಂತುದೋ! ಪುಣ್ಯವೆಳಸಿ ಭಸಿತವ ನಿಟ್ಟುದೋ! ||
ನೂತನಶ್ರುತ್ಯರ್ಥ ನುಡಿಗಲಿತುದೋ! ತಪ |
ಸ್ಸ್ವಾತಂತ್ರ್ಯವೃತ್ತಿ ಬೋಧಿಸತೊಡಗಿತೋ! ಎಂಬ |
ಚಾತುರ್ಯದಿಂದಿರ್ದ ಪಶುಪತಿಯತೀಶಂಗೆ ನಮಿಸಿ ಹೊಗಳುತ್ತಿರ್ದನೂ
|| ೫೨ ||

ಜ್ಞಾನವಾಚಾರವಾಗಮಧರ್ಮತತಿಸುತ |
ಧ್ಯಾನವರಸುವ ಪುಣ್ಯ ವೆಳಗನೊಳಕೊಂಡು ನಿ |
ರ್ವಾಣನತಿನಿರ್ಲೇಪ ನಿಶ್ಚಿಂತ ನಿರ್ಗುಣನಿರಾವರಣ ನಿತ್ಯತೃಪ್ತ ||
ಮೌನದಾಸನದ ಮುದ್ರೆಯ ಹಂಗು ಹೊದ್ದದ ಪ |
ರಾನಂದ ಮೂರ್ತಿಶರಣಸುತಲೆರಗಿದನುಸು |
ಮ್ಮಾನದಿಂ ಕಂಣರಿಯದಿರ್ದೊಡಂ ಕರುಳರಿಯದೇ ಎಂಬ ಗಾದೆಯಂತೇ
|| ೫೩ ||

ಹಸಿದು ಬೆಂಡಾದೆ ಸೀಗುರ್ಡಿ ಯಿತ್ತಬಾ ಬಂದ |
ದೆಸೆಯಾವುದೂರಾವುದಾರಮಗನಾವಕುಲ |
ಹೆಸರೇನು ನಟ್ಟಡವಿಗೊಬ್ಬನೇಂ ಕಾರಣಂ ಬಂದೆ ಹೇಳೈಯ್ಯ ಯೆನಲೂ ||
ಎಸೆವ ತೆಂಕಣ ನಾಡಹುಲಿಗೆರೆಯೊಳಹೆನೆನ್ನ |
ಹೆಸರಾದಿಮಯ್ಯ ಹರದರ ಮಗಂ ದೇಶಾಂತ್ರ |
ವಶನಾಗಿ ಬರುತ ಬರುತಿಂದು ನಿಮ್ಮಂ ಕಂಡು ಬದುಕಿದೆಂನಾನೆಂದನೂ || ೫೪ ||

ಈಸೌಕುಮಾರ್ಯ ವಿರೂಪ ಸಂಪತ್ತು ಮ |
ತ್ತೀಸರಸಮೂರ್ತಿ ಯೀಯಂಗಸೌಕರವೃತ್ತಿ |
ದೇಶಾಂತ್ರಿಗುಂಟೆ ಕಂಡ್ಯೆ ಹುಸಿದೆಯೆನೆ ಹುಸಿದುದಿಲ್ಲನಾನಹುದೆಂದೆನೇ ||
ಶೇಸಾಯ್ತು ಹುಸಿಯದೊಡೆ ಸಾಕು ದಿನಕರನಂಬು |
ಧಾಶಿಗಿಳಿಯದ ಮುನ್ನಲುಂಣೇಳೆನುತ್ತಂ ಯ |
ತೀಶನಾಡಿದೊಡುಂಣೆ ಯೆಂದೊಡೇಕುಂಣೆಯುಣ್ಣದಹದಸಹೇಳೆಂದನೂ || ೫೫ ||

ಮಿಕ್ಕು ಹಸಿವಿಲ್ಲದದು ಕಾರಣದಿನೀಗಳೂ ।
ಟಕ್ಕೆ ತೆರಹಿಲ್ಲೆನಲು ಹಸನಾಯ್ತು ಹೊರಗೆ ಮೃಗ ।
ದಿಕ್ಕೆಗೆಯ್ದುವ ಹೊತ್ತು ಸಮನಿಸುತ್ತಿದೆ ಹುಸಿಯದೆಂಮಾಣಕೇಳೆಂದೆನೇ ॥
ಸೊಕ್ಕಿರ್ದ ಹುಲಿಗೆರೆಗೆ ಸೊಡ್ಡಳಸನೊಯ್ಗಲ್ಲ ।
ದಿಕ್ಕೆನೊಡಲೊಳಗಸ್ನರಸವನೆನೆ ಲೇಸುಲೇ ।
ಸಕ್ಕಕ್ಕು ದಿಸವೇಸುರವಧಿಯೆಸೆ ದೇವ ಮೂವತ್ತು ದಿನದವಧಿಯೆನಲೂ॥೫೬॥

ತಿಂಗಳುತನಕ್ಕ ಬದುಕುವದರಿದು ಬದುಕೆ ಮೇ ।
ಲಂಗವಿಸಲಡವಿಯು ಮೃಗಂ ಹೋಗಲೀಯವವ ।
ರಂಗೆಲಿದು ಹೋಗೆ ನಿನ್ನಂಕಂಡ ಖೂಳರೊಂದಡಿಯು ನಿಡಲೀಯ್ಯರವರಾ॥
ಕಂಗೆ ಸಿಕ್ಕದೆ ಹೋದರುಂ ಮುಂದೆ ಸೋಮೇಶ ।
ಲಿಂಗನಳಲಿಸದೆ ಬಿಡನಿನಿತುಡಾವರಿಗೊಡಲ ।
ನೀಂಗುರಿಯು ಮಾಡದುಂಣೇಳೆಂದು ಮುನಿಪನಾದಯ್ಯನಂಪ್ರಾರ್ಥಿಸಿದನೂ॥
॥೫೭॥

ದೀನನೈಶ್ವರ್ಯ ಕಾಮುಕನ ಸದ್ಗುಣ ಭಕ್ತಿ ।
ಹೀನನ ಕುಲಂ ಪ್ರೇತವನದ ಹೂಗಿಡಗಳು ಮ ।
ಹಾನಗದಮೇಲೆ ಸೂಸುವಮಳೆ ವೃಥಾ ಹಿರಿಯರಂನಿಂದಿಸುವನ ಭಾಗ್ಯ ॥
ಕಾನನದ ಸುರಭೂಜ ವನದಲೇ ಕೆಡುವಂತೆ ।
ನಾನಾಸಿರೋಧದಿಂ ಬರಿದೆ ಕೆಡುವ್ರೊಡಲಂ ಭ ।
ವಾನಿಯರಸಂಗಾಗ ಬಿಟ್ಟೊಡದುಬದುಕಲ್ತು ಮುನಿನಾಥಕೇಳೆಂದನೂ ॥೫೮॥

ಬರೆಸತ್ತು ಕಾಣ್ಬಸರ್ಗಕ್ಕಿರ್ದು ಕಾಣುತಿಹ ।
ನರಕವೇ ಲೇಸಲಗುಕೂರಿತೆಂದೊಲೆಯೊಳ ।
ಟ್ಟಿರುಹಿದೊಡೆ ಕರಗದೇ?ನೀನೇಕರಣ್ಯವೇಕಳದೊಡಹ ಲಾಭವುಂಟೇ?॥
ಮರುಳು ಮೊದಲಾಗಿ ತನ್ನೊಡಲಂ ಸುರಕ್ಷಿತದೊ ।
ಳರಿಸುವುದು ಪುಣ್ಯಜನ್ಮಂ ಬಡೆದ ತನುವನಾ ।
ದರಿಸದಳದೊಡೆ ಬಳಿಕ ಹಡೆಯಲಹುದೇಂ? ಮೂರ್ಖ! ಕೇಳೆಂದನಾಮುನಿಪ
(ನೂ ॥ ೫೯ ॥

ಮಲದ ಬಗರಿಗೆ ಮೂತ್ರದೊರತೆ ನಾನಾಹೀನ ।
ಜಲದ ಮಡು ಮಾಂಸದ ಬಣಂಬೆ ಹಡಿಕೆಯ ಹಗೆವು ।
ಹೊಲಸಿನೋವರಿ ಯವಗುಣಂಗಳಾರವೆ ಯಖಿಳರೋಗಂಗಳಾಡುಂಬೊಲಂ ॥
ಹಲವು ಹಗೆಗಳಗಿಟ್ಟಗುರಿ ಯನಿತ್ಯದವೊದಲ ।
ನೆಲೆ ಯೆನಿಪ್ಪೊಡಲನುತ್ತಮಸಮಯಕಿಕ್ಕುವುದು ।
ಗೆಲವು ಮದುವೆಯ ತುಪ್ಪವಂ ಬಡಿಸಿ ಮೊಗವರಿತಪಂ ಮಾಡಿಕೊಂಬಂತಿರೇ
॥ ೬೦ ॥

ನೀತಿಹೀನನೆ ಕೇಳು ನಿನ್ನ ದೇಹಂ ಸಪ್ತ ।
ಧಾತುವಿಂದಾದುದುಳಿದಧಿಕಮುನಿಗಳ ದೇಹ ।
ವೇತರಿಂದಾದುದಪರಾದಿ ತೊಡಗಿಂತಿದನು ಕ್ಷಯವಪ್ಪನೆಂದರಿಸುರೇ? ॥
ಆತುರದೊಳದನೆ ರಕ್ಷಿಸುವರಂತದುವಿಡಿದು ।
ಭೂತದಯೆಗೆಯ್ವರವರೇಂ ಮರುಳರೇ? ಪ್ರಾಣ ।
ಭೀತಿಯಿಲ್ಲದ ಪಾಪಿ ಕೇಳೆಂದ ನಂದುಯತಿವೇಷದಗಜಾರಮಣನೂ ॥ ೬೧ ॥

ಮೃಡಮೂರ್ತಿ ನಾನಿಮ್ಮ ಕೂಡುತ್ತರಂಗಳಂ ।
ಕೊಡಲಂಮೆ ನೊಡಲಂ ಸುರಕ್ಷಿತಂ ಮಾಡಲದು ।
ಕಡೆತನಕನಂತಕಾಲಂ ಸುಖದೊಳಹುದೆ? ಕೇಳದನೊಯ್ದು ಮಣಿಮಾಡದ ॥
ಕಡೆಯ ನೆಲೆಯೊಳಗಿಟ್ಟು ರಕ್ಷಿಸಿದೊಡಂ ಸಾವು ।
ಬಿಡದೆ ಕೆಡುವೀದೇಹವುಳ್ಳಲ್ಲಿ ಪುಣ್ಯಮಂ ।
ಪಡೆವುದೇ ಲೇಸು ನೀವರಿಯಿರೇ? ಯತಿ ಕೇಳದೆನ್ನ ಸಿದ್ಧಾಂತವೆನಲೂ
॥ ೬೨ ॥

ಕರಮೂರ್ಖನೆಂದರಿಯಲಾದುದೆಂಮಂತಪ್ಪ ।
ಹಿರಿಯರಾಡಿದ ಮಾತನುಲ್ಲಂಘಿಸಿದೆಯಾಗಿ, ।
ವರಭೂತದಯೆ ಯಿಲ್ಲ ನಿನಗೆಂಬುದರಿಯಲಾದದು ನಿನ್ನ ಮೇಲೆ ಸಿನಗೇ ॥
ಕರುಣವಿಲ್ಲಾಗಿ, ಛಲಿಯೆಂದರಿಯಲಾಯ್ತು ನೆರೆ ।
ಪರದೈವ ಕೆಡೆವಲ್ಲದುಂಣೆನೆಂಬಾಗಳೇ ।
ಪಾಂಯಲೇ ಭಕ್ತನೆನಿಸಲು ಬಂದೆ? ಶಿವನಾರು? ನೀನಾರು? ಹೋಗೆಂದನೂ ॥
॥ ೬೩ ॥

ಭ್ರಾಂತು ಹೊದ್ದದ ಮುನಿಪ ಕೇಳಯ್ಯ ನೀನೆಂದ |
ಶಾಂತಿ ಸತ್ಯಂ ಭೂತದಯೆ ನಿರರ್ಥಕಂ, ನಿ |
ಶ್ಚಿಂತದಿಂದಂಶಿವನ ಭಕ್ತಿಯುಳ್ಳೊಡೆ ಕೊಡಲು ಸಾಲದೇಬೇಡಿದುದನೂ ||
ಇಂತಿದೇ ಘನವೆಂದು ಭಕ್ತನಾದೆನು ಧನವ |
ನಂತವುಳ್ಳೊಡೆ ಹೆರರ ನೋಲೈಸಲೇಕೆ ? ಕಾ |
ಲಾಂತಕನ ಸಾಮರ್ಥ್ಯವಹ ದೀಪ್ತಿ ಲೌಕಿಕತಮಂದಮಂ ಸಂಹರಿಪುದೂ||
|| ೬೪ ||

ಶಿವನ ನಿಜವೇಷವಂ ಧರಿಸಿ ಕಾಮವನು ಕ್ರೋ |
ಧವನು ಲೋಭವನು ಮೋಹವನು ಮದವನು ಮತ್ಸ |
ರವನು ಬಿಟ್ಟಖಿಳಭೂತಂಗಳೊಳು ಪರಮಾಣು ನೋವಸ್ಸೈರಿಸಲಾರದೇ ||
ಭುವನವಂದಿತರಪ್ಪ ಹಿರಿಯರೇಂ ಮರುಳರೇ ? |
ಅವರಿಂದ ನಿನಗಾವ ಬುದ್ಧಿ ಪಿರಿದೆಂದು ಮುನಿ |
ನಿವಹ ಕಂಪಿಸುತಿರಲು ಪಶುಪತಿಯತೀಂದ್ರ ನಾದಯ್ಯನಂ ಬೆಸಗೊಂಡನೂ
|| ೬೫ ||

ಭುವನದೊಳು ಹುಟ್ಟುವಾಗೊಡನೆ ಹುಟ್ಟಿರ್ದ ದೇ |
ಹವಿಕಾರವಂ ಬಿಡುವೆನೆಂಬ ಸಾಮರ್ಥ್ಯವು |
ಳ್ಳವರಿಲ್ಲ ಬೇಸಾದೊಡುತ್ತಮರೊಳಂತವೇಕಿಲ್ಲೆಂದು ಬೆಸಗೊಂಬೊಡೇ ||
ಶಿವಮಂತ್ರ ಶಿವಲಿಂಗ ಭಸಿತರುದ್ರಾಕ್ಷಿಯೆಂ |
ಬಿವು ನೆಲಸಿ ನಿಂದೆಡೆಯೊಳವು ನಿಲ್ಲವೆಂಬುದಿದು |
ಶಿವವಾಕ್ಯ ವೆನ್ನ ಮನವನಿಂನೆಂತು ಘಟ್ಟಿಸಿ ನೋಡುವೆ ಯತೀಶಯೆನಲೂ ||
|| ೬೬ ||

ನಿನ್ನ ಹಣೆಯೊಳು ಭಸಿತ ನಿನ್ನ ಬಾಯೊಳು ಮಂತ್ರ |
ನಿನ್ನ ತೊಡಿಗೆಯೊಳು ರುದ್ರಾಕ್ಷಿಗಳರಲ್ಕೆ ನಿನ |
ಗಿನ್ನೇಕೆ ಪರರ ದೈವವನಳದು ಶಿವನನಿಲಿಸುವೆನೆಂಬ ಕೃತ್ಯವೆನಲೂ ||
ಎನ್ನ ದೇಹಾಭಿಮಾನಕ್ಕೆಂದು ಮಾಡೆ ಬಳ |
ಕೆನ್ನಿಂದ ನರಕಿಗಳು ಬೇರಿಲ್ಲ ಧರಣಿಯೊಳ |
ಗೆನ್ನ ಸಮಯಾಭಿಮಾನನಿಮಿತ ಮಾಡಿದೊಡೆ ದೋಷವೇನಿಲ್ಲೆಂದನೂ ||
|| ೬೭ ||

ಮಾತಿನೊಳು ನೀತಿಯೊಳು ಬುದ್ಧಿಯೊಳು ।
ಚಾತುರ್ಯದೊಳು ನಿದಾನವಿಚಾರದೊಳು ಗುಣ ।
ವ್ರಾತದೊಳು ನಿಷ್ಠೆಯೊಳು ಜೀವದ ಪರಿಚ್ಛೇದದೊಳು ವಿವರವುಂ ಕಾಣ
ಆತುರಿಸಿ ಕಾಡುವೆಂನಂಡಲೆಗೆ ಕಂಟಣಿಸ ।　　(ದೇ ॥
ದೀತನಲ್ಲದೆ ನಿಲುವರಾರೆಂದು ಹೊಗಳುತಿಹ ।
ಭೂತೇಶನಂ ಲಜ್ಜೆಗೆಡಿಸಿತ್ತು ಮೆಚ್ಚು ಮುನಿನಿಕರದೋಲಗದ ನಡುವೇ ॥
॥ ೬೮ ॥

ಕವಿವ ಮೆಚ್ಚಿನ ಕೂಡೆ ಗಂಗೆ ಮೊಳೆವೊಡೆ ಜಟಾ ।
ನಿವಹವುಂ ಮರೆಮಾಳ್ಪನಿಂದುಮೊಳೆವೊಡೆ ಮುಸುಕಿ ।
ಡುವ ಲಲಾಟಾಕ್ಷಿ ಮೊಳೆವೊಡೆ ಭಸಿತವಿಡುವೈದುಮುಖ ಮೊಳೆಯೆ ತಳೆವಾ
ವಿವಿಧಭುಜಲತೆ ಮೊಳೆವೊಡೊತ್ತಿತುರುಗುವ ಮುಂಡ ।　　(ಗುವಾ ॥
ನವಿತಾನ ಮೊಳೆಯೆ ಮಯ್ಯುಂ ಹೊದೆದು ಕೊಳುತಿರ್ಪ ।
ನೆವದಿಂದ ಮುಚ್ಚಿದಂ ಶಿವನಾದೊಡಂ ತಕ್ಕು ಸತ್ಯದಿದಿರಲಿನಿಲ್ಲದೂ ॥ ೬೯ ॥

ಇಂದೆನ್ನ ಬುದ್ಧಿಗಳು ಕೊಳ್ಳವಿಂತಿಲ್ಲಿಂದ ।
ಮುಂದಿವಂ ನಡೆವಾಗಳುಳ್ಳಸತ್ವಂಗಳಂ ।
ಕುಂದಿಸಿ ಕರಂ ಧಾತುಗೆಡಿಸಿ ತಂದುಣಲೀವೆ ನದನೊಲ್ಲದಿರಲೀತನಾ ॥
ಹಿಂದುಗೊಂಡೇ ಹೋಹೆನಳುಪಿದೊಡೆ ಹೋಗೆನಾ ।
ನೆಂದು ನೆನೆವುತ್ತಿರಲು ರವಿ ಗಗನವುಂ ಸುತ್ತಿ ।
ಬಂದು ಬಳಲಿದ ಹಯವ ನೀರ್ಗುಡಿಸಲಿಳಿವಂತಿಳಿವನು ಪಡುವಣಕಡಲೊ
(ಳೂ ॥ ೭೦ ॥

ದಿನಪನಿಳಿದವಸಾನದೊಳು ತಪೋವನದ ಯತಿ ।
ಜನ ವರ್ಘ್ಯವೆತ್ತಿ ಸಂಧ್ಯಾವಂದನಂ ಮಾಡು ।
ವನಿತಕ್ಕೆ ಮೆರೆದಾದಿಮಯ್ಯನ ಯಶೋಲತೆಯ ಬೀಜ ವುದಯಿಸುವಂದದೀ॥
ವಿನುತಚಂದ್ರಂ ಪೂರ್ವದಿಶೆಯೊಳವತರಿಸಿ ಬೆಳ ।
ಗಿನ ಬೀಡು ನಡೆದು ದಿಗುಭಿತ್ತಿಯಂ ಧವಳಿಸಲು ।
ಸನಕಾದಿವಂದಿತಂ ಯತಿಯಾದ ಸೌರಾಷ್ಟ್ರದೊಡೆಯ ನೀಕ್ಷಿಸುತಿರ್ದನೂ
॥ ೭೧ ॥

॥ ಶ್ರೀಮದ್ರಾಘವಾಂಕಕವಿವಿರಚಿತ ಶ್ರೀ ಸೋಮನಾಥ ಚರಿತ್ರದೊಳ್ ತೃತೀಯ ಸಂಧಿ ಸಂಪೂರ್ಣಂ. ॥

## —ನಾಲ್ಕನೆಯ ಸಂಧಿ —

|| ಶ್ರೀಸೋಮನಾಥಾಯನಮಃ ||

|| ಸೂ || ಉರಿವ ಬಿಸಿಲೊಳಗೆ ಬಸವಳಿದು ಬೆಂಡಾಗಿ ।
ಹರಣದಾಸೆಯ ಹಾರದಿರ್ಪಾದಿಮಯ್ಯಂಗೆ ।
ಕರುಣದಿಂದಿದಿರಾಗಿ ಬಂದು ನಿಜಮೂರ್ತಿಯಂ ತೋರಿದಂ ಸೋಮೇಶನೂ||

ಶ್ರೀಮದನುಪಗುಣಸ್ತೋಮ ವಿಮಳಾನಂದ
ಸೀಮ ಘನನಾಮ ನತಿನಿಶ್ಚಿಂತ ನಪ್ರತಿಮ ।
ಭೂಮಿಮೊದಲಾದಷ್ಟತನುವಿನೊಳಭೇದ್ಯನೆನಿಸುವ ಮಹಿಮಚಿತ್ರೈಪುದೂ||
ಕಾಮಿತವನೀವ ಬಲ್ಲರ ಬಲ್ಲಹನೆ ನಿನ್ನ ।
ನಾಮವಲ್ಲದೆ ಪೆರತನರಿಯದಬಳಂಗೆ ನೀಂ ।
ಪ್ರೇಮದಿಂದಿದಿರೆಸೆವುದೈ ಕೃಪಾಜಲಧಿಯೆನಿಸುವ ಶಂಭು ಸೋಮೇಶ್ವರಾ || ೧ ||

ಶಿವನಕಾಟಮುಮ ನಾದಯ್ಯನೇಕಾಗ್ರಚಿ ।
ತ್ತವನು ನೋಡುವೆನೆಂದು ಬಪ್ಪಂತೆ ಪೂರ್ವದಿ ।
ಗ್ವಿವರಮಂ ಬಗೆದುನೆಗೆದೊಗೆದುದಯಗಿರಿಯ ಶಿಖರದ ಸುಖಾಸನದವೋಲೇ||
ಕವಿವ ಕಿರಣಂಗಳಂ ಮಡಲಿರಿದು ಭಾನುಮೂ ।
ಡ,ವ ಸಮಯದೊಳಗೆ ಮುನಿವೇಷಮಂ ತಳೆದಿರ್ದ ।
ಭವನ ಬೀಳ್ಕೊಂಡು ವನದಿಂದ ನಡೆಗೊಂಡ ನೊಲವಿಂ ಧೀರನಾದಯ್ಯನೂ|| || ೨ ||

ಬಡಭೂತಹಿಡಿದ ಭವಿಯೊಳಗಾಗಿ ಹಸಿವು ನೀ ।
ರಡಿಕೆ ನಿದ್ರಾಲಸ್ಯ ಸೀತವಾತಪವೆಂಬ ।
ಗೊಡವೆಗಳ ನರಿಯನೆನಲಾ ಭೂತವಂ ನಗುವ ಸದ್ಭಕ್ತನಾದಯ್ಯನೂ ॥
ವೃಡನ ಭಕ್ತ್ಯಾವೇಶವಾವರಿಸಿತೆಂಬಾಗ ।
ಳೆಡೆಯೊಳನ್ನಿಲ್ಲಿಯದು ಹಸಿವು ನೀರಡಿಕೆ ಯು ।
ಘ್ಘಡಪ್ರಶ್ರಮಾದಿದೇಹವಿಕಾರವೆನೆ ನಡೆದ ನತಿಧೀರನಾದಯ್ಯನೂ || ೩ ||

ವಿಷಗಳಂ ಮುಸಿತಸವ ಸೀಡಾಡಿ ನೆರವಿಯಂ ।
ಬಿಸುಟು ಮಾಯಾವೇಷದಿಂ ಹಿಂದೆ ಹಿಂದೆ ಸಂ ।
ದಿಸಿ ನಡೆದು ಬಂದು ತಣಿವಂ ಸತ್ವವಂ ಸಾಹಸವನು ಬಿಡದಾಕರ್ಷಿಸೀ ||
ಹಸಿವಂ ಪಿಪಾಸೆಯಂ ಶ್ರಮವಂ ಬಳಲ್ಕೆಯು ।
ಬ್ಬಸವ ನಿಸ್ಸತ್ವಮಂ ತನುವಿನೊಳು ನೆರೆ ತೀವಿ ।
ನಸುನಗುತ ಬರೆ ನಿಷ್ಠೆವಿಡಿದು ನಡೆದಂ ಧೀರನಾದಯ್ಯನಾದಯ್ಯನೂ || ೪ ||

ಗಳಗಳನೆ ನಡೆವಾಗ ಬೀಸುತೋಳಂ ರಕ್ತ ।
ವಿಳದು ಬೆರಳ್ಗಳು ಬಾತು ಮಿಡಿದೊಡೆವುತಂ ಜ್ವಾಲೆ ।
ಬಳಸಿದುದರಾಗ್ನಿಯಿಂ ಕಾದು ಬಪ್ಪುಸುರೊಳೆದೆಯಾರಿ ರಸವರತು ಬಾಯಾ||
ಬಳಗು ಹುಣ್ಣಾದೊಡಂ ಬಿಸಿಯುಹುಡಿಯಿಂದ ಹೊ ।
ಪ್ಪಳಿಸಿ ಪದತಳದೆ ರಕ್ತಂದಾರಿಯೊಳ್ ವ್ರಣದೆ ।
ಚಳೆಯುಗೊಡುವಂತೆವೊಲು ಸುರಿದೊಡಂ ಬಗೆಯದಾದ್ಯೈಯಸ್ಮತರುತ್ತಿರ್ದ ನೂ || ೫ ||

ಬಿಸಿಲಬಿಸಿಯಿಂನೆತ್ತಿ ನೆಲನಬಿಸಿಯಿಂಪದಂ ।
ದೆಸೆದೆಸೆಯು ಕಾದೆಲರಬಿಸಿಯಿಂದಕಾಯು ವು ।
ಬ್ಬಸದಾಕ್ಷುದಗ್ನಿ ವಿಸಿಯಿಂದಾದ ನೀರಡಿಕೆ ಯುಗ್ರಬಿಸಿಯಿಂದ ಬಾಯೂ ||
ಅಸಿವ್ರೊಯ್ಲ ತೆರದಿಂದ ಬಿರಿದುರಿದು ಹೊತ್ತಿ ಹೊಗೆ ।
ದಸುಗೆ ತೆಗೆಬಗೆಯಾಗೆ ಡೆಂಡಣಿಸಿ ಕುಳ್ಳಿರ್ದು ।
ಮಸುಗಿ ಕಯ್ಯೂರಿ ನಡೆದಂ ಛಲಿಗಳರಸನೆನಿಪೆಸ್ಸಯ್ಯನಾದಯ್ಯನೂ || ೬ ||

ಈಸೊಂದು ಸಂಕಟದಮೇಲೆ ಮತ್ತೀವೊಗಳ್ವ ।
ನಾಶಮಯಬೇಸಗೆಯು ಬಿಸಿಲ ಕಾಠಿಣ್ಯದೊಂ ।
ದಾಸುರಂ ಮುನ್ನಾದುದಿಲ್ಲ ಕಂಡವರಿಲ್ಲ ಕೇಳ್ದು ಬಲ್ಲವರುಮಿಲ್ಲಾ ||
ಓಸರಿಸದೊಳಗಿರ್ದ ಜಲಚರಚಯಕ್ಕೆ ವಾ ।
ರಾಸಿ ಯಿಟ್ಟೆಸರಂದವಾದುದಿದು ಕಾಲದ ।
ಭ್ಯಾಸವೋ ಶಿವನಾದಿಮಯ್ಯನ ಮನವ ನೋಡಲೊದಗಿಸಿದನೋ ಎನಿಸಿತೂ || ೭ ||

ಸುಂದುಕಾಸಲು ಕರಗಿ ಕಬ್ಬುನಂ ಕಾಹೇರು ।
ವಂದರಿಂ ರವಿ ತನ್ನಕಿರಣಕಿಚ್ಚಿಂ ಕಾಸೆ ।
ಬೆಂದು ಕತ್ತಲೆ ಕಾದು ಕರಗಿ ಕೆಂಗಲಿಸಿತಲ್ಲದೊಡೆ ಬಡಬಿಸಿಲಲೀ ॥
ನೊಂದು ನೆಲಸುರಿದು ಜಲವರತು ಹೊಲಕರುಕೆದ್ದು ।
ನಿಂದ ಮರನೆಲೆಗಳೆದು ಗಿರಿಸಿಡಿದು ಹಾರಿ ಮೃಗ ।
ವೃಂದವಸುವರೆಯಾಗಿ ಹರಣಗಳೆ ಯಲ್ಕುಗ್ರವಾಯ್ತು ಬೇಸಗೆಯಬಿಸಿಲೂ ॥
॥ ೮ ॥

ಪೊಡವಿಯುಡಿಯಲಿ ಫಣಿಪನೆಂಬ ಕೊಳ್ಳಿಯು ನಡಸಿ ।
ಹೆಡೆವಣಿಗಳೆಂಬ ಕೆಂಡಂಗಳಂ ಮೀರಿ ಪೊರ ।
ಮಡುವ ಕಾಂತಿಗಳೆಂಬ ದಳ್ಳುರಿಗಳಿಂದ ಕಡುಗಾಸಿ ಪಾಪಿವಿಧಾತ್ರನೂ ॥
ಬಿಡದಚರಚರವೊದಲು ಸರ್ವಜೀವಂಗಳಂ ।
ಸುಡಲೆಂದು ಮನದೊಳಸುಗ್ಗೈದನಕ್ಕಲ್ಲದಿ ।
ದರ್ಿಡೆ ನಿಚ್ಚ ಮೂಡುವ ದಿವಾಕರಂಗಿನಿತುಗ್ರವೆಲ್ಲಿಯದು ನಾವರಿಯಲೂ॥
॥ ೯ ॥

ನೆಲ ಹೊತ್ತಿ ಹೊಗೆದಕಾವಲಿಗೆ ಸಿಲೆ ಬೆಂದು ಕಾ ।
ದೊಲೆಯು ಗುಂಡಿಂಗೆ ಕಿರುಮರಳುಗಳು ಕಿಡಿಗಳಿಗೆ ।
ಸಲೆ ಮಳಲು ಹುರಿದಮಳಲಿಂಗೆಡೆಯ ಹುಡಿಯೊಡ್ಡಿದಾವಗೆಯು ಹೊಸಧೂ
ಎಲರಟ್ಟಮಡಕೆಯುಸುರಿಂಗೆ ಹೊಯ್ಕ್ಕಿಯೆನಿಸಿ । (ಮಕೇ॥
ನೆಲಸಿದ ವಿಭೇದದಿಂದಿರಲದರೊಳಾದಯ್ಯ ।
ನೆಳೆಸೋಮನಾಥ! ಸೋಮಯ್ಯ! ಸೋಮೇಶ! ಸೊಡ್ಡಳ! ಶರಣೆನುತನಡೆದ
ನೂ ॥ ೧೦ ॥

ಊರಿ ನಡೆನಡೆದು ಕೈಗಳು ಸುಲಿದು ಪೊಳಕಾಲ್ಗ ।
ಳೇರುವಟ್ಟಂತೊಡೆದು ತೆವಳಪಚ್ಚಳವೊಳಗು ।
ದೋರಿ ಕೆಂಗಲಿಸಿ ನಡೆಯುಡುಗಿ ಚಲಿಸಲ್ಕುಪಾಯಂಗಾಣದುರೆ ಡಗೆಯನೂ॥
ಹೇರಿದೊಡಲತಿನೆಳಲನೆಳಸುತಿರೆ ಕೆಲದೊಳ್ಳೆ ।
ದಾರು ಮಾರಳವಿಯೊಳು ಹಬ್ಬಿದೊಂದಾಲ ಮುಂ ।
ದೋರೆ ಕಂಡೆಂತಕ್ಕೆ ತೆವಳ ಬಂದದರ ನೆಳಲಂ ಸಾರ್ದನಾದಯ್ಯನೂ ॥೧೧॥

ನಲಿದಾರವೆಯು ನಿಕ್ಕಿದನ ಕುಲಂ ಕೆಡದೆ ಸಲೆ ।
ನೆಲಸಿಪ್ಪುದಿಂತೆಂದು ಪೇಳ್ವಂತೆ ಹಬ್ಬಿ ಹರ ।
ಕಲಿಸಿತ್ತು ಹಲಕಾಲ ಬೀಳಲಾಗಿಯು ಬೀಳದೆಂತಕ್ಕೆ ಕೊಂಬುಜಡಿದೂ ‖
ನೆಲಕೆ ಬೀಳಲು ಬಿದ್ದುದಲ್ಲದೇನುಂನೋಯು ।
ದಲೆ ಯೆಂಬ ಜಾಣ್ನುಡಿಗೆ ನೆಲೆಯಾಯ್ತು ಹಲವು ಬೀ ।
ಳಲು ಮೆರೆದುದಾಲ ವತಿಲೀಲೆಯಿಂ ಮೂಲೋಕದಾಲಿಯುಂ ಸೋಲಿಸಿದುದೂ ।
‖ ೧೨ ‖

ಹಗೆ ಯೆನಗೆ ಮಳೆಗಾಲ ಮದರ ಬಲದಿಂದ ತಾ ।
ನೊಗೆದು ಕವಲಿರಿದು ಬೆಳದೆಂನ ಕಿರಣಂಗಳಂ ।
ಹೊಗಲೀಯೆನೆಂಬುದೀಮರನುಳಯುಲೀಯೆ ನಿದನೆಂದಂದುಹಗಲೊಡೆಯ
ಮಿಗೆ ಬಿಸಿಲ ಬೆಂಕಿಯಿಂ ಸುಟ್ಟೊಡೆಲೆ ಬೆಂದು ಕೊ ।　　(ನೂ ‖
ಳ್ಳಿಗಳ ಕೊನೆ ಯುರಿದಪ್ಪವೆನಲಲೆಗಳುದಿರ್ದಕೊಂ ।
ಬುಗಳ ಕಡೆ ಪ್ರೊದೊಂದು ಕೆಂದಳರನುಗುಳಲೆಸದಿದುರ್ದಾಹೋರಾಲವೂ
‖ ೧೩ ‖

ಆಮರನ ನೆಳಲುರಿಯುನೆಳಲ ತೆರನಾಗೆ ನಿ ।
ಷ್ಕಾಮಿಯೆನಿಪಾದಮ್ಯನಿನ್ನೀಶರೀರದ ।
ವ್ಯಾಮೋಹವೇಕೆಂದು ನಿರ್ವೇಗದಿಂದೆಸುಯುಸುಯ್ದು ಹುಲಿಗೆರೆಯೊಳನ್ನಾ‖
ಕಾಮಿನಿಯು ತಂದೆಗಿತ್ತವಧಿ ಯೇನಾಯ್ತೆನು ।
ತ್ತಾಮಹಿಮನೆಣಿಸಲಿಪ್ಪತ್ತೆಂಟುದಿನ ವಾಯ್ತು ।
ಸೋಮನಾಥಾಸಿಕ್ಕನಿನ್ನೆಂದು ನಿಶ್ಚಯಿಸಿ ಬಳಿಕ ಹಂಮದ ಪ್ರೋದನೂ
‖ ೧೪ ‖

ತನ್ನಿಂದತಾನೆ ಮುತ್ತಿಚ್ಚತ್ತುಕರಚರಣ ।
ದಿಂನಡೆದೊಡೇಂ ತೆವಳಿ ಪಚ್ಚಳಂ ಸುಲಿದೊಳಗೆ ।
ಬೆಂನನಟ್ಟೆಲುದೋರುವಂತೆ ಬಾದಣವಾದಹುಣ್ಗೆ ಹೆಡ್ಡೈಸದೆದ್ದೂ ‖
ಇಂನುಕಿರಿದುಂದಾರಿಯಿಂ ನಡೆವೆನೆಂದು ಮನ ।
ಮುಂನೆರೆಯೆ ಬಲಿದೆರಡಡಿಯು ನಡೆದು ಕೆಡೆದು ಮೇ ।
ಲಿಂನೇನುಗತಿ ಯೆಂದೊರಲಿ ಹೊರಳ್ದುರುಳ್ದು ಹೋಗುತಿರ್ದನಂದಾದಯ್ಯ
(ನೂ ‖ ೧೫ ‖

ಯಿಂತುನಡೆದಿಂಸೆಂತು ಸೌರಾಷ್ಟ್ರಮಂ ಹೊಕ್ಕು ।
ಕಂತುಮದಹಾರಿಸೋಮಯ್ಯನಂ ನುಡಿದವಧಿ ।
ಪಿಂತಾಗದೊಯ್ದು ಹುಲಿಗೆರೆಯಲ್ಲಿ ಸುರಹೊಂನೆಮಸದಿಯೊಳಗಿಪ್ಪರುಹನಾ ॥
ಹಾತವಂ ಮುರಿದೊಡೆದು ನಿಲಿಸಿದಪೆನೆಂದಧಿಕ ।
ಚಿಂತೆಯಿಂದುರುಳೆ ತರದೆಲುದೋರೆ ಕಾಯ ಕಾ ।
ಲಾಂತಕಾ! ಸೌರಾಷ್ಟ್ರಪತಿ ಸೋಮನಾಥಶರಣೆನುತಿರ್ದನಾದಯ್ಯನು ॥ ೧೬ ॥

ಅಕ್ಕಟಾ! ದಾರಿಯೊಳು ದಿನವೆಯ್ದೆ ಸವೆದುದಿಂ ।
ಸುಕ್ಕಿನುಡಿವಾರುಹತರಿಗೆ ಜಿಹ್ವೆಯೊಂಮೊಳ ।
ಕ್ಕಕ್ಕು ಮಾಲೋಕದೊಳಗಧಿಕಶೈವಕ್ಕೆ ಕಡುಕುಂದವಾಂತಂದೆನೆಂದೂ ॥
ತಕ್ಕುಗೆಟ್ಟೊರಲಿ ಬಾಯಾರಿ ಸೌರಾಷ್ಟ್ರಪತಿ ।
ಮುಕ್ಕಣ್ಣಸೋಮಯ್ಯ ಕರುಣದಿಂದಿದಿರಾಗಿ ।
ಬಕ್ಕನಾನಿನಿತು ನಿಷ್ಠನೆ ಯೆನುತ್ತಂಬಾಡಿ ಬಸವಳಿದ ನಾದಯ್ಯನು ॥ ೧೭ ॥

ಮುಂದುಗೆಟ್ಟರಿವುಗೆಟ್ಟಾಸತ್ತು ಬೇಸತ್ತು ।
ನೊಂದಬಳನಾಗಿ ಕಲುಮರನಾಗಿ ಮರುಳಾಗಿ ।
ಮಂದಮತಿಯಾಗಿ ದೇಸಿಗನಾಗಿ ಬೀದಿಗರುವಾಗಿ ಮೊಗಮೋಟನಾಗೀ ॥
ಎಂಮವರೆ ಕಾಡಿದಪೆ ತಂದೆ ನಾಸಿತ್ತವಧಿ ।
ಬಂದುದೇಗುವೆನು ಕರುಣಿಸಿಬಾರ ಬಾರದೊಡೆ ।
ಬಂದುಕೊಂದಾದೊಡಂಪೋಹುದೆನೆವಿಾರಿ ಹಂಬಲಿಸಿ ಹಲವಂನುಡಿದನು ॥ ೧೮ ॥

ಗುರುದೇವರಾರೋಗಿಸದೆ ಹೋದ ಮರುಕಪ್ರೊಂ ।
ವರುಹನೆದೆ ಬಿರಿಯೆ ಶಿವನಂ ನಿಲಿಸುವತಿತವಕ ।
ವೆರಡು ಪದುಮಾವತಿಯಗಲ್ಕೆಯುಂಮಳಮೂರು ಬಸವಳಿದ ಚಿಂತೆ ನಾ
ನೆರವಿಲ್ಲದಳಲ್ಕೈದಃ ಬಿಸಿಲಬೇಗೆಯಬೆಂಕಿ । (ಲ್ಕು ॥
ಯುರಿಯಾರು ಕೊಟ್ಟವಧಿ ತೀರ್ದ ಸಂಕಟವೇಳು ।
ಹರನಕಾಣದ ಖಾತಿಯೆಂಟಾಗಲೆಂಟುಮುಖದಿಂದಧಾವತಿಗೊಂಡನು ॥ ೧೯ ॥

ದಾನಿ ಸೌರಾಷ್ಟ್ರಪತಿ ಸೋಮಯ್ಯ ಕಾರುಣ್ಯ |
ಹೀನನಾಗಿರ್ದಪೆ ? ಯಿದೇನಯ್ಯ ಪ್ರಾಣನಾಥ |
ಮಾನ ನಿನ್ನದು ನಿನ್ನಜಾನದಿಂದಾರಿಯುಂನಡೆನಡೆದು ದೆಸೆಗೆಡುವ್ರೊಡೇ ||
ಆನಿದೆನಿದೇನಂಜದಿರುಯೆಂದು ಬಂದೆನ್ನ |
ಹಾನಿಗೊಳಗಾಗಿಸದೆ ನಿಜಮೂರ್ತಿಯಂ ತೋರ್ಪು |
ದೋನನ್ನ ತಂದೆ ! ಭಕ್ತರಬಂಧು ನೆಂಬಬಿರಿದೇನಾದುದೆನುತಿರ್ದನೂ || ೨೦ ||

ಅಯ್ಯೋ ಮಹಾದೇವ ! ಬಾಣಂಗೆ ಪದವಿಯುಂ |
ಕಯ್ಯವೋಲಿತ್ತವನೆ! ಕಣ್ಣಿತ್ತು ಕಾಳಿದಾ |
ಸಯ್ಯನಂ ಮೆರೆದವನೆ ! ಧರೆಯುಲ್ಲರರಿವಂತೆ ಮ್ಯೆಯಿತ್ತು ಮ್ಯೆಯೂರನಾ ||
ಮೆಯ್ಯಾರ ಕೂಡಿದನೆ ! ಯೆನ್ನನೇಕೊಲ್ಲ? ಹೇ |
ಳಯ್ಯ ಯೆನ್ನಂದುತನಕಳಲಿಸುವೆ ನೀನೆಂದು |
ಹುಯ್ಯಲಿಕ್ಕಿದನು ಸೌರಾಷ್ಟ್ರಪತಿ ಸೋಮನಾಥನ ನಂಬಿದಾವಯ್ಯನೂ || ೨೧ ||

ವರರಜತಗಿರಿಗೋಹಿಲನ ತನುವ ನುದ್ಘಟನ |
ಪುರವಂ ಹಲಾಯುಧಯ್ಯನ ನವಗ್ರಾಮವುಂ |
ಗುರುಸಾಮವೇದಿಗಳ ಛತ್ತೀಸಪುರವ ನಗ್ಗದಮಳೆಯುರಾಜನೆಂಬಾ ||
ಧರಣಿಪನ ನವಲಕ್ಷದೇಶವುಂ ಕೊಂಡೊಯ್ದು |
ಕರುಣಿ ನಾನಾವುದಂ ಕೊಂಡೊಯ್ಯ ಹೇಳ ಕರ |
ಕರೆಸಿದೆನೆ ? ನಿಜರೂಪತೋರೆಂದೊಡಿಹಪಕ್ಷಪರಪಕ್ಷವೇಕೆಂದನೂ || ೨೨ ||

ಸಾಯೆ ನೋಡುವ ಕರುಣಿಸೋಮಯ್ಯ ! ಬೇಡಿದರಿ |
ಗೀಯದಳಲಿಪ ದಾನಿ ಸೋಮಯ್ಯ ! ನಂಬಿದರ |
ನಾಯತಿಕೆಗೆಡಿಪ ದಾಕ್ಷಿಣ್ಯಪರ ಸೋಮಯ್ಯ ! ಕ್ಯೆಯೆತ್ತಿಕರೆದುಕರೆದೂ ||
ಬಾಯಾರುತಿರೆ ಬಾರದತಿಸುಲಭಸೋಮಯ್ಯ ! |
ಕಾಯುವಸುವರೆಯಾಗಿ ಹುಯ್ಯಲಿಡ ಲೊಂಮೆ ಕೇ |
ಳ್ದೀಯೆಂದೊಡನ್ಯಾಯವೇತಂದೆ ತುಟವಿಹುಕದಿರಲೇಕೆಹೇಳೆಂದನೂ || ೨೩ ||

ವೇದಂ ಪುರಾಣಶಾಸ್ತ್ರಂ ಹರಿವಿರಿಂಚಿಸುರ ।
ರಾದಿಯಂತ್ಯವ ನರಿಯರೆಂದೆಲ್ಲರುಂ ಪೇಳ್ವ ।
ಮಾದೇವನಂ ತಿಂಗಳಂದಿಂಗೆ ಸೌರಾಷ್ಟ್ರದಿಂದ ತಂದಪ್ಪೆನೆಂದೂ ॥
ಆದುರುಳಸವಣಂಗೆ ನುಡಿದವಧಿ ತೀರ್ವಹದ ।
ನಾದುದುಳದೆರಡು ದಿನದೊಳಗೆಂತುಮಾಳ್ಪೆನೆಂ ।
ದಾದಯ್ಯ ತನ್ನ ನನ್ನಿಯ ಬನ್ನದುದಯಮಂ ಕಂಡು ಕರಬೆಂಡಾದನೂ
॥ ೨೪ ॥

ಹುಳಮಡಕೆಯೊಳು ನವಕ್ಷೀರ ಹೊಕ್ಕಂತಮಲ ।
ಜಲದೊಳುತ್ತಮಜೇನುತುಪ್ಪ ಹೊಕ್ಕಂತೆಲರು।
ಸುಳಿವ ಬಯಲೊಳು ದೀಪ ಹೊಕ್ಕಂತೆ ದಳ್ಳುರಿಯೊಳಗೆ ಕುಸುಮಹೊಕ್ಕಂ
ಎಳಸಿ ದುರ್ಜನರೊಳಗೆ ಸಜ್ಜನರು ಹೊಕ್ಕಗುಣ । (ತಿರೇ ॥
ವಳದು ಕೆಟ್ಟಂತಂನ ಪಾಪಿದೇಹದೊಳು ನಿ ।
ರ್ಮಳಭಾಷೆ ಯೊಂದೊಳಗೆ ಹೊಕ್ಕು ಕೆಟ್ಟುದು ಮಹಾದೇವಶಿವಧೋಯೆಂ
ದನೂ ॥ ೨೫ ॥

ಶಶಿಶೇಖರಾ ! ನಿನ್ನ ಕಡೆಗಂಣ ಕಾರುಣ್ಯ ।
ರಸವರತುದೇ ? ಕೃಪಾಗುಣಂ ಮುರುಟಿತೆ ? ದಯಾ ।
ವ್ಯಸನವರೆಯಾಯ್ತೆ ? ದಾಕ್ಷಿಣ್ಯವೇಂಬೀತುದೇ ? ಭಕ್ತಾನುಕಂಪಿಯೆಂಬಾ॥
ಹೆಸರುಹೋದುದೆ ? ಭೂತದಯವರತುದೇ ? ಜಗದೊ ।
ಳೆಸೆದಿರ್ಪ ಸರ್ವಗತನೆಂಬ ಬಿರುದಂ ಬಿಸುಟೆ? ।
ಹಸನಾಯ್ತು ನಿನ್ನ ನಂಬಿದರುಂಬರೆಂದೆನುತ ಬಾಯ್ಬಿಟ್ಟನಾದಯ್ಯನೂ
॥ [illegible] ॥

ಬಿಡುವುದರಿದಲ್ಲೆನ್ನ ಜೀವಮಂ ಬಿಟ್ಟೆನಾ ।
ದೊಡೆ ನುಡಿದ ಭಾಷೆ ಸಲ್ಲದು ಸಲ್ಲದಿರಲೆನ್ನ ।
ಮಡದಿಯಯ್ಯಂ ನಗುವನೆನ್ನಸತಿ ಸೌರಾಷ್ಟ್ರಸೋಮಯ್ಯ ಬಂದಲ್ಲದೇ ॥
ಬಡಲೊಳನ್ನವನಿಕ್ಕೆನೆಂದವಳಭಾಷೆಯಲೆ ।
ಪ್ಮೃಡನೆ ! ನಿನಗಿನಿತುಂ ವಿನೋದವಾಗಿರ್ಪುದೇ? ।
ನುಡಿಯದೇಕಿರ್ದಪೆಯುಮಾದೇವಪೇಳೆನುತ್ತಾದಯ್ಯನಿಂತೆಂದನೂ ॥ ೨೭ ॥

ನಡೆಯಲಾರದೊಡೇನೊ ಕಯ್ಯೂರಿ ನಡೆವೆನೆಂ ।
ಬೊಡೆ ದಾರಿ ದೂರ ವದಕೇನೊಂದೊಡಾನು ಹಲ ।
ವೆಡೆಗೆಯ್ದುಹೋಹೆನೆಂದೊಡೆ ಕೊಟ್ಟವಧಿತೀರ್ದುದಿಂನೆಂತು ಮಾಳ್ಪನೆಂ
ಕಡೆಗಿವಂ ಮಗುಳ್ದು ತನ್ನೂರ್ಗೆ ಪೋಗದೆಮಾಣ । (ದೂ ॥
ನೆಡೆಯೊಳಂನೆನ್ನರೂಪಂ ತೋರಲೇಕೆಂದು ।
ಮೃಡನೆ ನೀನಡಗಿರ್ದೊಡಿಹೆಯಲ್ಲದೆಂನ ಫಲವಂ ಕೇಳು ಕೇಳೆಂದನೂ ॥ ೨೮ ॥

ಕೊಟ್ಟವಧಿ ತೀರ್ದೊಡಂ ತನು ಸತ್ವ ಗೆಟ್ಟೊಡಂ ।
ಬಟ್ಟೆಪಿರಿದಾದೊಡಂ ಹುಲಿ ಕರಡಿ ಸಿಂಹವರೆ ।
ಯಟ್ಟಿ ಘರ್ಜಿಸಿದೊಡಂ ಭೂತವೇತಾಳ ಶಾಕಿನಿಡಾಕಿನೀಗ್ರಹಕುಲಂ ॥
ನಟ್ಟಿರುಳು ಬಂದಂಜಿಸಿದೊಡಂ ಮಹಾರೌದ್ರ ।
ದಟ್ಟಡವಿಯಿಂ ಹೋಗೆ ನಿಂದೆನ್ನ ಹರಣಮಂ ।
ಬಿಟ್ಟು ಕಳೆವುದೆ ಸಿದ್ಧವಿಂನೇನು ಸೋಮೇಶ ಕೇಳೆಂದ ನಾದಯ್ಯನೂ ॥ ೨೯ ॥

ಬಿಡದೊರಲಿ ಬೆಂಡಾಗಿ ಮರನಂತೆ ಮಲಗಿಕುಂ ।
ಬಿಡುವಶ್ರುಮಕ್ಕೆ ಸೈರಿಸದೆ ಕಣ್ಮುಚ್ಚಿ ಮಿಡು ।
ಮಿಡುಕುತಿರಲೆದ್ದೆದ್ದು ತಂಗಾಳಿತೀಡೆಹಾ ಯೆಂದು ಹಾರೈಸಿದಣಿದೂ ॥
ಕಡುರೂಕ್ಷದೊಳಗಿದೆಲ್ಲಿಯುದೆನುತ್ತೆದ್ದು ಮುರಿ ।
ದಡಸಿ ನೋಡುತ್ತಿರಲು ದೂರದಲಿ ವೃದ್ಧತಂ ।
ಮುಡಿಯುರೂಪಿಂತೋರಿದಂ ಕರುಣಿಸೌರಾಷ್ಟ್ರಪುರದರಸಸೋಮೇಶನೂ ॥ ೩೦ ॥

ನರೆತ ಜೆಡೆ ತೂಗುದಲೆ ಹೊರಹಲ್ಲು ಬಿದ್ದಧರ ।
ಕರದೂರುಗೋಲು ಬಾಗಿದಬೆನ್ನು ಮಂದಗತಿ ।
ಕರವತಿಗೆ ಸರ್ವಾಂಗ ಭಸಿತದಾಧಾರ ರುದ್ರಾಕ್ಷಿಯುಪವೀತವೆರಸೀ ॥
ಧರೆಗಧಿಕವೃದ್ಧತೆಯ ನುದ್ಧರಿಸಲೆಂದಿದನು ।
ಧರಿಸಿದನೊ ನುತ ಪುಣ್ಯಹಂಣಾಯ್ತೊ ಹೇಳೆನಿಸಿ ।
ವರವೃದ್ಧವೇಷದೀಶ್ವರನಾದಿ ಮಯ್ಯನಿದ್ದಾಲದತ್ತಲು ನಡೆದನೂ ॥ ೩೧ ॥

ದಂತವಿಲ್ಲುಣಿಸಿಲ್ಲದಾತಂಗಿದೇವುದೆಂ ।
ಬಂತುಡಿಗೆಯಿಲ್ಲಂ ದಿಗಂಬರಂಗೇವುದೆಂ ।
ಬಂತೆ ಘಮ್ಮನೆ ಕೇಳ್ವುದಿಲ್ಲವೇದಂಕೂಗೆ ಕೇಳ್ವುದಿಲ್ಲೆಂಬಂದದೀ ॥
ಮುಂತೆ ನಡೆವಘಟಲ್ಲ ಪರಿಪೂರ್ಣತೆಯನುಪೇ ।
ಳ್ವಂತೆ ತಲೆದೂಗುತಿಹುದಿರವಿದೆನಗೆಂದು ಪೇ ।
ಳ್ವಂತೆಯುಷ್ಟಿಯಬಿಡಂ ಸಕಲತನ್ನಾಧಾರವೆಂದು ಪೇಳ್ವಂತೆಸೆದನೂ ॥ ೩೨ ॥

ರಸೆಗೆ ಪೊಸತೆಂದೆನಿಸುವತಿವೃದ್ಧತಾಪಸಂ ।
ನಸಿದೊಯ್ಯನೊಯ್ಯನೈತಂದು ನೆಳಲಂ ಸಾರ್ದು ।
ಕುಸಿವಜೆನ್ನಂ ನಿವುಚಿಕೊಳುತ ಶಿವಶಿವಮಹಾದೇವಎನುತುಂ ಕುಳ್ಳಿರೇ ॥
ಹೊಸೆವ ಹುಡಿಗುಟ್ಟುತಿಹ ಹಸಿವುನೀರಡಿಕೆಗಳು ।
ಮಸುಳಿಸಿ ಮಹಾಶ್ರಮಂ ಕೆಟ್ಟು ಶೈತ್ಯಂ ತನುವ ।
ಮುಸುಕಿ ಪರಿಣಾಮ ವಾಪರಿಸಿಸುಖಸಂತುಷ್ಟನಾದನಂದಾದಯ್ಯನೂ ॥ ೩೩ ॥

ಕ[illegible]ವೃದ್ಧರಪ್ಪ ಮಾಹೇಶ್ವರರಿವರ್ ಮಹಾ ।
ಪುರುಷರೆಲ್ಲಿಂದ ಬಿಜಯಂಗೈದರೋ ಕ್ರೂರ ।
ತರಮೃಗಾದಿಗಳ ಬಾಧೆಯ ಬಗೆಯದಿವರಕಂಡೆನಗೀ ಶರೀರಶ್ರಮಂ ॥
ಪರಿಹರಿಸಿತೆನ್ನ ಜನ್ಮಂ ಸಫಲಮೀಶ್ವರಂ ।
ಕರದೊಡೋಯೆಂನ ತನ್ನಂತೋರನಿಂದೆನ್ನ ।
ಹರಣಮಂಬಿಡುವ ಪದದೊಳು ಭಕ್ತನಂ ಕಂಡೆನೆಂದನಂದಾದಯ್ಯನೂ ॥ ೩೪ ॥

ಶರಣೆಂದು ವಂದನಂಗೈದು ಪರಿಣಾಮವಾ ।
ವರಿಸಿ ಬಲವಾದಲ್ಲಿ ಹೋದಪೆಂ ಮತ್ತೆ ನಾ ।
ಲ್ಕಿರಡಡಿಯ ನವೆದನಿತುದಾರಿ ನವೆಯಲಿ ಮತ್ತೆ ಮೇಲೆಸತ್ವಂಗೆಟ್ಟೊಡೇ ॥
ಹೊರಳ್ದು ನಡೆದುರುಳ್ದು ಕಡೆಗೀಶರೀರಂನವೆದು ।
ಮರಣಮಂ ಕಾಣ್ಬಂದುತನಕ ನಡೆದಪೆನಿನ್ನು ।
ಹರನಕಾಣ್ಬಾಸೆಯೇಕವಧಿತುಂಬಲುಬಂದುದೆನುತೆ ನಡೆಗೊಂಡನಂದಾ ॥ ೩೫ ॥

ಬರುತಖಿಳ ಸುಖಸಮೇತಂ ಸುಖಾಸನದೊಳೆ ।
ಯ್ತರೆ ಸವೆದದಿನವನೀದಾರಿಯಳವಿಯುಸರಿಯು ।
ದಿರೆ ತಿಂಗಳಂದಿಗೆ ಸೋಮನಾಥನತಂದೆ ಜಿನನಸೊಡೆದಪ್ಪೆನೆಂದೂ ||
ಕೆರಳೀಪ್ರತಿಜ್ಞೆ ಮಾಡಿದೆನೆನ್ನನಿಷ್ಟ್ರಸು ।
ಸ್ಥಿರವಾದೊಡಭವಸಿದಿರೊಳೆ ಬಾರದಿರನಿನ್ನು ।
ಹರಣಮಂ ಸೌರಾಷ್ಟ್ರಪುರವತ್ತಪೋಗುತ್ತ ಬಿಡುವೆನೆನುತಂ ನಡೆದನೂ
|| ೩೬ ||

ನಿಲ್ಲುಹೋಗದಿರಯ್ಯ ಶೀತಜಲವಂಬಲಿಯು ।
ನಲ್ಲವಂ ಮೊಸರೋಗರವ ತಂದೆನೆನಗೊಬ್ಬ ।
ರಿಲ್ಲದುಣಬಾರದತಿಹಸಿದು ಕಣ್ಣಲಿ ಹರಣವೀಹೂಯ್ತುಬಪ್ಪಾಗಳೂ ||
ಎಲ್ಲಿಯುಂಭಕ್ತರಂ ಕಾಣದೆ ಬರುತ್ತನಿ ।
ನ್ನಲ್ಲಿಗಯ್ತಂದೆ ಸಿದಕೋತಂದೆಯೆಂದೊಡಾ ।
ನೊಲ್ಲೆನೆಳೆಯುಯ್ಯ ಮತ್ತೊಬ್ಬರಂಗಳೆಸಿಕೊಳ್ಳೆಂದೆನುತೆ ನಡೆಗೊಂಡನು
|| ೩೭ ||

ದುಡುದುಡನೆ ದಾರಿಗಡ್ಡಂಬಂದು ಹಸ್ತಮಂ ।
ತುಡುಕಿಹಿಡಿದೇಕೊಲ್ಲೆತಂದೆ ಹೇಳೆನಲೊಲ್ಲೆ ।
ಬಿಡುಬಿಡೆನಗುಣಬಾರದೆಂದೊಡೇಕುಣಬಾರದೆಲೆ ಮರುಳುಮಗನೆಯೆನ
ವ್ವೃಡಸೋಮನಾಥನಂ ಕಂಡಬಳಿಕಲ್ಲದಿಂ ।　　(೮೦ ||
ನೆಡೆಯೊಳಳವಡದೆನಗೆ ನೇಮವಳಲಿಸದೆಬಿ ।
ಟ್ಟೊಡೆಸಾಕು ಹತ್ತುಸೂಳುಣಲಿಟ್ಟವಂ ಕಾಡಬೇಡೆಂದನಾದಯ್ಯನೂ
|| ೩೯ ||

ಮರುಳೆಯಿದಕೀಸುಮಾತೇಕೆಮ್ಮಕಯ್ಯೊಳೆ ।
ದ್ದರೆ ಸೋಮನಾಥದೇವಂ ನೇಮಮಾಡೆಸು ।
ತ್ತೊರೆದೊಡೀಪರಿಯಲ್ಲಸೋಮನಾಥಂ ತನ್ನನಿಜಮೂರ್ತಿಯಂ ತೋರಿಸೀ ||
ಕರುಣಿಸಿದೊಡಲ್ಲದಾನುಂಣೆನೆನೆ ಹಸನಾಯ್ತು ।
ಕರುಣಿ ಕಾಣಿಸಿಕೊಳ್ಳದೇಕಿಪ್ಪನಿನ್ನುಚಿ ।
ಚ್ಚರಗಾಣದೇಕಿಪ್ಪೆ ನೀನೆನುತ್ತಾ ಭಕ್ತನಾದಯ್ಯನಂನಕ್ಕನೂ　　|| ೪೧ ||

ನಗಲೇಕೆ ? ದೇವ ಮರಣಾಂತ್ಯದಿಂ ಮೇಲೆ ಮಾ।
ತುಗಳುಂಟೆ ? ತನ್ನರೂಪಂ ಕಾಣಲೀಯದೊಡೆ ।
ಮಿಗೆಸಾಯಲೀಯನೇ ? ಬೆಂದಹುಣ್ಣಿಂ ಕಂಬಿಯಲಿಕೀಸಲೇಕೆಂದೆನೇ ॥
ನಗೆಯೆಲ್ಲ ನಿಷ್ಕರುಣಿ ದೇವನೆಂಬಾತ ನೀಂ ।
ಮಗುವು ಬಳಲಿದೆ ದೂರವೆಂದೆವೈಸಲ್ಲದೆಲೆ ।
ಮಗನೆಹಸಿದಿರಲಾರೆನೊಂದು ತುತ್ತಂಕೊಳ್ವುದೆನಲೆಂದನಾದಯ್ಯನೂ ॥೪೦॥

ಬಂದುತಿಂಗಳ್ಗೆ ಸೌರಾಷ್ಟ್ರಪತಿ ಸೋಮನಂ ।
ತಂದಲ್ಲದುಂಣೆನೆಂದತಿಭಾಷೆಯಂ ನುಡಿದು ।
ಬಂದುದರಿನೊಲ್ಲೆನೆನೆ ಯಕ್ಕಕ್ಕಯೆನಿತುದಿನ ಪಿಂದಾದುದವಧಿಯೊಳಗೇ ॥
ಮುಂದೆದಿನವೆರಡುಳಯೆ ದಿವಸವಿಪ್ಪತ್ತೆಂಟು ।
ಸಂದುದೆಂದೆನೆಕೈಯ ಬೆರಳವಮೂಗಿನಮೇಲೆ ।
ತಂದಿಟ್ಟು ಕೌತುಕಂಬಟ್ಟು ನುಡಿದಂ ಭಕ್ತನಾದಯ್ಯನಂನೋಡುತಾ ॥ ೪೧ ॥

ತೀರಿತ್ತವಧಿಯೆರಡು ದಿನವುಳಯೆನೀಬಂದ ।
ದಾರಿಯರ್ಧಂ ಸವೆಯದಿನ್ನೆಂದು ನೀಂಪೋಗಿ ।
ಸೌರಾಷ್ಟ್ರದಿಂದ ಸೋಮಯ್ಯನಂ ತಪ್ಪೆಯುಂಡಿಲ್ಲಿಂದ ಮರಳೆಂದೆನೇ ॥
ಆರಾಧ್ಯರೀಶ್ವರಾರ್ಚಕರೆಂದು ನುಡಿದುದಂ ।
ಸ್ಮರಿಸಿದೆ ನಿಂನು ಬಿಜಯಂ ಗೈವುದೆನಲು ಮದ ।
ನಾರಿ ಮನದೊಳು ಮೆಚ್ಚಿ ಕೆಚ್ಚೆದೆಯುವಂ ಮತ್ತೆನುಡಿದನಾದಯ್ಯನೊಡನೇ ॥ ೪೨ ॥

ನೀಮಗುವು ಮುಂದರಿಯೆ ಹೋದೊಡೇನಹುದಲ್ಲಿ ।
ಸೋಮಯ್ಯನಂಕಂಡು ಬಲ್ಲುದುಂಟೇಯೆಂದೊ ।
ಡಾಮುನ್ನ ಕಂಡರಿಯೆನೆನಲಿನ್ನು ಕಾಂಡರಿವುದಕ್ಕೆ ತೆರನಾವುದೆನಲೂ ॥
ಸೋಮನಾಥಾ ! ಸೊಡ್ಡಳಾ ! ಸೋಯಿಗಾ ! ಸೋಮಾ ! ।
ಸೋಮಯ್ಯ ! ಯೆಂದು ನಾನೊರಲು ತಿರೆಬಂದುಕೇ ।
ಳ್ದಾಮಹಾಮೂರ್ತಿಯಂ ಕರುಣದಿಂ ತೋರಿಸಿದೊಡಾಂ ಕಾಣಬಲ್ಲೆನೆನಲೂ ॥ ೪೩ ॥

ಆದೊಡಂಜದೆ ಸೋಮನಾಥನೆಂಬಾತನಾ ।
ನಿದೇನೆನೆ ನಿಂಮರೂಪೆಮ್ಮ ಪುರಮರ್ದನನ ।
ಹೋದಹೊಲಬಲ್ಲ ಹುಸಿಯದಿರೆಂದೊಡಾತಂಗಾವುದು ಕುರುಹುಹೇಳೆಂದೆ (ನೆ॥
ಆದ್ಯರುಂವೇದ್ಯರುಂ ಪೇಳ್ದದನು ಕೇಳ ನಾ ।
ನಾದಿಮಧ್ಯಾಂತರಹಿತನ ರೂಪ ಬಲ್ಲೆನೆನ ।
ಲಾದಿಮಯ್ಯನ ಮನದೊಳಿರ್ದ ನಿಜಮೂರ್ತಿಯಂ ತೋರಲುದ್ಯತನಾದನು ॥ ೪೪ ॥

ಜೆಡೆಗಳೆಡೆಯೊಳು ಸುಳಿವ ಗಂಗೆ ಗಂಗಾನದಿಯು ।
ತಡಿಯು ಶಶಿ ಶಶಿ ವೆಳಗುಕವಿದ ಹಣೆಗಂಣು ಕ ।
ಣ್ಕಿಡಿವೆಳಗಿನಿಂ ತೊಳಪ ಮುಖ ಮುಖದ ಕೆಲದ ಕುಂಡಲಕುಂಡಲದ ಕಾಂ
ಕಡುಗಪ್ಪಸುಗುಳ್ವ ವಿಷ ವಿಷಮಂ ಸವಿವ ರುಂಡ । (ತಿಯಾ॥
ತೊಡಿಗೆ ತೊಡಿಗೆಗೆ ತಕ್ಕ ಪುಲಿದೊವಲು ತೊವಲನುಗಿ ।
ವಡೆದಾಯುಧಂಗಳಾಯುಧವಿಡಿದ ದಶಭುಜದ ನೀರ ನಿಜಮಂತೋರಲೂ ॥ ೪೫ ॥

ಮೀರಿ ಕಂಡಂ ಕಂಡುತನುವಿನೊಳು ಪುಳಕಮಂ ।
ಹೇರಿದಂ ಸಂತಸವನೇರಿದಂ ಜನನಮಂ ।
ಮೂರಿದಂ ಕಳೆಗಳಂ ಬೀರಿದಂ ವಿಪುಳಡಗೆಯಾರಿದಂ ಸಂಸಾರದಿಂ ॥
ಜಾರಿದಂ ನಿಷ್ಠೆಯಂ ತೋರಿದಂ ಹಗೆಗಳಂ ।
ಕೇರಿದಂ ಭಕ್ತಿಯಂ ಸಾರಿದಂ ಚಿಂತೆಯಂ ।
ತೂರಿದಂ ಶಿವನಡಿಗೆ ಮಾರುಗೊಟ್ಟಂ ಮನವನಪ್ರತಿಮನಾದಯ್ಯನೂ ॥ ೪೬ ॥

ಶರಣು ಹಿಮಕರಧಾರಿ! ಶರಣು ಮನ್ಮಥವೈರಿ! ।
ಶರಣು ವೇದಾತೀತ! ಶರಣು ಶರಣಪ್ರೀತ! ।
ಶರಣು ಗಿರಿಜಾನಾಥ! ಶರಣು ವೃಷಭಾರೂಢ! ಶರಣುಲೋಕೈಕನಾಥಾ! ॥
ಶರಣು ಶಿವ! ಶರಣು ಭವ! ಶರಣು ಹರ! ಶರಣು ಮೃಡ! ।
ಶರಣು ಗತಿ! ಶರಣು ಮತಿ! ಶರಣಾಗೆಸುತ ಕೆಡೆದು ।
ಹೊರಳವಿಡಿದಾನಂದಜಲದಿಂದ ತೊಳೆದನಘದೂರನಡಿದಾವರೆಯನೂ ॥ ೪೭ ॥

ಒಗೆವಶ್ರುಜಲದ ಮರೆಯೊಳು ನಯನ ಮುಚ್ಚೆದ್ದು ।
ನೆಗೆವ ಪುಳಕದ ಮರೆಯೊಳೊಡಲು ನಡುಕಂಗಳಮ ।
ರೆಗಳೊಳು ಕರ ಸೋಮ ಸೋಮನಾಥಾಯೆಂಬ ತೊದಲುಗಳ ಮರೆಯೊ
ಬಿಗಿದು ಪರವಶದ ಮರೆಯೊಳು ಚಿತ್ತ ವಡಗಿಸೆ । (ಳುಸುಡೀ ॥
ಟ್ಟಗೆ ಕಾಣಬಾರದಿರೆ ಶಿವಮೆಚ್ಚಿ ತಲೆವಡವಿ ।
ಮಗನೆ ಕಾರ‍್ಯಂ ಮುಂದದುಂಟು ನಿನಗೇಳೆಂದು ಮೊಗನೆತ್ತಿ ಕುಳ್ಳಿರಿಸಿದಾ
॥ ೪೮ ॥

ಶ್ರೀಯುಮಾಪತಿ ಶಿವಪ್ರತಿಶರಣತತಿಹಿತೋ ।
ಪಾಯನಿರ್ಮಾಯಸಿತಕಾಯ ಸೌರಾಷ್ಟ್ರಪುರ ।
ರಾಯಸೋಮೇಶ ಪುರನಾಶನಿಜವೇಷಮಂತೋರಲಂದಾದಯ್ಯನೂ ॥
ಹಾಯೆಂದು ಹರುಷಮಂ ತಂದು ಸುಖದೊಳು ನಂದು।
ಜೀಯಶಶಿಧರ!ದುರಿತಹರ!ದಯಾಕರ!ಯೆಂದು ।
ಕಾಯಮಂಮತ್ತೆ ಸಿರಿಚರಣದೊಳು ಕೆಡಹಿನುತಿಸಿದನಭವ ಮೆಚ್ಚುತಿರಲೂ
॥ ೪೯ ॥

ಕೊಡುವೆ ನೀಗಳೆವರವನೊಲ್ದು ಬೇಡಯ್ಯಯೆಂ ।
ದೊಡೆ ಬೇರೆವರವುಂಟೆ? ನೀನೆನ್ನಕೂಡೆ ಬಳ ।
ವಿಡಿದು ನಡೆ ತಂದು ಸೊಕ್ಕಿರ್ದ ಹುಲಿಗೆರೆಯ ಸುರಯೊಂನೆಯ ಮಹಾಬಸ
ದಡಿಗಜಿನನಂ ಹೊಳ್ದು ಬಳಕಾಂತ ನವಣರಂ । (ದಿಯಾ ॥
ಹುಡಿಗುಟ್ಟಿ ನಂದೀಶ್ವರನಮೇಲೆ ಮೂರ್ತಿಗೊಂ ।
ಡೊಡೆ ವರಂ ಬಂದುದೆನಲಾಪರಿಯಲೇಮಾಳ್ಪೆ ನಡೆಮುಂದೆ ಹೋಗೆಂದನೂ
॥ ೫೦ ॥

ಅಕಟಕಟ ವಿಶ್ವಪತಿಗೆನ್ನಯ ಬಳಲ್ಕೆಯುಂ ।
ಪ್ರಕಟಮಾಗಿರದೆ ಮುಂದೆನ್ನ ನೊಬ್ಬನನ್ನೇ ।
ತಕೆಕೃಪಾಕರ ಭೋಗವೇಳ್ದನೆನ್ನಯಮನಸ್ತಾಪಮಂ ಪೇಳ್ವೊಡೀಗ ॥
ಸಕಳೇಶನರಿಯದಿರನಾದೊಡಂ ಪೇಳ್ವೆನೆಂ ।
ದು ಕರಗಳಂ ಮುಗಿದು ದೇವ!ದೇವೇಶ! ಕೇಳ್ ।
ಭಕತವತ್ಸಲ! ಕರುಣದಿಂದೆಂನ ಬಿನ್ನಪವ ನೆಂದನಂದಾದಯ್ಯನೂ ॥ ೫೧ ॥

ತಡೆಯದಿಪ್ಪತ್ತೆಂಟುದಿನ ನಡೆವ ದಾರಿಯಂ ।
ಕಡೆಗುಳದದಿನವೆರಡರಿಂ ಹೋಗಬಹ್ಪುದೆ?ಯೆಂ ।
ದೊಡೆಹೋಗಬಹುವದಕುಪಾಯಮಂ ಪೇಳ್ದಪೆಂನೀನೀಮಹಾವೃಕ್ಷದಾ ॥
ಅಡಿಯೊಳೊಯ್ಯನೆ ವಿಶ್ರಮಿಸೆ ನಿನ್ನ ಹುಲಿಗೆರೆಯ ।
ಬಡಗಣತಟಾಕದೇರಿಯಮೇಲೆ ಬಿಡುವೆನೆಂ ।
ದೊಡೆದೇವಸೌರಾಷ್ಟ್ರಪತಿ ಸೋಮನಾಥಚಿತ್ತೈಸೆಂದನಾದಯ್ಯನೂ॥೫೨॥

ಹರಿಬೊಮ್ಮರುಂವಿವಾದದಿ ನಿಮ್ಮ ಚರಣಮಂ ।
ಸಿರಿಮುಡಿಯಕಾಣದುದನೆನಗೆ ತೋರಿದೆ ಮುಂದೆ ।
ಸುರರಾಜ ಪದವಿಯಂ ಕೊಡುವೊಡೊಲ್ಲೆಂದೇವರೆನ್ನ ಪ್ರತಿಜ್ಞೆಗಾಗೀ ॥
ಸುರಪೊನ್ನೆ ಬಸದಿಯುರುಹನನೊಡೆದು ಮೂಡದೀ ।
ಪರಿಯೂರ್ಗೆ ಮುಂದೆ ನಾಂಮಿಗೆ ಹೋದೊಡೇನೆನ್ನ ।
ಶರಿರವೇತಕೆ? ಮತ್ತೆ ನೀನೆಂದು ಬರ್ಪೆ?ಬರ್ಪುದನರುಪಬೇಕೆಂದನೂ॥ ೫೩ ॥

ತವೆಚೈತ್ರಶುದ್ಧ ಚಾತುರ್ದಶಿಯ ಸೋಮವಾ ।
ರವು ನಾಳೆ ಮಧ್ಯರಾತ್ರಿಯೊಳು ಬಂದಪ್ಪೆವೆನೆ ।
ಶಿವನೆನೀಬಂದುದಕ್ಕೆನಗೆ ಕುರುಹಾವುದೆನಲುದಯಸಮಯದೊಳು ಬಂದಾ ॥
ಸವಣರ್ಗೆ ಕದವ ತೆಗೆಯುದದೊಂದು ಹಲಕಾಲ ।
ನವೆವುತಲ್ಲಿರ್ದಪೆಳವಂಗೆ ಕಾಲ್ಕುರುಡಂಗೆ ।
ನವನಯನ ಬರಲೆರಡು ನಿನ್ನಿಂದಕದದೆರವಪ್ಪುದು ಮೂರು ಕುರುಹೆಂದನೂ
॥ ೫೪ ॥

ಅಂತವನಿರ್ನಗೆ ಕಾಳಗಕೆ ನೆರವಾದಪರು ।
ಚಿಂತಿಸದಿರೆಂದು ತಲೆದಡವಿ ಸಂಬುಗೆಯಿತ್ತು ।
ಸಂತೈಸುತಿರೆ ನಲಿವು ತಲೆಯೆತ್ತೆ ಹರುಷವಂಗವನಡರೆ ಪುರಪುಮನವಾ ॥
ಮುಂತುಗೆಡಿಸಲು ಹರವಸಂ ಮೀರಲಾದಿಮ ।
ಯ್ಯಂತಾನಿದಿರಿದೆಂದರಿಯುವಿರುತಿರಲ್ಕಾದಿ ।
ನಂತೀವರ್ಗದಂದಿನ ದಿನಂ ಬೇಗತೀರಬೇಕೆಂಬುದಂ ತೋರುವಂತೇ ॥ ೫೫ ॥

ಆಗಳಾದಯ್ಯನಂತಃಕರಣಮಂ ಸೆರೆಯೆ ।
ರಾಗಂಮುಸುಂಕುವಂತಿನನಸ್ತಮಾನದೊಳ್ ।
ಭೂಗಗನಮಂ ಪಡುಗಡೆಯು ಸಂಜೆಗೆಂಪುಮುಸುಕಲ್ಕಿತ್ತಲತಿಹರುಷದಿಂ ॥
ಶ್ರೀಗೌರಿಪತಿ ತನ್ನೊಳಾತನೊಳ್ತನ್ನ ನುಡಿ ।
ಯಾಗಿರ್ದುದೆಲ್ಲಮಂ ಕನಸಿನೊಳ್ತೋರೆ ಮೈ ।
ಜೋಗೇರಿದಂತೆ ಸುಖದಾವೇಶಬಂದಂತೆ ಹರಮಸಂಬೊಕ್ಕಿರ್ದನು ॥ ೫೬ ॥

ಕವಿದ ರಾತ್ರಿಯೊಳೋವಿ ತೆಗೆದಪ್ಪಿಕೊಂಡಖಿಳ ।
ಭುವನಭರಿತೋದರಂ ಬೇಗದಿಂದೈದಿಬಂ ।
ದವರ ಹುಲಿಗೆರೆಯ ಬಡಗಣುತ್ತಟಾಕದವನದ ಮರದಡಿಯೊಳೊಯ್ಯನಿಳುಹೀ ॥
ಶಿವತನ್ನಗಿರಿಯನೈದಿದ ನತ್ತಲಿತ್ತಮು ।
ಡುವರವಿಯು ಕಂಡೆದ್ದು ಮಿಗೆ ಸುರಂಗೈವ ಪ ।
ಕ್ಷಿವಿತಾನದಬ್ಬರಕ್ಕೆಚ್ಚತ್ತು ನಾಲ್ದೆಸೆಯನಾರೈದನಾದೈಯ್ಯನು ॥ ೫೭ ॥

ಆರೈದು ಮುಂದಿರ್ದ ಸೌರಾಷ್ಟ್ರಸೋಮನುಮ ।
ನಾರುಮಂಕಾಣದೆ ಮನಂನೊಂದು ಮತಿಯುಡುಗಿ ।
ಕ್ರೂರಮೃಗದಿಂ ಭಯಂಕರಮೆನಿಸಿ ಪೆಚ್ಚಿರ್ದರಣ್ಯಮೆಲ್ಲಬಯಲಾಗೇ ॥
ವಾರಿನಿಧಿಸಮತಟಾಕಂ ವನಂ ಸರಸಿ ಮುಂ ।
ದೂರು ರಮಣೀಯಮೆನಿಸಿರ್ದುದೆತ್ತಣೆನೆತ್ತ ।
ಪಾರಿದೆನೆನುತ್ತ ಹಳುವಂ ಚಿಂತಿಸುತ್ತಲಾವಯ್ಯನಲ್ಲಿರುತಿರ್ದನು ॥ ೫೮ ॥

ಇದು ಕಂಡುಬಲ್ಲ ಕೆರೆ ಯಿದು ಕಂಡುಬಲ್ಲವನ ।
ವಿದುಕಂಡು ಬಲ್ಲಕೊಳ ವಿದು ಕಂಡುಬಲ್ಲಪುರ ।
ವಿದು ಕಂಡು ಬಲ್ಲಕುರುಹುಗಳಾಗಿ ತೋರುತಿವೆಯಿಂತಿವೆಲ್ಲಿಯುಮೆನುತ್ತ ॥
ಇದು ಶಿವನ ಮಾಟವಾಗದೆ ಮಾಣದಿದರಸಂ ।
ಪದಮುಳದನಗರಂಗಳೊಳಗಿಲ್ಲ ಮೋಸಾದೊ ।
ಡಿದು ನಮ್ಮ ಹುಲಿಗೆರೆಯ ಪುರವಾಗದಿರದೆಂದು ನಿಂದುನೋಡುತ್ತಿರ್ದನು
॥ ೫೯ ॥

ಸಂದೇಹವಿಲ್ಲ ಹುಲಿಗೆರೆ ತಪ್ಪದಪ್ಪುದಿದ |
ರಂದದ ಪುರಂ ಧಾರುಣಿಯೊಳಲ್ಲದಕ್ಕೆನ್ನ |
ಮುಂದೆಹೋಗೆಂದು ನುಡಿದಂತೆ ತಂದಿರಿಸಿದಂ ಸೌರಾಷ್ಟ್ರ ಸೋಮಯ್ಯನು ||
ಇಂದಿನದಿನಂ ಮಧ್ಯರಾತ್ರಿಯನಿತಕ್ಕೆಯ್ದಿ |
ಬಂದಪ್ಪನಿನ್ನುಂಜಲೇಕೆಂದು ನಗರಿಯುಂ |
ಬಂದುಹೊಕ್ಕಂಮಹೋತ್ಸವದ ಹೆಚ್ಚುಗೆಯುಹರುಷಾತುರದೊಳಾದಯ್ಯನು
|| ೬೦ ||

ನೆಲೆಗೊಂಡನೇಹದಿಂದಂ ಬಿಡದೆ ನೋಳ್ಪಾಗ |
ಹಲವುಬಂಜೆಯುರ ನಡುವಣರುತುಪ್ರಭೆಯಂತೆ |
ಹಲವುಬೀಡೆಯ ನಾಂತವುರನ ಮ್ಯೆಯೊಳು ತೀವಿದಂಕುರಸ್ಥಾನವಂತೇ ||
ಹಲವು ತಕ್ಕಿಲನಡುವೆ ಸವೆದ ಬೆಳಕ್ಕೈಯಂತೆ |
ಹಲವುಬಸದಿಯ ನಡುವೆ ಸುರಹೊನ್ನೆಬಸದಿಯು |
ಗ್ಗಳಿಸಿ ಮೆರೆಯಲು ಕಂಡುವಂದಿಸಿದ ನದಕೆಶಿವನುದಯಿಸುವತಾಣವೆಂದು
|| ೬೧ ||

ಚಿತ್ತದುತ್ಸವದಿಂದಲಾದಿಮಯ್ಯಂ ತನ್ನ |
ನಿತ್ಯನೇಮವ ಮಾಡುತಿರಲಿರಲು ನಗರದೊಳ |
ಗಿತ್ತ ಸ್ವಪ್ನಂಗಳಂ ಕಂಡು ಬೆರಗಾಗುತ್ತಲಿರೆ ವಾಮಭುಜಲೋಚನಾ ||
ಕೆತ್ತಿ ಕಂಡತಿ ಹೊಸತು ಹೊಸತಾದುದೆನ್ನಪತಿ |
ಯಿತ್ತವಧಿ ತುಂಬಿತ್ತು ಬಾರದಿರನಿನ್ನೆಂದು |
ಮತ್ತಗಜಗಮನೆ ಪದ್ಮಾವತೀದೇವಿ ನಿಶ್ಚೈಸಿದಳು ಮನದೊಳಂದು ||೬೨||

ಸರಸಿಜಪ್ರಿಯನ ಬರವಂ ಚಕ್ರವಾಕ ಹಿಮ |
ಕರನ ಬರವಂ ಚಕೋರಂ ಮಂದಮಾರುತನ |
ಬರವನತಿಪಥಿಕಂ ವಸಂತಮಾಸದ ಬರವನೆಳೆದುಂಬಿಗಿಳಕೋಗಿಲೇ ||
ಎರಡುದೋರದೆ ಬಯಸುವಂದದಿಂ ಬಿಡದೆನ್ನ |
ಪುರುಷನಪ್ಪಾದಿಮಯ್ಯನ ಬರವ ಬಯಸುತಾ |
ನಿರೆ ಬಪ್ಪ ಚಿಹ್ನಂಗಳಾದವಿದಿಗೊಳೆ ಹೋಹೆನೆಂದು ಮನದೊಳನೆನೆದಳು
|| ೬೩ ||

ಕಂಡ ನಂಟರು ಸಲ್ಲರೈತಂದು ಕೇಳ್ವಿನ್ನ |
ಗಂಡ ಬಂದೈದನೆಸಲೆದ್ದು ಸಂತೋಷದಿಂ |
ಡಿಂಡಿಮದಕಹಳೆಗಳ ಪರಿಪರಿಯತೋರಣದ ಗುಡಿಯುಪೊಸಪೀಲಿವಳೆಯಾ ||
ಮಂಡನಂಗಳ ಕಳಸಕನ್ನಡಿಯ ಬಾಯಿನದ |
ಹಿಂಡೆಪ್ಪ ವನಿತೆಯರ ಸಾರಂಭಸಹಿತ ಮುಂ |
ಕೊಂಡು ಭರದಿಂ ನಡೆದಳತ್ತ ಮನೆಯೊಳಗೆ ತಮ್ಮಯ್ಯಕೋಪವತಾಳಲೂ || ೬೪ ||

ಮಿಸುಗುವ ವಸಂತಮಾಸದ ಬರವನೆಳೆಮಾವು |
ಸಸಿಯ ಕಿರಣದ ಬರವನಂಬುನಿಧಿಯಂಕುರ |
ಪ್ರಸರದಬರವನು ಮರಿಗೋಗಿಲೆಗಳ ತಿಳಪರಿಮಳದ ಬರವನು ಮಧುಕರಾ ||
ಪೊಸಘಳದ ಬರವನರೆಗಿಳಿಗಳದಿಗೊರ್ಂಬಂತೆ |
ಶಶಿವದನೆಯರು ಸಹಿತ ಪದ್ಮಾವತೀದೇವಿ |
ಪೊಸೆದಿದಿರುಗೊಂಡಳಾದಯ್ಯನಂ ಪರಸಮಯವನಧಿಬಡಬಾಗ್ನಿಸಳನನೂ || ೬೫ ||

ಹರೆದ ಮುಡಿ ತೊಡಕಿದಳಕಂ ಬತ್ತಿಬರತುಬೆಳು |
ಕರಿಸಿದಧರಂ ಗುಳಿದ ಕಂಣು ಬಾಡಿದಾನನಂ |
ಕರಮಾಸಿಮಡಿಗೆ ಬಡವಾದೊಡಲು ಮೆರಸುಮಾನಿನಿಸುಭಗನಾದಯ್ಯನಾ ||
ಚರಣಕಮಲಕ್ಕೆರಗಿ ನಡುಗುತ್ತೆನಾಚುತ್ತೆ |
ಸಿರಿಮೊಗವ ನೋಡಲಾದಯ್ಯ ನಸುನಕ್ಕೊಡಾ |
ತರುಣಿಹೆಚ್ಚುತ್ತೆ ಹಿಗ್ಗುತ್ತೆ ಸಂಭ್ರಮವೆರಸಿ ನಗರಿಯಂ ಪೊಗುತಂದಳೂ || ೬೬ ||

ಆರುಚಿರಸಾರಂಭಮಂ ಕಂಡು ಪುರದೊಳಗ |
ಣಾರುಹತರೆಲ್ಲರೆಯ್ತಂದು ಕಂಡಣಕಿಗಳ್ಳಿ |
ದಾರಾಧಿಪುಯ್ಯನೆ? ಹದುಳವೇ? ನೀನೆಂಮ ಬಸದಿಯೊಳಗಿರಲುತಂದಾ ||
ಸೌರಾಷ್ಟ್ರದೊಡೆಯ ನೀಸತ್ತಿಗೆಯ ಹಿಡಿದವನೊ ? |
ದಾರೆಗಾಳೆಯುವನೋ ? ಮದ್ದಳಗನೋ ? ಯಿವರೊ |
ಳಾರುತೋರಿವರಾಗೊಡೆಮ್ಮ ಬಸದಿಯಬಿಂದದೊಳಗೆ ಮುನ್ನಂಟೆಂಬರೂ || ೬೭ ||

ಮುನ್ನನೀವರ್ಚಿಸುವ ಬಸದಿಯೊಳಗಿಪ್ಪಾತ ।
ನಂಸೀವುತೋರಲವನಿವರಿಂಕನಿಷ್ಟನೆನಿ ।
ಪನ್ನನಂ ಮಾಡಿಪಪ ನಲವರದಿರೆಂದೊಡಾಜೈನರೆಲ್ಲಂಕೋಪಿಸೀ ॥
ತನ್ನ ಶಿವನಂ ತರುವೊಡಳವಡದೆ ತಾನೀಗ ।
ನನ್ನಿಯುಳ್ಳವನಂತೆ ನುಡಿವಿವನನಗರಿಯೊ ।
ಲ್ಲಿಂನಗಲುಬೇಕು ಬೂತಿಕ್ಕಿಕಟಕಿಯೊಳು ಗುಡಿಗಟ್ಟಿಂದು ಸಾರಿಸಿದರೂ
॥ ೬೮ ॥

ಪುರದಕೇರಿಕೇರಿಯು ಮನೆಮನೆಗಳೊಳುಗುಡಿಯು ।
ಸರದೆಗೆದು ತಮ್ಮ ಬಸದಿಗಳೊಳತ್ಯಧಿಕವಹ ।
ಸುರಹೊಂನೆಬಸದಿಯಂ ಸಾರೈಸಿ ಪೂಸಿ ಹೊಸರಂಗವಲ್ಲಿಗಳಸಿಕ್ಕೀ ॥
ತರದಿ ತೋರಣವೆತ್ತಿ ಬೂತಿಕ್ಕಿನಗಲೆಂದು ॥
ವಿರಚಿಸಿದುದಂತಾದಿಮಯ್ಯನ ಮನಕ್ಕತುಳ ।
ಹರುಷವಾಯ್ತೀಶ್ವರನ ಬರವಿಂಗಯತ್ನದಿಂದಾದ ಸಂಭ್ರಮವಕಂಡೂ
॥ ೬೯ ॥

ಆರುಹತರೆಲ್ಲ ಬೂತಿಕ್ಕಿ ನಗುತಿರೆ ಕಂಡು ।
ನಾರಿಪದ್ಮಾವತಿಯು ಮನದೊಳೆನ್ನಯನಲ್ಲ ।
ಸೌರಾಷ್ಟ್ರಪತಿ ಸೋಮನಾಥಬಾರದೆ ಬಾರನುಕ್ಕಿನುಐವವರಕರುಣಾ ॥
ತೋರಣಂ ಗಟ್ಟಿಸುವೆನೇಕೆನಕ್ಕಪಿರೆಂದು ।
ವಾರಿರುಹವದನೆ ಸದನಕ್ಕೆಯ್ದಿ ಮಂಗಳಾ ।
ಚಾರವೆಸೆಯಲೊಳಗೆಮಡದಿ ತನ್ನಪ್ರಾಣದೊಡೆಯನಂ ಕೊಂಡೊಯ್ದಳೂ
॥ ೭೦ ॥

ಸಿಳಯಮಂ ಪೊಕ್ಕು ಸಂತೋಷದಿಂ ಕುಳ್ಳಿರಲು ।
ಜಳಕದೇವಾರ್ಚನಕ್ಕೇಳೆಂದು ಸುದತಿವೆ ।
ಗ್ಗಳಸುತಿರೆ ಸೋಮನಾಥನ ಮೂರ್ತಿ ಬಂದಲ್ಲದಾನೊಲ್ಲೆನೆನುತಿರಲ್ಕೇ ॥
ತಿಳಯುಹೇಳೆಂದು ಬಂದಪನೆಂದು ಕೇಳುತಿಹ ।
ಲಲನೆಗಾಡಿದನಿಂದಿನಿರುಳು ಮಧ್ಯದರಾತ್ರಿ ।
ಯೊಳಗೈದೆ ಬಂದಪಂ ಕೇಳುಮಾಸಿನಿಯೆನುತ್ತಿರೆ ದಿನಂಕಡೆಗಂಡುದೂ
॥ ೭೧ ॥

ಇಂದಿರುಳು ಬಪ್ಪ ಪುರಮಥನನಂ ನೋಳ್ಪೆವಾ |
ನಂದದಿ ಶುಚಿರ್ಭೂತನಾಗಿ ಬಂದಪೆನೆಸು |
ತ್ತಂದುಜಳಕಕ್ಕೆ ಮುಳುಗಿದನೊಯ್ಯನಿಪಂತೆ ರವಿ ಪಡುವಣಕಡಲೊಳಗಿಳ
ನಂದಿಕೇಶನನೇರಿ ಸೌರಾಷ್ಟ್ರದರಸನ್ಯೆ | (ಯೋ ||
ತಂದ ಸುದ್ದಿಯನಾದಿಮಯ್ಯಂಗೆ ಬೇಗದಿಂ |
ಮುಂದೆಪರಿದರುಪ್ರವಂತೆರಳೆಯಂ ದುವ್ವಾಳಿಸುತೆ ಚಂದ್ರಮಂ ಬಂದನೂ
|| ೭೨ ||

ಗಳಗಳನೆರಾತ್ರಿ ಬಲಿಯಲು ಸರ್ವಜೀವಿಗಳು |
ನಿಳಯಮಂ ಪುಗೆ ದಂತಧಾವನಂಗೈದು ನಿ |
ರ್ಮಳಕಾಯರಾಗಿ ನವಕುಸುಮಾನುಲೇಪನಾಭರಣಧವಳಾಂಬರವನೂ ||
ತಳೆದು ಭದ್ರದಮೇಲೆ ಪುಷ್ಪಾಂಜಳಿಯನಾಂತು |
ಲಲಿತದಂಪತಿಗಳೀಶಂ ಬಪ್ಪ ಹೊತ್ತು ಪಾ |
ರ್ದೆಳಸಿರ್ದರಿನನುದಯಮಂ ಬಯಸಿನಿಂದಿರ್ಪ ಚಕ್ರಮಿಥುನಂಗಳಂತೆ
|| ೭೩ ||

ಓವಿ ನೋಡುತ್ತಿರಲನಂತಾರ್ಕತೇಜಪ್ರ |
ಭಾವಮಂ ನಗುವ ಬೆಳಗಿನನಡುವೆ ದೇವಾದಿ|
ದೇವದೇವರಗಂಡದೇವರಾದಿತ್ಯದೇವೇಶದೇವಪಿತಾಮಹಾ ||
ರಾವುಪ್ಪರವಧಾರು ಜೆನಘನತಿಮಿರದಿನಪ |
ಯಾವದಾರು ಪುರಜಲಧರಮರುತನೆಂಬದನಿ |
ತೀವಿದಮೃದಂಗಭೇರೀರವಂಬೆರಸಿ ಹುಟ್ಟಿತ್ತುಗಗನಾಂಗಣದೊಳೂ ||೭೪ ||

ಅತಿಸಂಭ್ರಮದ ರವಂ ಪೊಣ್ಮೆ ನಭದಲ್ಲಿ ದಂ |
ಪತಿಗಳಾಲಿಸಿ ತಿಳಿದು ತಪ್ಪದಿದು ಸೌರಾಷ್ಟ್ರ |
ಪತಿ ಸೋಮನಾಥ ಬಿಜಯಂಗೈಯ್ವನೆಂದ ಹೊತ್ತಿಮುಬಂದನಿಂದುಮೌಳೀ||
ಸಿತಗತನದಿಂ ಚುನ್ನವಾಡಿ ನಗುತಿಪ್ಪರು |
ಹತರಿಗಾದುದು ಮಾರಿಯೆಂದು ಮುನಸಂದು ಶಂ |
ಕಿತಚಿತ್ತರಾಗೈದು ನೋಡುತಿರೆ ಮೇರೆಯಿಲ್ಲದವಿಮಾನಂ ತೋರಿತ್ತೂ ||೭೫||

ಈ ಬಂದುದೆಂಮುಖಲವೀಬಂದುದೆಮ್ಮಗೆಲ |
ವೀಬಂದುದೆಮ್ಮ ಬಲವೀ ಬಂದುದೆಮ್ಮನಲ |
ವೀಬಂದುದೆಮ್ಮಗತಿಯೀ ಬಂದು ದೆಮ್ಮಮತಿಯೀ ಬಂದುದೆಮ್ಮಭಾಷೇ ||
ಈಬಂದುದೀಬಂದುದೆಲೆಲೆಲೆಲೆ ಕುಬುಕುಬುಬು |
ನಾಬದುಕಿದೆಂ ಬದುಕಿದೆಂ ನೋಡು ನೋಡೆಂದು |
ಕಾಬಳವಿಯೊಳು ಕೆಡೆದು ಪರವಶೀಭೂತರಾಗಿರ್ದರಾ ದಂಪತಿಗಳೂ ||೨೬||

ಎರಡಿಲ್ಲದಚಳನಿಷ್ಠೆಯ ನಂಬುಗೆಯ ಭಕ್ತ |
ರಿರವ ಕಂಡತಿಹರುಷದಿಂ ಮೆಚ್ಚಿ ಸೌರಾಷ್ಟ್ರ |
ಪುರದೊಡೆಯ ಸೋಮಯ್ಯನಾನಿವರನಾದರಿಸುತಿರಲೇಕಿವರ್ಗೆ ನುಡಿದಾ ||
ಹಿರಿಯಬಸದಿಯ ಜಿನನನೊಡೆದುದಿಸಿ ಧರೆಗಿದ |
ಚ್ಚರಿಯೆನಿಸಿ ಭಕ್ತಜನವತ್ಸಲನೆನಿಪ್ಪೆನ್ನ |
ಬಿರಿದಪಾಲಿಪೆನೆಂದು ಹರ್ಷದಿಂಬಂದು ನಂದಿಯಂದೂವ್ವಾಳಸುತ್ತಾ ||೨೩||

ಹರವಸಕೆ ಸಂದಿರ್ದ ದಂಪತಿಗಳೆಚ್ಚತ್ತು |
ಗಿರಿಜಾವರಂ ಬಂದನೆಂದಾದುರ್ದ ಹುಲಿಗೆರೆಯ |
ಪುರವಹೊಕ್ಕುದ ಕಂಡು ಸುರಹೊನ್ನೆಬಸದಿಶಿವಭವನವಾಯ್ತೆಂದು ನಲಿದೂ||
ಹರುಷದಿಂದಂ ತಮ್ಮ ಮನೆಗೆ ನಡೆತಂದಲ್ಲಿ |
ಹರಪದಾಬ್ಜದ ಷೋಡಶೋಪಚಾರದ ನೆಲೆಗೆ |
ಪರುತವಿಸುತಿರಲಿತ್ತ ಸುರಜಯಧ್ಯಾನದಿಂ ಬರುತಿರ್ದ ಪರಮೇಶನೂ ||೨೮||

ಮುಂದೆ ಹರಿ ಹಿಂದಜಂ ಕೆಲಬಲದೊಳಗ್ಗದ |
ಸ್ಕಂದಗಜವದನರೆತ್ತಸುತ್ತಂಮುತ್ತಿ ಗಣ |
ವೃಂದಜಯಜಯಜಯಯಘೋಯಘೋಯಘೋ ಜಾಂಗುಬಲ ಯೆಂದು ನಮಿ
ನಂದಿವಾಹನವೆರಸಿ ನಡೆದು ಮುಂನಾದಯ್ಯ |　　　　(ಸುತಿರಲೂ||
ನೆಂದ ಹುಲಿಗೆರೆಯ ಸುರಹೊನ್ನೆ ಬಸದಿಯೊಳು ಮುದ |
ದಿಂದ ಹೊಕ್ಕಂದೇವಕುಲ ಶಿರೋಮಣಿ ಸೋಮನಾಥಮೂರ್ತಿ ವಿಳಾಸನೂ
||೨೯||

ಶ್ರೀಮದ್ರಾಘವಾಂಕಕವಿವಿರಚಿತಮಪ್ಪ ಶ್ರೀ ಸೋಮನಾಥ ಚರಿತ್ರೆಯೊಳ್ ನಾಲ್ಕನೆಯಸಂಧಿ ಸಮಾಪ್ತಂ.

## —ಐದನೆಯ ಸಂಧಿ—

|| ಶ್ರೀ ಸೋಮನಾಥಾಯನಮಃ ||

ಆತುರದೊಳಾದಯ್ಯ ನಿಚ್ಚಿಯಂ ಸಲಿಸಿ ವಿ |
ಖ್ಯಾತಹುಲಿಗೆರೆಯಸುರಹೊಂನೆಬಸದಿಯೊಳಪ್ಪ |
ವೀತರಾಗನನೊಡೆದು ನೆಲಸಿದಂ ದಿವ್ಯಮೂರ್ತಿವಿಳಾಸ ಸೋಮೇಶನು ||

ಒಳಹೊಕ್ಕು ರಂಗಮಧ್ಯದೊಳು ಶಾಕಟಪತಿಯು |
ಕೊಳಗೂರುವಲ್ಲಿಂದಮುನ್ನ ಬಾಳಾಕ್ಷದುರಿ |
ಮುಳಿದು ಕೋಣೆಯೊಳರ್ದ ದ್ರಿಗುಜಿನಬಿಂಬಮಂ ಹೊಡೆಯೆ ಛಟಛಟಲ
ಧಿಳಧಿಳಲೆನಲು ಸಿಡಿದು ಧಟಧಟನೆ ಹಣೆ ಹಾರಿ | (ನೊಡೆದೂ||
ಘಳಘಳನುದುರ್ದು ಸೌಳನೆ ಬಿರಿದು ಕೆಲಬಲ |
ಕ್ಕೈಳದೆರಡು ಭಾಗಂಗಳುರೆ ದುಡುಹುದುಂಮೆಂದು ಬಿದ್ದುದೇಂ ವರ್ಣಿಸುವೆ
(ನೂ || ೧ ||

ಕೆಡೆದ ಜಿನನೊಡಲೆರಡು ಕಡಿಯುನಡುವಡಸಿಕಿರು |
ಜೆಡೆಯುಸಸಿಕಲೆಯು ಸುರಸದಿಯು ಬಾಳಾಂಬಕದ |
ಕಡುಚೆಲುವ ಮುದ್ದುಮೊಗದಹಿಕುಂಡಲದ ಡಮರುಶೂಲಫಣಿಯುಜಶಿರವ
ಹಿಡಿದ ಚಾತುರ್ಭುಜದ ನಂದಿವಾಹನದ ಹೊಸ | (ನೂ||
ಮೃಡಸೋಮನಾಥಮೂರ್ತಿ ವಿಳಾಸನುದಯಿಸಿದ |
ನೆಡೆಗೊಂಡು ಜಯಜಯರವಂವೆರಸಿ ದುಂದುಭಿಮೃದಂಗನಾದಂ ಪೊಣ್ಮಲೂ
|| ೨ ||

ಮುನಿದು ಕೆಲಬಲನ ನೋವದೆ ನೋಡೆ ವಾಣಿಭ |
ದ್ರನು ಬಿರಿಯೆ ಜಕ್ಕಣಿಯ ಸೆಕ್ಕೆ ಬಿಟ್ಟು ಬೊಂಮ|
ಯ್ಯನು ಸುಚ್ಚುನೂರಾಗೆ ಕೆಟ್ಟುಜ್ವಾಲಾಮಾಲಿನೀದೇವಿ ಯೆಂಬಾಂಬೆಯೂ||
ತನುಸಿಡಿದು ಚವ್ವೀಸತೀರ್ಥಕರ ಕಾಯ ಸಿ|
ಕ್ಕನೆ ಸೀಳ್ದು ಪದುಮಾವತಿಯು ಕರಣವ್ರೊಡೆದು ಮಿ |
ಕ್ಕನ ಜಿನಪ್ರತಿಮೆಗಳು ಹುಡಿಸಣ್ಣವಾದವುಗ್ರನನೋಟದುರಿಹೊಯ್ದೊಳೂ||
|| ೩ ||

ಬಸದಿವೆಸರಂ ತೊಡೆದು ಶಿವನಿಳಯಮೆನಿಸಿ ರಾ।
ಜಿಸುವ ಸೋಮಯ್ಯಂಗೆ ಪೂರ್ವದಿಗ್ವನಿತೆ ತೋ।
ರಿಸುವ ಮಣಿಗನ್ನಡಿಯೊ ಪೇಳ್ಪುಣ್ಯಮೂರ್ತಿದರ್ಶನವೆಂಬುಣಿಸುವಡೆಯ
ಹಸಿದಜೀವದಕಣ್ಣ ಪಾರಣೆಗೆ ಬೊಮ್ಮ ಮಲ। (ದೇ॥
ಗಿಸಿದ ಮಿಸುನಿಯ ಚೆಂನಹರಿವಾಣವೋಎನಿಸಿ।
ಸಸುದೋರುತುದಯಗಿರಿಯೊತ್ತಿನೊಳು ಬಿಸಜದ ಮನೋರಮಣನುದಯಿ
(ಸಿದನು ॥ ೪ ॥

ಎಂದಿನಂತುದಯದೊಳು ಬಸದಿಯಂ ಪೂಜಿಸಲು।
ಬಂದ ಪಂಡಿತನು ಕದದಗುಳಿಯಂ ತಾಳಕೋ।
ಲಿಂದ ನೂಕಿದೊಡಲುಗದಿರಲು ತಲೆಪಟ್ಟುಬಿಡೆ ನೂಂಕಿನೂಂಕಾಡಿಬಳಲೀ ॥
ನೊಂದುಹೆಸರುಳ್ಳಖಿಳ ಬಸದಿಬಸದಿಯ ಸವಣ।
ಬಿಂದಕ್ಕೆ ಹರಿಹರಿದು ಕೇಳದಂ ಕಡೆಗಿದೇ।
ನೆಂದರಿಯೆ ಸುರಹೊಂನೆಬಸದಿಯ ಕವಾಟದಗುಳಿಯ ತೆಗೆಯಬಾರದೆನಲೂ
॥ ೫ ॥

ಅಕ್ಕಕ್ಕಿದೇನು ಚೋದ್ಯವೆನುತ್ತ ವಿಸ್ಮಯಂ।
ಮಿಕ್ಕಾರುಹತರೆಲ್ಲ ಗುಜುಗುಜಿಸಿ ನಾವಿಂಥ।
ದಕ್ಕೆ ಮಾಡುವುದೇನೆನುತ್ತ ಮಂತಣವೆದ್ದು ಚಿಂತೆಯೊಳು ಮೂಡಿಮುಳು
ಚಕ್ಕನೆಲ್ಲರ ಕರೆಸು ಹಿರಿಯಗುರುಗಳ ಬರಿಸು। (ಗೀ॥
ತೆಕ್ಕಲೇತಕ್ಕಿನ್ನು ಬಂದುದಂ ಕಾಣ್ಬೆವೆಂ।
ದುಕ್ಕಿನುಡಿದುದ್ಧತರು ಸುರಹೊನ್ನೆಬಸದಿಗಂದುರವಣಿಸಿ ನಡೆತಂದರೂ
॥ ೬ ॥

ಝುಂಡೆದಲೆಯೋತಿಗಳು ಬರುವಾಯಬಳ್ಳುಗಳು।
ಗುಂಡಿಗೆಯಚಂಡಿಗಳು ಲೋಚುಗಳನೀಚರಡೆ।
ಗೊಂಡಕುಂಚದಹಂಚುಗಳು ಕೊಡೆಯದಡಿಗರಗ್ಗದ ಚರಿಗೆಗಳನರಿಗಳೂ ॥
ಚಂಡಿಕೆಯ ಬಣಗುಗಳು ಬತ್ತಲೆಯಬಾಹಿರರು।
ಕಂಡರ್ಗೆಕಾಕುಗಳು ತಟ್ಟುಗಳ ಘಟ್ಟಿಯರು।
ಹಿಂಡು ನೆರೆದುದು ನಾಡಮಲಧಾರಿಗಳ ಮೊತ್ತ ಸುಲಿವಡೆದ ಮಲ್ಲರಂತೇ
॥ ೭ ॥

ಮಿಂಚುದಲೆ ಬಿದ್ದ ಪುರ್ಬಿನ ಹಸನ್ಮುಖಕ್ಕೆಯು
ಕುಂಚಗುಂಡಿಗೆಯು ಕಿಸಿವಲ್ಲು ಬಾಗಿದಬೆನ್ನಿ।
ನಿಂಚರಿಗೆಗೊಂಡು ಕೊಬ್ಬಿದಹೊಟ್ಟೆ ಬಸಿಗುಂಡತಟ್ಟಕಂಕುಳಲರಿಕದಾ ||
ವಂಚಕರು ವೇದಬಾಹಿರರು ಮ್ಮಲಧಾರಿಪ್ರ।
ಪಂಚಿನಾಡಂಬರದಡೊಂಬುಗಳು * * * * *।
******* ಗಡಬಡಿಸಿನುಡಿವ ಕೊಡೆವಿಡಿದದಡಿಗರಗಡಣಾವ್ರೊ || ೮ ||

ಬೆಳೆದಭಾರದೆ ಬಿದ್ದ ಮೊಲೆಯ ನೆಳಲುವ ತುಟಿಯು।
ಬೆಳುಗಣ್ಣ ಜೊಲ್ಲುಕವಿದುಸುರುಮಸಗಿದ ಬಾಯು।
ಪ್ರೊಳಗೆ ಸುಳವನೊರಟಿಂ ನೂಂಕಿ ಕೈಯುಕುಂಚದಿಬೀಸಿಜೈನಾಗಮವನೂ||
ತಿಳುವೃತ್ತತರ್ಕಸುತ್ತಾದರಿಸಿ ಮಂತಣಂ।
ಗಳೊಳು ನುಡಿವೃತ್ತಮುಸುಕಿಡುತತನ್ನಿಳಯಮಂ।
ನೊಳಪ್ರೊಗುವ ಕಾಂತೆಯುರ ಹಂತಿಯೆಸೆಯಿತ್ತು ಬಸದಿಯಬಾಹೆ ಬಾಹೆಗ (ಳೊಳೂ ||೯||

ಕಾಂತೆಯರು ಪಂಡಿತರು ಗುಡ್ಡುಗಳು ತರತರದ।
ನಂತಪ್ರೂಜಾಕಾರಿಗಳು ವ್ರತಾಶ್ರಿತರ್ಕೈಯ್ದ।
ಮಂತಣಂಗೊಂಡೊತ್ತಿ ದೊಡೆ ಮಿಾರಿ ತಮತಮಗೆ ತಲೆಯತಾಟಿಸಿಕೊಂಡೊ (ಡೇ ||
ಅಂತಿಂತು ಮಿಡುಕದಿಹ ಕದವ ಕಂಡಿದು ಮಿಸುಕ।
ದಂತಸ್ಥವಂ ವಿಚಾರಿಸಬೇಹುದಿನ್ನಿದೇ।
ಕಿಂತಾಯ್ತು ಹೇಳೆನುತ್ತಂದು ಕೆಲಬರು ಕೇಳ್ದರಲ್ಲಿಮಲಧಾರಿಗಳನೂ||೧೦||

ಏನಿದತಿಚೋದ್ಯವೀ ಬಸದಿಯಾದಂದಿಂದ।
ತಾನೊಮ್ಮೆ ಕದದೆರೆಯದೆಂಬ ಮಾತಿಲ್ಲ ವಿಂ।
ದೂನ ನಂಮಾರುಹತಕೆಂದು ಮನನೊಂದು ತರಿಸಂದು ಕೋಪದಲಿಬೆಂದೂ||
ಜೈನಸ್ಯ ವಿಸ್ಮಯೋನಾಸ್ತಿ ಯೆಂದಿರಬೇಡಿ।
ದೇನಾನುಮೊಂದು ಕೃತ್ಯಂ ಪ್ರುಟ್ಟದಿರದಿದಂ।
ಜ್ಞಾನದಿಂ ನೋಡಿಬೆಸಸೆಂದು ವಂದಿಸಿ ಕೇಳ್ದರಂದು ಮಲಧಾರಿಗಳನೂ || ೧೧ ||

ಅವರು ಬರಿಯುರಿವನೇರಿಸಿಕೊಂಡು ನುಡಿದರೀ ।
ಕವಿದಿರುಳೊಳೇಕಾಂತವಾಗಿರ್ದು ಬೆದೆವೋದ ।
ಸವಣನಡುಹುಳ್ಳಕಾಂತೆಯು ನವಚೆಕೊಂಡೀಗನಾಣ್ಚಿ ಹಡಿಗೆತ್ತಿರ್ದನೋ ॥
ಶಿವನ ತಂದಪೆನೆಂದು ತರಲಾರದಿರ್ದ ಭಂ ।
ಗವ ಮುಚ್ಚಲೆಂದಾದಿಮಯ್ಯ ಕದವಿಕ್ಕಿಕೊಂ ।
ಡವಿತುಬಿನದಿಸುವನೋ ತಡೆಯದೆ ವಿಚಾರಿಸಲು ಬೇಕೆಂದರಾ ಗುರುಗಳೂ
॥ ೧೨ ॥

ಮೊದಲ ಮಾತಿನೊಳು ಕುಂದಾರುಹತಸಮಯಕೆಂ ।
ದದ ಮರೆಸಿಯಾದಿಮಯ್ಯನೊಳು ಸಂದೆಗಹುಟ್ಟ ।
ಕದವಿಕ್ಕಿಕೊಂಡಿರ್ದನಾದೊಡಾತನ ನಿಲ್ಲಿಯೇ ಲಜ್ಜೆಗೆಡಿಪೆವೆಂದೂ ॥
ಸದನದೊಳು ಮುನ್ನೋಳ್ಪೆವೆಂದು ಕೆಲಬರು ಹರಿದು ।
ಸದುಭಕ್ತನಂ ಕಂಡು ಮರಳಬಂದಿದ್ದು ಬಸದಿ ।
ಗದುಭುತವೆನುತ್ತಂದು ನೆರೆದಮಂದಿಯು ನಡುವೆಗುರುಗಳೊಡನಿಂತೆಂದರೂ
॥ ೧೩ ॥

ತನ್ನಮನೆಯೊಳಗಿರ್ಪ ನಾದಿಮಯ್ಯಂಹೋದ ।
ನಿಂನಿರುಳೊಳದರೊಳಾರುಂ ಕೆಡೆದರಿಲ್ಲೆನಲು ।
ಯಿನ್ನಾವಕಾರಣವೆನಿಪ್ಪುದ ವಿಚಾರಿಸೆನಲೇತರವಿಚಾರವಿನ್ನು ॥
ತನ್ನಿ ಗುದ್ದಲಿಹಾರೆ ಸಾರಗಾಣದಕಣೆಗ ।
ಳನ್ನಳದ ದಬ್ಬುಕಂಗಳ ತೋರಕಲ್ಲುಗಳ ।
ಸನ್ನೆಯಿಕ್ಕಿಯೆ ಕದಂದೆರೆಯಿಸುವ ಭರದೊಳಜ್ಞಾನಮಲಬದ್ಧರಂದೂ
॥ ೧೪ ॥

ಭಾರೈಸಿ ಹಾರೆ ವೊಂದಾಗಿ ತಿಲಘಾತಕರ ।
ಹಾರೆಯಿಂದೆತ್ತಿ ಕಣೆಯಿಂ ಮೀಂಟಿ ದಬ್ಬುಕದೊ ।
ಳೋರಂತೆ ಹೊಡೆಹೊಡೆಗು ಬಲುಗಲ್ಲೊಳಟ್ಟಟ್ಟುಮರನೊಳರಿದೆತ್ತಿನೋಡೀ ॥
ಕೂರಿತಪ್ಪುಳಗಳಂ ಸಂದಿಸಂದಿಗಳ ಕಡಿ ।
ದಾರಿನಿಂನಾ ಕ್ರೊತ್ತು ಮಾಡಬೇಕೆನಿಸಿದ ವಿ ।
ಚಾರವೆಲ್ಲವನೊಡರ್ಚಿದರು ಶಿವಶಿವ ಕದಂದೆರೆವ ಭರವಿಂತಿರ್ದುದೂ
॥ ೧೫ ॥

ಮುಳಿದು ಮುಂಕೊಂಡು ಬೊಬ್ಬಿಟ್ಟು ನೆಗಪುವಹಾರೆ |
ಘಳಿಲನಿಕ್ಕಡಿಯಾಗಿ ಮುರಿಯೆ ಮುಂಡಿಗೆ ನೆಕ್ಕು |
ನೆಳಲನುಡಿಯುಲು ಹೊಡೆದದಬ್ಬುಕದ ಹಣಿಗಂಣು ಹೊಟಹೊಟೆಂದೊಡೆಯೆ
ಉಳಿಯುಬಾಯ್ಖಳಿಲೆಂದು ಸಿಡಿಯೆ ನೂಂಕುವ ಜನಂ | (ಕಡಿವಾ ||
ಹಳಿಲೆಂದು ಬಿದ್ದು ಹರಣಂಗಳೆವೃತಿರೆ ಕಂಡು |
ತಿಳಿದರಿದು ಪಲಬರಿಂದಲ್ಲದೊಬ್ಬೊಬ್ಬರಿಂದಾಗದೆಂದರು ಗುರುಗಳೂ || ೧೬ ||

ತ್ವರಿತದಿಂಹರಿಹರಿದು ನೆರಪುಪಟ್ಟಣದಪುರ |
ಪುರಕೇರಿ ಕೇರಿಗಳನಾಡುಗಳ ಬೀಡುಗಳ |
ಅರಸರ ಸಮುಸ್ತಾಗ್ರಹಾರ ದೂರೂರ ಹಳ್ಳಿಗಳ ಮುನೆಯುವಟ್ಟದ ||
ಹರದರುಂನತರು ಮುಂನುರಿದಂಡ ಮುಂಕಬ್ಬಿ |
ಲರನಖಿಳ ಸಾಲುಮೂಲಿಗರ ನದಿದೆನ್ನದಿಹ |
ಪರಿಜನವನ್ನೈದೆನೆರಹಿದರು ನೆರಹಿದರುಮಿಗೆಭೂಮಿಬೆಸಲಾದಂತಿರೇ
|| ೧೭ ||

ಇಟ್ಟುದೇಬೊಟ್ಟುಕಟ್ಟತೆ ಪಟ್ಟವೆಂದೆನಿಪ |
ಸೆಟ್ಟಿಗಳನಂತಸಾವಿರ ಜೈನರಾಹಿರಿಯು |
ಪಟ್ಟಣವನಾಳ್ವ ಚಂದ್ರಾದಿತ್ಯಜೈನನಾಡೆಲ್ಲ ನೆರೆಜೈನರೆಸಲೂ ||
ಬೆಟ್ಟೂರಲನ್ಯರ್ಗೆ ಸಾಧ್ಯವಿಲ್ಲೆಂಬಾಗ |
ನೆಟ್ಟನೈಸೀಸು ನೆರಯಿತ್ತನಲದೇಕಿನ್ನು |
ನಟ್ಟನಡುಹಗಲೊಳಗೆ ನೆರೆಯಿತ್ತು ನೆರೆಯಿತ್ತು ಭೂಮಿಜಡಿದಳ್ಳಾಡಲೂ
|| ೧೮ ||

ನೆರೆದನಿತು ಮಂದಿಯಲ್ಲೊಮ್ಮೊಮ್ಮೆ ಬಂದು ಮೋ |
ಹರಿಸಿ ಪಂಗಡವಾಗಿ ನೂಂಕಿ ಸಾಧನದಿನೊ |
ತ್ತರಿಸಿ ಬೆಂಡಾಗಿ ಕದವಂ ತೆರೆವುಪಾಯಮಂ ಕಾಣದತಿಚಿಂತೆವಡೆದೂ ||
ದೊರೆಗಳಾಗಿದ್ದ ನಿಬರಾಳೋಚನೆಯುಮಾಡಿ |
ಸುರಹೊಂನೆಯಾ ಬಸದಿ ರಾಜಪ್ರತಿಷ್ಠೆಯಿದ |
ನರಸಂಗೆ ಪೇಳಸುವೆವೆಂದುಪಾಯದಿ ಹಿರಿಯಗುರುಗಳೊಡನಿಂತೆಂದರೂ
|| ೧೯ ||

ಈಸುದ್ದಿಯಳಬಳಂಗಳ ಸೆಲ್ಲವಂ ನಮ್ಮ ।
ದೇಶಾಧಿನಾಥಚಂದ್ರಾದಿತ್ಯಕಂಗೆ ವಿ ।
ಶ್ವಾಸವಪ್ಪಂತರುಪಬೇಕರುಪದಿರಲು ಮುಂದಾದಿಮಯ್ಯನ ಕುಹಕದೀ ॥
ಲೇಸಕ್ಕೆ ಹೊಲ್ಲೆಯುಕ್ಕದರ ಮೇಲಾತಸನಿ ।
ವಾಸದೊಳು ಬೆಟ್ಟವುಂ ಕೈಯಿಕ್ಕಿ ಸೆಳೆದು ವಾ ।
ರಾಸಿಗಡಕುವ ಕರಿಗಳುರಿಟವಂ ತಂದೀಕದಕೆ ಹಾಯಿಸುವೆವೆಂದರೂ ॥೨೦॥

ಆನುಡಿಗೊಡಂಬಟ್ಟು ಹಿರಿಯಮಲಧಾರಿಗಳು ।
ಜೈನರವರಿವರೆಂನದೆಲ್ಲರುಂ ಬಹುದೆಂದು ।
ತಾನವೋರುಹತಾಣಜಿನಜಿನಯೆನುತ್ತ ಮನದೊಳು ಕೌತುಕಂದಾಳುತ ॥
ಮೌನದಿಂದಖಿಳಮುನಿಗಳ ನಡುವೆ ನಡೆದು ದು ।
ಮ್ಮಾನದಿಂದ್ಯೆತಂದರರಮನೆಯ ಬಾಗಿಲಂ ।
ಭೂನಾಥನೋಳ್ಸಲುಗೆಯುಳ್ಳುದರಿಸೊಳಪೊಕ್ಕು ಸಪ್ತಕಕ್ಷಾಂತರದೊಳೂ ॥
॥೨೧॥

ಹಿರಿಯಮಲಧಾರಿಗಳು ಬಪ್ಪಾಗ ಮುಂದೆ ವೀ ।
ರರ ಮಕುಟವರ್ಧನರ ರಾಯರಾವುತರ ಬಿರು ।
ದರ ದಂಡನಾಯಕರ ಮಂನೆಯರ ಭಾಷೆಯಾಳ್ಗಳಚರರತೇಜಿಷ್ಠರಾ ॥
ಕರಿಶಿಕ್ಷಕರ ನಡುವೆ ತಳ್ತಕೈದುಗಳ ಬಿ ।
ತ್ತರದ ಬೆಳಗಿನೊಳು ಚಂದ್ರಾದಿತ್ಯನಿರ್ದನು ।
ಪ್ಪರಿಗೆ ಜಡಿದಲ್ಲಾಡುವಂತೋಲಗಂಗೊಟ್ಟು ರಾಯರಕ್ಕಸ ಜೈನನೂ ॥೨೨॥

ಬಂದ ಗುರುಗಳಿಗೆ ಕೈಮುಗಿದುರೆ ನಮೋಸ್ತೆಂದು ।
ವಂದಿಸಲು ಧರ್ಮವೃದ್ಧಿಗಳು ಘನವಕ್ಕೆನಿನ ।
ಗೆಂದೊಡೇಂಬಂದಿರೆನೆ ನಿಮ್ಮ ಬಸದಿಗೆ ಸೋಮನಾಥನು ತಪ್ಪೆನೆಂದೂ ॥
ಹಿಂದೆಮೂದಲಿಸಿ ಹೋದಾದಿಮಯ್ಯಂ ನಿಂನೆ ।
ಬಂದನಿಂದೆಮ್ಮ ಬಸದಿಯ ಕದಂ ತೆರೆಯದಾ ।
ವಂದದಿಂದೇಗೈವೆವೆಂದರುಪಬಂದೆವೆನೆ ಕೋಪದಿಂದಿಂತೆಂದನೂ ॥ ೨೩ ॥

ಕದವಲ್ಲ ಕದಸಹಿತ ಬಸದಿಯಂ ಮುರಿಯಲಾ ।
ರ್ಪ್ಪಧಟಗಜವಿವೆ ಯುವರಕ್ಕೈಯಿಂದ ತೆಗೆಸಿ ತೆಗ ।
ಯದೊಡೆ ಹೋಗದೊಡೆ ಮಲತೊಡಾಂಬಹೆ ನಿಮ್ಮಿರ್ಝುಂಕಿಸಿನುಡಿದ ತೆರ
ಇದಿರೊಳಾದಯ್ಯಗೀದಯ್ಯನೆಂಬಂ ತರ್ಕಿ । (ದೊಳೆನ್ನಾ ॥
ಸಿದನಾದೊಡಂತಕನ ಪಟ್ಟಣದ ದಾರವ ।
ಟ್ಟದಕದಂದೆಗೆಯಿಸುವೆ ನವನಾವನಾದೊಡಂಜದೆ ಹೋಗಿನೀವೆಂದನೂ॥೨೪॥

ಅಂಕದಾನೆಗಳನಾರೋಹಕರು ಜಡಿದು ಕೂ ।
ರಂಕುಸದಿ ಯೊತ್ತಿ ಭೈಭೈಭಲರೆಘೇಯೆಂದು ।
ನೂಂಕಿದೊಡೆಗಜರಿಗರ್ಜಿಸಿ ಸೆಳೆದೊಡೊತ್ತಿದೊಡೆಮಿಸುಕದಿಹ ಕದಕೆ ಮು
ಮುಂಕೊಳಸಿ ಸೊಂಡಿಲಂ ಸುತ್ತಿ ಹೆರೆದೆಗೆದು ಕಡು । (ಳದೂ ॥
ಪಿಂ ಕಾಯ್ದು ಹೊಯ್ದು ಕೋಡಾಡಿಗಳು ಮರಿದುಕ ।
ಣ್ಣಿಂಕರುಳುಸೂಸಿಘೀಳಿಟ್ಟೊರಲಿಕೆಡೆದವಾನೆಗಳ್ಳುತಂದವರಳುಕಲೂ ॥೨೫॥

ಕಡುಗೈದು ತೇಜಕ್ಕೆ ತಂದ ಪಟ್ಟದ ಗಜಂ ।
ಕೆಡೆದುದಲ್ಲದೆ ಕೆಡೆಮೊಡಂ ಕದಂತೆರೆಯದೆಂ ।
ಬೊಡೆ ಕದಂ ತೆರೆಯದಿಂನೇನೆಂದು ನೃಪತಿಗರುಪುವೆವಿಂದಿನಪರಾಧವಾ ॥
ತೊಡೆವುದಕುಪಾಯಮಂ ಕಾಣಬೇಕಲ್ಲದಿ ।
ರ್ದೊಡೆ ರಾಜವೈರವತಿಭಾರವಾದಯ್ಯನಿ ।
ಟ್ಟಡುಗಿಚ್ಚಿದಾತನಂಭುಲ್ಲೈಸಿ ತಂದಲ್ಲದಾಗದೆಂದಾಳೋಚಿಸೀ ॥೨೬॥

ಆತನಂ ಕರೆವುದಕ್ಕೇನುಪಾಯಂ ನಾವು ।
ಸೋತವೆನೆ ಬಂದಪಂ ಬಂದು ಪುಟವೆದ್ದು ಹ ।
ಷಾ೯ತುರದಿ ಕದದೆರೆದಪಾತೆರೆದಬಳಿಕದಕೆ ತಕ್ಕುದಂನೋಡಿಕೊಂಬಂ ॥
ಈತತ್ಕ್ಷಣವೆ ಕರೆವುದೆನಲೊಬ್ಬ ಹರಿದೆಮ್ಮ ।
ಮಾತು ಹುಸಿ ನೀವೆ ಗೆದ್ದಪಿರೆಂದು ಕರೆದಪರ್ ।
ಪ್ರೀತಿಯಿಂಸಮುದಾಯಮೈದೆನೆರೆದೆಂದಾದಿಮಯ್ಯನಂಚರಕರೆದನೂ ॥೨೭॥

ಆದೊಡಲೆಲೇ ಸಾಯ್ತು ಸಾಕು ನಡೆ ಯೆಂದು ಪರ।
ವಾದಿಕರಿಕಂಠೀರವಂ ದೂಷಕಧ್ವಾಂತ।
ಭೇದನದಿವಾಕರಂ ಪರಸಮಯಸಂತಾನವಲ್ಲರಿವಹಿತ್ರಸಿಥನೂ ||
ಆದಯ್ಯ ನುಡಿದಂತೆ ಕಂಡನಾದಯ್ಯನೆರೆ |
ಹೋದೊಡವರಿತ್ತ ಬಾ ಯಿತ್ತ ಬಾಯೆಂದು ಕರೆ।
ದಾದರಿಸೆ ಮಂದಿಯಂ ಬಗಿದೊಳಗೆ ಪೊಕ್ಕಾತ ನಡುವೆ ನಿಂದಿಂತೆಂದನೂ
|| ೨೮ ||

ಮದನಹರ ಸೋಮಯ್ಯನೇನ ಬಂದಪನೆಂದು।
ಹದಿರೊಳಣಕದೊಳು ಕಟಕಿಯೊಳು ಗುಡಿಯಂ ಕಟ್ಟಿ।
ಸಿದ ಮಹಿಮರೇ! ಜಿನಂನೊಂದು ದಬ್ಬುಕಮುರಿದು ಹಾರೆ ಮುಂಡಿಗೆಗಳು
ಮದಗಜಂ ಕೆಡದುದಲ್ಲದೆ ಕದಂದೆಗೆಯದೆನ।　　(ಡಿದೂ||
ಲದನೆಂತು ತೆಗೆಸುವೆವು ನೀಂ ಕುಟಿಲವಂ ಮಾಡಿ।
ಸಿದೊಡಿಲ್ಲವುಂಟೆಂಬ ಸಂವಾದಸುಸಿ ಯಂಕುರಿಸಿ ನಿಮಿರ್ದುದೇವ್ರೊಗಳ್ವನೂ
|| ೨೯ ||

ಕುಟಿಲಕ್ಷುದ್ರಾರಾಧನೆಯೊಳು ಸಾಧುತ್ವವಂ।
ನಟಿಸಿ ಸರ್ವಂ ಶೂನ್ಯವಾದವಂ ಮಾಡಿಸ |
ಲ್ಪಟಮಟಂ ನಿಂದೆನಾಸ್ತಿಕ ಕಟಕಿಯಾವಾತು ನಿಮ್ಮೊಳಳವಟ್ಟಪ್ಪವೊ ||
ದಿಟವನಲ್ಲದೆ ಭಕ್ತರಾಡರಾಡಿತವಾಳ್ಪ।
ಧಟಸತ್ಯಸಾಮರ್ಥ್ಯರೆನಲಾದ್ಧಿಮಯ್ಯನು |
ಬ್ಬಟೆಯ ಸಿಲಿಸಲದೊಂದುಪಾಯಮಂ ಕಂಡು ಸಮುದಾಯದವರಿಂತೆಂದ
(ರೂ || ೩೦ ||

ಇಂತಿದು ಕುಟಿಲಮಲ್ಲದಿದಿರ್ದೊಡೀ ಬಸದಿಯೊಳ।
ನಂತದಿನವಿರ್ಪ ಜಾತ್ಯಂಧಂಗೆ ಹೆಳವಂಗ।
ಮಿಂತೀಗ ಕಣ್ ಕಾಲ್ಗಳಂ ಕೊಟ್ಟೊಡಹುದೆಂದೊಡದನೆ ಕೈಕೊಂಡುತಿರು
ಪಿಂತೆ ತೋರಿದ ಶಿವನ ಮೂರ್ತಿಯಂ ನೆನೆದು ಮ।　　(ಗೀ ||
ಯ್ಯಂ ತಡವೆ ಶೈವಸಮಯಕ್ಕೆರಡು ಕಣ್ಗೂಡಿ।
ದಂತೆ ಶಿವಕೀರ್ತಿಹರಿದಾಡಲ್ಕೆ ಕಾಲ್ಮೂಡುವಂತೆ ಕಣ್ಕಾಲ್ ಬಂದವೊ
||೩೧||

ಇದುಮಾಡಿದಿನಿತುಸಾಮರ್ಥ್ಯವುಳ್ಳವನೊಳಗೆ ।
ಮದನಾರಿಸೋಮಯ್ಯನಂ ತಂದು ನಿಲಿಸದಿರ ।
ಕದದೆರೆದೊಡೇಂ ತೆರೆಯದಿರ್ದೊಡೇನೆಂದಳ್ಕ ಕೆಲರು ಕೆಲಕೆಲಬರಿದರಾ ॥
ತುದಿಯ ನಾರೈದಿದಕೆ ತಕ್ಕುದಂ ಮಾಳ್ಪೆವೆಂ ।
ದದಿರದಾದ್ಯೈಯ್ಯನಂ ಕೆರಳಿಸಲ್ ತಾನೆ ತೆರ ।
ಸಿದಪಂ ಕವಾಟಮನೆನುತ್ತೊಂದು ಬುದ್ಧಿಯಂ ನೆನೆದವದಿರಿಂತೆಂದರೂ॥೩೨॥

ಇವ ಪಡೆವುದೇನರಿದು ಮಂತ್ರತಂತ್ರಂಗಳೆಂ ।
ಮಮರಲ್ಲಿ ಹುಟ್ಟಿದವು ಕದವ ತೆರಸಿದೊಡೆ ಸೋ ।
ಡುಮೆವು ಸಾಮರ್ಥ್ಯಸಂಪನ್ನದಳಬಳವನೆನಲದಕೆ ಮನಗೊಂಡುತಿರುಗೀ ॥
ಕವಿದೊತ್ತುವಡೆ ಧರಣಿ ಯೆತ್ತುವೊಡೆ ನೆಳಲು ನೂಂ ।
ಕುವೊಡಚಳ ಮೊಡೆಗುಟ್ಟುವೊಡೆ ವಜ್ರಮಾರ್ದಸೆಣ ।
ಸುವೊಡೆ ನಂಜಿನ ತವಗವೆನಿಪಕದದತ್ತಮುಂತಾಗಿ ನಿಂದಿಂತೆಂದನೂ ॥ ೩೩ ॥

ಪರಸತಿಗೆ ಪರಧನಕೆ ಪರದೇವತೆಗೆ ಮನಂ ।
ಬೆರಸದಾನಿಹಡಿಲ್ಲಿ ನೀಂ ಮೂರ್ತಿಗೊಂಡುದೇ ।
ನಿರುತಮಹಡಿನ್ನು ದಿನದಿನಕೆ ಶಿವಸಮಯ ಮೂರ್ಜಿತಮಪ್ಪೊಡೆನಗೆನೀನೂ ॥
ಕರುಣಿ! ಕದವಂ ತೆರೆ ಯೆನುತ್ತಪುಷ್ಪಾಂಜಳಿಯ ।
ಹರಹಿ ಸಾಷ್ಟಾಂಗ ಪ್ರಣಮಿತತನುವಾಗಿ ಸ ।
ದ್ಗುರು ಸೋಮನಾಥ! ಸೋಮೈಯ್ಯ!ಸೋಮೇಶ! ಚಿತ್ತೈಸೆಂದು ಕರೆವು
(ತರಲೂ ॥ ೩೪ ॥

ಶಿವನ ಮುಖಮರಳ್ವಂತೆ ಮುಕ್ತಿವನಿತೆಯ ನೊಸಲ ।
ನಮನಯನದೆರಡೆಮೆಯ ಸಂಪುಟಂ ತೆರೆವಂತೆ ।
ವಿವಿಧಕೀರ್ತ್ಯಂಗನೆಯ ನೀಂಶನಾದ್ಯೈಯಂಗೆ ಕೊಡುವೊಡೆಗಡಕು ಪಿಡಿದಾ॥
ಜವನಿಕೆಯ ಸೆರಗು ಸರಿವಂತೆ ಘಳಘಳಲೆಂದು ।
ಜವಳಿಗದ ದೆಗೆಯ ಹೊಸದಾಗಿ ಕರ್ಣಕಾಲ್ಮಾಡಿ ।
ದವರುವೆರಸಾದ್ಯೈಯ್ಯನೊಳಹೊಕ್ಕ ಬಳಿಕೊಡನೆ ಚಾಚಿದವದೇವೊಗಳ್ವ
(ನೋ ॥ ೩೫ ॥

ಹಾಡುವಾಡುವ ನಲಿವ ನರ್ತಿಸುವ ಪೂಜೆಯಂ ।
ಮಾಡುವಾರತಿಗೊಡುವ ಹೊಗಳ್ದು ಮುದ್ದಿಸುತೊಡಲ |
ನೀಡುವನನಂತವಾದ್ಯವನು ಮೊಳಗುವ ಜಯಜಯೆಂಬಖಿಳಸಂಭ್ರಮವ
ನೋಡಿದಂ ದುರಿತವಂ ತೀಡಿದಂ ಭವವನೀ । (ನೂ ||
ಡಾಡಿದಂ ಮುಕುತಿಯೊಳ್ಕೂಡಿದಂ ಹರುಷವಂ |
ಮಾಡಿದಂಪುಣ್ಯಮಂ ಸೂಡಿದಂ ಹೊಗಳಲಸುಗೆಯ್ದನಂದಾದಯ್ಯನೂ ||೪೬||

ಇದೆ ವೇದದರ್ಥ ವಿದೆ ಮುನಿಗಳಧ್ಯಾನಮುಳ |
ವಿದೆ ಭವಾನಿಯ ಮನದಬೆಳಗಿದೆ ಸಮಸ್ತಲೋ |
ಕದ ಕಣ್ಣ ಪುಣ್ಯ ವಿದೆ ಬೇಳ್ಪಮುಕುತಿಯಮೂಲವಿದೆ ಭಕ್ತತತಿಯಭಾ
ಇದೆ ಸಕಲಸೌಕುಮಾರ್ಯದ ಜನ್ಮಭೂಮಿ ಯಿದೆ | (ಗ್ಯ ||
ಯಿದೆಯೆಂನಖಿಲದಭಾಷೆಗಳ ಸರ್ವಾಭಿಮಾ ।
ನದ ಬೀಜ ವಿದೆ ನೆನೆವಜನದ ಭವರೋಗಹರಮೂರ್ತಿಯೆಂಮುರೆಪೊಗಳ್ದ
(ನೂ || ೪೭ ||

ಜಯ ಜನಾರ್ದನವಂದ್ಯ ! ಜಯ ಜಲಜಭವಪೂಜ್ಯ ! !
ಜಯ ಜಂಭರಿಪುನಾಥ ! ಜಯ ಜಯ ಭಯಾತೀತ ! |
ಜಯ ಜಾತವೇದಾಕ್ಷ ! ಜಯಜಾಹ್ನವೀಮಕುಟ ! ಜಯ ಜರಾಮರ
ಜಯ ಜಯ ಜಿತಾನಂಗ ! ಜಯ ಜಯ ಜಗತ್ಪ್ರಾಣ ! । (ಣಪೂರ ! ||
ಜಯ ಜಯ ಜಿನಾರಾತಿ ! ಜಯ ಜಯ ಶಿವಾರಮಣ ! |
ಜಯಯೆಂದು ಹೊಗಳುತ್ತ ಹೊಂಗುತ್ತಹಿಗ್ಗಿನೋಡಿದನು ನಿಜಮೂರುತಿಯ
(ನೂ || ೪೮ ||

ತರುಣಶಶಿಯೆಂಬ ಸಸಿ ಬೆಳೆಯಲ್ಕೆಮೊದಲಿಂಗೆ ।
ಸುರಿವಂತೆ ಮೆರೆವ ಗಂಗಾಜಲಂ ಹೊರಸೂಸಿ ।
ಹರಿಯದಂದದಿ ತುರುಗಿ ಕಟ್ಟಿದೇರಿಯತೆರದೊಳೆಸೆಯೆ ಸುತ್ತಿದಜಡೆಗಳೂ ||
ಶರಣರ್ಗೆ ಕರುಣಿಸಲು ಭಸ್ಮದ ಭ್ರುಕುಟಿಯೊಳ ।
ಗಿರಿಸಿದ ಜ್ಯೋತಿಯೆನೆಕಿಡಿಗಂಣಸೋಂಕಿನಿಂ ।
ವರಚಂದ್ರಿಕಳೆ ಬೆಮರ್ತಮೃತರಸವೊ ಎಂದೆನಿಸಿಮೆರೆಯಿತ್ತು ಗಂಗಾಂಬು
(ವೂ || ೪೯ ||

ನಿಯುತವೇದತ್ರಯಂ ಕಾಲತ್ರಯಂತನು ।
ತ್ರಯಗುಣತ್ರಯಪದತ್ರಯಶಿಖಿತ್ರಯಜಗ ।
ತ್ರಯಂಮೂರ್ತಿತ್ರಯಂ ಶಕ್ತಿತ್ರಯಂಮಹಾಪುರುಷತ್ರಯಾದಿ ಯಾದಾ ॥
ಅಯುತತ್ರಯಂಗಳೆನಿಸುವವೆನ್ನ ಮುಖದೊಳ್ ।
ನ್ನಯ ಕರ್ಣಸಂಜ್ಞೆಗಳೊಳಹವೆಂದು ತೋರ್ಪಂತೆ ।
ನಯನತ್ರಯಂವಿರಾಜಿಸಿದವಗಜಾಪತಿಯ ವದನಸರಸಿಜದೊಳಂದು॥೪೦॥

ಶ್ರುತಿಗಳ ಸ್ತವನರಸ ಕವಿವರರ ಸೂಕ್ತಿರಸ ।
ಯತಿನಾರದಾದಿಗಳ ಗೇಯರಸ ವೆಯ್ದೆಶ್ರೂ ।
ರಿತವಾಗಿ ಮಿಕ್ಕು ತಾಹೊನಲೆದ್ದುಹರಿಯದಂದದಿ ಕಟ್ಟದೇರಿಯೆನಿಪಾ ॥
ನುತಕೊಡಂಕೆಗಳ ಕೋಡುಗಳೊಳ್ಳತಂದೊಡು ।
ನ್ನತರಾಗರಸವ ನೀಂಟಲು ಪಾರ್ದು ನಿಂದ ಫಣಿ ।
ಪತಿಗಳೋಎಂಬಂತೆ ಫಣಿಕುಂಡಲಂಗಳೊಪ್ಪಿದವು ಗಿರಿಜಾಧಿಪತಿಗೇ ॥ ೪೧ ॥

ಕೆಳಗುಭಯನಯನಸುಸಿರವಿಬೆಳಗು ಮೇಲೆ ಸಿ ।
ರ್ಮಳಬಾಳನಯನ ಶಿಖಿವೆಳಗು ಕೆಲಬಲದ ಕುಂ ।
ಡಳದಫಣಿಗಳ ಫಣಾಮಣಿವೆಳಗು ಸುತ್ತಿಕಟ್ಟದೊಡೆ ದೆಸೆಗೆಟ್ಟುಸಿಕ್ಕೀ ॥
ಬಳವಳದು ಬಡವಾಗಿ ಬಾಗಿ ಕದಪಿನ ಬಳಿಯೊ ।
ಳಳದಸಿದುಗೊಂಡು ಮೆಲ್ಲನೆ ನುಸುಳ ಹೋಗಲಿಹ ।
ತೆಳುಗತ್ತಲೆಯ ಮರಿಗಳೋ ಎನಿಪ್ಪಂತೆಸೆದವೀಶನಭ್ರೂಲತೆಗಳೂ ॥ ೪೨ ॥

ಸಕಲದೇವರಿಗಿಲ್ಲದ ಭಿಮಾನನಿತ್ಯಜೀ ।
ವಕಳೆ ನುತಚಲ್ವುಸಲೆನೆಲೆತೊಲಗದಿರಲತಿ ।
ಪ್ರಕಟದಿಂದೆಸೆವ ಮೊಗಸಾಲೆಯೆಂದೆನಿಸಿ ಮೆರೆಯಿತು ಶಂಕರನನಾಸಿಕಾ ॥
ಸುಕರಮೌಕ್ತಿಕ ನಿಕರಮಂ ನವಪದ್ಮರಾಗ ।
ದಕರಂಡದಲಿ ತೀವಿದರೊ ಎಂದೆನಿಸಿ ಪುರಾಂ ।
ತಕನ ಮಿಸುಪ್ಪಧರಪಲ್ಲವ ಯುಗಾಂಕಿತದಶನಮಂಡಲಂ ಕಣ್ಗೆಸೆದವೂ.
॥ ೪೩ ॥

ನೆನೆವರಿಗೆ ಧರ್ಮಾರ್ಥಕಾಮ ಮೋಕ್ಷಂಗಳೆಂ ।
ದೆನಿಪ ನಾಲ್ಕುಂತೆರದ ಫಲವೀವ ಕಲ್ಪತರು ।
ವಿನನಾಲ್ಕುಶಾಖೆಗಳವೆಂಬಂತೆ ಮೆರೆವ ಪುರಹರನ ಚಾತುರ್ಭುಜದಲ್ಲೀ ॥
ಮುನಿವರರ ನಿರಿಯಲ್ಕೆ ಶೂಲ ವತ್ಯಂತದು ।
ಜನರ ಜೀವಾನಿಲನ ನೀಂಟಲ್ಕೆ ಸರ್ಪ ಮುಂ ।
ನಿನ ವಿವರಮುಂ ಪೇಳ್ವೆ ಬೊಂಮುಸಿರ ದುರಿತವಿಘಟನಕೆ ಡಮರುಗವೆಸೆದವೊ
॥ ೪೪ ॥

ಮಂಗಳಮಯಾಂಬಿಕಾನಯನವನಿತಾನಾಟ್ಯ ।
ರಂಗಸ್ಥಳವೊ ಹೇಳದೆಂದೆನಿಸಿ ಭೂರಿಯುಭು ।
ಜಂಗಳೆಡೆದೆರಹಿನೊಳು ಘನವಿಶಾಲೋರಸ್ಥಳಂ ವಿಭವದಿಂದೆಸೆದುವೂ ॥
ಅಂಗದೊಳಗೊಗೆಯು ತಾವರಿಸಿ ಪಬ್ಬುಗೆವಡೆದ ।
ಭಂಗಿ ಸುಲಲಿತಸೌಕುಮಾರ್ಯ್ಯಶರಸಿಧಿಯೊಳು ಕ ।
ಡಂಗಿ ಪುಟ್ಟಿರ್ದ ನಿರ್ಮಳದಕ್ಷಿಣಾವರ್ತವೆನಿಸಿ ಮೆರೆದುದು ನಾಭಿಯೂ
॥ ೪೫ ॥

ಬೆಳೆವೆತ್ತ ಸಸಿಗೆ ಪರಿವೇಷವಾದಂತೆ ನಿ ।
ರ್ಮಳಕಾಯ ಮಧ್ಯಪ್ರದೇಶದೊಳು ಸರ್ಪಮೇ ।
ಖಳೆ ವಿರಾಜಿಸಿತು ಪುರುಷಾರ್ಥಮುಂ ಪುಣ್ಯಗುಣದಿಂದೆ ಸಿಂಗರಿಸಿದಂತೇ ॥
ತಳೆದ ಚಲ್ಲಣದ ಕೌಪೀನವೆಸೆದುದು ಸಮು ।
ಜ್ವಳತರುಣತರಣಿಕಿರಣಂ ನಾಡೆ ಕವಿದರುಣ ।
ಜಳವೆನಲ್ತೊಡರು ಮಾಣಿಕದ ಕೆಂಬೆಳಗು ಮುಸುಕಿದಪದಾಂಬುಜಮೆರೆದ
(ವೊ ॥ ೪೬ ॥

ಜಗದ ಪುಣ್ಯಕ್ಕೆ ಹೆಗಲೊಗೆದುದೋ ! ಶಿವನ ಕೀ ।
ರ್ತಿಗೆ ಕೋಡು ಮೂಡಿದುವೊ ! ಭಕ್ತರುತ್ಸವದ ಹೆ ।
ಚ್ಚುಗೆಗೆ ಕಿವಿಯುದ್ಭವಿಸಿದವೊ ! ತಿಳಿದ ಬೆಳುದಿಂಗಳಂಗೆ ಕಾಲ್ಗಳು ಮೊಳೆತ
ಬಗೆ ನಿಲುಕದತುಳಕೈವಲ್ಯಪರಿವೃತರಜತ । (ವೋ ॥
ನಗವೃಷಭವಾಯ್ತೊ ! ಹೇಳೆಂಬ ಸಂಶಯಕೆ ನಂ ।
ಬುಗೆಗೆಯ್ದ ಪುಂಗವನ ನುತದೇವಪುಂಗವಂ ನಲಿದೇರಿ ಕಣ್ಗೆಸೆದನೂ ॥೪೭॥

ಪ್ರಣವದಂದುಗೆ ವೇದದುರುಗೆಜ್ಜೆ ದಯೆಯು ಕಿಂ ।
ಕಿಣಿದೊಡರು ಸತ್ವದ ಖಲಿನ ಸಮತೆಯು ವಾಘೆ ।
ಯಣುಮಾಡಿ ಮೊಗಮುಟ್ಟು ಶಿವಕೀರ್ತಿ ಕಂನಡಿ ಮಹಾನಾದ ಕಿವಿಯು
ಎಣೆಗೆಟ್ಟಭಕ್ತಿ ಮಲ್ಲಂ ಪಂಚವರ್ಣ ಹ । (ಚಮರೀ ॥
ಲ್ಲಣ ಶಾಂತಿಯೆಂಬ ಬಿಗಿ ವಿಪುಳವೈರಾಗ್ಯದಂ ।
ಕಣಿ ನಿತ್ಯವಕ್ಕರಿಕೆಯೆನೆ ಮುಕ್ತಿ ಮೂರ್ತಿಗೊಂಡಂತೆ ವೃಷಭಂ ಮೆರೆದ. ದೂ
॥ ೪೮ ॥

ನಟ್ಟನೋಡಿದ ನೋಡಿದೊಡೆನೋಡಿದೆಡೆಯೊಳಾ ।
ದಿಟ್ಟ ಸಿಕ್ಕಿರಲಲ್ಲಿ ಯೆವೆಗುಟ್ಟಲೀಯದಳ ।
ವಟ್ಟ ಬಹಿರಂಗಂಗಳೆಲ್ಲ ಪುಳಕಿತವಾಗೆ ಮರೆದು ಮನದಲ್ಲಿ ತಣಿವೊ ॥
ಹುಟ್ಟದಾವಯ್ಯ ನೀಕ್ಷಿಸುತಿರಲು ಹೊರಗೆನೆರೆ ।
ದಿಟ್ಟಣಿಸಿ ತುರುಗಿ ಪರವಾದಿಗಳು ಬಿಡದೆ ಬೊ ।
ಬ್ಬಿಟ್ಟು ಕರೆದರು ಕರೆದರೆಲೆಲೆ ಕೇಳಾದಯ್ಯ! ಕದವ ತೆರೆತೆರೆಯೆಂದರೂ
॥ ೪೯ ॥

ಹಸನಾದುದೆಮ್ಮ ಬಸದಿಯ ಕದವನಿಕ್ಕಿಕೊಂ ।
ಡುಸುರದಿಹುದಾವು ದರಿದೆಂದು ತನತನಗೆ ಧ ।
ಟ್ಟಿಸಿ ಕದಂದೆರೆ ಯೆಮ್ಮ ದೇವರುಗಳೆಲ್ಲರಂ ನೋಡಬೇಕೆಂದು ಮೊರೀ ॥
ಮುಸುಗಿ ಕರೆವುತ್ತಿರಲು ತೋರಿದಪೆ ನೋಚ್ಚಸೈ ।
ರಿಸಿ ನೀವೆನಲು ನಿಲ್ಲವೀಗ ನೋಡಲುಬೇಹು ।
ದಸಿತಗಳನಾಣೆ ತೋರೆನಲೊಡನೆ ಕದದೆರೆದು ತೋರಲಂದಸುಗೆಯ್ದನೂ
॥ ೫೦ ॥

ಇದು ಜಿನನ ಭಾಗಂಗಳದು ವಾಣಿಭದ್ರನೊಡ ।
ಕಿದು ಜಕ್ಕಣಿಯ ಸೆಕ್ಕೆಯಿದು ಬೊಮ್ಮಯನ ಚೂರ್ಣ ।
ವಿದು ಯಕ್ಷರೊಡಲ ಹುಡಿಯಿದು ನಿಡಿಯ ಚವ್ವೀಸತೀರ್ಥಕರ ಸಿಡಿದಕಾ
ಇದು ಸರ್ವ ಜೊಂಬೆಗಳ ನುಗ್ಗುನುಸಿಗಳು ಕೊಳ್ಳಿ । (ಯಾ ॥
ಯಿವನೋಡಿ ನಿಮ್ಮ ಕಣ್ದಣಿವಂತಿರೆಂದು ಚ ।
ಲ್ಲಿದೊಡವಂ ಕಂಡು ಬೆಂಡೆದ್ದು ಕಂಬನಿಗಳಂ ತುಂಬಿದರು ಸುತ್ತಮುತ್ತೀ
॥ ೫೧ ॥

ಚಲ್ಲಿದೊಡಕುಗಳ ಚೂರ್ಣಂಗಳಂ ಬಲುಸೆಕ್ಕೆ ।
ಯೆಲ್ಲವಂ ತಂದು ಸಂದಿಸಿ ನೋಡಿ ತಪ್ಪದಂ ।
ತಿಲ್ಲಿಗಿಂತೀತನಂ ಬರಿಸಿ ಬಸದಿಯ ಹೊಗಿಸಿದವರಾರೆನುತ್ತೆಲ್ಲರೂ ॥
ಹಲ್ಲುದಿಂದೌಡುಗಡಿದಿವನ ದೆಸೆವಲಿಗೊಟ್ಟೊ ।
ಡಿಲ್ಲಿ ಫಲವೇನೊ ಪರಸಮಯಮಂ ಬೆರಸಿದಂ ।
ಗೆಲ್ಲಿಯದು ನಿಷ್ಠ ಸವಣರಸಮಯ್ಯದೊಳಗೆ ಶೈವನನಿಲಿಸಲೇಕೆಂದರೂ ॥೫೨॥

ಬೆಟ್ಟನೊಳು ಕೊಂಡನಿತು ಬೂದಿಯಂ ವ್ಯೆಯಮೋ ।
ಲಿಟ್ಟಂಗೆ ದೇಶವಾಡುವ ಗಾದೆಯಂತೆ ಪೇ ।
ರ್ಬೆಟ್ಟದನಿತುಂ ಮರುಳು ಸಾವುರ್ದೆಂಬುದು ನಿರುತವಲ್ಲದೊಡೆ ಸುರಹೊಂ
ಕಟ್ಟಧಿಕ ಜಿನನ ನಾನಾಪರಿಯೊಳೆಯ್ದೆ ಹುಡಿ ।   (ನೆಯಾ ॥
ಗುಟ್ಟುವನೆ? ಯಿವನನಿನ್ನಾವುಪಾಯದೆ ಪಿಡಿದು ।
ತಟ್ಟುಸೀಳುವೆವೆಂದು ನೆರೆದ ಸವಣನಿಕಾಯ ಕೆರಳಿ ಕಿಡಿಕಿಡಿಯಾದುದೂ
॥ ೫೩ ॥

ಭರದಿ ತಿಂಗಳ್ಗೆ ಸೌರಾಷ್ಟ್ರಸೋಮನ ತಂದು ।
ಸುರಹೊಂನೆಯರುಹನಂ ಬಿರಿಸಿದಪೆನೆಂದೊಡದು ।
ದೊರಕದಾದಯ್ಯ ತಾನೇ ಬಸದಿಯಂ ಹೊಕ್ಕು ಪ್ರತಿಮೆಯೆಲ್ಲವನೊಡೆದ
ಮರುಳನೆನೆ ಕೆಲಬರವನಂತೆ ಹೋಲುವೆಯಿಲ್ಲ ।   (ನೂ ॥
ಹರಸ ಭಾವಂ ಕದಂದೆರೆದಾಗ ತೋರಿತ್ತು ।
ನಿರುತವಾದಂದೇನಮಾಡುವೆವೆನುತ್ತೆ ಯತಿಭೀತರಾದರು ಮನದೊಳೂ
॥ ೫೪ ॥

ಮರುಳುಪಾರಿಸಶೆಟ್ಟಿ ಮಗಳಂ ಪಡೆದಡೊಬ್ಬ ।
ಗೊರವಂಗೆ ಕೊಡಲೇಕೆ? ಕೊಟ್ಟೊಡಾಗೊರವನಂ ।
ಪುರದೊಳಿರಿಸಲದೇಕವಂ ತನ್ನ ಭಕ್ತರ್ಗೆ ಸವೆದ ಸಾಧನವ ತಂದೂ ॥
ಚರಿಗೆಗಿಕ್ಕಲದೇಕೆ? ಯಿಕ್ಕೆ ಸೋಮಯ್ಯನಂ ।
ಬರಿಸೆಂದು ಹೂಣಿಸಲದೇತಕ್ಕೆ? ಸುರಹೊಂನೆ ।
ಯರುಹನಂ ಬಿರಿಸಲೇಕಿದು ತಮ್ಮ ಕರ್ಮವೆಂದುದು ನೆರೆದಸಮುದಾಯವೂ
॥ ೫೫ ॥

ಅತಿಮೂರ್ಖನಾದಮ್ಯನೊಡೆದೊಡೇಂ ಸೌರಾಷ್ಟ್ರ ।
ಪತಿಸೋಮನಾಥ ಮೂಡಿದೊಡೇನೊ ನಂಮಾರು ।
ಹತಕೆ ಕುಂದಾದುದೀಯುಪಮಾನ ತಾನದೆಂದಿಂಗೆ ಮರಳುವುದೆನುತ್ತಾ ॥
ವ್ರತಧಾರಿಗಳು ಬ್ರಹ್ಮಚಾರಿಗಳು ಸವಣಪಂ ।
ಡಿತರುಪೂಜಾಕಾರಿಗಳು ಬಾಯುಬಿಡುತಿಂನು ।
ಗತಿಯೇನು ಮಂಡಳಾಚಾರ್ಯಗುರುಮಲಧಾರಿಗಳೆ ಬೆಸಸಿರೆನುತ್ತಿರ್ದರೂ
॥ ೫೬ ॥

ಭೂತಳದೊಳಧಿಕತರವೆನಿಪ ವಿಖ್ಯಾತಿಯುತ ।
ವೀತರಾಗಂ ತಮಗೆ ಪತಿಯಾಗಿಯುಂ ಪ್ರಾಣ ।
ಭೂತನಾಗಿಯು ತಾನೆ ತಂನಳಿವ ತಮ್ಮ ಕಣ್ಣಾರೆ ಕಂಡಿಲ್ಲಿ ತಮಗೇ ॥
ಏತರಿರವಿಂನು ಧರಣಿಯೊಳೆಂದು ಸವಣಸಂ ।
ಜಾತವೆಲ್ಲಂ ಪರಿಚ್ಛೇದಿಸುತೆ ಕಲಿಯಾಗಿ ।
ಕೌತುಕದಿ ಕುತ್ತಿಕೊಂಡರು ಸಾವ ಭರದಿಂದ ಕಯ್ಯಕುಂಚದ ಕೊನೆಯಲೀ
॥ ೫೭ ॥

ಹೊಡೆಹೊಡೆದು ಕೊಂಡು ದುರ್ಮರಣದಿಂ ತಾವೆಲ್ಲ ।
ಮಡಿದಲ್ಲಿ ಫಲವೇನು ? ವದವಿತಳೆಯೆತ್ತುವೀ ।
ಮೃಡಸಮಯಮಂ ಕೆಡಿಸಿ ಭಕ್ತರೆಲ್ಲರಂ ಕೊಂದೀಗಳೊಗೆದಿಹ ಬಸದಿಯಾ॥
ನಡುವಿದ್ದ ದೇವರನಮಂಗಳಂ ಮಾಡದಿ ।
ದೊರ್ಡೆ ಮುಂದೆ ತಮಗೆ ಹೊಲ್ಲೆಂದು ಸವಣರುಮೀರಿ ।
ಕಡೆಗಹಿಂಸಾಪರಮಧರ್ಮವೆಂತೆಂಬ ನೀತಿಯಬೇರ್ಗೆಹುಳುವಾದರೂ ॥೫೮॥

ಮೂಗು ಹೋದಾಬಳಿಕ ಮೂಗುತಿಯ ಮೇಲೇವು ।
ದೋಗಾಯ್ತುಮುಸುವಳಿದ ಬಳಿಕೊಡಲಮೇಲೇವು ।
ದೋಗಾಯ್ತು ಕಂಪಳಿದ ಬಳಿಕಕುಸುಮಾವಳಿಯುಮೇಲೇವುದೋಗಾಯಿತಂ॥
ಮೇಗೆ ಮುಕ್ತಿಯನೀವನಮ್ಮ ನಚ್ಚಿನ ವೀತ ।
ರಾಗ ಮಡಿಹಿದ ಬಳಿಕ ಸರ್ವಧರ್ಮದ ಮೇಗ ।
ಸಾಗಾಯ್ತು ವಿನ್ನೇವುದರಸನಂ ಕರೆಸಿಕದನವನೆಸಗಬೇಕೆಂದರೂ ॥ ೫೯ ॥

ಕರಿಯಿಂದ ಕದದೆರೆಯುದಿರಲು ಬಂದಪ್ಪೆನೆಂ ।
ಬರಸನಂಕದಗಜಂ ಮಡಿಯೆ ತನ್ನಯ ಬಸದಿ ।
ಯರುಹಂತ ನೊಡೆಯೆ ಸಾವೆಲ್ಲರುಂ ಹಿರಿಯುಗುಗುಗಳನು ಮುಂಚಬಟ್ಟು
ಭರದಿ ನವ್ಮೊಡನಂದು ಹಿರಿಯಬಸದಿಗೆ ಬಂದು । (ನಡೆಯೋ ॥
ದುರುಳನಾದಯ್ಯನಂ ಹೆಡೆಗೆಯ್ಯೊರಸಿ ತಂದು ।
ಪರಿಭವಿಸಧಿರನೆಂದು ನೆರೆದ ಸಮುದಾಯ ವಾಮಲಧಾರಿಗಳಗುಳಿದುದೂ
॥ ೬೦ ॥

ನಡೆಯೆನಲನಂತತಂಡದ ಜೈನರೆಲ್ಲ ಕ್ರೂರ ।
ಮಡೆ ಗಾಳುಮೋಳೆಂದು ಗೂಳೆಯಂಗೊಂಡು ಬರೆ ।
ನಡುವೆ ಮಲಧಾರಿಗಳು ಕೋಪದಿಂ ದುರಿಯನುಗುಳುತ್ತಲತಿರಭಸದಿಂದಾ ॥
ಎಡೆಗೋಲು ಸಮಯಾಸಮಯವೆಂಬುದಿಲ್ಲದಾ ।
ಕ್ರೋಡವಿಪತಿಯರಮನೆಯ ಹೊಕ್ಕರಸನೋಲಗಕೆ ।
ಸಿಡಿಲು ಬಪ್ಪಂತೆ ಬಂದರ್ ಮುಂದಣಾವಶಕುನವೊಂದುವಂ ಬಗೆಗೊಳ್ಳದೇ
॥ ೬೧ ॥

ಎಲ್ಲರೊಂದಾಗಿ ನಡೆತಂದು ಚಂದ್ರಾದಿತ್ಯ ।
ವಲ್ಲಭನ ಕೂಡೆ ಗಜದಳಿವು ಮೊದಲೆನೆ ಕದನ ।
ಪಲ್ಲವಿಸಿದಾಕ್ರಮವ ನಭಿಮಾನದಳವ ನಪಕೀರ್ತಿಹಬ್ಬಿದಹದನನೂ ॥
ಮೆಲ್ಲಮೆಲ್ಲನೆ ಚಿತ್ತವರಿದು ಬಿನ್ನೈಸೆ ಭೂ ।
ವಲ್ಲಭಂ ಸಿಡಿಗಂಡ ಮದದಾನೆ ಸ್ಯೆರಣೆಯ ।
ನೊಲ್ಲದುರವಣಿಸಿ ಕಡುಮುಳಿವಂತೆ ಘುಡುಘುಡಿಸಿ ಘೂರ್ಮಿಸಿದನೇವ್ರೊಗಳ್ವೆ
ನೂ ॥ ೬೨ ॥

ಒಡಲು ಕಂಬಿಡೆ ಕರಂ ನಡುಗೆ ಭುಜರೋಮವಿದಿ ।
ರಡರೆ ಪುಬ್ಬುಗಲುಗೆ ಮೊಗಕರ್ಬೊಗರನುಗುಳೆ ಕ ।
ಣ್ಗಿಡಿಗೆದರೆ ನಿಟಿಲತಟವಾತತಸ್ವೇದಬಿಂದುವ ಸುರಿಯೆ ಕಡಗ ಬೆಳೆದಾ ॥
ನುಡಿ ಸಿಡಿಲ ಸಡಗರವನಿಳಸೆ ಮೀಸೆಯನಡ್ಡ ।
ಗಡಿದು ಖಡ್ಗವ ಜಡಿದು ತೊಡೆಯನಪ್ಪಳಿಸಿ ತಾ ।
ನಡರ್ದಗದ್ದುಗೆ ಹೊಗೆಯಲೆದ್ದು ಕೋಪಾಗ್ನಿರೂಪಾದಂತೆ ಘೂರ್ಮಿಸಿದನೂ
॥ ೬೩ ॥

ಅರಸನಾ ಕಡುಗೋಪಮಂ ಕಂಡು ದಂಡನಾ |
ಥರು ದೇವ ! ಚಿತ್ತೈಸಿ ನೀವು ಕೋಪವಮೊಗಳೆ |
ತರಬೇಡ ಚಕ್ರೇಶ ನೀಂ ಮುನಿಯೆ ನಷ್ಟಂನರಾಜರೊಳಗಿಪ್ಪನಾವಾ ||
ತರಳೇಕ್ಷಣಾಕ್ಕ ಕೆಂಪೊಗೆಯಲರಿರಾಯರಿಂ |
ಬರಿಸಿ ಸಪ್ತಾಂಗಮನದಂ ಮಾಣ್ಗು ಬಡಗೊರವ |
ಹರಡಂಗಿನಿಬದೇಕೆನುತ್ತೆ ಮಂತ್ರಿಗಳೆಂದೊಡಂದು ನೃಪನಿಂತೆಂದನೂ || ೬೪ ||

ಬಡಗೊರವನಾದೊಡಾ ಸೌರಾಷ್ಟ್ರ ಸೋಮನಂ |
ನುಡಿದಂತೆ ತಂದು ಸುರಹೊನ್ನೆಬಸದಿಯ ಜಿನನ |
ನೋಡಿವನೆ ? ಕದಂದೆರೆಯಲಾರದಳದವು ಕರಿಗಳದ ತೆರೆದು ಹೊಕ್ಕುಬಲ್ಪಾ ||
ಪಿಡಿವನೆ ? ಜಿನಪ್ರತಿಮೆಯೆಲ್ಲವಂ ಮುರಿದು ಹೊರ |
ಗಿಡುವನೇ ? ಶಿವಭಕ್ತಿಯೆಚ್ಚರಲು ಜೈನಮಂ |
ಕೆಡೆಮೆಟ್ಟುವನೆ ? ಯೀವನ ಮುರಿವಂದತನಗಹುದು ಪೆರರಿಗಳವಡದೆಂದನೂ
|| ೬೫ ||

ಇದನುಪೇಕ್ಷಿಸಲು ತಮ್ಮಾರುಹತಕೆಲ್ಲ ಕಂ |
ದುದಯಿಪುದು ಹೇಳಕೆಯಲಾಗದಾನೇಹೋಗಿ |
ಕದವಂ ತೆರೆಸಿ ಕಾಳುಗಾರ್ಯಮಂ ಕಂಡೆವಾದೊಡೆ ಬಳಕ್ಕದಕೆ ತಕ್ಕಾ ||
ಹದಸಮಾಡುವೆನೆನ್ನ ಪಟ್ಟದ ಗಜಂಮುಖ್ಯ |
ಮದದಾನೆ ಮಡಿದವರುಹಪ್ರತಿಮೆಯೊಡೆದವೆಂ |
ಮೊದರಿಕೋಪಾಟೋಪದಿಂ ಮೀಸೆಯಂಕಡಿದು ಖಡ್ಗವಂಜಡಿದೆಂದನೂ
|| ೬೬ ||

ಸೊಕ್ಕಿದಾದಿಗನೆಂಬವನ ನಂತಕನ ಬಾಣ |
ಸಕ್ಕೆಕಳುಹುವೆ ಸಿಳೆಯೊಳುಳ್ಳ ಭಕ್ತರ್ಗೆ ಬಿ |
ದ್ದಿಕ್ಕುವೆಂ ಸುರೆದು ಬೂದಿಯ ನಾಮನಿಟ್ಟವನ ನಿಜಭಾಳದಲಿ ಬರೆದಾ ||
ಅಕ್ಕರವನಳಿಪೆ ನಿಂದ್ಯೈತಂದ ದೇವಂಗೆ |
ತಕ್ಕುದಂ ಮಾಳ್ಪೆ ನೆಂದೊಳ್ವ ಭೂಭುಜನ ಮನ |
ವಕ್ಕಳಿಸಿ ದುಗುಡಮಂ ತಳೆಯಲವಕಪಟತಮಾಹೊತ್ತು ಕೈಮಿಕ್ಕವೊ
|| ೬೭ ||

ಮೂಡ ಸೀತರು ಗದ್ದುಗೆಯ ಕೆಳಗೆ ಕೋವ್ರುಳೆ ।
ದ್ದಾಡಿದವು ಬಳ್ಳುಕರೆದವು ಹಿಂದೆ ಹಲ್ಲಿ ಸರ ।
ಮಾಡಿದವು ವಾಮಭುಜಶೋಚನಂನಡುಗಿದವು ಮಣಿಮಾಢ ಜೇನನೊಣವ ॥
ಸೂಡಿದವು ಖಡ್ಗ ಮುರಿದವು ಹಗಲು ನಕ್ಷತ್ರ ।
ಮೂಡಿದವು ನೋಡುನೋಡವಶಕುನ ಕಾಳಗಂ ।
ಬೇಡ ಹದುಳರಬೇಕು ಯೆಂಸೊಡೆದ ಬಸದಿಯೊಡೆಗಂದರಂದಾಸಚಿವರೂ
॥ ೧೮ ॥

ಅರಸ ! ಕಾಳಗಬೇಡ ವಾದಯ್ಯನುನ್ನತಿಯ ।
ಚರಿತಮಂ ನಾವರಿಯದಿರೆ ನೀವು ಪೇಳ್ದರೇ ।
ಕರಿಗಸದಳದ ಕದವ ತೆರೆದರುಹನಂ ಮುರಿದು ಜೈನಮಂ ಹರಿದಂದವಾ ॥
ಗೊರವ ನಮ್ಮಳವಲ್ಲ ವವಶಕುನ ಕರಹೊಲ್ಲ ।
ಧುರದಲ್ಲಿ ಜಯವಿಲ್ಲ ಮನೆಯೊಳಿರಿ ಹದುಳೆಂದು ।
ನೆರೆದ ಮಂತ್ರಿಗಳೆಂದು ನೀತಿಯಂ ಪೇಳ್ದೊಡಾ ಭೂಪಾಲನಿಂತೆಂದನೂ
॥ ೧೯ ॥

ಈ ತೀವ್ರಮೆನಿಸುವವಶಕುನ ವಿಂತೀಮಹೋ ।
ತ್ಪಾತ ವಪಜಯುವನನುಕರಿಸುತಿವೆ ನಿಮ್ಮ ಬರಿ ।
ಮಾತಿನಲಿ ಹೋಹದೈವಿಕವಲ್ಲ ಕುರುಹಿಟ್ಟು ಬಂದುದಿದು ತನ್ನವೇಳೆ ॥
ಭೀತಿಯೇಕೆನಗಪ್ಪುದೇಗೈದುವುಂ ತಪ್ಪ ।
ದಾತುರದಿ ಕಾದಿ ಸಮಯಾಚಾರಮಂ ಗೆಲಿಸಿ ।
ಭೂತಳಂ ಮೆಚ್ಚೆ ಕೀರ್ತಿಯನುಳುಹಿಕೊಂಬೆ ನಿಸ್ಸಡ್ಡೈಸಬೇಡೆಂದನೂ
॥ ೨೦ ॥

ಶ್ರೀಮದ್ರಾಘವಾಂಕಮಹಾಕವಿವಿರಚಿತಮಪ್ಪ ಶ್ರೀಸೋಮನಾಥಚರಿತ್ರಯೊಳ್ ಸಂಧಿ ೫ ಮಂಗಳಮಹಾ ॥

ಶ್ರೀ ಶ್ರೀ ಶ್ರೀ

## —ಆರನೆಯ ಸಂಧಿ—

॥ ಶ್ರೀಗುರುಭ್ಯೋನಮಃ ॥

ಸೂ ॥ ಹರನ ಭವನವ ಸುತ್ತಿಮುತ್ತಿರ್ದ ಹಗೆಗಳಂ ।
ಧುರದೊಳಗೆ ಕಡಿಖಂಡಮಾಡಿ ರಣವಂ ಮಿಕ್ಕು ।
ಶರಣೆಂದು ಬಂದರಂ ಕಾಯ್ದು ಸೋಮೇಶನಂ ಕಂಡನಾದಯ್ಯನೂ ॥ಪಲ್ಲ॥

ಶ್ರೀಸೋಮನಾಥನ ಕುಮಾರನಾದಯ್ಯನೆಸೆ ।
ವಾಸ್ತುರದ ಮಹಿಮೆ ಮನದೊಳ್ನಾಂಟ ಬೇರ್ವರಿದು ।
ಕೇಸರಿಯಮ್ರೊಲುದಳಂ ವಳ್ಳರಿದು ಹೃದಯಮಂ ಸುಡೆಬೆಂದು ಕಂದಿನೊಂ (ದೂ॥
ಶ್ವಾಸದುರಿಯಿಂದ ಬಂಬಲುಗಿಡಿಯ ಗಡಣ ಹೊರ ।
ಸೂಸೆ ಮುಳಿಸಿಂದೆದ್ದು ಕದನಮುದ್ಯೋಗದಿಂ ।
ದಾಸಮಯದೊಳು ಮಂತ್ರಿಗಳು ಬೆಸಸಲವರೊಡನೆನಿಮ್ಮಹವಣಿಲ್ಲೆಂದನೂ ॥ ೧ ॥

ತೆಗೆವ ಕದವೇತರಿಂ ತೆಗೆಯದಿರಲೊಬ್ಬನೇ ।
ತೆಗೆದುದರಿ ನತುಳಬಲ ನವೆದರ್ಗೆಕಣ್ಣಾಲ ।
ಮಗುಳತ್ತನದರಿಂದ ಸಾಮರ್ಥ್ಯವಂತ ನಾದಯ್ಯ ನಾನಾತನೊಡನೇ ॥
ಹಗೆಗೊಂಡೊಡಂ ಸೋತೊಡಂ ಬಿಟ್ಟೊಡಂ ಹಾನಿ ।
ಹೊಗದು ಘಣ್ಣಲಿ ಕರಿಗಳಾಳ್ಕೈದುಗೊಳಲಿ ಕುದು ।
ರೆಗಳು ಹಲ್ಲಣಿಸಲಿಂತೀಗ ನಿಸ್ಸಾಳಮಂ ಸೊಳ್ಳೆಸಹೇಳೆಂದನೂ ॥ ೨ ॥

ಅಕ್ಕಳಸಿಧರ್ಳೆ ಯುಕ್ಕಿಜಲಧಿ ಹಗೆಗಳು ಗಬ್ಬ ।
ವಿಕ್ಕೆ ಕುಂಬಿಡೆ ನಗನಿಕಾಯವೆಲ್ಲಮುಂ ದಶ ।
ದಿಕ್ಕುಗಳ ಕರ್ಣಕೋಟರದೊಳಗೆ ಭೋಂಕಾರರವವಡಸಿ ಬೀದಿವರಿಯೇ॥
ಎಕ್ಕಸರದಿಂದ ನೂರಾರು ನಿಸ್ಸಾಳಂಗ ।
ಳೊಕ್ಕಲಿಕ್ಕಲು ಮಹಾದೇವ ಗಗನಕ್ಕೆ ಸಾ ।
ಲಿಕ್ಕಿಡೆ ಧಳಧಳಂಧಳಂಧಳಂಧಳರೆಂಬ ಧನಿಹಬ್ಬಿ ಹರಕಲಿಸಿತೂ ॥ ೩ ॥

ತತ್ತು ಕಾಳಗದ ಸೂಚನೆಯು ಸನ್ನಿಗೆ ರಭಸ ।
ವೆತ್ತು ಭೇರೀರವವ ಕೇಳ್ದು ಶಿವಶಿವ ಭೂಮಿ ।
ಹೆತ್ತುದೋ ನಭವೀದುದೋ ದೆಸೆಗಳುಗುಳ್ದುವೋ ಭವನವೇಂತಾನಾದು
ಬಿತ್ತರಿಸಲರಿದೆನಲು ನೆರೆಯಿತ್ತು ಫಣಿಪತಿಯು । (ದೋ ॥
ನೆತ್ತಿ ಕೊರಳೊಳು ಮುಳುಗಲಾದಿಕೂರ್ಮನ ಬೆನ್ನು ।
ಹತ್ತಿ ಬಸುರೆಡೆಯು ಪುಗೆ ಹಸ್ತ್ಯಶ್ವರಥಪದಾತಿಗಳು ಕಣ್ಗೆದ್ದುತದಲೀ ॥೪॥

ಸೇನೆ ನೆರೆಯಿತ್ತು ರಿಪುಕುಮುದಮಾರ್ತಾಂಡ ಪು ।
ಣ್ಯಾನೂನತಂಡ ಬಲಭರಿತದೋರ್ದಂಡ ಭೂ ।
ಮಾನಿನಿಯ ಗಂಡ ವಿಜಯಾಂಗನೆಯ ಮಿಂಡ ರಣರಂಗಮುಖಕಾಲದಂಡ ॥
ದಾನಿ! ಚಿತ್ತೈಸೆಂಬ ಭಟರ್ಗೆ ಹೊಸಪಸೆಯಲಾ ।
ದಾನವಂ ಕೊಟ್ಟು ಸಭೆಯಿಂದೆದ್ದು ನಡೆತಂದು ।
ನಾನಾವಿಧದ ಲಗ್ಗೆವರಿಯೆ ಸೌರಂಭದಿಂ ಗರುಡಿಯಂ ಪೂಜಿಸಿದನು ॥ ೫ ॥

ರಾಶಿಗೂಳಂ ಸುರಿದು ರಾಜರಾವುತರು ಸಹಿ ।
ತಾಸುರದೊಳುಂಡು ಕಂಕಣ ಕಟ್ಟಿ ಯತಿಬಲರ ।
ಭಾಷೆಯಂ ಬರೆಸಿ ವೀಳೆಯವಿತ್ತು ಪುಣ್ಯಸತಿಯರು ಕೈನೆಗಪಿನೀಡುವಾ ॥
ಸೂಸುವರಕೆಯನು ನಿಜಭುಜಪೂಜೆಯನು ವೀರ ।
ಸೇಸೆಯನು ವಿಜಯಾರತಿಯನು ಕೈಕೊಂಡು ಧರ ।
ಣೀಶ ಬಾಹಪ್ಪಳಿಸಿ ಬೊಬ್ಬೆಯಬ್ಬರದೊಳಗೆ ಹೊರವಂಟನರಮನೆಯನೂ
॥ ೬ ॥

ತಳತ ಬೆಳುಗೊಡೆಯ ತುರುಗಿದ ಹೀಲಿದಳೆಯ ಮಂ ।
ಡಳಿಸಿದಣಕುಗಳ ತಂಪಿನೊಳೊಲೆವ ಚಾಮರಂ ।
ಗಳಸೀಗುರಿಗಳ ತಂಗಾಳಿಯಿಂ ಕೋಪಾಗ್ನಿಕೊಬ್ಬಿ ಕೊನೆವರಿವುತಿರಲು ॥
ಬಳಿಯ ಪಾಯವಧಾರುಎನಲು ಗಜಮಸ್ತಕದೊ ।
ಳಳವಟ್ಟು ಕೈವೀಸೆ ಭೋರೆಂಬ ಲಗ್ಗೆವರೆ ।
ಗಳ ಬೊಬ್ಬೆಯಬ್ಬರಂಗಳೊಳು ಚಂದ್ರಾದಿತ್ಯ ಮುತ್ತಿದ ಶಿವಾಲಯವನೂ
॥ ೭ ॥

ದಾವಾಗ್ನಿಯಂ ಕೆಡಿಸಲೆಂದು ತರಗೆಲೆ,ಯುರಿವ ।
ದೀವಿಗೆಯ ಕೆಡಿಸಲೆಂದು ಪತಂಗ,ರವಿಯ ಪ್ರ ।
ಭಾವಮಂ ಕೆಡಿಸಲೆಂದು ತಮಂದ,ಬರಸಿಡಿಲ ದರ್ಪಮಂ ಕೆಡಿಸಲೆಂದೂ ॥
ಹಾವುಗಳು,ಮುಳಿದು ಮುತ್ತುವ ಮಾಳ್ಕೆಯಿಂದಲಾ ।
ದೇವ ಹುಲಿಗೆರೆಯ ಸೋಮಯ್ಯಂಗೆ ಮುನಿದಧಮ ।
ಭೂವರನ ಸೇನೆ ಕೈಗೊಂಡು ಮೊವ್ವಳಿಸಿ ಮುತ್ತಿತಾಶಿವನಾಲಯುವನೂ ॥ ೮ ॥

ಸುತ್ತಿ ಮುತ್ತಿದ ಬೊಬ್ಬೆಯಬ್ಬರದ ದನಿಗೇಳ್ದು ।
ಸತ್ತಂತೆ ಹಂಮದಂಬೋಗುತಾದಯ್ಯ ನನಿ ।
ಮಿತ್ತವೀಕೂಲಿಯಂ ಸುಕುಮಾರನಂ ಸುಭಗನಂ ಸುಖದ ಸುಮ್ಮಾನಿಯಂ ॥
ಇತ್ತಲೇನೆಂದು ತಂದೆನು ಪಾಪಿಯಾದೆ ನಿಂ ।
ನೆತ್ತಲೊಯ್ದು ಡಗಿಸುವೆನೆಂಬ ಮೋಹದ ಚಿಂತೆ ।
ಸುತ್ತಿ ದೇವರ ಮಹಿಮೆಯಂ ತನ್ನ ಸತ್ವಮಂ ಮರೆದು ಮರುಗಿದನಾಗಳೂ॥ ॥ ೯ ॥

ಮಂದೈಸಿ ಬೆಳೆದ ಕಗ್ಗತ್ತಲೆಯ ಬಾರಿಗೇ ।
ನೆಂದು ಬಂದಂ ತರುಣರವಿಯೆಂದು ವಾರಿಜಂ ।
ನೊಂದವೇ ?ನಿಮ್ಮನುದ್ಧರಿಸಬಂದೀಶಂಗೆ ನೀವುಂಮುಳಿಸಲು ಮೇಲೆ॥
ಕುಂದಾರಿಗಹುದು ?ನೀವಂಜದಿರಿ ನಾವಿದಂ ।
ಕೊಂದು ಕೂಗಿಡಿಸಿದಪೆವಮ್ಮುವಡೆ ನೋಡುನೋ ।
ಹೆಂದೊಡನೆಯವರು ಮೊದಲಿಸೆ ಹೇವರಿಸಿ ಕೋಪದ ತಾಳ್ದನಾದಯ್ಯ (ನೂ ॥ ೧೦ ॥

ಮೊಳಗಿ ಮಾರ್ದನಿಗಾಣದರಿಗಳಾನಿಳಯುವನು ।
ತಳಮೇಲು ಮಾಡುವಂತಬ್ಬರಿಸೆ ಕೇಳ್ದು ಕರಿ ।
ಗಳ ದನಿಯ ನಾಲಿಸಿದ ಸಿಂಹದಂತತಿಮುಳಿದು ಮೊದಲಿಸಿ ಧರೆಯಮೇಲೆ ॥
ತಳವ ಮಾರೊಡ್ಡಿ ನಿಂದೆಮಗೆ ನಿಶಿತಾಸಿಯಂ ।
ಘಳಕಮಂ ಕರುಣಿಸಿದೊಡೀಬಲವ ನಂತಕನ ।
ನಿಳಯದೊಳು ಹೊಗಬಡಿಪೆವೆಂದುಮೇಶಂಗೆ ಭಾಷೆಯ ಕೊಟ್ಟರಾಮೊವ್ವ (ರೂ ॥ ೧೧ ॥

ಹೊರಳ ನಡೆದಾಡಿತಿಂಬಹಿಗಳಗೆ ಗರಿಯನೊ ।
ಬ್ಬರಕ್ಕೈಯೊಳದ್ದೊರ್ಬ್ಬರಂ ಕೊಲುವ ಖಡ್ಗಕ್ಕೆ ।
ಹರಣಮಂ ಮೆಲ್ಲನೆ ತೆವಳ ಸುಡುವ ಕಿಚ್ಚಿಂಗೆ ಚರಣಮಂ ಕೊಡಲುಹದು
ಇರಬಲ್ಲವೇ ?ನಿರಾಯುಧದೊಳರಿಗಂಗವಿಪ । (ಳಾ ||
ಬಿರುದರ್ಗೆ ನಿಶಿತಾಸಿ ಫಳಕಂಗಳೊಡನೆ ಭಾ ।
ಸುರ ವೀರಕಳೆ ಪರಾಕ್ರಮುವ ನೀಶಂಕೊಟ್ಟ ನವರಿಗಂಸರಿದಾವುದೊ ||೧೨||

ಮುಟ್ಟಸಾರಿದ್ದಾಲಿಸಲು ಕೇಳಸದ ರವಂ ।
ಗೆಟ್ಟಸುರನಾದರಿಸಿ ಕೊಂಬು ಕಹಳೆಯು ಮುಖದೊ ।
ಳಟ್ಟಿದಲದು ಯೋಜನಂ ಭೇರಿಯುಂತಿಕ್ಕೆ ನೆರೆ ಸರ್ವಶಕ್ತಿಯಿಂದಾ ||
ಇಟ್ಟೊಡೊಂಮಾರು ಗಾಣಿಸದಂಬು ಬಿಲುವೆದೆಗೆ ।
ತೊಟ್ಟಸಲು ನೆನೆದನಿತು ಹರಿಯುದೇಂ ? ಮೂನವರು ।
ನಿಟ್ಟಯುಂ ಶಿವನ ಮೇಲಿಡಲಂತವರ್ಗೆ ಸಾಮರ್ಥ್ಯ ಸಂದಣಿಪುದರಿದೇ ||೧೩||

ಸುತಚಾಪಟಂ ಗೋಮುಖಂ ಮೇಘವಾದ್ಯ ಬ್ಯಂ ।
ಹಿತವೆ ಷಂಚಾಯಿತವೆನಿಪ ಯಿದುನಿರಿಗೆಗಾ ।
ಯುತ ಮುಂಡಿ ದೂವ್ವಾಡಪೆಕ್ಕಸರ ವಿಸರದುಲ್ಲಾಸದುಸ್ಸರಸವ್ಪಡೀ ||
ಗತಿಪಸರ ವಡ್ಡಾಯುಮಂಕತಿಕೆ ಭಾವನಿಚ ।
ಕಿತವಪ್ಪರಾ ಭಾಗ ಸಿಂಹನಖ ಚಟಿಯೆಂಬ ।
ಚತುರತಾಣದ ತರಹರದೊಳು ಹಲಗೆಯಮುಗ್ಗಲೊಳು ಖಡ್ಗಮಂಜಡಿದರೂ || ೧೪ ||

ದಿಟಮೂರುತಂನಡೆ ಪ್ರೊಡಡವೆ ನಿಪ್ಪಮೂರುನಿ ।
ಸ್ಪುಟವಿಡಿತದೊಳು ಗಜವಿಧಂ ವರಾಹವಿಧಕು ।
ಕ್ಕುಟವಿಧಂ ಮರ್ಕಟವಿಧಂಗಳೆಂಬ ನಾಲ್ಕುಂತೆರದ ಬಿಂಸಣಮಸೂ ||
ನಟಸಿಚಾರಣ ಚೂರಣಾದಿ ಚಂಮಟವನು ।
ಚ್ಚಟವಮನೆಯೊಳು ಕಡುಗಕಾರವಟ್ಟಂ ಚಂಕ ।
ತಟವದ್ದಳಂ ಕ್ರೋರಗಂಗಳೆಂಬಡ್ಡ ಪ್ರೊಯ್ಲಿಂನಿವಾರಿಸುತಿರ್ದರೂ || ೧೫ ||

ಥಟಘುಲಕುಥಟ ಘುಲಕುಥಟ ಘುಲಕುಥಟ ಘುಲಕು |
ಥಟಘುಲಕು ಥಟಘುಲಕು ಘುಲಕೆಂಬಭುಜನೀಟ |
ನಟಿಸಿಮೇಗೆತ್ತಿ ಕುಕ್ಕರಿಸಿ ನೆಲನಂ ಟೊಣೆದು ಹಲಗೆಯೊತ್ತಿನೊಳಸಿಯನೂ ॥
ಲಟಲಟಸಲಿಕ್ಕೆ ವಾಮಾಂಗಕುಸಿಯಲು ಬಲದ |
ಕಟನೆಗೆಯೆ ಮುಂಗಾಲ್ಗೆ ಮೈದೆಗೆದು ನಿಂದಸಿ |
ಚ್ಚಟ ಕಲಿಗಳೋಸರಿಸದೀಶಂಗೆ ಭಾಷೆಯಂ ಸೂಸಿದರದೇಂಪೊಗಳ್ವೆನೂ ॥ ೧೬ ॥

ಹೊರಗೆ ಕಿಕ್ಕಿರಿಗಿರಿದು ತುರಿಗಿದರಿಗಳನು ಕುರಿ |
ದರಿದು ತುಂಡಿಸಿ ಮಾರಿಮೃತ್ಯುಗಳ ಸವಿವಾಯು |
ಬರವನಾರಿಸಿ ಭೂತಭೇತಾಳರಂಕುಣಿಸಿದಣಧೀರರೆಂಬ ಹೆಸರಾ ॥
ಹೊರುವೆವೆನಲಿನಿತರಿಂದೇನಪ್ಪುದೀಗ ಹುಲಿ |
ಗೆರೆಯು ನಡುವೆನಿತು ಬಸದಿಗಳುಂಟವೆಲ್ಲವಂ |
ನೆರೆತೀರ್ಚಿ ಕಳೆಯೆಂದೊಡದು ನೀತಿಯಲ್ಲ ಚಿತ್ತೈಸು ಪುರಹರಯೆಂದನೂ ॥ ೧೭ ॥

ವಿಷವಿರ್ದುದಾಗಿ ಸುಧೆ ಬಿಸಿಯಿರ್ದುದಾಗಿ ಹಿಮ |
ಹಸಿವಿರ್ದುದಾಗಿ ರುಚಿ ತೃಷೆಯಿರ್ದುದಾಗಿ ಜಲ |
ಹುಸಿಯಿರ್ದುದಾಗಿ ಸತ್ಯಂಸಾವಸುರರಿರ್ದುದಾಗಿ ನಿಮ್ಮಯ ನಿತ್ಯತೇ ॥
ಎಸೆದವಿಳೆಯೊಳಗಿವಿಲ್ಲದೊಡಾರು ಬಲ್ಲರೀ |
ಬಸದಿಯಿಲ್ಲದೆ ಶಿವಾಲಯ ಮೆರೆಯಲರಿಯದೆಲೆ |
ಶಶಿಮೌಳಿ! ನೀಮಾಡಿದುದಕೆ ಶಾಸನವಿವರು ಹದುಳವಿರಬೇಕೆಂದನೂ ॥೧೮॥

ಎಂದುತನಕೀಜಿನಮತಂ ಹದುಳವಿಹುದು ಕಡೆ |
ಗಂದುತನಕಂ ಕದನ ಮಾಣದೆನಲದಕೇನೊ |
ಮುಂದದಂಕೆಡಿಸಲುಮಹೋಪಾಯವುಂಟೆಂದೊಡಾವುದದಹೇಳೆಂದೆನೇ ॥
ಇಂದಿನದಿನಂಮೊದಲು ಮುಂದೆ ಕಾಳಗಕವರು |
ಬಂದೊಡಾಬಂದನಿಬರಂ ಕಾದಿ ಕೆಡಿಸುವಂ |
ತೊಂದುವೃಷಭನನೆರಡು ಜಂಗಮವನೀಹೊತ್ತು ಬೆಸಸಿ ಕರುಣಿಸುವುದೆನಲೂ ॥೧೯॥

ಅವಕುಮಾವರನೊಡಂಬಟ್ಟು ವೃಷಭೇಶ್ವರನ |
ವದನಮಂ ನೋಡಿ ನೀನಿಂದಿನದಿನಂಮೊದಲು |
ತುದಿತನಕ ತತ್ತಾಗನಿನ್ನಂಶವಾದೊಂದುವೃಷಭನಂ ಕಳುಹಿ ಕಳುಹೀ ||
ಕದನಮಂ ಗೆಲಬೇಹುದೆನೆ ದೇವ ನೀವು ಬೆಸ |
ಸಿದೊಡೊಲ್ಲೆನೆನಬಾರದೀಮಹಾಕ್ಷೇತ್ರದಲಿ |
ಮುದದೊಳೆನಗೊಂದು ತೇಜವಸಲಿಸಿದೊಡೆಮಾಳ್ಪನೆನೆ ಹೇಳದಾವುದೆನಲೂ ||೨೦||

ವರವಸ್ತು ಸಂಕಲ್ಪವಾಪ್ತೊತ್ತು ನೆಸದೊಡವೆ |
ದೊರಕಿದಾ ಪೊತ್ತೈಸೆ ಸಲೆ ದೇವನಾನೆನ್ನ |
ವರರೂಪಿನಿಂದಿಲ್ಲಿ ನಿನಗೆ ವಾಹನವಾಗಿ ಬಂದು ಬಂದನುವರವನೂ ||
ಚರಿತದಿಂ ಗೆಲ್ದು ನೆಲೆಯಾಗಿಪ್ಪೆರ್ ನಿನ್ನಿದರ |
ಪರಿ ಸೂತ್ರದೊಳೇಸು ಲಿಂಗಪ್ರತಿಷ್ಠೆಯುಂ |
ವಿರಚಿಸಿಹರಾಯೆಡೆಯೊಳೆನ್ನ ರೂಪಂ ಪ್ರತಿಷ್ಠಿಸುವಂತೆ ಕರುಣಿಸೆನಲೂ || ೨೧ ||

ಅದನೊಡಂಬಟ್ಟಾವಕಾಲಮುಂ ನಿನ್ನವೇ |
ಷದ ವೃಷಭನಿಂದು ಕಣ್ಣಿಂ ಕಾಲ ಪಡೆದೀರ್ವರ್ |
ರಿವಕೆ ಕಾಹಾಗಿ ಸಲೆ ತೆತ್ತಾಗ ಗೆಲುತ ಬರಲೆಂದು ಕರುಣಿಸುತಿಂದಿನಾ ||
ಕದನಮಂ ಗೆಲಬೇಹುದೇಳೆಂದು ಶೂಲಿ ಬೆಸ |
ಸಿದೊಡಾಗ ನಂದಿಕೇಶಂ ವೃಷಭನಂ ತನ್ನ |
ವದನದಿಂತೆಗೆದು ಹೊರಮಡಿಸಿದಂ ಪುರಹರನ ತೊಡೆಮಡದ ಸುಕುಮಾರನೂ || ೨೨ ||

ಪೊರಮಟ್ಟು ನಿಂದು ಕೊರಳೆತ್ತಿಕುಸಿಮುಬ್ಬಿ ಬಾ |
ಯ್ದೆರೆಯೆ ಧರೆಬಿರಿಯೆ ದೆಸೆಯುಬ್ಬಸಂಬಡೆ ವನಧಿ|
ನೆರೆ ಕುದಿಯೆ ಗಗನಮಾರ್ದನಿಗೊಡೆ ಚರಾಚರಂ ಹೆದರಿ ನಡನಡುಗೆನೆರೆದೂ||
ಹೊರೆಗಿರ್ದ ದೂಷಕರು ಝುಲ್ಲೆಂದು ಕೆದರೆ ಶಿವ |
ಬೆರಗಾಗೆ ಠಣಲೆಂದು ಮಳೆಯಿತ್ತುಕೆಳೆಯಿತ್ತು |
ನೆರೆತೂಳ ಮುಕ್ತಿವನಿತೆಯತಾಳ ರಿಪುತೂಳಗಾಳ ಯಭವನ ಗೊಳಯೂ || ೨೩ ||

ಪಗ್ಗೈದುವೀಸೊಂದು ದನಿಯುಳ್ಳ ಗೂಳ ದಿಟ ।
ವಾಗಿ ಹೊರವಂಟೊಡಿದು ನೆಲನೆಲ್ಲ ತೆರಹಿಲ್ಲ ।
ವೇಗ್ಗೈಯುದಡಿವಿಡಿದು ಬಲವ ಮೋಳ್ಳೈಸಿಕೊಂಡನುವಾಗಿ ಸಿಂದಿಪ್ಪುದೂ ॥
ತಾಗಿದಾಬಳಕ ನಾವಾದುದವರಾದುದ ।
ಕ್ಕೀಗಾಡಲೇಕೆಂದು ಹೆರತೆಗೆದು ತರದೊಳನು ।
ವಾಗಿಬಿಡದೊಡ್ಡ ನೊಡ್ಡಿದರು ಶಿವಶಿವ ಬಲದ ಬಹಳತೆಯುನೇವ್ರೊಗಳ್ವೆನೂ
॥ ೨೪ ॥

ನೀಲದೊಯ್ಯಾರ ಪಚ್ಚೆಯುಪಜ್ತು ಪಾರಿವದ ।
ಸಾಲೊದವು ಕೆಂಗಟ್ಟೆ ನೋಳ ಪವಳದಪಸರ ।
ಕಾಳಕೆಯು ಮೋಳ ಶಂಕದ ತಟ್ಟಸೊತ್ತು ಹಳದಿಯು ಹಾದಿಹಲವಂದದಾ ॥
ಮೇಲೆ ರನ್ನದವಟ್ಟೆ ಹೊನ್ನತಾರಕಿಗರುಡ ।
ಸೂಳಗಜ ಮುಖಶರಭ ಭೇರುಂಡ ಹುಲಿಹನುಮ ।
ಗೂಳತೊಲಗದ ಕಂಭಬಿರುದಿನಗ್ಗದ ಹರಿಗೆಹಬ್ಬಿದವು ಮುಮ್ಮೊಗದಲೀ
॥ ೨೫ ॥

ಹಿಳಕು ಕವಲಂಬು ಬೆಳೀಳೆವಿದಿರೆಲೆ ಮಿಟ್ಟೆ ।
ಮೊಳೆತೊಡಕುನಾರಾಚಕಣೆಗಿಲೆಲೆ ಸಿಲುಕುಬಳೆ ।
ತಳುಕಬಾದಾರೆದಸಿ ಬಿಸುಗದಿರು ಸವಿವಾಯುನೆಂಬ ನಾನಾಸರಳನೂ ॥
ಸೆಳೆದು ನೀಡಡಿಯಿಟ್ಟು ಹೆದ್ದೊಡೆಗೆ ಕಿಬ್ಬೊಟ್ಟೆ ।
ಕೆಳಗೊಳಲು ಮೈದೆಗೆದು ನಾರಿಯಂ ಕಿವಿಯ ಕಡೆ ।
ಗೆಳೆದು ಬಿಲ್ಲಗಲಿಗಳುರೆ ತೆಗೆನೆಗೆದು ಸಬಳಗರುಕೋಡು ಕೈಯ್ಯೊಳುನಿಂದರು
॥ ೨೬ ॥

ಖಡುಗತೋಮರ ಯಿಟ್ಟಿಬಟ್ಟೇರು ಕೊಂತ ಕ ।
ಕ್ಕಡೆ ಸಬಳ ಸೆಲ್ಲೆ ಹಂಕಾಬಿನಕ ಸುರಗಿ ದಡಿ ।
ಬಡಿಕೋಲ್ವಿಗಂ ಪರಶುಭಿಂಡಿವಾಳಂ ವಜ್ರಮುಷ್ಟಿಹತ್ತೊಳ ಮುದ್ಗರಾ ॥
ಕಡಿತಲೆ ಕಠಾರಿಬಲಭದ್ರಚಕ್ರಂ ಮೂಡು ।
ನಿಡುಸುರಗಿ ಸೂರಕತ್ತಿಗೆಯೆಂಬ ಕೈದುವಂ ।
ಹಿಡಿದು ಕಾಲಾಳ್ಗಳೋವದೆ ಮೆರೆದುದಮ್ಮಮ್ಮ ಭೂಮಿಬೆಸಲಾದಂತಿರೇ
॥ ೨೭ ॥

ಹರಿಣಮಂ ಹಳಿವ ಮಾರುತನ ನೇಳಿಸುವ ಹರಿ ।
ಸರಳನಿಳಿಕೈವ ದೃಷ್ಟಿಗಳನಣಕಿಸುವ ಮನ ।
ದುರವಣೆಯ ನಲ್ಲಂಬ ನಿಗ್ಗಮದ ಲಾಗುವೇಗಂಗಳ ಸಘಾಡಿಕೆಗಳಾ ||
ಸರಸನ್ನೆ ತೊಡೆಮಡಂ ಕಸೆಕಟ್ಟಿಕಡಿಯಾಣ ।
ಸರಸಮಂ ಸ್ಯೆರಿಸದಚಳಬಳಿಕೆಗಳ ಚಾರು ।
ತುರಗಕುಲವನುವಾಗಿ ನಿಂದ ಪ್ರೌಢಿ ಬಲಿದದೆಸೆದೆಸೆಯ ಪಾಪೆಗಳಲೀ||೨೮||

ಬವರಿದಿರುಗುವ ತಿರುಗಿ ನಡೆವನಡೆದೊಡಲುಬ್ಬಿ ।
ಥವರಿಸುವ ಥವರಿಸಿ ಕುಸಿವ ಕುಸಿಮುಥವರಿಬೀ ।
ಸುವ ಬೀಸಿಕೈವಿಡಿದು ಸೇದುವ ಸೇದಿಕೆಡಹಿನೋತುವ ನೋತುತಾ ||
ಕವಿದುಮೆಟ್ಟುವ ಮೆಟ್ಟಿಸೀಳ್ವಸೀಳ್ದಡುವಿಡು ।
ತ್ತುವೆ ಹರಿವ ಹರಿದೆರಗಿ ಕಾಂಬಕಂಡೊದೆವಕರಿ ।
ನಿವಹವತ್ಯಾಡಂಬರಂಮಿಕ್ಕು ಹಂಣೆನಿಂದವು ಬಲವನಟ್ಟಿನಡುವೇ || ೨೯ ||

ಬಲಿದಪಚ್ಚೆಯ ತಿವುರು ಬರೆದಲತೆ ಸಿಂಧುರದ ।
ತಿಲಕ ವೆಳಲುವ ಘಂಟೆ ಕೋಡು ಹರಿಮುಖದಹೊಂ ।
ಬಳೆ ಪಟ್ಟನೂಲಬಲುವೊರೆಜೆ ಮೊಗರಂಬ ಬರಿಕೈಯಪಟ್ಟೆಯಪೇರಿದ ||
ಗುಳ ಬಿಗಿದ ರಂಚೆಯಂ ಮೊಗವರಿಕೆ ಕದಳಿಕೆಯ ।
ಗಳೆನಿಂದ ಸಬಳಗರು ಜೋಧಸಂಕುಳಹೀಲಿ ।
ದಳೆ ಸುತ್ತಿದಾರೆ ಗಾರರು ವೀರಡಾಣೆಗಳುವೆರಸಿ ನಿಂದವು ಕರಿಗಳಾ|| ೩೦ ||

ಥಳಥಳಪ ಶಸ್ತ್ರಾಸ್ತ್ರಸಂತತಿಯ ಬೆಳಗು ಮಿಾ ।
ನ್ಗಳು ಗಜಘಟಾಘಳಕ ಕರಿಮಕರ ಕೈಗೈದ ।
ಬಿಳಿಯಚಮರಿಗಳು ನೊರೆತರತರಂವಿಡಿದ ಥಟ್ಟುಗಳು ತೆರೆತೆರೆಯಬಳಗಾ ||
ಮೊಳಗುವ ಮಹಾಲಗ್ಗವರೆಯ ನಾನಾಧ್ವಾನ ।
ಘುಳುಘುಳುಧ್ವನಿಗಳಾಗಿರಲು ರಿಪುಬಲ ಜಲಧಿ ।
ಮುಳಿದಾದಿಮಯ್ಯನೆಂದೆಂಬ ಬಡಬಾಗ್ನಿಯಂ ಮುತ್ತಬಂದಂತೆಸೆದುದೂ
|| ೩೧ ||

ಚೆಂಬಕನಪಡಡಕ್ಕೆ ಪಟಹಂಮುರುಜೆವೀರ |
ಬೊಂಬುಳಿಯು ಬೊಗ್ಗಿ ನೊಗ್ಗುಗಳ ನೆರೆ |
ಕುಂಬಿಡುವಕೊಂಬುಗಳ ರಣದಿತ್ತಿರಿಯ ಮೌರಿಪಲಹಲವು ರೀತಿರೀತಿಯ
ತಂಬಟದ ನಾನಾವಿಧದ ಕಹಳೆಗಳ ಮಹಾ | (ಚೆಂನದಾ ||
ಡಂಬರದ ಲಗ್ಗೆವರೆಗಳ ರಭಸವಡಸಿ ಬೆಳೆ |
ದಂಬರವ ನಿಂಬುಗೊಳುತಿರಲು ನಿಸ್ಸಾಳವಳ್ಳಿರಿದುದದ್ಭುತವಲೀ || ೫೨ ||

ಘೋರಗೊಡ್ಡ ನೊಡ್ಡಿದರಿನೃಪಬಲವ ವೃಷಭೇಂದ್ರ |
ನೆರೆಕಂಡು ಕಡುಮುಳಿದು ಯಿನಿತುಮಂ ನಿಮಿಷಕ್ಕೆ |
ಬರಿಕೈವೆನೊಲ್ದು ಚಿತ್ತೈಸೆಂದು ನಿಷ್ಠುರಧ್ವಾನದಿಂ ಕೆಲೆದು ಮುಳಿದೂ ||
ಕರೆಗೊರಳನಡಿಗೆರಗಿ ಕದನದುದ್ಯೋಗಕ್ಕೆ |
ಘೋರಮಡಲ್ಕೆಂದಿರ್ದುದಾ ಸಮಯದಲ್ಲಿ ಗುರಿ |
ನೆರೆದಿರ್ದುದ ಬ್ಬರಿಪ ಪರಸಮಯಗಳಗೆಲ್ಲ ನಿಬ್ಬರವದೇವೊಗಳ್ವೆನೂ ||೫೩||

ಘುಡುಘುಡಿಸಿ ಗುಹೆಯಿಂದ ಹುಲಿಯಿಕ್ಕೆಯಿಂ ಸಿಂಹ |
ವಡಸಿಗಹ್ವರದಿಂದ ಶರಭನುರೆಕಾವರ್ೀಡ |
ದೆಡೆಯಿಂದ ಬರಸಿಡಿಲು ಘೋರಮಡುವತೆರದೊಳಾದಯ್ಯ ಸಹಿತಾನಿಳಯವಾ||
ಹಡಿದೆರೆದು ಕೆಲವುತ್ತಮಲವುತೊಲವುತ್ತಘೋರ |
ಮಡೆ ಕಂಡಿರದೆ ಯೆಲೆಲೆಗೊಳಯಿಾ ಬಂದುದೊ |
ಗ್ಗೊಡೆಯದನುವಾಗೆಂಬ ಪರಬಲದ ಜೊಬ್ಬೆಯಬ್ಬರವನಾಲಿಸಿನೋಡಿತೂ
|| ೫೪ ||

ಅಲುಗದಂಗಂ ನೆಗೆದ ಬಾಲ ಮಂಡಿಸಿದ ಕಿವಿ |
ಯೊಲದುಕೆಲಕೊತ್ತಿದ ಮೊಗಂ ನೀಡಿ ನಿಮಿರ್ದಬೆ |
ನ್ನೆಲುವೆ ಬಿಡದುಬ್ಬಿ ಸುರುಕಿಡುವನಾಸಿಕಪುಟದ ಕಬ್ಬೊಗರನುಗುಳ್ವ ಕೋ
ಬಲಿದು ಕೆಕ್ಕಳಿಸಿ ನೋಡುವ ಕಣ್ಗಳೆಡೆವಿಡದೆ | (ಪಾ ||
ನೆಲನ ಹೊಡೆವೆಡಗಾಲ್ವಿರಾಜಿಸಲು ರಣಲೆಂದು |
ಕೆಲೆದು ಕೆಂಗಲಿಸಿ ಕೈಕೊಂಡು ಕವಿದುದುವೃಷಭನೇನೆಂಬೆನದರೊಕ್ಕಲಾ
|| ೫೫ ||

ಶಿವಶಿವ ಮಹಾದೇವ ಕೊಣಕಿಟ್ಟು ಹರಿಯತ್ತು ।
ಕವಿಯಿತ್ತು ಮುಳಿಯಿತ್ತು ತುಳಿಯಿತ್ತು ಮೆಟ್ಟಿತ್ತು ।
ಜವಗೆಡಿಸಿ ತಟ್ಟಿತ್ತು ಮುಟ್ಟಿತ್ತು ಕುಟ್ಟಿತ್ತು ಕೋಡೆತ್ತಿಕೋಡಿನ ಕೊಸೆಯು
ಡವರಿಸಿತು ಕುಸುಬಿತ್ತು ಕೆಡಹಿತ್ತು ಕೆಲಬಲ । (೫೫ ||
ಕ್ಕವಚಟದೊಳಾದಿ ಗೊಂಡುರುಬಿತ್ತು ಹೊಂತಲೆಯ ।
ತವಕಿಗಳ ನಸುವಳಿಯೆ ಹೊಸೆಯಿತ್ತು ಬಸವನಲ್ಲಿಂ ಬಳಕ್ಕೆಪ್ರೊಗಳ್ವೆನೊ
|| ೫೬ ||

ಕತ್ತಲೆಯ ಮೋಹರಕ್ಕಿನಕಿರಣ ಮೇಘಂಗ ।
ಳೊತ್ತೊತ್ತೆ ಗುಗ್ರಾನಿಲಂ ಸೊಕ್ಕಿದಾನೆಗಳ ।
ಮೊತ್ತಕ್ಕೆ ಕಂಠೀರವಂ ಕಡಗಿಕವಿದು ಧಾಳಕ್ಕುವಂತತುಳಕೋಪಾ ||
ವೆತ್ತಿದಾದಯ್ಯ ಹೊಸತಾಗಿ ಕಣ್ಣಾಕ್ಕಳ್ಬಂದ ।
ಮತ್ತಿಬ್ಬರುಂ ಮೀರಿಕ್ಕೈಗೊಂಡೊಡಿರದೆ ಕೆದ ।
ರಿತ್ತು ಝಲ್ಲೆಂದೆಯ್ದೆ ಪರಬಲಂ ಬಳಕವರ ಭುಜಬಲವ ಸೇಪ್ರೊಗಳ್ವೆನೊ
|| ೫೭ ||

ಹರಿಹರಿದು ಹಣೆಬಿರಿಯೆ ತಲೆಹರಿಯೆ ಹಲುಸಿಡಿಯೆ ।
ಬರಿಮುರಿಯೆ ಬಸುರುಬೊಗಹೆನೆ ಬೆನ್ನಬೀಡೆ ಬಿಡ ।
ಉರ ಬಾದಣಂಬೋಗೆಬೆರಳುದುರೆ ಕೈಬೀಳೆಹೆಗಲುಭೋಂ ಕೆಂಮಜರಿಯೆ ||
ಕರುಳುಕುಪ್ಪಳಿಸೆ ಕಾಲುಡಿಯೆ ಹೆದ್ದೊಡೆ ಕಡಿದು ।
ಘರಿಲೆಂದು ಸೆಕ್ಕೆವಿಡೆ ಮುಂಡ ದುಡುಹನೆ ಬೀಳೆ ।
ಧುರದೊಳಗೆ ಚಾರಿವರಿದಾಡಿಹೊಡೆದಾಡಿ ಹೊಯ್ದುರುಮೂವ್ವರೇಪ್ರೊಗಳ್ವೆ
ನೊ || ೫೮ ||

ಪೊಕ್ಕುಹೊಡೆದಾದಯ್ಯ ಸಿರಿವಾಗಲಲ್ಲಲ್ಲಿ ।
ಚಕ್ಕೆಂಬ ಚಟಿಲೆಂಬ ಸರ್ರೆಂಬ ಬೊರ್ರೆಂಬ ।
ಬೊಕ್ಕೆಂಬಬೊಗಹೆಂಬ ಖಣಿಲೆಂಬ ಖಟಿಲೆಂಬ ಸಾಳೆಂಬ ಸರಿಪ್ರೊಯ್ಲಲೀ ||
ನೆಕ್ಕುನೆರೆ ನಿಳಿಸಿಟಲು ತಡದುಡುಹು ದುಂಮುದಡ ।
ಡೊಕ್ಕ ಘರಿಘರಿಘೂರು ಘುಂಮೆಂಬ ನಿಷ್ಠುರರ ।
ವಕ್ಕೆನಿಲ್ಲದೆ ಚಲ್ಲಿಬೆಂಗೊಟ್ಟುದಧಮಬಲ ಜಗಕೆ ನಗೆಗೆಡೆಯಾಗಲೂ
|| ೫೯ ||

ತಂಬಟದಲಿರಿ ಬಿಲ್ಲಲಿಡು ಸಬಳವಂ ಬಾರಿ ।
ಸಂಬನೂದೊಟ್ಟೆಯಂ ನೆಗಹು ಹರಿಗೆಯಹೂಡು ।
ಬೊಂಬುಳಿಯುಲಿಸು ಕಹಳೆಯುಲ್ಲಿಕ್ಕು ಹರಿಗೆಗಳ ನೊರೆಯುಚ್ಚು ಹೊತ್ತುಗೆಡ
ಬೊಂಬನೇರಲಗ ಹೊಡೆ ಚಂಮಟಿಗೆಯಂ ಮರಚು । (ದೇಃ ॥
ಚಂಬಕನ ಹಲ್ಲಣಿಸಿ ಕರಿಗಳಂ ಹೊತ್ತುಕೊ ।
ಳ್ಳೆಂಬವಿಕಳ ಸ್ವರಂ ಹುಟ್ಟಿತ್ತು ಕೆಟ್ಟಪರಬಲದೊಳದನೇನೊರೆವೆನೂ
॥ ೪೦ ॥

ಗೂಳಿಯೊಂದೆಸೆಯೊಳಾದಯ್ಯನೊಂದೆಸೆಯೊಳರ ।
ಡಾಳೊಂದೆಸೆಯೊಳಗರೆಯಟ್ಟ ಕೈಗೊಂಬಹೊ ।
ತ್ತಾಳೋಕಿಸುವ ಧೀರನಾವನೊಳಪೊಕ್ಕು ಕೆಡೆಗುತ್ತಿತಡೆಗೆಡಹುವಾಗ್ರಾ ॥
ಗೂಳಸಾವಿರ ಗೂಳಿಯಾಗಿ ಯರೆಯಟ್ಟುವೆರ ।
ಡಾಳು ಲಕ್ಕಾಳಾಗಿ ಮೀರಿದೊಬ್ಬಾದಯ್ಯ ।
ನೇಳೆಂಟುಲಕ್ಕಾದಿಮಯ್ಯಂಗಳಾಗಿ ತೋರಿತ್ತು ಪರಬಲದಕಣ್ಗೇ ॥ ೪೧ ॥

ಮುನ್ನಮೂದಲಿಸಿ ಪಾರಿಸಶೆಟ್ಟಿ ನುಡಿದನಿತು ।
ಮನ್ನೆರೆಯ ಮಾಡದಿರ್ದೊಡೆ ಭಾಷೆ ಸಲ್ಲದಿ ।
ನ್ನುನ್ನಿರಾಯುಧರಾದೊಡಂ ದೂಷಕರಕೊಲುವು ದೋಸರಿಸಲಾಗದೆಂದೂ ॥
ತನ್ನಮನದೊಳು ಸೋಮಸಾಥಬಂದರುಹನುಂ ।
ಭಿನ್ನವಾದಂ ಸವಣರೊಳು ಕೆಲಬರಂನಿರಿದೊ ।
ಡೆನ್ನಪ್ರತಿಜ್ಞೆ ನೆರೆಸಂದುದೆಂದಾದಯ್ಯನಂದು ಮುನಿಸಂತಾಳ್ದನೂ ॥ ೪೨ ॥

ನೇಮಿಯಂ ಕೆಡೆಕುತ್ತಿ ಮಲಧಾರಿಗಳನರಿದು ।
ಹೇಮಚಂದ್ರನ ನೊರಸಿ ಮಾಘನಂದಿಯ ಕೊಂದು ।
ಶ್ರೀಮತಿಗಳಂಪಿಡಿದುತ್ರೈವಿಂದ್ಯರಂ ತಂದುತಾರುಕುಂಡೆಯುಹಾಯಿಸೀ ॥
ಭೂಮಿಗೊರಗಿಸಿ ವರ್ಧಮಾನರಂ ಶ್ರುತಿಕೀರ್ತಿ ।
ನಾಮಮಂ ತೊಡೆದು ಪಾರಿಸಮಾವನೆಂದು ಕಾ ।
ಯ್ದಾಮೂಲಸಂಘವಾ ಪುಲಿಸಂಘವೆಂಬುಭಯಸಂಘಮಂ ಭಂಗಿಸಿದನೂ
॥ ೪೩ ॥

ನಡೆಯಿತ್ತು ಸಂಮುಖಕೆ ಸಕಳರ್ಷಿಸಂಕುಳಂ ।
ಮಡಿಯಿತ್ತು ಸುರಹೊನ್ನೆಬಸದಿಯರುಹತ್ಪ್ರತಿಮೆ ।
ಯುಡಿಯಿತ್ತು ಜೈನಸಮಯಂ ಭಂಗವಡೆಯಿತ್ತು ಸದ್ದೃಷ್ಟಿಯರಸಸಬ
ಮಡಿಯಿತ್ತು ಪುರದೊಳಗೆ ಮರುಳ ಪಡೆ ರಕ್ತಮಂ ।  (ಲಂ ॥
ಕುಡಿಯಿತ್ತು ಗೊರವನಾಡಿತ್ತೆ ಕಡೆಪರಿಯಂತ ।
ನಡೆಯಿತ್ತು ತಾವ್ರೊಡಲುವಿಡಿದು ಫಲವೇನೆಂದು ನುಡಿಯಿತ್ತು ಪುರಜನವದೂ
॥ ೪೪ ॥

ಹುಲಿಗೆರೆಯ ನಗರಮುಂ ಮುರಿದಂಡಮಿಂಡಗು ।
ದ್ದಲಿಸಮಯ ಮಂತ್ರಿಸಾಮಂತ ಪಟ್ಟಸ್ವಾಮಿ ।
ಗಳುಫಲದನೆಲೆಯೆಂದೆನಿಪ್ಪತುಳಬಲಘಣಿಸಮಕ್ಕಳುಗಳಾದಿಯಾದ ॥
ಹಲರುಹದಿನೆಂಟು ಸಮಯಮವದೆಯ್ದೆ ಜೈನನಾ ।
ಹೊಳಲೆಲ್ಲ ತೊಡಗಿತ್ತು ಕಾಳಗವನೆಂದು ಮನ ।
ವಳುಕದಾದಯ್ಯನಾಂತಧಟರ್ದಂ ಧುರದೊಳಗೆ ಮರುಳಗುಣಿಸಾಗಿಸಿದನೂ
॥ ೪೫ ॥

ಅತಿಬಾಷೆಯಿಂ ಬಂದಚಾತುರ್ಬಲವದೆಯ್ದೆ ।
ಹತವಾದುದಖಿಳಮುನಿಗಳ ಮಡಿಹಿತಂ ಕಂಡು ।
ವ್ರತಧಾರಿಗಳು ಸಕಲಪುರಜನಂ ಸಮಯಪಕ್ಷಕ್ಕೆ ಕಾಳಗವ ಮಾಡೀ ॥
ಸಿತಗನಾದಯ್ಯನಿಂ ಲಯಮೈದಿತರಸ!ನೀ ।
ಸತಿಬಲನೊಳಾಂತು ಭಂಗಂ ಬಡೆಯಬೇಡೆಂದು ।
ಹಿತಮಂತ್ರಿಗಳು ಹಲವು ತೆರಬುದ್ಧಿಯಂ ಪೇಳಲತಿವಾದಿಯಿಂತೆಂದನೂ
॥ ೪೬ ॥

ಬಸದಿಯಳಿದುದು ಸಕಲಸಾಮರ್ಥ್ಯಯುತರಪ್ಪ ।
ರುಷಿಕುಲಂ ಮಡಿಯಿತ್ತು ಚಾತುರ್ಬಲಂ ಸತ್ತು ।
ದಸುವಳಿದುದಖಿಳಪುರಜನ ಭಂಗಹಿಂಗದೆನ್ನನ್ವಯಕ್ಕೊಂದು ಮುಳಿದೂ ॥
ದೆಸೆಗೆ ಬಲಿಗೊಡುವೆನಾದಯ್ಯನಂ ಮೇಣುತ ।
ನ್ನಸುವಂ ಬಿಡುವೆನೆಂದು ತರಿಸಂದು ಪಡೆಮನೆರ ।
ಹಿಸಿ ಮೇಳವಂಮಾಡಿ ಹಲವುಸಿಸಸ್ಸಳವಂ ಸೂಳೈಸಪೇಳೆಂದನೂ
॥ ೪೭ ॥

ಅರಸೆಱೆಯೊಳಿರ್ದು ಚಂದ್ರಾದಿತ್ಯಭೂಪಾಲ |
ನೆರಡು ದೆಸೆಯೊಳು ಗಜಾಶ್ವಾರೂಢರಪ್ಪಪಲ |
ವರಸುಗಳನಾಪ್ತಬಲಮಂ ನೋಡಿ ನಾಡೆಯುಂ ಮುಸಿಸುಂ ಮೊಗಕ್ಕೆತಂದೂ ||
ಗೊರವನಂ ಹೆಡೆಗೈಯಗಟ್ಟಿ ಗೂಳಿಯುಹೊಡೆದು |
ತರಬೇಕೆನುತ್ತುಯ್ದು ಬೈದು ಮೂದಲಿಸುತ್ತ |
ಪರಬಲಂಹುರಿಗೂಡಿ ಬರುತಿರಲ್ಕಂಡು ಖತಿಗೊಂಡನಾದಾದಯ್ಯನೂ || ೪೮ ||

ಘೋಳೆಂದು ತೆರಳಿದ ಚತುರ್ಬಲಂ ಮತ್ತೆ ಭೂ |
ಪಾಳನಾಜ್ಞೆಯೊಳು ತರಹರಿಸಿ ಭಯಮಂ ಬಿಟ್ಟು |
ಕಾಲಾಗ್ನಿಯಂತೆ ಕವಿದಿಸುವಿರಿದಿಡುವ ಹೊಡೆವಕೆಡೆ ಕುತ್ತಿಕೊತ್ತಿತಿವಿವಾ ||
ಕಾಳಗದೊಳಾದಯ್ಯ ನೇಣ್ದೆಸೆಯೊಳಗ್ಗದೆರ |
ಡಾಳು ನಡೆಯಲು ಬಲದಬಾಹೆಯೊಳು ಸಿಡಿಲಂತೆ |
ಗೂಳಿಬರೆಮೂರು ಮೊನೆಯಂ ಪರಬಲಕ್ಕೆ ಕೈದೋರಿದರದೇವ್ರೊಗಳ್ವೆನೂ || ೪೯ ||

ಚೂಣಿಹೊಂತಳ ಪಂತಿಕೋಡಕ್ಕೈ ಮೈದೆಗೆದು |
ಹೂಣಿಗರ ಮೂದಲಿಸಿಯರೆಯಟ್ಟಿ ಕೊಲ್ವಬಿಂ |
ನಾಣಮಂ ಕಂಡುಭಯಗೊಂಡು ಚಾತುರ್ಬಲಂ ಭೀತಿಯಿಂದಳಿದುಳಿದು
ಕೇಣದಿಂ ಹರಣವುಳ್ಳೊಡೆ ಹಾಡಿಕೊಂಡುಂಬ | (ದೂ ||
ಜಾಣಾಗೆಟ್ಟಲ್ಲಿ ಸಾಯಲದೇಕೆನುತ್ತಲಾ |
ಕ್ಷೋಣೀಶನಪ್ಪ ಚಂದ್ರಾದಿತ್ಯ ಭೂಪನಂ ಬಿಟ್ಟುದೆಸೆಗೆಟ್ಟೋಡಿತೂ || ೫೦ ||

ಮುಟ್ಟಿಮೂದಲಿಸಿ ಬಪ್ಪರಸುಮೋಹರವಕಂ |
ಡಟ್ಟಿಕವಿದಾದಯ್ಯನಿಬರಂ ತವೆ ಕೊಂದೊ |
ಡಟ್ಟಿಯಾಡುವ ಧುರದೊಳಿರಲಂಜಿಸಪ್ತಾಂಗವಳಿಯುತೇ ಕಾಂಗವುಳಿಯೇ ||
ಹಿಟ್ಟನೊಳಗಕ್ಕಿ ಗಾಣದೊಳ್ಳುಳಿವ ತೆರದಿ |
ಪಟ್ಟದಧಿರಾಜ ಚಂದ್ರಾದಿತ್ಯಭೂಪಾಲ |
ನಿಟ್ಟೋಟದಿಂಬಾಯಬಿಟ್ಟು ದೆಸೆಗೆಟ್ಟೋಡಿ ನಟ್ಟಡವಿಯಂ ಪೊಕ್ಕನೂ || ೫೧ ||

ಹುತ್ತೇರಿ ಹಲುಗಿರಿದು ಹುಲುಗಚ್ಚಿ ಹಸುಗೆಟ್ಟು ।
ಸುತ್ತಳಿದು ಬತ್ತಳಿಸಿ ಹಿರಿದುಮುಂಡೆಯಬಿಟ್ಟು ।
ವಿಸ್ತರಿಸಲಾರದಿವರತಿಕರುಣಿಗಳು ಭಸಿತಮಂಪೂಸೆಕಾಯ್ವರೆಂದೂ ॥
ಎತ್ತಿ ತಿಪ್ಪೆಯ ಬೂದಿಯಂ ಪೂಸಿ ಬೂದಿಲ್ಲ ।
ದತ್ತಿತ್ತ ಹರಿದರಸಿ ಕಾಣದೆ ವಿಭೂತಿಯಂ ।
ಹೆತ್ತತಾಯ್ ಸಗಣಿಯೆಂದದನಿಟ್ಟುಕೊಂಡರೊಡಲಾಸೆಯೇಂವಿಧಿಮಾಡದೋ ॥ ೫೨ ॥

ತಟ್ಟ ಸರ್ರನೆ ಸೀಳ ಕಿರಿದನವರೊಳು ಕಾಪು ।
ಗಟ್ಟ ಗುಂಡಿಗೆಯನಾಧಾರಗುಂಡಿಗೆಮಾಡಿ ।
ಮೆಟ್ಟ ಕುಂಚವ ಮುರಿದು ಹೀಲಿಯಂಬಿಸುಟು ಕಾವಂಲಾಕುಳವನುಮಾಡೀ ॥
ಮುಟ್ಟ ಸರ್ವಾಂಗದೊಳು ಭಸಿತವಂ ಪೂಸಿ ಶಿವ ।
ದಿಟ್ಟ ಹರಹರ ಸವೋರ್ಹಂದಾಣೆಯೆಂದೆರಡು ।
ಗೆಟ್ಟಭೀತಿಯ ಭಕ್ತಸವಣರಂ ನೋಡಿನಗುತಿರ್ದನಂದಾದಯ್ಯನೂ ॥ ೫೩ ॥

ನಸುನಗುತ್ತಿನ್ನು ಸಾಕೆಂದು ಕೊಲೆಗ್ಗೈಯಮಾ ।
ಮುಸುಕವೆತ್ತಿದ ಮನದಗರುವ ಕೊಳುಗುಳದ ಕೊ ।
ಗ್ಗಸರುಗಾಲಧಟ ಹೊಸಹೊಯ್ಲ ರಾಯಂ ರಣಕ್ರೀಡೆಯೊಳಗಾಲಿಂಗಿಸೇ ॥
ಒಸೆದು ಜಯವಧು ತೆಗೆದ ನಖರೇಖೆಯಂತೆಸೆವ ।
ಮುಸೆಗಳ ಮನೋಜ ನಾದಯ್ಯ ನೃತಪಾರ್ಗ ।
ವಿಶಸನದ ವೀರಭೋಜನದ ಮರುಳುಗಳಪಡೆಯಿದ್ದುದೆನಲೇವೊಗಳ್ವೆನೂ ॥ ೫೪ ॥

ಆಸುರದೊಳಾನೆದೊಗಲಂ ಬಿಚ್ಚಿ ಹರಕಲಿಸಿ ।
ಪಾಸಿ ಕಿರಿದಾಗಿ ಕೊಬ್ಬಿದ ಕುಸುರಿಗಂಡದಿಂ ।
ರಾಸಿಗೂಳಂಸುರಿದು ತಲೆಯೋಡುಗಳಲಿ ತಿಳನೆತ್ತರಂಹಿಡಿದು ಹಿಳದೂ ॥
ಸಾಸಿಗಳ ಕಂಕಾಲಿಗಳ ಸೊಡರನೆತ್ತಿ ಸಂ ।
ತೋಷದಿಂ ಕಾಮಾಕ್ಷಿಚಾಮುಂಡಿಗಳಿಗೆರಗಿ ।
ಮೀಸಲಂಸಲಿಸಿ ಚೌಕದ ಭೂತವೇತಾಳರುಂಡರೇವಣ್ಣಿಸುವೆನೋ ॥ ೫೫ ॥

ಇಂದೀಗಳೆಮ್ಮಳ್ಳೆಹೊಳ್ಳುವಾರುವಮಾದ ।
ವಿಂದೀಗಳೆಮ್ಮ ಹೊಟ್ಟೆಯ ಹಸಿವು ನೆರೆಹೋದ ।
ವಿಂದೀಗಳೆಮ್ಮಬಾಯ್ ಬರಸಳಿದುಹೋದವೆಂದೆಡೆವಿಡದೆ ಬಿದ್ದಿಕ್ಕಿದಾ ॥
ತಂದೆಯೆನಿಪಾದಿಮಯ್ಯನ ನೀಶನೋವಲಿಂ ।
ದೆಂದೊಲಿದು ಹರಸುವ ಮಹಾಭೂತವೇತಾಳ ।
ವೃಂದಮಂನೋಡುತ್ತನಸುನಗುತ್ತಂಬಂದನಲ್ಲಿಮುಂದೊಂದೆಡೆಯುಲೀ ॥೫೬॥

ಕರುಳಮಾಲೆಯಸಿಕ್ಕಿ ಖಂಡದಿಂಡೆಯ ಮುಡಿದು ।
ಕರಿಯ ಹಸಿದೊವಲುಟ್ಟು ನೆತ್ತರಂ ಬೊಟ್ಟಿಟ್ಟು ।
ಅರಿದತಲೆಯಂಹಿಡಿದುಕಡಿದಕೈಗಳನೆತ್ತಿಹಲವುರಿಂಗಣಗುಣಿವವ್ರೂ ॥
ಅರುಣಜಲದೋಕುಳಿಯ ಸಾಡುವವು ಕೆಲಕೆಲವು ।
ಹರಿದು ಮೆದೆವೆಣನೇರಿ ದುಮ್ಮಿಕ್ಕುವವು ಕೆಲವು ।
ಹರುಷದಿಂದಾದಯ್ಯ ಬಾಳ್ಗೆಂದು ಹರಸುವವು ಕೆಲವು ಮರುಳಾರಣದೊ
(ಳೂ ॥೫೭॥

ಘುರದೊಳಗೆ ಕಾಮಾಕ್ಷಿಚಾಮುಂಡಿಕಂಕಾಳಿ ।
ಯರು ಭೂತಗಣಸಹಿತರುಧಿರದೋಕುಳಿಯನಾ ।
ಸುರದೊಳೊಲಿದಾಡುವಾಗಲು ಚೆಲ್ಲಿಸೆನೆದುಕೆಂಪಾದುದೋ ಎಂಬಂದದಂ ॥
ಬರದಮೇಘಾಳಿ ಕೆಂಪಾದುದೊದವಿದ ಹಗಲು ।
ಹರದುದಾದಯ್ಯಂಗೆ ಕಾಳಗಕೆ ನೆರವಾಗಿ ।
ಮರಳಿಮನೆಹೊಕ್ಕಪನೊಎಂಬಂತೆ ಕೆಂಗಲಿಸುತಿನನಬ್ಧಿಯಂ ಹೊಕ್ಕನೂ
॥ ೫೮ ॥

ಕುತ್ತಿಬಿಸುಡಲು ಬೆನ್ನೊಳಂಡಲಿಸಿ ಕೆಲರು ಕೋ ।
ಡೆತ್ತಿ ಥವರಿಸೆ ಜಡಿದು ಹೆಂನರಂ ಸಿಕ್ಕಿ ನೇ ।
ಲುತ್ತಕೆಲರಿರಿದಿರಿದು ನಗಪೆಬಿಡದಡಿಸಿಬರಲಡ್ಡಗೆಡೆದಾಗ ಕೆಲರೂ ॥
ತೊತ್ತಳಂದುಳದು ಹರಿವಾಗ ಕರುಳ್ಗಳುಕಾಲ ।
ಸುತ್ತಿಕೊಳಗಿನ ಬಾಯೊಳೆಳೆವುತ್ತ ಕೆಲಬರು ಬ ।
ರುತ್ತಿರಲು ಜವನಜಕ್ಕಂದೊಳಲಿಯಂದದಿಂಬಂದುದಾವೃಷಭೇಂದ್ರನೂ
॥ ೫೯ ॥

ವಿಶಸನದೆ ವೈರಿನಿಚಯಮವ್ರಣಜಲಿಪ್ತರಾ |
ಗಸಮಗ್ರಸರ್ವಾಂಗದಲಿಖಂಡಮುಂಡಿತಾ |
ಸ್ಯಸಮಂತರ್ೈತಂದು ಶಿವಸಿಳಯಮಂಪೊಕ್ಕುಪುರವೈರಿಗೆರಗುವಾಗ ||
ಹಸಿದು ದನುಜರ ಪುರತ್ರಯುವ ನಾಹುತಿಗೊಂಡು |
ರಸೆ ಹೂಗಳುತಿರೆ ಮುಗುಳ್ದು ಕಾಲಾಗ್ನಿರುದ್ರಂಗೆ |
ಬೆಸನನೊಪ್ಪಿಸಬಹ ತ್ರೇತಾಗ್ನಿಯಂದದಿಂ ಮೆರೆದರಂದಾಮೂವರೂ || ೬೦ ||

ರಾಗದಿಂ ರಣವಿಜಯರೈತಂದು ವೈಯಿಕ್ಕು |
ವಾಗ ನಾಗಾಭರಣ ಸತುಳಸಂತೋಷಮನ |
ನಾಗಿಕರುಣವನವರಮೇಲೆ ತಾಹೊನಲ್ವರಿಸಿನಲಿಮುತಲೆವಡವಿನೋಡೀ ||
ಈಗೊಳಯಿಾಯಿಬ್ಬರೆವ್ಮಸಿಳಯದೊಳುಕಾ |
ಹಾಗಿ ಮಾಯಾರೂಪಿನಿಂದಿರ್ದು ಕದನವೆ |
ದ್ದಾಗವೈದೋರಿಹಗೆಯಂಗೆಲುತ ಬರಲೆಂದುನುಡಿವನಾವಯ್ಯನೊಡನೇ
|| ೬೧ ||

ಕರುಣಿಸಿದ ಕೈದುವಿವೆಕೋ ದೇವ! ಎನಲೆಂಸ |
ಪರಿಸೂತ್ರದಪರಭಾಗದೊಳರ್ದ ತೀರ್ಥದೊಳ |
ಗಿರಿಸುಹೋಗೆನಲಿದಂಹತ್ತಿರ್ದ ನರವಾಂಸಮಜ್ಜೆಮಿದುಳೊರಸಿರುಧಿರಾ ||
ಬೆರಸಿದೊಡೆ ತೀರ್ಥವಪುನೀತತೆಯು ನೈದಿ ಹರ |
ವರಿಯ ಸಾಮರ್ಥ್ಯ ಮುಸುಳಸುವುದಲೆ ಯೆನಲುಕೇ |
ಳ್ಮರುಳೆಮೂಜಗದ ದೋಷವನಳವುದಕ್ಕಿನಿತುಭಾರವೇ ಹೋಗೆಂದನೂ
|| ೬೨ ||

ನಿಶಿತಖಡ್ಗದ ವೈಯ್ಯ ರಕ್ತ ವದರೊಳು ಸಂಕ್ರ |
ಮಿಸೆ ಜಲಂ ದುರ್ವರ್ಣವಾಗೆ ಹೇಸಿಕೆಯ ಹು |
ಟ್ಟಸಿದೊಡೆಲೆಸ್ನಾನಪಾನವಂಮಾಡಲನುವಲ್ಲೆನಲುಪುರಕಿಸ್ನುಕದನಾ ||
ಮುಸುಗುವ್ರೊಡೆ ದಿಟವುಹಾಸಾವು ಕೇಡುಗಳು ಸಂ |
ದಿಸುವ್ರೊಡಿನ್ನುಂ ರಕ್ತವರ್ಣವಾದಪುದು ಸಂ |
ತಸದೊಳರಿಸಂಜಬೇಡೆನೆ ಖಡ್ಗವಂ ತಂದುಬಿಸುಟನಾತೀರ್ಥದೊಳಗೇ
|| ೬೩ ||

ಧುರದೊಳಗನೇಕರಂ ಕೊಲಲು ತನ್ನೊಳ್ಪರೆದು |
ಪರಿತರ್ಪ ರುಧಿರವುಮು ನಾತೀರ್ಥದಿಂ ತೊಳೆವ |
ಪರಿಯೋಎನಿಪ್ಪಂತೆ ಖಡ್ಗವಾತೀರ್ಥದೊಳು ಮುಳುಗಲದಕಂದುತೊಡಗೀ ||
ಧರೆಯೊಳಗೆ ಖಡ್ಗತೀರ್ಥವೆನಿಪ್ಪನಾಮುವ |
ಜ್ಜ್ವರಿಯಾದುದಾದಯ್ಯನೊಡನೆ ಬಂದವರಗಲ |
ದಿರಲು ಬಾಹತ್ತರನಿಯೋಗವಂ ಕೊಟ್ಟ ಸೋಮಯ್ಯನುತ್ಸಾಹದಿಂದಾ
|| ೬೪ ||

ನೆರೆಯೂರ ನಾಡಗ್ರಹಾರದೊಳಗುಳ್ಳ ಶರ |
ಣರು ಕೇಳ್ದು ಬಂದಾದಿಮಯ್ಯನಂ ಕಂಡು ಭ |
ಕ್ತರನಿಧಿಯೆ! ಶಿವಸಮಯ ಶರಧಿಗೆ ಶಶಾಂಕನಾದೆಯಲಾ! ಎನುತ್ತೆಹೊಗ
ಧರೆಯರಿಯೆ ಗಣಪರ್ವವಂ ನೆರೆದು ಮಾಡಿ ಭಾ | (ಳೇ ||
ಸುರಜಲಕ್ರೀಡೆಗಳ ನಾಡಿ ಕಣ್ಗೆಸೆವ ದೇ |
ವರದೇವನಂಬಿಟ್ಟು ಹೋಗಲಾರದೆ ಪುರಗಳಂಮಾಡಿ ಸುಖಮಿರ್ದರೂ
|| ೬೫ ||

ಹಗೆಹೋಯ್ತು ತಂನರಕೆಯಾಯ್ತು ಸೋಮಯ್ಯತಂ |
ದೆಗೆ ಮಾಣದೀಸಕಲ ಮಾದಂಗಭೋಗಂಗ |
ಳೊಗೆದವೆಲ್ಲಾಜನಂ ಭಕ್ತರಾಗಲು ತೊಡಗಿತಲ್ಲಿ ಶಿವಪುರವಾದವೊ ||
ಜಗದೊಳೆನ್ನಿಂದೆ ಕೃತಕೃತ್ಯರಿಲ್ಲೆಂಬ ನಂ |
ಬುಗೆಯಿಂದ ತನ್ನ ಪದ್ಮಾವತೀದೇವಿಸಹಿ |
ತಗಲದುತ್ಸವಿಸುತಿಪ್ಪಾದಿಮಯ್ಯನಜಸಂಸುಳಿಯತೊಡಗಿತ್ತಿಳೆಯೊಳೂ
|| ೬೬ ||

ಅತ್ತ ಸೌರಾಷ್ಟ್ರದೊಳಗಾದಯ್ಯ ತಪಿವನೆಂ |
ದತ್ಯುಮ್ಮಳಿಪ ಜನನಿಪಿತ ರಿದ್ದೆಡೆಗೆ ತನ್ನ |
ಚಿತ್ತಕ್ಕೆಬಪ್ಪಮಾನಿಸರಂ ಸುಖಾಸನವಕಳುಹಿಸುತಿತಂದೆತಾಯಾ ||
ಅತ್ತೆಮಾವಂದಿರೊಳಗಾದೆಲ್ಲರಂ ಬರಿಸಿ |
ಚಿತ್ತಜಾರಿಯ ನಿಬಂಧಕ್ಕೆ ಹುಲಿಗೆರೆಗೆ ದೊರೆ |
ವೆತ್ತಮುಖ್ಯರಮಾಡಿನಡೆಸಿಹರುಷಂಬಡಿಸಿ ಸುಖಮಿರ್ದನಾವಯ್ಯನೂ
|| ೬೭ ||

ವೀರಶತ್ರುಘ್ನನಾಗಿಯು ರಾಮನೊಪ್ಪುವ ।
ಕ್ರೂರನಾಗಿಯು ಖಳವಿಭೀಷಣಂ ಲೋಕಕ್ಕೆ ।　?
ಸಾರಸುಗ್ರೀವನಾಗಿಯು ರಾಜಿಪಂಗದಂಸಲೆಧರ್ಮರಾಜನಾಗೀ ॥
ಚಾರುತರಸೋಮಧರ ನಿಳೆಯರಿವುತಿರೆ ಕುಮುದ ।
ವೈರಿಯಾಗಿಯು ಕಳಾ ಧಾರಿ ಯತ್ಯಂತಗಂ ।
ಭೀರಗುಣಿಯಾದಯ್ಯನೆಂದು ಕೀರ್ತಿವಧು ಜಗದೊಳಗೆ ಡಂಗುರವ್ರೊಯ್ದಳೂ
॥ ೬೮ ॥

ತಿಳಿಯಾವಿಮಯ್ಯಬಪ್ಪುದಕೆ ಮುಂನಂವಿಬ್ಬ ।
ವಳದಮಾತಂಗಡಿಗೆ * * * * *
ಗಳಯೆನಿಪ್ಪುದು ವನಕ್ಕಪಶಬ್ದಗೊಟ್ಟ (?) ವಿಜಾತಿಸೇವೆತಟಾಕಕೇ ॥
ತಳೆದಸಿದ್ಧಪದಂ ಪರಾಂಗನಾಸುಂಗಯುತಿ ।
ಗಳಗೆಕೃತಕಂಗಳಂಗನೆಯರಿಗೆ ನೆಲೆಯಾಗಿ ।
ಹಳಸಿಕೊಳುತಿರ್ದು ಮತ್ತಾಹೆಸರೆಲ್ಲೇಸೆನಿಸಿಕೊಂಡವಾಹುಲಿಗೆರೆಯೊಳೂ
॥ ೬೯ ॥

ಆದಯ್ಯನಾಂತಜಿನಸಮಯಮಂ ಹೂದಯ್ಯ ।
ನಾದಯ್ಯನೆಯ್ದೆ ಜನಿಯಿಸುವದಂ ಮಾದಯ್ಯ ।
ನಾದಯ್ಯ ನಖಿಳಗುರುವಾದಯ್ಯನಾದಯ್ಯನರಶಿರಂಗೋವಯ್ಯನೂ ॥
ಆದಯ್ಯನಿಂದುಧರಸಮಯಮಂ ಕಾದಯ್ಯ ।
ನಾದಯ್ಯನಿಳೆಯರಿಯೆಕಡೆಗೆ ಹರನಾದಯ್ಯ ।
ನಾದಯ್ಯನೋಡೆಂದು ಕೀರ್ತಿಲತೆಮಡಲಿರಿದು ಹಬ್ಬಿತ್ತುದಿಕ್ತಟದೊಳೂ
॥ ೭೦ ॥

ಮಾಳವನು ಕೇರಳನು ವಂಗನು ಕಳಿಂಗನು ವ ।
ರಾಳನು ಮತಂಗನು ಮಗಧನುಘೂರ್ಜರನು ನೇ ।
ಪಾಳನುತೆಲುಂಗಮಲೆಯಾಳಕೊಂಕಣನುಕಾಶ್ಮೀರನಾಹೊಯ್ಸಳೆಯ
ಚೋಳಪಾಂಡ್ಯಾದಿಗಳು ಪಟ್ಟಪದಕಂಮುಕುಟ ।　(ನೂ ॥
ಜಾಲನಾನಾಪಟ್ಟಕರ್ಮ ನೇಳೆಯವರ್ಗ ।
ದೊಳಮುತ್ತಿನ ತಳೆಗಜಾದಿವಾಹನವ ಕಾಣಿಕೆಯಕಳುಹುತ್ತಿರ್ದರೂ
॥ ೭೧ ॥

ಈವಿಭವಮೀಭೋಗಮೀಕೀರ್ತಿ ಯೀರಚನೆ।
ಈ ವಿಳಾಸಂ ಸತ್ಯಮೀಸಂಪದಂಗೀತ।
ಮೀವಾದ್ಯಮೀನೃತ್ಯಮೀಕ್ಷೇತ್ರ ವಾಸಿಜನಮೀತಪೋಘನರೀಸುಖಾ ॥
ಈವಿದ್ಯಮೀ ವಿವಿಧನಿಯೋಗಂಗಳೆಲ್ಲಂ।
ದೇವಪತಿ ಸೋಮಯ್ಯನಿನ್ನರಮನೆಯೊಳಲ್ಲ।
ದೀವಸುಧೆಯೊಳಗಿಲ್ಲ ಬದುಕಿದೆಂ ಬದುಕಿದೆಂ ಕೇಳೆಂದನಾದಯ್ಯನೂ ॥ ೨೨ ॥

ನಿನ್ನಯಮನೋರಥಂ ಸಂದುದೆಲೆ ಮಗನೆ! ನೀ
ನಿನ್ನು ಕೈಲಾಸಕ್ಕೆ ಹೋಗೆನಲು ಶಿವಶಿವ ಯಿ।
ದಂನುಡಿವರೇ? ದೇವನೀನೊಲಿದು ನೆಲಸಿದೆಡೆಯೆನಗೆ ಕೈಲಾಸವಲ್ತೇ ॥
ಮುನ್ನನಿಮ್ಮಡಿಯ ಬಲದಿಂದಿನಿತುಜಸವಡೆದೆ।
ನಿನ್ನುನಿಮ್ಮಡಿಯಬಲದೊಳು ಮಾಣದನವರತ।
ನಿನ್ನನರ್ಚಿಸುತಭಜಿಸುತ್ತ ನೋಡುತ್ತಸುಖಿಸಿಹೆನೆಂದನಾದಯ್ಯನೂ ॥ ೨೩ ॥

ನೀನೆನ್ನ ಶೈವಾಭಿಮಾನಸಂಪತ್ತಿಂಗೆ।
ನೀನೆನ್ನ ಸಮಯದ ಸಮುದ್ಧರಣತಾಗುಣಕೆ।
ನೀನೆನ್ನ ಕೀರ್ತಿಪ್ರಭಾವಕ್ಕೆ ನೀನೆನ್ನಭಕ್ತಜನದಾಸಂಪಕೇ ॥
ನಾನರಿಯಲು ಸ್ತಂಭವಾದೆಯಲ! ಯಿದಕೇಳು।
ಯೀನೆಲದೊಳೆಲ್ಲರರಿವಂತೆನ್ನ ದಕ್ಷಿಣಾ।
ಸ್ಥಾನದ ಸ್ತಂಭದೊಳಗಿರು ಸುಖದೊಳೆಂದೊಡೆ ಹಸಾದವೆಂದಾದಯ್ಯನೂ ॥ ೨೪ ॥

ಅಣಿಯರದಿ ಕೈದಣಿಯೆ ಪೂಜೆಯಂ ಮಾಡಿ ಬಾಯ್।
ದಣಿಯೆ ನಾನಾತೆರದಿ ಪಾಡಿ ಕೊಂಡಾಡಿ ಕಣ್।
ದಣಿವಂತೆ ನೋಡಿ ತೋಳ್ದಣಿವಂತಿರಪ್ಪಿ ತನುದಣಿವಂತಿರೆರಗಿ ಚರಣಾ ॥
ದಣಿವಂತೆ ರಿಂಗಣಂ ಗುಣಿದು ಮಾಣದೆ ಮನಂ।
ದಣಿವಂತೆ ಹಾರೈಸಿ ಹರುಷಂದಳೆದು ಚಿತ್ತ।
ದಣಿವಂತೆ ಪಾದೋದಕಪ್ರಸಾದವ ಧರಿಸಿದಂಧನ್ಯನಾದಯ್ಯನೂ ॥ ೨೫ ॥

ಈ ಸೊಡ್ಡಳಯ್ಯನುಪಧಾವಿಸುವುದಕ್ಕೆ ಸ ।
ನ್ಯಾಸಿತತಿಯಾದೊಡೇ ಹುತರಾದ ಸುಕ್ಷೇತ್ರ ।
ವಾಸಿಸಂಕುಳವಾದ ದೇವಪುತ್ರಿಕರಾದರಲ್ಲಿಯು ಸಿಯೋಗಿಗಳಗೇ ॥
ಬೇಸರದೆ ಸಲೆಸಾವ್ಯವಂತರಾದಗ್ಗವಗ ।
ಣೇಶರಂಕರೆದು ಹೇಳಿದನೀ ಮಹಾಕ್ಷೇತ್ರ ।
ದಾಸೆಯಂ ಬಿಡದಿರಸ್ಯ ಕ್ಷೇತ್ರಮಂ ಬಯಸದಿರಿಯೆಂದ ನಾದಯ್ಯನೂ
॥ ೭೬ ॥

ಕಡುಮೋಕ್ಷಮಂ ಪಡೆವರಾರವರು ತಂಮೊಡಲ ।
ಬಿಡದಿರ್ದೊಡೀಯೆ ಸೋರಂತೆನ್ನೊಳುಪವಾಸ ।
ವಿಡಿದುನಡೆಯದೊಡೀಯೆನುಳ್ಳೊಡವೆಗಳನೆನ್ನೊಳೀಯದಿದ್ದೊಡಯೊಯೆ
ಬಿಡದೆ ಕಾಲ್ಗಪ್ಪಡಂಗಟ್ಟಿ ಬಂದೆನ್ನ ಸೋಡ ।　　(ಸೂ ॥
ದೊಡೀಯೆನೆಸುತ್ತಿಹಕ್ಷೇತ್ರವೇ ತೊಲಗು ಸಡಿ ।
ಪಡಮಾಣದಿರ್ದೆಡೆಯೊಳಿದ್ದನೆನೆಯಲು ಬೇಡಿತೀವಪುಲಿಕರಪುರವಿದೂ
॥ ೭೭ ॥

ವ್ರತಿಗಳು ಜಿತೇಂದ್ರಿಯರು ಗುರುನಿಷ್ಠರತಿಥಿಗಳು ।
ಹಿತರು ಧರ್ಮನಿಷ್ಠರು ಶಿವಾರ್ಚಕರು ಶಾಂತಮ ।
ಡಿತರು ಸನ್ಮಾರ್ಗಿಗಳು ಸತ್ಯರೊಲವಿಂದ ತಮ್ಮೊಳಗೆ ಪುಗಲಂತವರ್ಗೆ ॥
ವಿತತಮುಕ್ತಿಯನಿತ್ತು ಬಯಲಬರಿಮಾತಿನು ।
ನ್ನತಮಹಿಮೆಗೆದರುವಾಕ್ಷೇತ್ರವೆಸೆದಿಪ್ಪುವೀ ।
ಕ್ಷಿತಿಯೊಳಂತವರು ಮುನ್ನವೇ ಜೀವನ್ಮುಕ್ತರಂತವರ್ಗ್ಗೀವುದರಿದೇ ॥ ೭೮ ॥

ಪ್ರಕಟಪಾತಕರು ನಿರ್ದೈವರತಿಧರ್ಮಗಂ ।
ಟಕರು ಭೂತದ್ರೋಹರಧಿಕಗುರುದ್ರೈಮನಿಂ ।
ದಕರು ದುರ್ನೀತರಜ್ಞಾನಿಗಳು ಮರೆದೊಂಮೆ ತನ್ನೊಳಗೆ ಪೊಕ್ಕವರ್ಗೆ ॥
ಸುಕರಧರ್ಮಾರ್ಥಕಾಮಗಳಮೋಕ್ಷಮನು ತಂ ।
ದು ಕರತಳದಲ್ಲಿ ನೆಮ್ಮಿಸಿ ಕೊಡುವುದು ಮಹಾಪು ।
ಲಿಕರಪುರವಮಳಮೂರ್ತಿವಿಳಾಸಸೋಮನಾಥನ ಸಕಲಸುಖನಿಳಯಮ್ಮೊ
॥ ೭೯ ॥

ಕಂಗೊಳಿಪ ತನ್ನ ಮೂರ್ತಿಯನು ಕಣ್ದೇವಿ ನೋ ।
ಳ್ಪಂಗೆ ಪೂಜಿಸುವಂಗೆ ಭೋಗದಂಗವ ಮಾಡು ।
ವಂಗೆತೇಜಾಭಿಮಾನವನಿತ್ತು ನಡೆಸುವಾತಂಗೆಕೀರ್ತಿಸುವವಂಗೇ ॥
ಮಂಗಳೋತ್ಸವವನಖಿಳಾಯುವಸನಂತಭೋ ।
ಗಂಗಳಂ ಚಲಿಯಿಸದೆ ಧರ್ಮಾರ್ಥಕಾಮಮೋ ।
ಕ್ಷಂಗಳಂಸಲಿಸುನೀಂಸೋಮೇಶಯೆಂದಾದಿಮಯ್ಯನುದ್ಘೋಷಿಸಿದನೂ
॥ ೮೦

ವಸುಧಾತಳಾಗ್ರದೊಳು ಸೋಮನಾಥನ ಕೀರ್ತಿ ।
ಪಸರಿಸಲಿ ಸರ್ವಭೋಗಂಗಳಳವಡಲಿ ಭ ।
ಕ್ತಸಮೂಹದ ಮನೋರಥಂ ಸಲಲಿಶೈವಸಮಯಾಚಾರ ದಿಕ್ತಟವನೂ ॥
ಮುಸುಕಲಿ ಸಮಸ್ತಜೀವರು ಸುಖವನಾಂತು ಸಂ ।
ತಸವನ್ನೈದಲಿಯೆನುತ ತನ್ನರಸಿಪದುಮಾವ ।
ತಿಸಹಿತೊಳಹೊಕ್ಕ ನಂದಾದಯ್ಯಸೋಮನಾಥನ ಬಲದಕಂಭದೊಳಗೇ
॥ ೮೧ ।

ಸತತವೀಕೃತಿಯು ನೋದುವ ಕೇಳುವರ್ಗೆ ಸ ।
ನ್ನುತಸುಖಂ ಸಂಪದಂ ಹರ್ಷವರ್ಷಂ ಸಿರೋ ।
ಗತೆ ನಿತ್ಯವಿಭವ ಮಖಿಳಾನೂನಫಳಭರಿತವಹ ಮಹೊತ್ಸವಸಂತತೀ ॥
ಕ್ಷಿತಿಯುಜನವಂ ಸುತ್ತಿ ಮುತ್ತಿ ಮೂವಳಿಸಿ ಸಂ ।
ತತವಗಲದಿರ್ಪಂತೆ ಕರುಣಿಸುಗೆ ಗಿರಿಜಾಧಿ ।
ಪತಿ ಸಹಜಸುಲಭಮೂರ್ತಿವಿಳಾಸ ಪುಲಿಕರ ಪುರಾಧೀಶಸೋಮೇಶನೂ
॥ ೮೨ ।

ನುತಕಾಯಜ ತಮಾಯುಪುರಮಥನ ವರಕಥನ ।
ಧೃತಸೋಮಗತಕಾಮ ಚಿರಲಿಂಗ ವರಸಂಗ ।
ಶ್ರುತಿಮೂರ ಮತಿಸಾರ ಗಿರಿಜೇಶಸ್ಮರನಾಶ ದುರಿತಹರಕರುಣಾಕರ ॥
ಪ್ರತಿರಹಿತಗತಿನಿಹಿತ ಶರಣಚಯ ಭರಣಜಯ ।
ವಿತತಗಣ ಚತುರಗುಣ ಸುರರಾಜ ವರತೇಜ ।
ಸಿತಗಳನೆ ಯತಿಬಳನೆ ಶರಣಾಗು ಗುರುಮೂರ್ತಿ ಪುಲಿಗೆರೆಯ ಸೋಮೇ
(ಶ್ವರ ॥ ೮೩ ।

**ಅಂತು ಇಲ್ಲಿಗೆ ಶ್ರೀ ಸೋಮನಾಥ ಚರಿತ್ರಂ ಸಂಪೂರ್ಣಂ ಶ್ರೀ ಶ್ರೀ ಶ್ರೀ**

**॥ ಶ್ರೀ ಸೋಮನಾಥಾರ್ಪಣಮಸ್ತು. ॥**